ಗುರುವಾರ, ಅಕ್ಟೋಬರ್ 21, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 292 | ಪುಟ 12 + 2
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸ್ಪರ್ಧಾವಾಣಿ
ಎಸ್‌ಬಿಐ ಹಲವಾರು ಹುದ್ದೆಗಳ ನೇಮಕಾತಿ ಪರೀಕ್ಷೆಗೆ ಅರ್ಜಿ ಆಹ್ವಾನಿಸಿದ್ದು, ಈ ಪರೀಕ್ಷೆ ತಯಾರಿ ಹೇಗಿರಬೇಕು?

ಆಳ-ಅಗಲ ಬಾಂಗ್ಲಾ ಅಲ್ಪಸಂಖ್ಯಾತರ ಮೇಲೆ ಹಿಂಸಾಚಾರ

ಮಳೆ ಬಿಡುವು: ರಕ್ಷಣೆ, ಪರಿಹಾರವೇ ಸವಾಲು 6

ಮೀಸಲಾತಿ: ಕಾನೂನು ಚೌಕಟ್ಟಿನಲ್ಲಿ ಕ್ರಮ 4

ಸೆನ್ಸೆಕ್ಸ್	ನಿಫ್ಟಿ	₹/$
61,259 ▼	18,266 ▼	74.88 ▲

ನವೋದ್ಯಮ, ಸಾರ್ವಜನಿಕರಿಗೆ ದತ್ತಾಂಶ ಉಚಿತ • ಕರ್ನಾಟಕ ಮುಕ್ತ ದತ್ತಾಂಶ ನೀತಿ ಪ್ರಕಟ

ದತ್ತಾಂಶ ಮಾರಾಟಕ್ಕಿಟ್ಟ ರಾಜ್ಯ!

• ಎಸ್.ರವಿಪ್ರಕಾಶ್

ಬೆಂಗಳೂರು: ರಾಜ್ಯದ ವಿವಿಧ ಇಲಾಖೆಗಳು ಸಂಗ್ರಹಿಸಿರುವ ಡಿಜಿಟಲೀಕೃತ ದತ್ತಾಂಶಗಳನ್ನು ಹಂಚಿಕೊಳ್ಳುವ, ಒಪ್ಪಂದದ ಮೂಲಕ ವಿನಿಮಯ ಮತ್ತು ಮಾರಾಟ ಮಾಡುವ ದಾರಿಯೊಂದನ್ನು ತೆರೆಯುವತ್ತ ಕರ್ನಾಟಕ ಸರ್ಕಾರ ಹೆಜ್ಜೆ ಇಟ್ಟಿದೆ.

ಇದಕ್ಕೆ ಪೂರಕವಾಗಿ 'ಕರ್ನಾಟಕ ಮುಕ್ತ ದತ್ತಾಂಶ ನೀತಿ'ಯನ್ನು ಸರ್ಕಾರ ಪ್ರಕಟಿಸಿದೆ.

ಈ ದತ್ತಾಂಶಗಳನ್ನು ಸಾರ್ವಜನಿಕರು, ಸಂಶೋಧಕರು, ಎನ್‌ಜಿಒಗಳು, ನವೋದ್ಯಮಿಗಳು ಉಚಿತವಾಗಿ ಪಡೆಯಬಹುದು. ಆದರೆ, 'ಭಾರಿ ಮೌಲ್ಯ'ದ ಕೆಲವೇ ಕೆಲವು ದತ್ತಾಂಶಗಳನ್ನು ಮಾತ್ರ ಸಂಬಂಧಪಟ್ಟ ಇಲಾಖೆಗಳಿಂದಲೇ ಖರೀದಿಸಬೇಕು. 'ಮೌಲ್ಯಯುತ' ದತ್ತಾಂಶವನ್ನು ಸಾರ್ವಜನಿಕ ವೇದಿಕೆಯಲ್ಲಿ ಹಂಚಿಕೊಳ್ಳುವುದಿಲ್ಲ. ಅಂತಹ ನಿರ್ದಿಷ್ಟ ದತ್ತಾಂಶವನ್ನು ಮಾರುವ ಮೂಲಕ ಇಲಾಖೆಯು ಆದಾಯಗಳಿಸಲಿದೆ.

ಈ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ 'ಕರ್ನಾಟಕ ಓಪನ್ ಡೆಟಾ, ಡಿಜಿ ಲಾಕರ್' ಯೋಜನಾ ನಿರ್ದೇಶಕ ಎಚ್.ಎಂ. ಶ್ರೀವ್ಯಾಸ್ 'ಪ್ರತಿಯೊಂದು ಇಲಾಖೆಯಲ್ಲೂ ಅಪಾರ ಪ್ರಮಾಣದಲ್ಲಿ ಡಿಜಿಟಲ್ ದತ್ತಾಂಶ ಸೃಷ್ಟಿ ಆಗುತ್ತಿದೆ. ವಿವಿಧ ಯೋಜನೆಗಳು, ಕಾರ್ಯಕ್ರಮಗಳು ಮತ್ತು ಸೇವೆಗಳ ಮಾಹಿತಿಗಳನ್ನು ಇಲಾಖೆಗಳಿಗೆ ಹೋಗಿ ಕಾಗದದ ಮೂಲಕ ಪಡೆಯುವುದರ ಬದಲಿಗೆ ಡಿಜಿಟಲ್ ರೂಪದಲ್ಲಿ ಪಡೆಯುವುದಕ್ಕೆ ಈ ವ್ಯವಸ್ಥೆ ರೂಪಿಸಲಾಗಿದೆ' ಎಂದರು.

ಪ್ರತಿಯೊಂದು ಇಲಾಖೆಯಲ್ಲಿ ಪೋರ್ಟಲ್‌ಗಳು, ಆನ್‌ಲೈನ್‌ಗಳು ಮತ್ತು ಡೇಟಾಬೇಸ್‌ಗಳಿವೆ. ಅವೆಲ್ಲ ಪ್ರತ್ಯೇಕವಾಗಿದ್ದು, ಮುಂದೆ ಒಂದು ಡಿಜಿಟಲ್ ವೇದಿಕೆಯಲ್ಲಿ ಸಿಗುತ್ತವೆ.

6ನೇ ಪುಟ ನೋಡಿ

ಆದಾಯ ತರುವ ದತ್ತಾಂಶ ಯಾವುದು?

'ಕೇಂದ್ರ ಸರ್ಕಾರವು ಇತ್ತೀಚೆಗೆ ವಾಹನಗಳ ದತ್ತಾಂಶವನ್ನು ಮಾರಿದೆ. ಓಲಾ ಮತ್ತು ಉಬರ್‌ಗಳು ದತ್ತಾಂಶವನ್ನು ಖರೀದಿಸಿವೆ. ಸಾರಿಗೆ ವ್ಯವಸ್ಥೆ, ವಾಹನ ಉತ್ಪಾದನೆಗೆ ಇದರಿಂದ ಅನುಕೂಲವಾಗುತ್ತದೆ. ಈ ರೀತಿಯ ದತ್ತಾಂಶಗಳನ್ನು ಇಲಾಖೆಗಳು ಮಾರಬಹುದು. ಆದರೆ, ನಮ್ಮಲ್ಲಿ ದತ್ತಾಂಶ ಮಾರಾಟ ಮಾಡುವ ಹಂತಕ್ಕೆ ತಲುಪಿಲ್ಲ' ಎಂದು ಶ್ರೀವ್ಯಾಸ್ ತಿಳಿಸಿದರು.

ಯಾರು ದತ್ತಾಂಶ ಖರೀದಿಸಬಹುದು: ಅಧಿಕೃತ ಬಳಕೆದಾರರು ಭಾರತದಲ್ಲಿ ನೋಂದಾಯಿತ ಸಂಸ್ಥೆಗಳು, ಕಾರ್ಪೊರೇಟ್ ಸಂಸ್ಥೆ, ಖಾಸಗಿ ಏಜೆನ್ಸಿಗಳು, ಶೈಕ್ಷಣಿಕ ಅಥವಾ ಸಂಶೋಧನಾ ಸಂಸ್ಥೆಗಳಾಗಿರಬೇಕು. ಕನಿಷ್ಠ 24 ತಿಂಗಳು ಕೆಲಸ ಮಾಡಿರಬೇಕು. ದತ್ತಾಂಶ ಖರೀದಿಗೆ ಆಯಾ ಇಲಾಖೆ ಜತೆ ಒಪ್ಪಂದ ಮಾಡಿಕೊಳ್ಳಬೇಕು. ಗೋಪ್ಯತೆ ಷರತ್ತುಗಳಿಗೆ ಬದ್ಧವಾಗಿರಬೇಕು.

ಶುಲ್ಕ ಎಷ್ಟು: ದತ್ತಾಂಶಗಳ ಡೇಟಾ ಸೆಟ್‌ಗಳಿಗೆ ಸಮರ್ಥನೀಯ ಶುಲ್ಕವನ್ನು ನಿಗದಿಪಡಿಸುವ ಹಕ್ಕನ್ನು ಕರ್ನಾಟಕ ಸರ್ಕಾರದ ಸಂಬಂಧಿತ ಇಲಾಖೆಗಳು ಹೊಂದಿರುತ್ತವೆ.

ಪ್ರಜಾವಾಣಿ ವಿಶೇಷ

ದತ್ತಾಂಶದ ವರ್ಗೀಕರಣ

- **ವೈಯಕ್ತಿಕ ದತ್ತಾಂಶ:** ಇದು ವ್ಯಕ್ತಿಯನ್ನು ಗುರುತಿಸಬಹುದಾದ ಮಾಹಿತಿಯನ್ನು ಸೂಚಿಸುತ್ತದೆ. ಇದರಲ್ಲಿ ವೈಯಕ್ತಿಕ ಹೆಸರು, ವಿಳಾಸ, ಪ್ಯಾನ್, ಆಧಾರ್, ಡ್ರೈವಿಂಗ್ ಲೈಸೆನ್ಸ್ ಮತ್ತು ಇತರ ರೀತಿಯ ಐಡಿಗಳು, ಧರ್ಮದ ವಿವರ. ಇದನ್ನು ಹಂಚಿಕೊಳ್ಳಲು ಅವಕಾಶವಿಲ್ಲ
- **ವೈಯಕ್ತಿಕವಲ್ಲದ ದತ್ತಾಂಶ:** ಈ ದತ್ತಾಂಶವು ಅನಾಮಧೇಯ ಮಾಹಿತಿ/ದತ್ತಾಂಶವನ್ನು ಸೂಚಿಸುತ್ತದೆ. ಇವುಗಳನ್ನು ಬಳಸಿ ಯಾವುದೇ ವ್ಯಕ್ತಿಯನ್ನು ಗುರುತಿಸಲು ಮತ್ತು ವೈಯಕ್ತಿಕ ಮಾಹಿತಿ ಪಡೆಯಲು ಅಸಾಧ್ಯ.
- ಹಂಚಿಕೊಳ್ಳಬಹುದಾದ ದತ್ತಾಂಶ: ಸಾರ್ವಜನಿಕ ಬಳಕೆಗೆ ಲಭ್ಯವಿರುವ ದತ್ತಾಂಶ, ಋಣಾತ್ಮಕ ದತ್ತಾಂಶ ಪಟ್ಟಿಯ ವ್ಯಾಪ್ತಿಗೆ ಒಳಪಡದ ಮತ್ತು ಸೂಕ್ಷ್ಮವಲ್ಲದ ಮಾಹಿತಿಗಳು
- **ಸೂಕ್ಷ್ಮ ಮಾಹಿತಿ:** ಗೋಪ್ಯತೆ ಕಾನೂನುಗಳು, ಕೇಂದ್ರ ಮತ್ತು ರಾಜ್ಯ ಕಾನೂನು ಮತ್ತು ನಿಯಮಗಳಿಂದ ನಿಯಂತ್ರಿಸಲ್ಪಡುವ ದತ್ತಾಂಶ. ಇವುಗಳನ್ನು ಹಂಚಿಕೊಳ್ಳುವುದಿಲ್ಲ
- **ನಿರ್ಬಂಧಿತ ಮಾಹಿತಿ:** ಯಾವುದೇ ಜೀವಕ್ಕೆ ಅಪಾಯ ಅಥವಾ ಸಾರ್ವಜನಿಕ ಆಸ್ತಿಗಳ ನಷ್ಟ ಅಥವಾ ನಿರ್ಣಾಯಕ ಮೂಲ ಸೌಕರ್ಯಗಳಿಗೆ ಧಕ್ಕೆ ಉಂಟು ಮಾಡುವ ಮಾಹಿತಿ ಹಂಚಿಕೊಳ್ಳುವಂತಿಲ್ಲ.

ವಂಚಕರ ಸುರಕ್ಷಿತ ನೆಲೆ ತಪ್ಪಿಸಿ: ಮೋದಿ ಸೂಚನೆ

ಕೆವಡಿಯಾ (ಪಿಟಿಐ): ದೇಶಕ್ಕೆ ದ್ರೋಹ ಎಸಗಿ ಪರಾರಿಯಾಗುವವರಿಗೆ ಜಗತ್ತಿನ ಎಲ್ಲಿಯೂ ನೆಲೆ ಸಿಗದಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಜಾಗೃತ ಆಯೋಗ (ಸಿವಿಸಿ) ಮತ್ತು ಸಿಬಿಐ ಅಧಿಕಾರಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಬುಧವಾರ ನಿರ್ದೇಶನ ನೀಡಿದರು.

ಗುಜರಾತ್‌ನ ಕೆವಡಿಯಾದಲ್ಲಿ ಸಿವಿಸಿ ಮತ್ತು ಸಿಬಿಐನ ಜಂಟಿ ಸಮ್ಮೇಳನವನ್ನು ಉದ್ದೇಶಿಸಿ ಅವರು ಮಾತನಾಡಿದರು. ಎಷ್ಟೇ ಶಕ್ತಿಯುತ ವ್ಯಕ್ತಿಯಾಗಿದ್ದರೂ, ರಾಷ್ಟ್ರದ ಅಥವಾ ಜನರ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ವಿದೇಶಗಳಲ್ಲಿ ಆಶ್ರಯ ಪಡೆದಿರುವ ಉದ್ಯಮಿಗಳಾದ ವಿಜಯ್ ಮಲ್ಯ, ನೀರವ್ ಮೋದಿ, ಮೆಹುಲ್ ಚೋಕ್ಸಿಯಂತಹ ವ್ಯಕ್ತಿಗಳನ್ನು ಮರಳಿ ಕರೆತರಲು ಕೇಂದ್ರ ಸರ್ಕಾರ ಕಾನೂನು ಪ್ರಕ್ರಿಯೆ ನಡೆಸಿರುವ ಸಮಯದಲ್ಲಿ ಪ್ರಧಾನಿ ಈ ನಿರ್ದೇಶನ ನೀಡಿದ್ದಾರೆ.

'ಕಳೆದ ಆರೇಳು ವರ್ಷಗಳಲ್ಲಿ ನಮ್ಮ ಸರ್ಕಾರ ತೆಗೆದುಕೊಂಡ ಕಠಿಣ ಕ್ರಮಗಳಿಂದಾಗಿ, ಭ್ರಷ್ಟಾಚಾರವನ್ನು ತಡೆಯಬಹುದು ಎಂಬ ನಂಬಿಕೆ ಜನರ ಮನಸ್ಸಿನಲ್ಲಿ ಮೂಡಿದೆ. ಮಧ್ಯವರ್ತಿಗಳ ಸಹಾಯವಿಲ್ಲದೆ ಸರ್ಕಾರದ ಯೋಜನೆಗಳ ಲಾಭವನ್ನು ಜನರು ಪಡೆಯುತ್ತಿದ್ದಾರೆ' ಎಂದು ಅವರು ಹೇಳಿದರು.

ಭ್ರಷ್ಟಾಚಾರ ನಿಯಂತ್ರಿಸುವ ಇಚ್ಛಾಶಕ್ತಿ ಹಿಂದಿನ ಸರ್ಕಾರಕ್ಕೆ ಇರಲಿಲ್ಲ. ಭ್ರಷ್ಟಾಚಾರದ ವಿರುದ್ಧ ಹೋರಾಡುವ ರಾಜಕೀಯ ಮತ್ತು ಆಡಳಿತಾತ್ಮಕ ಇಚ್ಛಾಶಕ್ತಿಯ ಕೊರತೆಯಿತ್ತು. ಇಂದು ರಾಜಕೀಯ ಇಚ್ಛಾಶಕ್ತಿಯಿಂದ ಆಡಳಿತಾತ್ಮಕ ಸುಧಾರಣೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಅವರು ಹೇಳಿದರು.



ವಂಚನೆ ನಡೆದ ನಂತರ ಅದನ್ನು ಪತ್ತೆ ಮಾಡುವ ಮಾರ್ಗಗಳ ಮೇಲೆ ಗಮನ ಕೇಂದ್ರೀಕರಿಸುವ ಬದಲು ಭ್ರಷ್ಟಾಚಾರ ತಡೆಯಲು ಕೆಲಸ ಮಾಡಬೇಕು
ನರೇಂದ್ರ ಮೋದಿ, ಪ್ರಧಾನಿ

ಸಿಬಿಎಸ್‌ಇ: ಪರೀಕ್ಷಾ ಕೇಂದ್ರ ಬದಲಾವಣೆಗೆ ಅವಕಾಶ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯು (ಸಿಬಿಎಸ್‌ಇ) 10 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳಿಗೆ ಮೊದಲ ಅವಧಿಯ ಬೋರ್ಡ್ ಪರೀಕ್ಷೆಗಾಗಿ ಪರೀಕ್ಷಾ ಕೇಂದ್ರಗಳನ್ನು ಬದಲಿಸಿಕೊಳ್ಳಲು ಅವಕಾಶ ನೀಡುವುದಾಗಿ ಬುಧವಾರ ಘೋಷಿಸಿದೆ.

ಕೆಲ ವಿದ್ಯಾರ್ಥಿಗಳು ತಾವು ಪ್ರವೇಶ ಪಡೆದಿರುವ ಶಾಲೆಯ ನಗರಗಳಿಗೆ ಇನ್ನೂ ಹಿಂತಿರುಗಿಲ್ಲ. ಅವರು ಬೇರೆಡೆ ವಾಸಿಸುತ್ತಿದ್ದಾರೆ. ಹೀಗಾಗಿ ಅವರು ತಮ್ಮ ಶಾಲೆಯಿರುವ ನಗರಕ್ಕೆ ಹೋಗಿ ಪರೀಕ್ಷೆ ಬರೆಯುವುದು ಕಷ್ಟವಾಗುತ್ತದೆ ಎಂಬುದು ಮಂಡಳಿಯ ಗಮನಕ್ಕೆ ಬಂದಿದೆ. ಈ ಕುರಿತು ವಿದ್ಯಾರ್ಥಿಗಳು ಮಾಡಿದ ಮನವಿಯನ್ನು ಗಮನದಲ್ಲಿಟ್ಟುಕೊಂಡು, ಪರೀಕ್ಷಾ ಕೇಂದ್ರಗಳ ಬದಲಾವಣೆಗೆ ಅವಕಾಶ ಕಲ್ಪಿಸಲು ನಿರ್ಧರಿಸಲಾಗಿದೆ ಎಂದು ಮಂಡಳಿ ತಿಳಿಸಿದೆ.

ಈ ಸಂಬಂಧ ಸದ್ಯದಲ್ಲಿಯೇ ಸಿಬಿಎಸ್‌ಇ ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡಲಾಗುವುದು. ವಿದ್ಯಾರ್ಥಿಗಳು ಮತ್ತು ಶಾಲಾ ಆಡಳಿತ ಮಂಡಳಿಗಳು ವೆಬ್‌ಸೈಟ್ ಅನ್ನು ಗಮನಿಸುತ್ತಿರುವಂತೆ ಸಿಬಿಎಸ್‌ಇ ಪರೀಕ್ಷಾ ನಿಯಂತ್ರಣಾಧಿಕಾರಿ ಸನ್ಯಂ ಭಾರದ್ವಾಜ್ ತಿಳಿಸಿದ್ದಾರೆ.

10ನೇ ತರಗತಿಯ ಮೊದಲ ಅವಧಿ ಪರೀಕ್ಷೆಗಳು ನವೆಂಬರ್ 30ರಿಂದ ಹಾಗೂ 12ನೇ ತರಗತಿಯ ಪರೀಕ್ಷೆಗಳು ಡಿಸೆಂಬರ್ 1ರಿಂದ ಆರಂಭವಾಗಲಿವೆ.

ದಾಳಿಗೊಳಗಾಗಿದ್ದ ಕೋಳಿ ಮಾಂಸದಂಗಡಿ ಮಾಲೀಕನಿಗೆ ದ್ವಿಚಕ್ರ ವಾಹನ ಡಿಕ್ಕಿ, ಗಾಯ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಹೊರವಲಯದ ಯಮನಾಪುರ ಗ್ರಾಮದಲ್ಲಿ ಕೋಳಿಮಾಂಸದ ಅಂಗಡಿ ಇಟ್ಟುಕೊಂಡಿರುವ ಹಸನ್‌ಸಾಬ್ ದ್ವಿಚಕ್ರವಾಹನದಲ್ಲಿ ಹೋಗುವಾಗ, ಮತ್ತೊಂದು ದ್ವಿಚಕ್ರವಾಹನ ಡಿಕ್ಕಿಯಾಗಿ ಗಾಯಗೊಂಡು ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸಮೀಪದ ದೇವಸ್ಥಾನದಲ್ಲಿ ನವರಾತ್ರಿ ಆಚರಣೆ ಕಾರ್ಯಕ್ರಮದ ಸಂದರ್ಭದಲ್ಲಿ ಕೋಳಿಮಾಂಸದ ಅಂಗಡಿ ತೆರೆದಿದ್ದ ಕಾರಣಕ್ಕೆ ಹಿಂದೂ ಯುವಕರ ಗುಂಪೊಂದು ಹಸನ್ ಸಾಬ್ ಅವರ ಅಂಗಡಿ ಮೇಲೆ ದಾಳಿ ಮಾಡಿ, ಬ್ಯಾನರ್ ಹರಿದುಹಾಕಿತ್ತು. ಆ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದವು. ಇದರ ಬೆನ್ನಲ್ಲೇ ಮಂಗಳವಾರ ರಾತ್ರಿ ಅಪಘಾತಕ್ಕೆ ಒಳಗಾಗಿದ್ದಾರೆ.

4ನೇ ಪುಟ ನೋಡಿ

ಮತೀಯ ಗೂಂಡಾಗಿರಿ: ಉತ್ತರಿಸದ ಸಿ.ಎಂ

ಕೆಲವು ದಿನಗಳಿಂದೀಚೆ ಮತೀಯ ಗೂಂಡಾಗಿರಿ ಪ್ರಕರಣಗಳು ಬೆಳಗಾವಿ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಕುರಿತಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಯಾವುದೇ ಪ್ರತಿಕ್ರಿಯೆ ನೀಡದೇ ಇಲ್ಲಿಂದ ತೆರಳಿದರು.

ಸಿಂದಗಿ ಕ್ಷೇತ್ರದಲ್ಲಿ ಪ್ರಚಾರ ಕಾರ್ಯ ಮುಗಿಸಿ ಬಂದಿದ್ದ ಅವರು, ಮತೀಯ ಗೂಂಡಾಗಿರಿ ಕುರಿತ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಲಿಲ್ಲ.

'ಸಿಂದಗಿ ಹಾಗೂ ಹಾನಗಲ್ ವಿಧಾನಸಭಾ ಕ್ಷೇತ್ರಗಳಿಗೆ ನಡೆಯುತ್ತಿರುವ ಉಪ ಚುನಾವಣೆಯಲ್ಲಿ ಬಿಜೆಪಿ ಹೆಚ್ಚಿನ ಮತ ಗಳಿಸಲಿದೆ' ಎಂದು ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು.

4ನೇ ಪುಟ ನೋಡಿ

ಲಸಿಕೆ: ಇಂದು 'ಶತಕ' ಸಾಧನೆ

ನವದೆಹಲಿ (ಪಿಟಿಐ): ಕೋವಿಡ್ ಪಿಡುಗಿನ ವಿರುದ್ಧ ದೇಶದಾದ್ಯಂತ ಆರಂಭವಾದ ಲಸಿಕಾ ಅಭಿಯಾನವು 9 ತಿಂಗಳ ಬಳಿಕ 100 ಕೋಟಿ ಡೋಸ್‌ಗಳನ್ನು ಪೂರ್ಣಗೊಳಿಸಲು ಸಜ್ಜಾಗಿದೆ. ಈ ಮಹತ್ವದ ಮೈಲಿಗಲ್ಲನ್ನು ಭಾರತ ಗುರುವಾರ ದಾಖಲಿಸುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ಲಸಿಕಾ ಅಭಿಯಾನದ ಈ 'ಮಹಾನ್ ಸಾಧನೆ'ಯ ಆಚರಣೆಗೆ ಕೇಂದ್ರ ಸರ್ಕಾರ ಉತ್ಸುಕವಾಗಿದೆ. ಕೋವಿನ್ ಪೋರ್ಟಲ್‌ನಲ್ಲಿ ಬುಧವಾರ ದಾಖಲಾಗಿದ್ದ ಅಂಕಿ ಅಂಶಗಳ ಪ್ರಕಾರ ದೇಶದಾದ್ಯಂತ 99.85 ಕೋಟಿ ಡೋಸ್ ಲಸಿಕೆ (ರಾತ್ರಿ ಪುಟ ಮುದ್ರಣಕ್ಕೆ ಹೋಗುವವರೆಗೆ) ನೀಡಲಾಗಿದೆ. ವಯಸ್ಕರಲ್ಲಿ ಶೇ 75ರಷ್ಟು ಜನರು ಮೊದಲ ಡೋಸ್ ಪಡೆದಿದ್ದರೆ, ಶೇ 31ರಷ್ಟು ಜನರು ಎರಡೂ ಡೋಸ್‌ಗಳನ್ನು ಪಡೆದಿದ್ದಾರೆ.

ಎಲ್ಲ ಅರ್ಹರು ವಿಳಂಬ ಮಾಡದೇ ಲಸಿಕೆ ಹಾಕಿಸಿಕೊಳ್ಳುವಂತೆ ಕೋರಿರುವ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು, ಈ ಮೂಲಕ ಭಾರತದ ಐತಿಹಾಸಿಕ ಲಸಿಕಾ ಅಭಿಯಾನಕ್ಕೆ ಕೊಡುಗೆ ನೀಡುವಂತೆ ಮನವಿ ಮಾಡಿದ್ದಾರೆ

100 ಕೋಟಿ ಡೋಸ್ ಲಸಿಕೆ ಹಾಕಿದ ಸಾಧನೆಯ ಬಗ್ಗೆ ರೈಲು, ವಿಮಾನ ನಿಲ್ದಾಣ ಮತ್ತು ಬಂದರುಗಳಲ್ಲಿ ಧ್ವನಿವರ್ಧಕಗಳ ಮೂಲಕ ಮಾಹಿತಿ ಭಿತ್ತರಿಸಲು ಸರ್ಕಾರ ಯೋಜಿಸಿದೆ. ಅಲ್ಲದೆ ಈ ವೇಳೆ ದೆಹಲಿಯ ಕೆಂಪುಕೋಟೆಯಲ್ಲೂ ಸರ್ಕಾರ ಕಾರ್ಯಕ್ರಮ ಹಮ್ಮಿಕೊಂಡಿದೆ. ಇಲ್ಲಿ ಸಚಿವ ಮನ್‌ಸುಖ್ ಮಾಂಡವೀಯ ಅವರು ಗಾಯಕ ಕೈಲಾಶ್ ಖೇರ್ ಅವರ ಹಾಡು ಮತ್ತು ದೃಶ್ಯ -ಶ್ರವಣ ಫಿಲಂ ಅನ್ನು ಬಿಡುಗಡೆ ಮಾಡುವರು.

ವಿಶ್ವದಲ್ಲಿ ಇಲ್ಲಿಯವರೆಗೆ ಚೀನಾ ಮಾತ್ರ 100 ಕೋಟಿ ಡೋಸ್ ಲಸಿಕೆ ನೀಡಿರುವ ಸಾಧನೆ ಮಾಡಿದೆ. ಅದು ಜೂನ್‌ನಲ್ಲಿಯೇ ಈ ಸಾಧನೆ ಮಾಡಿತ್ತು. ಅದರ ನಂತರ ಈ ಮೈಲಿಗಲ್ಲು ದಾಟುತ್ತಿರುವ ದೇಶ ಎಂಬ ಹೆಗ್ಗಳಿಕೆ ಭಾರತದ್ದಾಗಿದೆ.

ಕಳೆದ ತಿಂಗಳು ಪ್ರಧಾನಿ ನರೇಂದ್ರ ಮೋದಿ ಅವರ 71ನೇ ಹುಟ್ಟುಹಬ್ಬದ ದಿನ ದೇಶದಲ್ಲಿ 2.5 ಕೋಟಿ ಜನರಿಗೆ ಕೋವಿಡ್ ಲಸಿಕೆ ನೀಡುವ ಮೂಲಕ ಭಾರತ ಸಾಧನೆ ಮಾಡಿತ್ತು.

ಲಸಿಕಾ ಅಭಿಯಾನ ಮೈಲಿಗಲ್ಲು

- 2021ರ ಜನವರಿ 16 — ಲಸಿಕಾ ಅಭಿಯಾನಕ್ಕೆ ಚಾಲನೆ
- ಜೂನ್ 12 — 25 ಕೋಟಿ ಡೋಸ್
- ಆಗಸ್ಟ್ 6 — 50 ಕೋಟಿ ಡೋಸ್
- ಸೆಪ್ಟೆಂಬರ್ 13 — 75 ಕೋಟಿ ಡೋಸ್

ಚಿನಕುರಳಿ

ಪ್ರಕಾಶ್ ಶೆಟ್ಟಿ



ಹಳ್ಳಿಯಿಂದ ದಿಲ್ಲಿವರೆಗೆ 'ನಂದಿನಿ' ಘಮ

ಬೆಂಗಳೂರು: ರಾಜ್ಯದಲ್ಲಿ ಹಾಲು ಉತ್ಪಾದನೆ ಹೆಚ್ಚಾಗಿದ್ದು, ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಕಂಡುಕೊಳ್ಳಲು ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿ (ಕೆಎಂಎಫ್) ಹಳ್ಳಿ ಮಟ್ಟದಿಂದ ರಾಜಧಾನಿ ದೆಹಲಿಯವರೆಗೆ ತಲುಪಿಸುವ ವಿಶೇಷ ಯೋಜನೆ ರೂಪಿಸಿದೆ. 2

ಅಸಹಕಾರ ಚಳವಳಿಗೆ ಮುಂದಾದ ಶಿಕ್ಷಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವೀಧರ ಶಿಕ್ಷಕರ ಸಮಸ್ಯೆ, ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ, ಸೇವಾವಧಿಯಲ್ಲಿ ಶಿಕ್ಷಕರು ಬಯಸುವ ಜಿಲ್ಲೆಗೆ ಒಂದು ಬಾರಿ ವರ್ಗಾವಣೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಅಸಹಕಾರ ಚಳವಳಿ ನಡೆಸಲು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ನಿರ್ಧರಿಸಿದೆ.

ಅ. 4ರಿಂದ ತರಬೇತಿ ಬಹಿಷ್ಕರಿಸಿರುವ ಪ್ರಾಥಮಿಕ ಶಾಲಾ ಶಿಕ್ಷಕರು, ಇದೇ 21 ಮತ್ತು 29ರಂದು ಕಪ್ಪು ಪಟ್ಟಿ ಧರಿಸಿ ಕರ್ತವ್ಯ ನಿರ್ವಹಿಸಲಿದ್ದಾರೆ. ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸದಿದ್ದರೆ ಅ. 30ರಿಂದ ನ. 10ರವರೆಗೆ ಮಧ್ಯಾಹ್ನದ ಬಿಸಿಯೂಟ ಮಾಹಿತಿ ಅಪ್‌ಡೇಟ್ ಮಾಡದಿರಲು, 11ರಿಂದ 18ರವರೆಗೆ ವಿದ್ಯಾರ್ಥಿಗಳ ಸಾಧನೆ ಟ್ರ್ಯಾಕಿಂಗ್ ವ್ಯವಸ್ಥೆ (ಎಸ್‌ಎಟಿಎಸ್) ಪೋರ್ಟಲ್‌ನಲ್ಲಿ ಮಾಹಿತಿ ಅಪ್‌ಡೇಟ್ ಮಾಡದಿರಲು ಸಂಘ ನಿರ್ಧರಿಸಿದೆ. ಆ ಬಳಿಕವೂ ಎಚ್ಚೆತ್ತುಕೊಳ್ಳದಿದ್ದರೆ ರಾಜ್ಯಮಟ್ಟದಲ್ಲಿ ರ್‍ಯಾಲಿ, ಧರಣಿ ಸತ್ಯಾಗ್ರಹ, ತರಗತಿ ಬಹಿಷ್ಕಾರದಂಥ ಹೋರಾಟ ನಡೆಸಲು ಸಂಘ ಮುಂದಾಗಿದೆ.

ಮುಖ್ಯ ಶಿಕ್ಷಕರಿಗೆ 15,20, 25 ವರ್ಷಗಳ ವೇತನ ಬಡ್ತಿ, ನೂತನ ಪಿಂಚಣಿ ಯೋಜನೆ ರದ್ದುಗೊಳಿಸುವುದು, ಗ್ರಾಮೀಣ ಕೃಪಾಂಕ ಶಿಕ್ಷಕರ ಹಾಗೂ ದೈಹಿಕ ಶಿಕ್ಷಕರ ಸಮಸ್ಯೆ ಬಗೆಹರಿಸಬೇಕು ಎಂದೂ ಸಂಘ ಬೇಡಿಕೆ ಇಟ್ಟಿದೆ.

'ಇದೇ 21ರಂದು ತಾಲ್ಲೂಕುಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಹಾಗೂ 25ರಂದು ಜಿಲ್ಲಾಮಟ್ಟದಲ್ಲಿ ಉಪನಿರ್ದೇಶಕರ ಮೂಲಕ ಸರ್ಕಾರಕ್ಕೆ ಬೇಡಿಕೆಗಳ ಮನವಿ ಸಲ್ಲಿಸಲಾಗುವುದು. ಸಂಘದ ಕೇಂದ್ರ ಕಾರ್ಯಕಾರಿ ಸಮಿತಿಯ ತುರ್ತು ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ' ಎಂದು ಸಂಘದ ಅಧ್ಯಕ್ಷ ಶಂಭುನಿಂಗನಗೌಡ ಪಾಟೀಲ ಮತ್ತು ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಿ ತಿಳಿಸಿದ್ದಾರೆ.

'ಹಲವು ವರ್ಷಗಳಿಂದ ಅದರಲ್ಲೂ, ಕಳೆದ ಮೂರು ತಿಂಗಳುಗಳ ಹಿಂದೆಯೇ ಪ್ರಮುಖ ಬೇಡಿಕೆಗಳನ್ನು ಕಾಲಮಿತಿಯಲ್ಲಿ ಈಡೇರಿಸುವಂತೆ ಮನವಿ ಮಾಡಿದ್ದೆವು' ಎಂದೂ ಅವರು ತಿಳಿಸಿದ್ದಾರೆ.



ಮಲ್ಲೇಶ್ವರ ಸಾಂಸ್ಕೃತಿಕ ಸಂಘವು 17ನೇ ಅಡ್ಡರಸ್ತೆಯ ವಿದ್ಯಾಗಣಪತಿ ದೇವಸ್ಥಾನದಲ್ಲಿ ಬುಧವಾರ ಆಯೋಜಿಸಿದ್ದ ಸಮಾರಂಭದಲ್ಲಿ ಕಾಸರಗೋಡಿನ ಎಡನೀರು ಮಠದ ಸಚ್ಚಿದಾನಂದ ಭಾರತಿ ಸ್ವಾಮೀಜಿ ಅವರನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್ ಅಶ್ವತ್ಥನಾರಾಯಣ ಮತ್ತು ಅಬಕಾರಿ ಸಚಿವ ಕೆ.ಗೋಪಾಲಯ್ಯ ಸನ್ಮಾನಿಸಿದರು

ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಕಂಡುಕೊಳ್ಳಲು ಕೆಎಂಎಫ್ ಹೊಸ ಪ್ರಯತ್ನ

ಹಳ್ಳಿಯಿಂದ ದಿಲ್ಲಿವರೆಗೆ 'ನಂದಿನಿ' ಘಮ

• ಸಚ್ಚಿದಾನಂದ ಕುರಗುಂದ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದಲ್ಲಿ ಹಾಲು ಉತ್ಪಾದನೆ ಹೆಚ್ಚಾಗಿದ್ದು, ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಕಂಡುಕೊಳ್ಳಲು ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿ (ಕೆಎಂಎಫ್)ಹಳ್ಳಿ ಮಟ್ಟದಿಂದ ರಾಜಧಾನಿ ದೆಹಲಿಯವರೆಗೆ ತಲುಪಿಸುವ ವಿಶೇಷ ಯೋಜನೆ ರೂಪಿಸಿದೆ.

'ಸಮಗ್ರ ವ್ಯಾಪಾರ ಅಭಿವೃದ್ಧಿ ಯೋಜನೆ' ಅಡಿಯಲ್ಲಿ ದೇಶದ ಪ್ರತಿಯೊಂದು ಹಳ್ಳಿ, ತಾಲ್ಲೂಕು, ಜಿಲ್ಲೆ ಮತ್ತು ರಾಜಧಾನಿಗಳಿಗೆ ಕೆಎಂಎಫ್ ಉತ್ಪನ್ನಗಳನ್ನು ತಲುಪಿಸುವ ಉದ್ದೇಶ ಹೊಂದಿರುವುದಾಗಿ ಕೆಎಂಎಫ್ ಮೂಲಗಳು ತಿಳಿಸಿವೆ.

ಕೋವಿಡ್–19 ಬಳಿಕ ಉದ್ಯೋಗ ಕಳೆದುಕೊಂಡ ಹಲವರು ಹೈನುಗಾರಿಕೆಯನ್ನು ಕೈಗೊಂಡು ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ. ಇದು ಕೂಡಾ ಹಾಲಿನ ಉತ್ಪಾದನೆ ಹೆಚ್ಚಾಗಲು ಕಾರಣವಾಗಿದೆ. ಹೆಚ್ಚುವರಿಯಾಗಿ ಉತ್ಪಾದನೆ ಆಗುತ್ತಿರುವ ಹಾಲು ಮತ್ತು ಇತರ ಉತ್ಪನ್ನಗಳ ವಿಲೇವಾರಿ ಈಗ ಸವಾಲಾಗಿ ಪರಿಣಮಿಸಿದೆ.

ಕೆಎಂಎಫ್ ಸದ್ಯ 140 ಉತ್ಪನ್ನಗಳನ್ನು ತಯಾರಿಸುತ್ತಿದೆ. ಈ ಯೋಜನೆಯ ಭಾಗವಾಗಿ ಗ್ರಾಮೀಣ ಪ್ರದೇಶದಲ್ಲಿ ಹಾಲಿನ ಪಾರ್ಲರ್‌ಗಳನ್ನು ಸ್ಥಾಪಿಸಲಾಗುವುದು. ಅಲ್ಲಿ ಕನಿಷ್ಠ 20 ಉತ್ಪನ್ನಗಳನ್ನು ಮಾರಾಟ ಮಾಡಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ಸದ್ಯ ರಾಜ್ಯದಲ್ಲಿ ಪ್ರತಿ ದಿನ 84 ಲಕ್ಷ ಕೆ.ಜಿಗೂ ಹೆಚ್ಚು ಹಾಲು ಸಂಗ್ರಹಿಸಲಾಗುತ್ತಿದೆ. ಇದರಲ್ಲಿ 68 ಲಕ್ಷ ಕೆ.ಜಿ. ಬೆಣ್ಣೆ, ಮೊಸರು ಸೇರಿದಂತೆ ವಿವಿಧ ಉತ್ಪನ್ನಗಳನ್ನು ತಯಾರಿಸಲು ಬಳಸಲಾಗುತ್ತಿದೆ. ಸುಮಾರು 10 ಲಕ್ಷ ಕೆ.ಜಿ.ಗೂ ಹೆಚ್ಚು ಹಾಲನ್ನು ಪುಡಿಯನ್ನಾಗಿ ಪರಿವರ್ತಿಸಲಾಗುತ್ತಿದೆ. ಈ ಹಾಲಿನ ಪುಡಿ ತಯಾರಿಸುವುದು ಮತ್ತು ವಿತರಿಸುವುದು ಕೆಎಂಎಫ್‌ಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಜತೆಗೆ, ಆರ್ಥಿಕವಾಗಿಯೂ ಹೊರೆಯಾಗಿದೆ. ಅಂಗನವಾಡಿ ಮಕ್ಕಳಿಗೆ ಕ್ಷೀರ ಭಾಗ್ಯ ಯೋಜನೆ ಅಡಿಯಲ್ಲೂ ವಿತರಿಸಿದರೂ ಸಂಪೂರ್ಣವಾಗಿ ಹಾಲಿನ ಪುಡಿ ಖರ್ಚಾಗದೇ ಉಳಿಯುತ್ತಿದೆ ಎಂದು ತಿಳಿಸಿದ್ದಾರೆ.

'ಹಾಲಿನ ಪುಡಿಯನ್ನು 9 ತಿಂಗಳ ಅವಧಿಯವರೆಗೆ ಸುರಕ್ಷಿತವಾಗಿಡಬಹುದು. ಸದ್ಯ ಕೆಎಂಎಫ್‌ನಲ್ಲಿ ಐದು ತಿಂಗಳ ಹಳೆಯ 20 ಸಾವಿರ ಟನ್ ಹಾಲಿನ ಪುಡಿ ಸಂಗ್ರಹದಲ್ಲಿದೆ. ತೆಲಂಗಾಣ, ಒಡಿಶಾ ಮತ್ತು ಬಿಹಾರಕ್ಕೆ ಸಹ ಬೇಡಿಕೆಗೆ ತಕ್ಕಂತೆ ಹಾಲಿನ ಪುಡಿ ಕಳುಹಿಸಲಾಗುತ್ತಿದೆ. ಆದರೆ, ಹಾಲಿನ ಪುಡಿಗೆ ನಿರೀಕ್ಷೆಗೆ ತಕ್ಕಂತೆ ದರ ದೊರೆಯುತ್ತಿಲ್ಲ' ಎಂದು ಅಧಿಕಾರಿಗಳು ವಿವರಿಸಿದರು.

'ಹಾಲಿನ ಉತ್ಪಾದನೆ ತಕ್ಕ ಹಾಗೆ ಮಾರುಕಟ್ಟೆ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಬೇಕಾಗಿದೆ. ರೈತರಿಗೆ ಕೊಬ್ಬಿನಾಂಶ ಆಧಾರದ ಮೇಲೆ ದರ ನಿಗದಿಪಡಿಸಲಾಗುತ್ತದೆ. 3.5 ರಷ್ಟು ಕೊಬ್ಬಿನಾಂಶ ಇದ್ದ ಪ್ರತಿ ಲೀಟರ್ ಹಾಲಿಗೆ ₹24.05 ನೀಡಲಾಗುತ್ತಿದೆ' ಎಂದು ಹೇಳಿದರು.

ಹಾಲಿನ ಪುಡಿ ತಯಾರಿಕೆ ದುಬಾರಿ!

ಒಂದು ಕಿಲೋ ಗ್ರಾಂ ಹಾಲಿನ ಪುಡಿ ತಯಾರಿಸಲು ₹280 ಖರ್ಚಾಗುತ್ತದೆ. ಆದರೆ, ₹180 ಮಾರಾಟ ದರ ನಿಗದಿಪಡಿಸಲಾಗಿದೆ. ಇದರಿಂದ ಪ್ರತಿ ಕೆ.ಜಿ.ಗೆ ₹100 ನಷ್ಟವಾಗುತ್ತಿದೆ.

'ಬಮೂಲ್ (ಬೆಂಗಳೂರು ಹಾಲು ಒಕ್ಕೂಟ) ವ್ಯಾಪ್ತಿಯಲ್ಲಿಯೂ ಹಾಲಿನ ಪುಡಿ ಖರ್ಚಾಗುತ್ತಿಲ್ಲ. ಸದ್ಯ 8 ಸಾವಿರ ಟನ್ ಹಾಲಿನ ಪುಡಿ ಮತ್ತು 4 ಸಾವಿರ ಟನ್ ಬೆಣ್ಣೆ ಸಂಗ್ರಹವಿದೆ. ಏಪ್ರಿಲ್‌ನಿಂದ ಈಚೆಗಿನ ಹಾಲಿನ ಪುಡಿ ಇದೆ. ಇದನ್ನು ವಿಲೇವಾರಿ ಮಾಡುವುದೇ ದೊಡ್ಡ ಸಮಸ್ಯೆಯಾಗಿದೆ' ಎಂದು ಬಮೂಲ್ ಅಧ್ಯಕ್ಷ ನರಸಿಂಹಮೂರ್ತಿ ತಿಳಿಸಿದರು.

'ಪರ್ಯಾಯ ಯೋಜನೆಯಿಂದ ಅನುಕೂಲ'

'ಹಾಲು ಉತ್ಪಾದನೆ ಹೆಚ್ಚಾದರೂ ಆತಂಕ ಪಡುವ ಅಗತ್ಯವಿಲ್ಲ. ಕೆಎಂಎಫ್ ಪರ್ಯಾಯ ವ್ಯವಸ್ಥೆಗಳನ್ನು ರೂಪಿಸಿಕೊಂಡಿದೆ' ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ತಿಳಿಸಿದರು.

ಬಿಬಿಎಂಪಿ ಧೋರಣೆ ಖಂಡಿಸಿ ಆಮ್ ಆದ್ಮಿ ಪಕ್ಷದಿಂದ ಪ್ರತಿಭಟನೆ

ರಸ್ತೆ ಗುಂಡಿಗಳಿಗೆ ಪೂಜೆ, ಅಲಂಕಾರ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಗುಂಡಿಗಳನ್ನು ಮುಚ್ಚಲು ನಿರ್ಲಕ್ಷ್ಯ ತೋರುತ್ತಿರುವ ಬಿಬಿಎಂಪಿ ಧೋರಣೆಯನ್ನು ಖಂಡಿಸಿ ಆಮ್ ಆದ್ಮಿ ಪಕ್ಷವು ನಗರದಾದ್ಯಂತ 'ರಸ್ತೆ ಗುಂಡಿಗಳ ಹಬ್ಬ' ಆಚರಿಸಿತು. ಗುಂಡಿಗಳನ್ನು ಹೂವಿನಿಂದ ಸಿಂಗರಿಸಿ, ಪೂಜೆ ಮಾಡಿ ಪ್ರತಿಭಟಿಸಲಾಯಿತು.

ಗಾಂಧಿನಗರ ವಿಧಾನಸಭಾ ಕ್ಷೇತ್ರದ ದತ್ತಾತ್ರೇಯನಗರ ವಾರ್ಡ್, ಸರ್.ಸಿ.ವಿ. ರಾಮನ್‌ನಗರ ವಿಧಾನಸಭಾ ಕ್ಷೇತ್ರದ ಜೀವನ್‌ಬಿಮಾ ನಗರ, ಕಸ್ತೂರಿ ನಗರ, ಮಹದೇವಪುರದ ಬೆಳ್ಳಂದೂರು ವಾರ್ಡ್, ಬೊಮ್ಮನಹಳ್ಳಿ, ಯಲಹಂಕ, ಸರ್ವಜ್ಞನಗರದ ಗೋವಿಂದಪುರ ಮುಖ್ಯರಸ್ತೆಯಲ್ಲಿ ಪ್ರತಿಭಟನೆ ನಡೆಸಿದ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಹಳೆ ಬೈಯಪ್ಪನಹಳ್ಳಿ ಹಾಗೂ ಕಲ್ಪಹಳ್ಳಿ ಮುಖ್ಯರಸ್ತೆಯಲ್ಲಿ ಹುಲ್ಲಿನ ನಾಟಿ ಮಾಡುವ ಮೂಲಕ ಪ್ರತಿಭಟಿಸಲಾಯಿತು. ಕೆಲವೆಡೆ ಗುಂಡಿಗಳ ಸುತ್ತ ರಂಗೋಲಿ ಬಿಡಿಸಲಾಗಿತ್ತು. ಹಣತೆ ಹಚ್ಚಿ ಅವುಗಳ ಮೇಲೆ ಇಡಲಾಗಿತ್ತು.

'ವಾಹನ ಸವಾರರೇ ನಿಮ್ಮ ಜೀವಕ್ಕೆ ನೀವೇ ಜವಾಬ್ದಾರರು', 'ನಮ್ಮ ಬೆಂಗಳೂರು ಗುಂಡಿಗಳ ತವರೂರು' ಎಂಬ ಭಿತ್ತಿಪತ್ರಗಳನ್ನೂ ಪ್ರದರ್ಶಿಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಲಾಯಿತು.

ಎಎಪಿ ರಾಜ್ಯ ಸಂಚಾಲಕ ಪೃಥ್ವಿ ರೆಡ್ಡಿ, 'ರಾಜ್ಯ ಸರ್ಕಾರವು ಬೆಂಗಳೂರಿನ ರಸ್ತೆಗಳ ಅಭಿವೃದ್ಧಿಗೆ ಕಳೆದ ಐದು ವರ್ಷಗಳಲ್ಲಿ ಸುಮಾರು ₹20 ಸಾವಿರ ಕೋಟಿ ಹಣ ಬಿಡುಗಡೆ ಮಾಡಿದೆ. ಹೀಗಿದ್ದರೂ ರಸ್ತೆಗಳ ಸ್ಥಿತಿ ಶೋಚನೀಯವಾಗಿದೆ. ಗುಂಡಿಗಳಿಂದಾಗಿ ಅಪಘಾತಗಳು ಸಂಭವಿಸಿ ಸಾರ್ವಜನಿಕರು ಜೀವ ಕಳೆದುಕೊಂಡಿದ್ದಾರೆ. ಸರ್ಕಾರದ ಹಣ ಯಾರ ಜೇಬು ಸೇರಿದೆ ಎಂಬುದರ ಬಗ್ಗೆ ತನಿಖೆಯಾಗಬೇಕು. ರಸ್ತೆ ಅಭಿವೃದ್ಧಿ ಯೋಜನೆಗಳ ಅನುದಾನದ ಕುರಿತು ಸರ್ಕಾರ ಶ್ವೇತಪತ್ರ ಹೊರಡಿಸಬೇಕು' ಎಂದು ಆಗ್ರಹಿಸಿದರು.

ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ, 'ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಾಹನ ಸವಾರರ ಜೀವದ ಜೊತೆ ಚೆಲ್ಲಾಟವಾಡುತ್ತಿವೆ. ಕಾಟಾಚಾರಕ್ಕೆ ಗುಂಡಿಗಳಿಗೆ ತೇಪೆ ಹಾಕಲಾಗುತ್ತಿದ್ದು, ಸಣ್ಣ ಮಳೆಗೆ ಅವು ಕಿತ್ತು ಹೋಗುತ್ತಿವೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.



ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಗಾಂಧಿ ಬಜಾರ್ ಮುಖ್ಯರಸ್ತೆಯಲ್ಲಿನ ಗುಂಡಿಗೆ ಪೂಜೆ ಮಾಡಿ ಪ್ರತಿಭಟಿಸಿದರು —ಪ್ರಜಾವಾಣಿ ಚಿತ್ರ

ಬಾಳಿಗ ಹತ್ಯೆ ಪ್ರಕರಣ: ಎಸ್‌ಪಿಪಿ ನೇಮಕ ರದ್ದು

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಮಾಹಿತಿ ಹಕ್ಕು ಕಾರ್ಯಕರ್ತ ವಿನಾಯಕ ಬಾಳಿಗ ಹತ್ಯೆ ಪ್ರಕರಣದಲ್ಲಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್(ಎಸ್‌ಪಿಪಿ) ಆಗಿದ್ದ ಎನ್.ರವೀಂದ್ರನಾಥ ಕಾಮತ್ ಅವರ ನೇಮಕವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಕೊಡಿಯಾಲ್ ಬೈಲ್ ಬಳಿ 2016ರಲ್ಲಿ ವಿನಾಯಕ ಬಾಳಿಗ ಹತ್ಯೆಯಾಗಿತ್ತು. ಮಂಗಳೂರಿನ ಬರ್ಕೆ ಠಾಣೆ ಪೊಲೀಸರು ಪ್ರಮುಖ ಆರೋಪಿ ಉದ್ಯಮಿ ನರೇಶ್ ಎಂ. ಶೆಣೈ ಸೇರಿ ಮೂವರನ್ನು ಬಂಧಿಸಿದ್ದರು. ಈ ಪ್ರಕರಣ ಸಂಬಂಧ ವಕೀಲ ರವೀಂದ್ರನಾಥ್ ಕಾಮತ್ ಅವರನ್ನು ಎಸ್‌ಪಿಪಿಯಾಗಿ 2016ರ ನ. 21ರಂದು ನೇಮಕ ಮಾಡಲಾಗಿತ್ತು.


ನೇಮಕಾತಿ ಪ್ರಶ್ನಿಸಿದ್ದ ನರೇಶ್ ಶೆಣೈ, 'ರವೀಂದ್ರನಾಥ ಕಾಮತ್ ಅವರು ಮೃತ ವ್ಯಕ್ತಿಯ ಪರ ವಕೀಲರಾಗಿದ್ದು, ಅವರ ಮೃತಪಟ್ಟ ಬಳಿಕ ದೂರು ನೀಡಿರುವ ತಂದೆ ರಾಮಚಂದ್ರ ಬಾಳಿಗ ಮತ್ತು ಸಹೋದರಿ ಅನುರಾಧ ಬಾಳಿಗ ಪರ ವಕೀಲರಾಗಿದ್ದರು. ಅಲ್ಲದೇ ಮೃತ ಬಾಳಿಗ ಪರವಾಗಿ ಹಲವು ಬಾರಿ ಪತ್ರಿಕಾಗೋಷ್ಠಿಯನ್ನು ನಡೆಸಿದ್ದಾರೆ' ಎಂದು ತಿಳಿಸಿದ್ದರು.

'ಆಧಾರ ರಹಿತ ಆರೋಪವನ್ನು ಅರ್ಜಿದಾರರು ಮಾಡಿದ್ದಾರೆ. ಕ್ಷುಲ್ಲಕ ಆಕ್ಷೇಪಣೆಗಳನ್ನು ಮಾಡುವ ಮೂಲಕ ವಿಚಾರಣೆಯನ್ನು ವಿಳಂಬ ಮಾಡಲು ಪ್ರಯತ್ನಿಸುತ್ತಿದ್ದಾರೆ' ಎಂದು ಸರ್ಕಾರದ ಪರ ವಕೀಲರು ವಾದಿಸಿದರು.

'ನ್ಯಾಯಯುತ ವಿಚಾರಣೆ ಎಂದರೆ ಅದು ಸಂತ್ರಸ್ತರ ಪರವಾಗಿಯಷ್ಟೇ ಇರಬೇಕೆಂದಲ್ಲ. ಆರೋಪಿಗಳಿಗೂ ನ್ಯಾಯಯುತವಾಗಿರಬೇಕು' ಎಂದು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಪೀಠ ಹೇಳಿತು.

ನಿರ್ದೇಶಕರಾಗಿ ವೆಂಕಟೇಶ್ ಆಯ್ಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯವಸಾಯ ಉತ್ಪನ್ನ ಸಹಕಾರಿ ಸಂಘದ ನಿರ್ದೇಶಕರಾಗಿ ಎಂ.ವೆಂಕಟೇಶ್ ಆಯ್ಕೆಯಾಗಿದ್ದಾರೆ.

ಕಾಂಗ್ರೆಸ್ ಮುಖಂಡರಾಗಿರುವ ವೆಂಕಟೇಶ್, ಪ್ರಸ್ತುತ ಬೆಂಗಳೂರು ದಕ್ಷಿಣ ತಾಲ್ಲೂಕು ತಿಗಳರ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ.

'ಜೀವನಾಂಶ ನೀಡಲು ಕಾರಣ ಹೇಳಕೂಡದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತರಾತುರಿಯಲ್ಲಿ ಮದುವೆಯಾದ ಎರಡನೇ ಪತ್ನಿ ಮತ್ತು ಮಗುವಿನ ನಿರ್ವಹಣೆ ಜವಾಬ್ದಾರಿಯ ಕಾರಣ ಹೇಳಿ, ಮೊದಲ ಪತ್ನಿಗೆ ಜೀವನಾಂಶ ನೀಡಲಾಗದು ಎಂಬ ಸಬೂಬು ಹೇಳುವಂತಿಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ತಲಾಖ್ ನೀಡಿದ್ದರೂ ಜೀವನಾಂಶ ನೀಡಬೇಕು ಎಂದು ಹಲವು ವರ್ಷ ಕಾನೂನು ಹೋರಾಟ ನಡೆಸಿದ್ದ ಮಹಿಳೆಯೊಬ್ಬರಿಗೆ ಆಕೆಯ ಮಾಜಿ ಪತಿ ಜೀವನಾಂಶನೀಡಬೇಕು ಎಂಬ ಆದೇಶ ನೀಡಿದ ಪೀಠ, ಹೀಗೆ ಹೇಳಿದೆ.

'ಇನ್ನೊಬ್ಬ ಮಹಿಳೆಯನ್ನು ಮದುವೆಯಾಗುವ ಮುನ್ನ ಮೊದಲ ಪತ್ನಿಗೆ ಜೀವನಾಂಶ ನೀಡಬೇಕಿರುವುದು ಆ ವ್ಯಕ್ತಿಯ ಜವಾಬ್ದಾರಿ. ಹೊಸ ಮದುವೆಯ ಕಾರಣ ನೀಡಿ ಈ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಆಗುವುದಿಲ್ಲ' ಎಂದು ಹೇಳಿದೆ.

ಒಂಬತ್ತು ವರ್ಷಗಳ ಹಿಂದೆ ದಾಖಲಾಗಿದ್ದ ಪ್ರಕರಣದ ವಿಚಾರಣೆ ನಡೆಸಿದ್ದ ಕೌಟುಂಬಿಕ ನ್ಯಾಯಾಲಯ, ತಿಂಗಳಿಗೆ ₹3 ಸಾವಿರ ಜೀವನಾಂಶ ನೀಡುವಂತೆ 2011ರಲ್ಲಿ ಆದೇಶಿಸಿತ್ತು. ಪಾವತಿಸದ ಕಾರಣಕ್ಕೆ 2012ರಲ್ಲಿ ಜೈಲಿಗೂ ಹೋಗಿದ್ದ ಪತಿ, 2013ರಲ್ಲಿ ₹30 ಸಾವಿರ ಪಾವತಿಸಿದ ಬಳಿಕ ಬಿಡುಗಡೆಯಾಗಿದ್ದರು. 'ಹಣಕಾಸಿನ ಅಸಮರ್ಥತೆಯ ಕಾರಣ ಜೀವನಾಂಶ ನೀಡಲು ಆಗುವುದಿಲ್ಲ' ಎಂದು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ತಿರಸ್ಕರಿಸಿದ ಪೀಠ, ಮಾಜಿ ಪತಿಗೆ ₹25 ಸಾವಿರ ದಂಡ ವಿಧಿಸಿದೆ. ಈ ಪ್ರಕರಣವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ ಮೂರು ತಿಂಗಳಲ್ಲಿ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ವರದಿ ಸಲ್ಲಿಸಲು ವಿಚಾರಣಾ ನ್ಯಾಯಾಲಯಕ್ಕೆ ತಿಳಿಸಿದೆ.

ಸ್ವಿಗ್ಗಿ: ಋತುಸ್ರಾವದ ಅವಧಿಯಲ್ಲಿ ರಜೆ

ನವದೆಹಲಿ(ಪಿಟಿಐ): ಸ್ವಿಗ್ಗಿ ಕಂಪನಿಯು ತನ್ನ ಜೊತೆ ಕೆಲಸ ಮಾಡುವ, ಆಹಾರ ವಸ್ತುಗಳನ್ನು ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುವ ಮಹಿಳೆಯರಿಗೆ ಋತುಸ್ರಾವದ ಸಂದರ್ಭದಲ್ಲಿ ರಜೆ ತೆಗೆದುಕೊಳ್ಳುವ ಅವಕಾಶ ಕಲ್ಪಿಸಿದೆ. ಅವರು ತಿಂಗಳಲ್ಲಿ ಎರಡು ದಿನ ರಜೆ ತೆಗೆದುಕೊಳ್ಳಲು ಕಂಪನಿ ಅವಕಾಶ ನೀಡಿದೆ. ಈ ರಜೆಗೆ ವೇತನ ಕಡಿತ ಇರುವುದಿಲ್ಲ.

ಸ್ವಿಗ್ಗಿ ಜೊತೆ ಕೆಲಸ ಮಾಡುವ, ಮನೆಗಳಿಗೆ ಆಹಾರ ವಸ್ತು ತಲುಪಿಸುವವರಲ್ಲಿ ಅಂದಾಜು ಒಂದು ಸಾವಿರ ಮಂದಿ ಮಹಿಳೆಯರು. 'ಮಹಿಳೆಯರು ಋತುಸ್ರಾವದ ಸಂದರ್ಭದಲ್ಲಿ, ತಮ್ಮ ಇಚ್ಛೆಗೆ ಅನುಸಾರವಾಗಿ ತಿಂಗಳಲ್ಲಿ ಎರಡು ದಿನ ಬಿಡುವು ಪಡೆದುಕೊಳ್ಳಬಹುದು. ಈ ಅವಧಿಗೆ ಅವರಿಗೆ ಕನಿಷ್ಠ ಸಂಭಾವನೆಯಲ್ಲಿ ಕಡಿತ ಮಾಡುವುದಿಲ್ಲ' ಎಂದು ಕಂಪನಿ ಹೇಳಿದೆ.

'ವಿಶ್ವ ಸಂಧಿವಾತ ದಿನ' ಕಾರ್ಯಕ್ರಮದಲ್ಲಿ ನಗರದ ಮೂಳೆ ತಜ್ಞರ ಕಳವಳ

'ಸಂಧಿವಾತ: ಯುವಜನರಲ್ಲೂ ಸಮಸ್ಯೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದಲಾದ ಜೀವನಶೈಲಿ, ಪಾಶ್ಚಿಮಾತ್ಯ ಆಹಾರ ಪದ್ಧತಿ, ಧೂಮಪಾನದಂತಹ ವ್ಯಸನ ಸೇರಿದಂತೆ ವಿವಿಧ ಕಾರಣಗಳಿಂದ ಇತ್ತೀಚಿನ ವರ್ಷಗಳಲ್ಲಿ ಯುವಜನರಲ್ಲಿಯೂ ಸಂಧಿವಾತದ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಇದನ್ನು ಕಡೆಗಣಿಸಿದರೆ ಭವಿಷ್ಯದಲ್ಲಿ ಗಂಭೀರ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ' ಎಂದು ನಗರದ ಮೂಳೆ ತಜ್ಞರು ಎಚ್ಚರಿಸಿದರು.

ವಿಶ್ವ ಸಂಧಿವಾತ ದಿನದ ಅಂಗವಾಗಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಸಹಯೋಗದಲ್ಲಿ ಮಣಿಪಾಲ್ ಆಸ್ಪತ್ರೆಗಳ ಸಮೂಹದ ಅಂಗ ಸಂಸ್ಥೆಯಾದ ವಿಕ್ರಮ್ ಆಸ್ಪತ್ರೆಯು ನಗರದಲ್ಲಿ ಬುಧವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ 'ಸಂಧಿವಾತ ಮತ್ತು ಕೀಲು ನೋವಿನ ಪರಿಣಾಮವನ್ನು ಅರ್ಥಮಾಡಿಕೊಳ್ಳುವುದು' ಎಂಬ ವಿಷಯದ ಕುರಿತು ವೈದ್ಯರು ಚರ್ಚಿಸಿದರು.

ವಿಕ್ರಮ್ ಆಸ್ಪತ್ರೆಯ ಮೂಳೆ ತಜ್ಞ ಡಾ. ಚಿರಾಗ್ ಥಾನ್ಸೆ, 'ಇತ್ತೀಚಿನ ದಿನಗಳಲ್ಲಿ ಸಂಧಿವಾತ ದೊಡ್ಡ ಅನಾರೋಗ್ಯ ಸಮಸ್ಯೆಯಾಗಿ ಪರಿಣಮಿಸಿದೆ. ದೇಶದಲ್ಲಿ ಈ ಸಮಸ್ಯೆ ಎದುರಿಸುತ್ತಿರುವವರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗುತ್ತಿದೆ. ಹಿಂದೆ ಈ ಸಮಸ್ಯೆ ಹಿರಿಯ ನಾಗರಿಕರಲ್ಲಿ ಕಾಣಿಸಿಕೊಳ್ಳುತ್ತಿತ್ತು. ಈಗ ಯುವಜನರೂ ಹೆಚ್ಚಿನ ಸಂಖ್ಯೆಯಲ್ಲಿ ಈ ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಬದಲಾದ ಜೀವನಶೈಲಿಯೇ ಇದಕ್ಕೆ ಮುಖ್ಯ ಕಾರಣ' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ (ಎಡದಿಂದ ಬಲಕ್ಕೆ)ಡಾ.ಸೈಯದ್ ಇಮ್ರಾನ್, ಡಾ.ಚಿರಾಗ್ ಥಾನ್ಸೆ ಹಾಗೂ ಡಾ.ಬಿ.ಜಿ.ಧರ್ಮಾನಂದ್ ಸಮಾಲೋಚನೆ ನಡೆಸಿದರು –ಪ್ರಜಾವಾಣಿ ಚಿತ್ರ

ತಪಾಸಣೆಯಿಂದ ಪತ್ತೆ: ಸಂಧಿವಾತ ಸಮಾಲೋಚಕ ಡಾ.ಬಿ.ಜಿ. ಧರ್ಮಾನಂದ್, 'ಸಾಮಾನ್ಯವಾಗಿ ಎರಡು ರೀತಿಯಲ್ಲಿ ಸಂಧಿವಾತ ಕಂಡುಬರುತ್ತದೆ. ಮೂಳೆಗಳು ಕ್ಷೀಣಗೊಳ್ಳುವ ಸಂಧಿವಾತ ಕೆಲವರಲ್ಲಿ ಕಾಣಿಸಿಕೊಂಡರೆ, ಇನ್ನೂ ಕೆಲವರ ಕೀಲುಗಳಲ್ಲಿ ಊರಿಯೂತ, ಕುಳಿತುಕೊಳ್ಳಲು ಕಷ್ಟವಾಗುವಂತಹ ಅಸಹಜ ಸ್ಥಿತಿ ಎದುರಾಗುತ್ತದೆ. ಚಲಿಸುವಾಗ ಬೆರಳುಗಳ ಕೊನೆಯಲ್ಲಿ ಬಿಗಿತ ಅಥವಾ ನೋವು ಕಂಡುಬರುವುದು ಇದರ ಮೊದಲ ಲಕ್ಷಣ. ವೈದ್ಯರನ್ನು ಸಂಪರ್ಕಿಸಿ, ತಪಾಸಣೆಗೆ ಒಳಗಾಗಬೇಕು' ಎಂದರು.

ಮೂಳೆ ತಜ್ಞ ಡಾ. ಸೈಯದ್ ಇಮ್ರಾನ್, 'ಸಂಧಿವಾತದ ಸಮಸ್ಯೆ ಇರುವವರು ತೂಕವನ್ನು ಕಡಿಮೆ ಮಾಡಿಕೊಳ್ಳಬೇಕಾಗುತ್ತದೆ. ಸಂಧಿವಾತದ ಲಕ್ಷಣಗಳು ಕಾಣಿಸಿಕೊಳ್ಳುತ್ತಲೇ ಗುರುತಿಸಿದಲ್ಲಿ ಇದನ್ನು ಗುಣಪಡಿಸಬಹುದು. ಇದು ತೀವ್ರ ಸ್ವರೂಪಕ್ಕೆ ತಿರುಗಿದರೆ ಮಂಡಿ ಚಿಪ್ಪು ಬದಲಿಸಬೇಕಾಗುತ್ತದೆ. ಎಲ್ಲ ವಯೋಮಾನದವರಿಗೂ ಮಂಡಿ ಚಿಪ್ಪು ಬದಲಿ ಶಸ್ತ್ರಚಿಕಿತ್ಸೆ ನಡೆಸಬಹುದು. ವಿದೇಶಗಳಿಂದಲೂ ರೋಗಿಗಳು ಇಲ್ಲಿಗೆ ಬರುತ್ತಾರೆ' ಎಂದರು.

ವೈದ್ಯರ ಸಲಹೆಗಳು

- ತೂಕವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು
- ನಿಯಮಿತವಾಗಿ ವ್ಯಾಯಾಮ ಮಾಡಬೇಕು
- ಗಾಯವಾಗದಂತೆ ಎಚ್ಚರ ವಹಿಸಬೇಕು
- ಉತ್ತಮವಾದ ಜೀವನ ವಿಧಾನ, ಆಹಾರ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು
- ಧೂಮಪಾನದಂತಹ ವ್ಯಸನ ತ್ಯಜಿಸಬೇಕು
- ಕಾಲಕಾಲಕ್ಕೆ ವೈದ್ಯರ ಬಳಿ ತಪಾಸಣೆ ಮಾಡಿಸಿಕೊಳ್ಳಬೇಕು

'ಹಿಂದೂ ಸಂಘಟನೆಗಳ ವಿರುದ್ಧ ಪ್ರಕರಣ ದಾಖಲಿಸಿ'

ಬೆಂಗಳೂರು: 'ವಿಜಯ ದಶಮಿಯಂದು ಜನರಲ್ಲಿ ಭೀತಿ ಹುಟ್ಟಿಸುವಂತೆ ರಾಜ್ಯದ ವಿವಿಧ ಸ್ಥಳಗಳಲ್ಲಿ ಸಾರ್ವಜನಿಕವಾಗಿ ತಲವಾರು ಪ್ರದರ್ಶಿಸಿರುವ ಹಿಂದೂ ಸಂಘಟನೆಗಳ ಕಾರ್ಯಕರ್ತರ ವಿರುದ್ಧ ಪೊಲೀಸ್ ಇಲಾಖೆ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಳ್ಳಬೇಕು' ಎಂದು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್ಐ) ಆಗ್ರಹಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಿಎಫ್ಐ ರಾಜ್ಯ ಕಾರ್ಯದರ್ಶಿ ಎ.ಕೆ.ಅಶ್ರಫ್, 'ಹಬ್ಬದ ದಿನ ವಿಶ್ವ ಹಿಂದೂ ಪರಿಷತ್, ಬಜರಂಗ ದಳ ಸೇರಿದಂತೆ ಸಂಘ ಪರಿವಾರದವರು ಉಡುಪಿ, ಬೆಳಗಾವಿ, ವಿಜಯಪುರ, ದಾವಣಗೆರೆ, ನರಗುಂದ ಸೇರಿದಂತೆ ವಿವಿಧೆಡೆ ಸಾರ್ವಜನಿಕ ಸ್ಥಳಗಳಲ್ಲಿ ತಲವಾರು, ಬಂದೂಕು, ಕೋವಿಯಂತಹ ಮಾರಕಾಸ್ತ್ರಗಳನ್ನು ಪ್ರದರ್ಶಿಸಿದ್ದಾರೆ' ಎಂದು ದೂರಿದರು.

ಬೆಂಗಳೂರು ವಿಭಾಗದ ಅಧ್ಯಕ್ಷ ಇಲ್ಯಾಸ್ ಮೊಹಮ್ಮದ್, 'ಸಾರ್ವಜನಿಕ ಸ್ಥಳಗಳಲ್ಲಿ ಮಾರಕಾಸ್ತ್ರ ಪ್ರದರ್ಶನ ಕಾನೂನುಬಾಹಿರ. ರಾಜ್ಯದಲ್ಲಿ ಇಂತಹ ಘಟನೆಗಳು ಭವಿಷ್ಯದಲ್ಲಿ ನಡೆಯದಂತೆ ಮುಖ್ಯಮಂತ್ರಿಗಳು ಎಚ್ಚರ ವಹಿಸಬೇಕು. ಮಾರಕಾಸ್ತ್ರಗಳನ್ನು ಪ್ರದರ್ಶಿಸಿದವರ ವಿರುದ್ಧ ಪ್ರಕರಣ ದಾಖಲಿಸಿ, ಕ್ರಮ ಕೈಗೊಳ್ಳಬೇಕು' ಎಂದೂ ಆಗ್ರಹಿಸಿದರು.

ಪದಾಧಿಕಾರಿಗಳ ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವೃತ್ತ ಪತ್ರಿಕಾ ನೌಕರರ ಸಂಘದ (ಬಿಎನ್ಇಯು) 2021–24ನೇ ಸಾಲಿನ ಪದಾಧಿಕಾರಿಗಳ ಅವಿರೋಧ ಆಯ್ಕೆ ನಡೆದಿದೆ.

ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಕೆ.ರವೀಂದ್ರ ಪ್ರಸಾದ್, ಎಸ್.ಎನ್. ನಿಂಗೇಗೌಡ (ಉಪಾಧ್ಯಕ್ಷ), ಡಿ.ಎಂ.ರಾಮಕೃಷ್ಣ (ಸಹ ಕಾರ್ಯದರ್ಶಿ), ಮಂಜುನಾಥ ಸ್ವಾಮಿ (ಖಜಾಂಚಿ) ಆಯ್ಕೆಯಾಗಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಯಾರೂ ನಾಮಪತ್ರ ಸಲ್ಲಿಸಿಲ್ಲ.

ಕಾರ್ಯಕಾರಿ ಸಮಿತಿ ಸದಸ್ಯರಾಗಿ ಜಯನಾಯಕ್, ಜೆ.ಕೆ.ಕೆಂಪೇಗೌಡ, ಲೋಕೇಶ್ ರಾಜು, ಆರ್.ನಾಗರಾಜ್, ಕೆ.ಆರ್.ಸೀತಾರಾಮಾಂಜನೇಯ, ಜಿ.ವಿ.ವೆಂಕಟೇಶ್ ಆಯ್ಕೆಯಾಗಿದ್ದಾರೆ.

ಐಪಿಎಲ್ ಬೆಟ್ಟಿಂಗ್: 27 ಮಂದಿ ಬಂಧನ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿ ವೇಳೆ ಬೆಟ್ಟಿಂಗ್‌ನಲ್ಲಿ ಭಾಗಿಯಾಗಿದ್ದ 27 ಮಂದಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಈವರೆಗೆ ಒಟ್ಟು 20 ಪ್ರಕರಣಗಳನ್ನು ಪತ್ತೆಹಚ್ಚಲಾಗಿದ್ದು, ಒಟ್ಟು ₹78 ಲಕ್ಷ ನಗದು ಜಪ್ತಿ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಥಾ ಸ್ಪರ್ಧೆಗೆ ಆಹ್ವಾನ

ಬೆಂಗಳೂರು: ಸಮಾಜಮುಖಿ ಪ್ರಕಾಶನವು ಕಥಾ ಪರಂಪರೆಗೆ ಉತ್ತೇಜನ ನೀಡುವ ಸಲುವಾಗಿ ಕಥಾ ಸ್ಪರ್ಧೆಯನ್ನು ಏರ್ಪಡಿಸಿದೆ.

ಸಮಾಜಮುಖಿ ಪುರಸ್ಕಾರಕ್ಕೆ ಆಯ್ಕೆಯಾಗುವ ಐವರು ಕಥೆಗಾರರಿಗೆ ತಲಾ ₹5 ಸಾವಿರ ನಗದು, ಸ್ಮರಣಿಕೆ ಹಾಗೂ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು.

ಕಥೆಗಾರರು 2 ಸಾವಿರ ಪದ ಮಿತಿಯಲ್ಲಿ, ಯಾವ ಮಾಧ್ಯಮದಲ್ಲೂ ಪ್ರಕಟವಾಗದ, ನುಡಿ ಅಥವಾ ಯುನಿಕೋಡ್ ಲಿಪಿಯಲ್ಲಿರುವ ಕಥೆಯನ್ನು ನವೆಂಬರ್ 20ರೊಳಗೆ samajamukhi2017@gmail.com ವಿಳಾಸಕ್ಕೆ ಕಳುಹಿಸಬೇಕು.

15 ಕಥೆಗಳನ್ನು ಒಳಗೊಂಡ ಸಮಾಜಮುಖಿ ವಾರ್ಷಿಕ ಕಥಾ ಸಂಕಲನ ಜನವರಿಯಲ್ಲಿ ಹೊರಬರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ:9900049892

ನಗರದಲ್ಲಿ ಇಂದು

ಪೊಲೀಸ್ ಸಂಸ್ಮರಣ ದಿನ: ಅತಿಥಿ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ:ಗೃಹ ಸಚಿವ ಆರಗ ಜ್ಞಾನೇಂದ್ರ, ಸ್ಥಳ:ಕೇಂದ್ರ ಸ್ಥಾನದ ಹುತಾತ್ಮರ ಉದ್ಯಾನವನ, ನಗರ ಸಶಸ್ತ್ರ ಮೀಸಲು ಪಡೆ, ಮೈಸೂರು ರಸ್ತೆ, ಬೆಳಿಗ್ಗೆ 8

ಎಫ್‌ಕೆಸಿಸಿಐ ವಾರ್ಷಿಕ ಸಾಮಾನ್ಯ ಸಭೆ: ಅತಿಥಿ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪೆರಿಕಲ್ ಎಂ.ಸುಂದರ್, ಆಯೋಜನೆ, ಸ್ಥಳ–ಎಫ್‌ಕೆಸಿಸಿಐ, ಸರ್.ಎಂ.ವಿ ಸಭಾಂಗಣ, ಕೆ.ಜಿ.ರಸ್ತೆ, ಬೆಳಿಗ್ಗೆ 10.30–

'ಆರ್ಥಿಕತೆಯನ್ನು ಪುನರುಜ್ಜೀವನಗೊಳಿಸುವ ಯೋಜನೆ–2030' ಕುರಿತು ರಾಷ್ಟ್ರೀಯ ಸಭೆ: ಅತಿಥಿ–ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ, ಆಯೋಜನೆ–ಭಾರತದ ಸಾರ್ವಜನಿಕ ವ್ಯವಹಾರಗಳ ವೇದಿಕೆ (ಪಿಎಫ್ಐ), ಮಧ್ಯಾಹ್ನ 2.15 (ಆನ್‌ಲೈನ್ ಕಾರ್ಯಕ್ರಮ)

ಸ್ಮರಣಾಂಜಲಿ–ಪೊಲೀಸ್ ಅಮರವೀರರ ಭಾವಚಿತ್ರ ಪ್ರದರ್ಶನ: ಉದ್ಘಾಟನೆ–ಗೃಹ ಸಚಿವ ಆರಗ ಜ್ಞಾನೇಂದ್ರ, ಅಧ್ಯಕ್ಷತೆ–ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ರಜನೀಶ್ ಗೋಯಲ್, ಆಯೋಜನೆ–ಪೊಲೀಸ್ ಇಲಾಖೆ, ಸ್ಥಳ–ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಸಂಜೆ 4

ಪುರಂದರದಾಸರ ಸಂಗೀತ ಆರಾಧನೆ: ಆಯೋಜನೆ–ಸಂತ ಪುರಂದರದಾಸರ ಆರಾಧನಾ ಸಮಿತಿ, ಸ್ಥಳ–ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ ಭವನ, ಮಲ್ಲತ್ತಹಳ್ಳಿ, ಸಂಜೆ 5





1. ಹೆಸರಘಟ್ಟ ರಸ್ತೆಯಲ್ಲಿ ವ್ಯಕ್ತಿಯನ್ನು ಬಲಿಪಡೆದ ಗುಂಡಿಯನ್ನು ಮುಚ್ಚದೆ ಹಾಗೇ ಉಳಿಸಿಕೊಂಡಿರುವುದು. 2. ನಗರದ ಅಬ್ಬಿಗೆರೆ ದಿಣ್ಣೆ ರಸ್ತೆಯಲ್ಲಿ ಪೈಪ್ ಲೈನ್ ಹಾಕುತ್ತಿರುವ ದೃಶ್ಯ ಬುಧವಾರ ಕಂಡುಬಂತು. –ಪ್ರಜಾವಾಣಿ ಚಿತ್ರಗಳು/ಎಂ.ಎಸ್.ಮಂಜುನಾಥ್

ಹೆಸರಘಟ್ಟ ಮುಖ್ಯ ರಸ್ತೆಯಲ್ಲಿ ಸಂಚಾರವೇ ದುಸ್ತರ: ಮೈಮರೆತ ಜಲಮಂಡಳಿ

ನರ ಬಲಿ ಬಳಿಕವೂ ಸರಿಯಾಗದ ರಸ್ತೆ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಹೆಸರಘಟ್ಟ ರಸ್ತೆ ಎಂದರೆ ಕಲ್ಲು, ಗುಂಡಿಗಳ ಹಾದಿ. ಈ ದಾರಿಯಲ್ಲಿ ಜಲಮಂಡಳಿ ತೋಡಿದ್ದ ಗುಂಡಿಗೆ ವ್ಯಕ್ತಿಯೊಬ್ಬ ಬಲಿಯಾಗಿ ತಿಂಗಳು ಕಳೆದರೂ ಗುಂಡಿ ಮುಚ್ಚಿಲ್ಲ, ರಸ್ತೆ ದುರಸ್ತಿಯೂ ಆಗಿಲ್ಲ.

ಎಂಟನೇ ಮೈಲಿಯಲ್ಲಿ ತುಮಕೂರು ರಸ್ತೆಯಿಂದ ಹೆಸರಘಟ್ಟ ಮುಖ್ಯ ರಸ್ತೆಗೆ ತಿರುಗಿದ ಕೂಡಲೇ ಹದಗೆಟ್ಟ ರಸ್ತೆಯ ದರ್ಶನವಾಗುತ್ತದೆ. ಹೆಜ್ಜೆ ಹೆಜ್ಜೆಗೂ ಸಿಗುವ ಗುಂಡಿಗಳನ್ನು ತಪ್ಪಿಸಿ ವಾಹನ ಚಾಲನೆ ಮಾಡಲು ಸಾಧ್ಯವೇ ಇಲ್ಲದ ಸ್ಥಿತಿ ಇದೆ.

ಅದರ ನಡುವೆಯೇ ವಾಹನಗಳು ಸಂಚರಿಸುವುದರಿಂದ ರಸ್ತೆಯಲ್ಲಿ ಏಳುವ ದೂಳು ದ್ವಿಚಕ್ರ ವಾಹನ ಸವಾರರು ಮತ್ತು ಪಾದಚಾರಿಗಳ ಮೇಲೆ ಎರಚಿದ ಅನುಭವವಾಗುತ್ತದೆ. ಕಣ್ಣಿಗೆ ರಾಚುವ ದೂಳಿನಿಂದ ರಕ್ಷಿಸಿಕೊಳ್ಳಲು ಸ್ವಲ್ಪ ಕಣ್ಮುಚ್ಚಿದರೂ ಗುಂಡಿಗೆ ಬೀಳುವ ಅಪಾಯ ಇದೆ. ಮಾಸ್ಕ್ ಧರಿಸಿದ್ದರೂ ದೂಳಿನ ಕಣಗಳ ಗಂಟಲು ಸೇರುವುದನ್ನು ತಪ್ಪಿಸಲು ಆಗುವುದಿಲ್ಲ.

ಸ್ವಲ್ಪ ದೂರ ಮುಂದೆ ಸಾಗಿದರೆ ಜಲಮಂಡಳಿ ತೋಡಿರುವ ಗುಂಡಿಯೊಂದು ಎದುರಾಗುತ್ತದೆ. ಮಲ್ಲಸಂದ್ರದ ಆನಂದ್ ಎಂಬ ದ್ವಿಚಕ್ರ ವಾಹನ ಸವಾರ ಸೆ.18ರ ರಾತ್ರಿ ಇದೇ ಗುಂಡಿಗೆ ಬಿದ್ದು ಮೃತಪಟ್ಟಿದ್ದರು. ರಸ್ತೆ ಮಧ್ಯದಲ್ಲಿ ಇದ್ದ ಕುಡಿಯುವ ನೀರು ಸರಬರಾಜಿನ ಪೈಪ್‌ಲೈನ್ ದುರಸ್ತಿಪಡಿಸಲು ಆಳುದ್ದದ ಗುಂಡಿ ತೆಗೆಯಲಾಗಿತ್ತು. ಸುತ್ತಲು ನಾಲ್ಕು ಬ್ಯಾರಿಕೇಡ್‌ಗಳನ್ನು ನಿಲ್ಲಿಸಲಾಗಿತ್ತು. ರಾತ್ರಿ ವೇಗವಾಗಿ ಬಂದ ಆನಂದ್ ಅವರಿಗೆ ಗುಂಡಿ ಕಾಣಿಸದೆ ಅದರೊಳಗೆ ಬಿದ್ದು ಮೃತಪಟ್ಟಿದ್ದರು.

ಅಂದಿನಿಂದ ಇಂದಿನವರೆಗೆ ದುರಸ್ತಿ ಕಾಮಗಾರಿ ಅಲ್ಲಿಯೇ ನಿಂತಿದೆ. ಹೆಚ್ಚುವರಿ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿದೆಯೇ ಹೊರತು ಗುಂಡಿ ಮುಚ್ಚುವ ಕೆಲಸ ಆಗಿಲ್ಲ. ಬಿಬಿಎಂಪಿಯ ಪ್ರಮುಖ ರಸ್ತೆಗಳ ವಿಭಾಗ ಈ ರಸ್ತೆ ನಿರ್ವಹಣೆ ಜವಾಬ್ದಾರಿ ಹೊತ್ತಿದೆ. ವ್ಯಕ್ತಿಯೊಬ್ಬರು ಪ್ರಾಣವನ್ನೇ ಕಳೆದುಕೊಂಡರೂ ಎಚ್ಚೆತ್ತುಕೊಳ್ಳದೆ ಜಲಮಂಡಳಿ ಮತ್ತು ಬಿಬಿಎಂಪಿ ಬೇಜವಾಬ್ದಾರಿ ವಹಿಸಿವೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸುತ್ತಾರೆ.

‘ನಗರದ ಪ್ರಮುಖ ರಸ್ತೆಯ ಸ್ಥಿತಿಯೇ ಹೀಗಾಗಿದೆ. ದಿನವೂ ದೂಳು ಕುಡಿಯುತ್ತಿರುವುರಿಂದ ರಸ್ತೆ ಬದಿಯಲ್ಲಿ ಇರುವ ಮನೆ, ಅಂಗಡಿಯವರಿಗೆ, ವಾಹನ ಸವಾರರಿಗೆ ಅಸ್ತಮಾ ಕಾಣಿಸಿಕೊಳ್ಳುತ್ತಿದೆ. ರಸ್ತೆ ಗುಂಡಿಯಲ್ಲಿ ಬಿದ್ದು ಜನ ಸತ್ತರೂ ಸರಿಪಡಿಸಲು ಸರ್ಕಾರ ಮುಂದಾಗುತ್ತಿಲ್ಲ ಎಂದರೆ ಜನರ ಜೀವಕ್ಕೆ ಬೆಲೆಯೇ ಇಲ್ಲವೇ’ ಎಂದು ಸ್ಥಳೀಯರು ಹಿಡಿಶಾಪ ಹಾಕಿದರು.

110 ಹಳ್ಳಿಯಲ್ಲಿ ಮಂಡಿಯುದ್ದ ಗುಂಡಿ

ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 110 ಹಳ್ಳಿ ಯೋಜನೆ ಕಾಮಗಾರಿ ನಡೆಯುತ್ತಿರುವ ರಸ್ತೆಗಳಲ್ಲಿ ಮಂಡಿಯುದ್ದ ಗುಂಡಿಗಳಿದ್ದು, ಸಂಚಾರವೇ ದುಸ್ತರವಾಗಿದೆ.

ಅಬ್ಬಿಗೆರೆ, ಮೇದರಹಳ್ಳಿ, ಶೆಟ್ಟಿಹಳ್ಳಿ, ವಿನಾಯಕ ಲೇಔಟ್‌ನಲ್ಲಿ ಸಂಚಾರಕ್ಕೆ ಸಾಧ್ಯವಾಗದಷ್ಟು ರಸ್ತೆಗಳು ಹಾಳಾಗಿವೆ. ಒಂದೆಡೆ ರಸ್ತೆಯ ಮಧ್ಯದಲ್ಲೇ ಗುಂಡಿಗಳಿದ್ದರೆ, ಇನ್ನೊಂದೆಡೆ ಜಲಮಂಡಳಿ ಪೈಪ್‌ಗಳನ್ನು ರಸ್ತೆ ಮಧ್ಯದಲ್ಲೇ ಬಿಟ್ಟು ಹೋಗಿದೆ.

ಹೆಸರಘಟ್ಟ ರಸ್ತೆಯಿಂದ ಮಲ್ಲಸಂದ್ರಕ್ಕೆ ಹೋಗುವ ಮುಖ್ಯ ರಸ್ತೆ ಕೂಡ ತೀರಾ ಹದಗೆಟ್ಟಿದ್ದು, ಈ ರಸ್ತೆಯಲ್ಲಿ ವಾಹನ ಚಾಲನೆ ಮಾಡುವುದೇ ಸಾಹಸ ಎಂಬಂತಾಗಿದೆ.

ಎಂಜಿನಿಯರ್ ವಿರುದ್ಧ ಎಫ್‌ಐಆರ್: ಎಚ್ಚರಿಕೆ

‘ಬಿಬಿಎಂಪಿ ರಸ್ತೆಗಳನ್ನು ಜಲ ಮಂಡಳಿಯವರು ಅನುಮತಿ ಪಡೆಯದೆ ಎಲ್ಲೆಂದರಲ್ಲಿ ಅಗೆಯುತ್ತಾರೆ. ಇದರಿಂದಾಗಿ ಸಮಸ್ಯೆಗಳು ಹೆಚ್ಚಾಗುತ್ತಿದ್ದು, ಅವಘಡ ಮರುಕಳಿಸಿದರೆ ಜಲ ಮಂಡಳಿ ಎಂಜಿನಿಯರ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗುವುದು’ ಎಂದು ಬಿಬಿಎಂಪಿ ಜಂಟಿ ಆಯುಕ್ತ(ದಾಸರಹಳ್ಳಿ) ನರಸಿಂಹಮೂರ್ತಿ ಎಚ್ಚರಿಸಿದರು.

‘ಬಿಬಿಎಂಪಿ ಅನುಮತಿ ಪಡೆದೇ ಕಾಮಗಾರಿ ನಿರ್ವಹಿಸಬೇಕು ಎಂದು ಜಲ ಮಂಡಳಿಗೆ ತಿಳಿಸಲಾಗಿದೆ. ಕಡೆ ಪಕ್ಷ ಮಾಹಿತಿಯನ್ನಾದರೂ ನೀಡಿದರೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬಹುದು. ಅದನ್ನೂ ಮಾಡದೆ ರಸ್ತೆ ಅಗೆದು ಬಿಟ್ಟು ಹೋದರೆ ಏನು ಮಾಡಬೇಕು’ ಎಂದು ಪ್ರಶ್ನಿಸಿದರು.

ಹದಗೆಟ್ಟ ರಸ್ತೆ ಎಂಬ ಫಲಕ: ಪ್ರಹ್ಲಾದ್

‘ಸತತ ಮಳೆ ಸುರಿಯುತ್ತಿರುವುದರಿಂದ ದುರಸ್ತಿ ಸಾಧ್ಯವಾಗುತ್ತಿಲ್ಲ. ರಸ್ತೆ ಹದಗೆಟ್ಟಿರುವ ಬಗ್ಗೆ ಸವಾರರಿಗೆ ಮನವರಿಕೆ ಮಾಡಿಸಲು ಫಲಕ ಅಳವಡಿಸಲಾಗುವುದು’ ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್(ಮುಖ್ಯ ರಸ್ತೆ) ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

‘ಮಳೆ ನಡುವೆ ಕಾಮಗಾರಿ ನಿರ್ವಹಿಸಿದರೆ ಕೆಲವೇ ದಿನಗಳಲ್ಲಿ ರಸ್ತೆ ಮತ್ತೆ ಹಾಳಾಗಲಿದೆ. 15 ದಿನಗಳಲ್ಲಿ ಮಳೆ ಕಡಿಮೆಯಾಗುವ ಸಾಧ್ಯತೆ ಇದ್ದು, ಬಳಿಕವೇ ರಸ್ತೆ ಗುಂಡಿ ಮುಚ್ಚುವ ಕಾಮಗಾರಿ ಆರಂಭಿಸಲಾಗುವುದು’ ಎಂದು ಹೇಳಿದರು.



ಗುಂಡಿಗೆ ಬಿದ್ದು ಅಮಾಯಕರು ಪ್ರಾಣ ಕಳೆದುಕೊಂಡರೂ ಸರಿಪಡಿಸುತ್ತಿಲ್ಲ. ಜನ ಸಹನೆ ಕಳೆದುಕೊಳ್ಳುವ ಮುನ್ನ ಸರ್ಕಾರ ಎಚ್ಚೆತ್ತುಕೊಳ್ಳಬೇಕು

ಶರಣಪ್ಪ, ಬಾಗಲಗುಂಟೆ ನಿವಾಸಿ

ಸುದ್ದಿ 2 ನಿಮಿಷ

ಕೇರಳ ಸಿ.ಎಂಗೆ ಬೊಮ್ಮಾಯಿ ನೆರವಿನ ಭರವಸೆ

ಬೆಂಗಳೂರು: ‘ಕೇರಳದಲ್ಲಿ ಪ್ರವಾಹ ಪರಿಹಾರ ಕಾರ್ಯಾಚರಣೆಗೆ ಎಲ್ಲ ರೀತಿಯ ನೆರವು ನೀಡಲಾಗುವುದು’ ಎಂದು ಅಲ್ಲಿನ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಪಿಣರಾಯಿ ವಿಜಯನ್ ಜೊತೆ ದೂರವಾಣಿಯಲ್ಲಿ ಬುಧವಾರ ಮಾತನಾಡಿದ ಬೊಮ್ಮಾಯಿ, ಅಲ್ಲಿ ಪ್ರವಾಹ ಮತ್ತು ಭೂಕುಸಿತದಿಂದ ಸಂಭವಿಸಿದ ಜೀವಹಾನಿಗೆ ತೀವ್ರ ಸಂತಾಪ ವ್ಯಕ್ತಪಡಿಸಿದರು.

ಕೇರಳದ ಮುಖ್ಯ ಕಾರ್ಯದರ್ಶಿ ಜೊತೆ ಸಂಪರ್ಕದಲ್ಲಿದ್ದು ಸೂಕ್ತ ಕ್ರಮ ಕೈಗೊಳ್ಳುವಂತೆ ರಾಜ್ಯದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರಿಗೆ ಮುಖ್ಯಮಂತ್ರಿ ಸೂಚಿಸಿದ್ದಾರೆ.

ಸೀತಮ್ಮ ಅಪೇಕ್ಷೆ ಈಡೇರಿಸಲು ಮನೆಗೆ ಬಂದ ಎಸ್.ಎಂ. ಕೃಷ್ಣ



ಬೆಂಗಳೂರು: ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರ ತಾಯಿ ಸೀತಮ್ಮ ತಿಮ್ಮೇಗೌಡ ಅವರ ಕೋರಿಕೆಯ ಮೇರೆಗೆ ಸದಾಶಿವನಗರದ ನಿವಾಸಕ್ಕೆ ಬಿಜೆಪಿ ನಾಯಕ ಎಸ್.ಎಂ.ಕೃಷ್ಣ ಭೇಟಿ ನೀಡಿದರು.

ಕಳೆದ ವಾರವಷ್ಟೇ ಸೀತಮ್ಮ ಅವರ ಹುಟ್ಟುಹಬ್ಬ ನೆರವೇರಿತ್ತು. ಈ ವೇಳೆ, 'ಹುಟ್ಟುಹಬ್ಬಕ್ಕೆ ಏನು ಕೋರಿಕೆ ಇದೆ?’ ಎಂದು ಸೋಮಶೇಖರ್ ಅವರು ತಾಯಿಯನ್ನು ಕೇಳಿದ್ದರು. ‘ನಾನು ಎಸ್.ಎಂ.ಕೃಷ್ಣ ಅವರ ಅಭಿಯಾನಿ. ಅವರನ್ನು ಒಮ್ಮೆ ಭೇಟಿಯಾಗಬೇಕು’ ಎಂದು ಸೀತಮ್ಮ ಇಂಗಿತ ವ್ಯಕ್ತಪಡಿಸಿದ್ದರು.

ಈ ಕೋರಿಕೆಯನ್ನು ಎಸ್.ಎಂ.ಕೃಷ್ಣ ಅವರಿಗೆ ತಲುಪಿಸಿ, ತಾಯಿಯನ್ನು ಅವರ ನಿವಾಸಕ್ಕೆ ಕರೆದುಕೊಂಡು ಬರುವುದಾಗಿ ಮನವಿ ಮಾಡಲಾಗಿತ್ತು. ಆದರೆ, ‘ಸೀತಮ್ಮ ಅವರು ನನಗಿಂತ ಹಿರಿಯರು. ಅವರು ನಮ್ಮ ಮನೆಗೆ ಬರುವುದು ಉಚಿತವಲ್ಲ. ನಾನೇ ಅವರ ಮನೆಗೆ ಬಂದು ಭೇಟಿಯಾಗುತ್ತೇನೆ’ ಎಂದು ಎಸ್.ಎಂ.ಕೃಷ್ಣ ಭರವಸೆ ನೀಡಿದ್ದರು.

ಕೊಟ್ಟ ಮಾತಿನಂತೆ ಎಸ್.ಎಂ.ಕೃಷ್ಣ ಅವರು ಸೋಮಶೇಖರ್ ನಿವಾಸಕ್ಕೆ ಮಂಗಳವಾರ ರಾತ್ರಿ ಭೇಟಿ ನೀಡಿ, ಕುಟುಂಬದೊಂದಿಗೆ ಕೆಲಕಾಲ ಮಾತನಾಡುವ ಮೂಲಕ ಸೀತಮ್ಮ ಅವರ ಕೋರಿಕೆಯನ್ನು ಈಡೇರಿಸಿದರು.

‘ಕೆ.ಆರ್.ಪುರ: ನ್ಯಾಯಾಲಯ ಸ್ಥಾಪನೆ ಮರೀಚಿಕೆ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳ ಶೀಘ್ರ ವಿಲೇವಾರಿ ಹಾಗೂ ಸ್ಥಳೀಯ ಕಕ್ಷಿದಾರರಿಗೆ ಸಕಾಲದಲ್ಲಿ ನ್ಯಾಯ ಒದಗಿಸಲು ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರ ಕೇಂದ್ರ ಸ್ಥಾನದಲ್ಲಿ ನ್ಯಾಯಾಲಯ ಸ್ಥಾಪನೆ ಇನ್ನೂ ಮರೀಚಿಕೆಯಾಗಿ ಉಳಿದಿದೆ.

ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರ, ಬಿದರಹಳ್ಳಿ ಹಾಗೂ ವರ್ತೂರು ಮೂರು ಕಂದಾಯ ವೃತ್ತವನ್ನೊಳಗೊಂಡ ಕೆ.ಆರ್.ಪುರದಲ್ಲಿ ನ್ಯಾಯಾಲಯ ಸ್ಥಾಪಿಸುವಂತೆ 2004ರ ಫೆ.27ರಲ್ಲಿ ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸಿ ನ್ಯಾಯಾಲಯ ಕಾರ್ಯಾರಂಭಕ್ಕೆ ಸಮ್ಮತಿ ಸೂಚಿಸಿತ್ತು. ಆದರೂ, ಇದುವರೆಗೆ ನ್ಯಾಯಾಲಯ ಕಾರ್ಯಾಚರಣೆ ಆರಂಭಿಸಿಲ್ಲ.

ಕೆ.ಆರ್.ಪುರ ಸಂತೆ ಮೈದಾನದಲ್ಲಿದ್ದ ಉಪನೋಂದಣಾಧಿಕಾರಿ ಕಚೇರಿಯನ್ನು ಬೇರೆಡೆಗೆ ಸ್ಥಳಾಂತರಿಸುವ ಮೂಲಕ ಹಳೆಯ ಕಟ್ಟಡವನ್ನು ₹60 ಲಕ್ಷ ವೆಚ್ಚದಲ್ಲಿ ನ್ಯಾಯಾಲಯ ಅಭಿವೃದ್ಧಿಪಡಿಸಲಾಗಿತ್ತು. ಅಲ್ಲೂ ನ್ಯಾಯಾಲಯ ಕಾರ್ಯನಿರ್ವಹಿಸದೆ ಸಾರ್ವಜನಿಕರಿಗೆ ನಿರಾಸೆ ಉಂಟಾಗಿತ್ತು.



ಕೆ.ಆರ್.ಪುರದ ತಾಲ್ಲೂಕು ಕಚೇರಿ ಮುಂದೆ ಇರುವ ನ್ಯಾಯಾಲಯದ ನಾಮಫಲಕ

ಬೆಂಗಳೂರು ಪೂರ್ವ ತಾಲ್ಲೂಕು 2001ರಲ್ಲಿ ರಚನೆಯಾಗಿದೆ. ಐಟಿಐನ ಮೂರು ಎಕರೆಯನ್ನು 99 ವರ್ಷಗಳಿಗೆ ಗುತ್ತಿಗೆ ಪಡೆದುಕೊಂಡು ಅದರಲ್ಲಿ ಒಂದೂವರೆ ಎಕರೆಯಲ್ಲಿ ತಾಲ್ಲೂಕು ಕಚೇರಿ ನಿರ್ಮಿಸಲಾಗಿದೆ. ಉಳಿದ ಜಾಗವನ್ನು ನ್ಯಾಯಾಲಯ ಸ್ಥಾಪನೆಗೆ ಮೀಸಲಿಡಲಾಗಿದೆ.

ತಾಲ್ಲೂಕು ಕಚೇರಿ ಕಟ್ಟಡದಲ್ಲಿ ದಕ್ಷಿಣ ವಲಯದ ಕಚೇರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ಹಲವು ಸರ್ಕಾರಿ ಕಚೇರಿಗಳು ಬೇರೆಡೆಗೆ ಸ್ಥಳಾಂತರಗೊಂಡಿವೆ. ತಾಲ್ಲೂಕು ಕಚೇರಿ ಕಟ್ಟಡದ ನೆಲ ಮಹಡಿಯಲ್ಲಿ ಸದ್ಯದ ಮಟ್ಟಿಗೆ ಕಾರ್ಯನಿರ್ವಹಿಸಲು ಜಿಲ್ಲಾ ನ್ಯಾಯಾಧೀಶರು ಆದೇಶ ನೀಡಿದ್ದಾರೆ. ಅಗತ್ಯ ಮೂಲಸೌಕರ್ಯಗಳನ್ನೊಳಗೊಂಡ ನ್ಯಾಯಾಲಯದ ನಿರ್ಮಾಣ ಕಾಮಗಾರಿ ಆರೇಳು ವರ್ಷಗಳಿಂದ ನಡೆಯುತ್ತಿದೆ. ಇದುವರೆಗೆ ಮುಗಿಯುವ ಹಂತಕ್ಕೆ ಬಂದಿಲ್ಲ.



ರಾಜೇಂದ್ರ



ಮಂಜುನಾಥ್

ತಾಲ್ಲೂಕು ಕಚೇರಿ ನಿರ್ಮಾಣವಾಗಿ ಹಲವು ವರ್ಷ ಕಳೆದಿದೆ. ಬಹಳ ಹಿಂದೆಯೇ ಪೂರ್ವ ತಾಲ್ಲೂಕಿನಲ್ಲಿ ನ್ಯಾಯಾಲಯ ಆರಂಭವಾಗಬೇಕಿತ್ತು. ಸರ್ಕಾರದ ವಿಳಂಬ ನೀತಿಯಿಂದಾಗಿ ನಾಗರಿಕರು ನ್ಯಾಯಕ್ಕಾಗಿ ಬೆಂಗಳೂರು ಹೃದಯ ಭಾಗಕ್ಕೆ ಅಲೆದಾಡುವ ಸ್ಥಿತಿ ಮುಂದುವರೆದಿದೆ. ಕೆ.ಆರ್.ಪುರ ಇನ್ನಿತರ ಕಂದಾಯ ವಿಭಾಗಗಳಿಂದ ನಗರಕ್ಕೆ ಬರಲು ಸಂಚಾರ ದಟ್ಟಣೆಯಲ್ಲಿ ಅರ್ಧ ದಿನ ಕಳೆದುಹೋಗುತ್ತದೆ. ನಿಗದಿತ ಸಮಯಕ್ಕೆ ನ್ಯಾಯಾಲಯಗಳಿಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ ಎಂದು ಸಾಮಾಜಿಕ ಕಾರ್ಯಕರ್ತ ಪಟ್ಟಂದೂರು ಅಗ್ರಹಾರದ ನಿವಾಸಿ ಮಂಜುನಾಥ್ ತಿಳಿಸಿದರು.

ಪೂರ್ವ ತಾಲ್ಲೂಕು ಕೆ.ಆರ್.ಪುರದಲ್ಲಿ ನ್ಯಾಯಲಯ ಆರಂಭಿಸುವಂತೆ ಆನೇಕ ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿದ್ದೇವೆ. ಇದುವರೆಗೆ ನ್ಯಾಯಾಲಯ ಆರಂಭಗೊಂಡಿಲ್ಲ. ನಗರಕ್ಕೆ ತೆರಳಲು ಕಕ್ಷಿದಾರನಿಗೆ ಹಾಗೂ ವಕೀಲರಿಗೆ ತೊಂದರೆಯಾಗುತ್ತಿದೆ.

ಪೂರ್ವ ತಾಲ್ಲೂಕು ವ್ಯಾಪ್ತಿಯ ಸಾವಿರಾರು ಪ್ರಕರಣಗಳು ಇತ್ಯರ್ಥವಾಗದೆ ಹಾಗೆಯೇ ಉಳಿದಿವೆ. ಶೀಘ್ರವಾಗಿ ನ್ಯಾಯಾಲಯ ಆರಂಭಿಸಬೇಕು ಎಂದು ಬೆಂಗಳೂರು ಪೂರ್ವ ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ರಾಜೇಂದ್ರ ಒತ್ತಾಯಿಸಿದರು.

ಮಳೆ ನೀರು ತೆರವುಗೊಳಿಸಲು ಸ್ಥಳೀಯರ ಮನವಿ

ಬೆಂಗಳೂರು: ‘ನಗರದ ಕುಮಾರಪಾರ್ಕ್ ಪಶ್ಚಿಮ ಭಾಗದ ವಿ.ಎಸ್.ರಾಜು ರಸ್ತೆಯಲ್ಲಿರುವ ಖಾಸಗಿ ಜಾಗದಲ್ಲಿ ಮಳೆ ನೀರು ಭಾರಿ ಪ್ರಮಾಣದಲ್ಲಿ ಸಂಗ್ರಹವಾಗಿದ್ದು, ಕೂಡಲೇ ನೀರನ್ನು ತೆರವು ಮಾಡಬೇಕು’ ಎಂದು ಸ್ಥಳೀಯರು ಮನವಿ ಮಾಡಿದ್ದಾರೆ.

ವಾರ್ಡ್ ಸಂಖ್ಯೆ–93ರ ವ್ಯಾಪ್ತಿಯಲ್ಲಿರುವ ಈ ಖಾಸಗಿ ಜಾಗದಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿ ಆರಂಭಗೊಂಡು, ವರ್ಷದಿಂದ ಸ್ತಬ್ಧವಾಗಿದೆ.

‘ಅಡಿಪಾಯ ಆಳವಾಗಿರುವ ಕಾರಣ ಆರು ಅಡಿಗಳಿಗೂ ಹೆಚ್ಚಿನ ಪ್ರಮಾಣದಲ್ಲಿ ಮಳೆ ನೀರು ಸಂಗ್ರಹಗೊಂಡು ಪಾಚಿ ಕಟ್ಟಿಕೊಂಡಿದೆ. ಈ ಜಾಗದ ಸುತ್ತಲೂ ಹಲವು ನಿವಾಸಗಳಿದ್ದು, ನೀರಿನಿಂದ ಕಾಯಿಲೆಗಳು ಬರುವ ಆತಂಕದಲ್ಲಿದ್ದೇವೆ. ನೀರನ್ನು ತೆರವುಗೊಳಿಸಿದರೆ ಅನುಕೂಲ’ ಎನ್ನುವುದು ಇವರ ಮನವಿ.

‘ಕಾರಣಾಂತರಗಳಿಂದ ಕಟ್ಟಡ ಕಾಮಗಾರಿ ನಿಂತಿರಬಹುದು. ಆದರೆ, ಮಳೆ ಬಂದಾಗ ಭಾರಿ ಪ್ರಮಾಣದಲ್ಲಿ ನೀರು ಸಂಗ್ರಹಗೊಂಡು ಸ್ಥಳೀಯರಲ್ಲಿ ಆತಂಕ ಮೂಡಿದೆ. ನೀರು ಒಂದೆಡೆ ನಿಂತಿರುವುದರಿಂದ ದುರ್ನಾತ ಬರುತ್ತಿದೆ. ಕ್ರಮೇಣ ಸೊಳ್ಳೆಯ ಕಾಟವೂ ಅಧಿಕವಾಗಿದ್ದು, ಡೆಂಗಿ ಸೇರಿದಂತೆ ವಿವಿಧ ಕಾಯಿಲೆಗಳಿಗೆ ಆಸ್ಪದ ನೀಡುವಂತಿದೆ’ ಎಂದು ಸ್ಥಳಿಯ ನಿವಾಸಿ ರಾಜೀವ್ ಕಳವಳ ವ್ಯಕ್ತಪಡಿಸಿದರು.



ಕುಮಾರಪಾರ್ಕ್ ಪಶ್ಚಿಮದ ವಿ.ಎಸ್.ರಾಜು ರಸ್ತೆಯಲ್ಲಿರುವ ಖಾಸಗಿ ಜಾಗದಲ್ಲಿ ಮಳೆ ನೀರು ನಿಂತಿರುವುದು.

ಚಿತ್ರಾವಳಿ



ಪುರಂದರದಾಸರ ಆರಾಧನಾ ಸಮಿತಿ ವತಿಯಿಂದ ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ ಭವನದಲ್ಲಿ ನಾಲ್ಕು ದಿನಗಳು ನಡೆಯಲಿರುವ ಪುರಂದರದಾಸರ ಸಂಗೀತ ಆರಾಧನೆಗೆ ಬುಧವಾರ ಚಾಲನೆ ದೊರೆತಿದೆ. ಮೊದಲ ದಿನ ಭರತನಾಟ್ಯ ಪ್ರದರ್ಶನ ನೀಡಿದ ನಾಟ್ಯ ಕಲಾವಿದರು –ಪ್ರಜಾವಾಣಿ ಚಿತ್ರಗಳು



ರಂಗಚಂದಿರ ಸಾಮಾಜಿಕ ಸಾಂಸ್ಕೃತಿಕ ಸಂಘಟನೆ ಆಯೋಜಿಸಿದ ರಂಗಗೀತೆ ರಂಗಗೌರವ ಪ್ರತಿಭಾ ಪುರಸ್ಕಾರ ರಂಗಪ್ರಯೋಗ ಕಾರ್ಯಕ್ರಮದಲ್ಲಿ ಜಯದೇವ ಹೃದ್ರೋಗ ಸಂಸ್ಥೆ , ನಿರ್ದೇಶಕ ಡಾ. ಸಿ. ಎನ್. ಮಂಜುನಾಥ್ ಅವರು ಕೃಷ್ಣಪ್ರಸಾದ್ (ಸಾಯಿಪ್ರತೀಕ್ ಕೆ., ಪೋಲೆಂಡ್ ಇಂಟರ್ ನ್ಯಾಷನಲ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮೊದಲ ಅಂತರರಾಷ್ಟ್ರೀಯ ಚಿನ್ನದ ಪದಕ ಗೆದ್ದ ವಿದ್ಯಾರ್ಥಿ), ಕವಯಿತ್ರಿ, ಲೇಖಕರು ಡಾ. ಎಚ್.ಎಲ್. ಪುಷ್ಪ, ಬಾಲ ಕಲಾವಿದ ಗೋಕುಲ ಸಹೃದಯ, ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ವಿಜೇತೆ ಬಿ.ಆರ್. ಪ್ರತ್ಯಕ್ಷ, ರಂಗ ಕಲಾವಿದ ರವಿಕಾಂತ್ ಎನ್., ಸಿಇಟಿ ಪರೀಕ್ಷೆಯಲ್ಲಿ ಎಲ್ಲಾ 5 ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ ಎಚ್.ಕೆ. ಮೇಘನಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ರಾಧಾಕೃಷ್ಣ ಹೆಗಡೆ, ಕಲಾಪೋಷಕರು ಆರ್. ನರೇಂದ್ರಬಾಬು, ಆಕಾಶವಾಣಿ, ಕಾರ್ಯಕ್ರಮ ಅಧಿಕಾರಿ ಕಾನ್ಸೆಪ್ಟಾ ಫೆರ್ನಾಂಡೀಸ್, ಟೆಲಿಕಾಂ ದಾತಾತ್ರೇಯ ಹಾಗು ಇತರರು ಇದ್ದರು.

ಸರಗಳ್ಳನ ಬಂಧನ ಚಿನ್ನಾಭರಣ ಜಪ್ತಿ

ಬೆಂಗಳೂರು: ಒಂಟಿ ಮಹಿಳೆಯರನ್ನು ಗುರಿಯಾಗಿಟ್ಟುಕೊಂಡು ನಗರದ ವಿವಿಧೆಡೆ ಸರಗಳ್ಳತನ ಮಾಡುತ್ತಿದ್ದ ಸುಹೇಲ್ ಪಾಷಾ (28) ಎಂಬಾತನನ್ನು ರಾಮಮೂರ್ತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆತನಿಂದ ₹16.90 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ₹2.5 ಲಕ್ಷ ಮೌಲ್ಯದ ಮೂರು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ.

‘ಮೈಸೂರಿನ ಗೌಸಿಯಾನಗರದ ನಿವಾಸಿಯಾಗಿರುವ ಸುಹೇಲ್, ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದು ನೆಲೆಸಿದ್ದ. ಹೆಣ್ಣೂರಿನಲ್ಲಿ ಆಟೊ ಚಾಲಕನಾಗಿ ಕೆಲಸ ಮಾಡುತ್ತಿದ್ದ ಆತ, ರಸ್ತೆಯಲ್ಲಿ ಒಂಟಿ ಮಹಿಳೆಯರ ಚಿನ್ನದ ಸರಗಳನ್ನು ಎಗರಿಸಿಕೊಂಡು ಪರಾರಿಯಾಗುತ್ತಿದ್ದ. ಶೋಯಬ್ ಎಂಬಾತ ಆತನ ಕೃತ್ಯಕ್ಕೆ ಸಹಕರಿಸುತ್ತಿದ್ದ. ಆತ ತಲೆಮರೆಸಿಕೊಂಡಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಆಟೊ ಚಾಲಕನಾಗಿದ್ದರಿಂದ ಆರೋಪಿಗೆ ನಗರದ ಎಲ್ಲ ಬಡಾವಣೆಗಳ ಪರಿಚಯವಿತ್ತು. ಠಾಣೆಯ ವ್ಯಾಪ್ತಿಯಲ್ಲಿ ಸರ ಕಳ್ಳತನವಾಗಿರುವ ಬಗ್ಗೆ ದೂರು ದಾಖಲಾಗಿತ್ತು. ಅದರಲ್ಲಿ ಸುಹೇಲ್ ಭಾಗಿಯಾಗಿರುವ ಅನುಮಾನ ಮೂಡಿತ್ತು. ಆತನ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು. ಕೆಲ ಕಾಲ ಮೈಸೂರಿನಲ್ಲಿ ನೆಲೆಸಿದ್ದ ಆತ, ತನ್ನನ್ನು ಪೊಲೀಸರು ಹುಡುಕಿಕೊಂಡು ಬಂದಿರುವ ಮಾಹಿತಿ ತಿಳಿದು ಅಲ್ಲಿಂದ ಬೆಂಗಳೂರಿಗೆ ವಾಪಸಾಗಿದ್ದ. ಯಶವಂತಪುರದಲ್ಲಿ ಮನೆ ಬಾಡಿಗೆ ಪಡೆದು ವಾಸವಿದ್ದ. ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದಾಗ ಸಿಕ್ಕಿಬಿದ್ದಿದ್ದ’ ಎಂದು ಹೇಳಿದ್ದಾರೆ.

‘ಹೆಣ್ಣೂರು, ಆವಲಹಳ್ಳಿ, ಗಿರಿನಗರ, ಹೆಬ್ಬಾಳ, ರಾಮಮೂರ್ತಿನಗರ ಠಾಣೆಗಳ ವ್ಯಾಪ್ತಿಯಲ್ಲಿ ನಡೆದಿದ್ದ 9 ಸರಗಳವು ಪ್ರಕರಣಗಳಲ್ಲಿ ಆತ ಭಾಗಿಯಾಗಿರುವುದು ತನಿಖೆಯಿಂದ ಗೊತ್ತಾಗಿದೆ.’ಎಂದು ಮಾಹಿತಿ ನೀಡಿದ್ದಾರೆ.

ಮದುವೆಯಾಗುವಂತೆ ಒತ್ತಾಯ: ವಿವಾಹಿತೆಯ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆಯಾಗುವಂತೆ ಒತ್ತಾಯಿಸುತ್ತಿದ್ದ ವಿವಾಹಿತ ಮಹಿಳೆಯನ್ನು ಆಕೆಯ ಸಂಬಂಧಿಯೇ ಆಗಿರುವ ಬಾಲಕನೊಬ್ಬ ಹತ್ಯೆ ಮಾಡಿದ್ದು, ಬನಶಂಕರಿ ಪೊಲೀಸರು ಆರೋಪಿಯನ್ನು ಬುಧವಾರ ಬಂಧಿಸಿದ್ದಾರೆ.

ಆಫ್ರಿನಾ ಖಾನಂ (28) ಕೊಲೆಯಾದ ಮಹಿಳೆ.

‘17 ವರ್ಷ ವಯಸ್ಸಿನ ಆರೋಪಿ ಜೊತೆ ಮೃತ ಮಹಿಳೆ ಅಕ್ರಮ ಸಂಬಂಧ ಹೊಂದಿದ್ದರು. ಮದುವೆಯಾಗುವಂತೆ ಪೀಡಿಸುತ್ತಿದ್ದ ಆಕೆ, ಬೇರೆ ಮನೆಗೆ ಕರೆದುಕೊಂಡು ಹೋಗುವಂತೆ ಒತ್ತಾಯಿಸುತ್ತಿದ್ದಳು. ಇದರಿಂದ ಬೇಸತ್ತು ಆಕೆಯ ಹತ್ಯೆ ಮಾಡಿದ್ದಾಗಿ ಆರೋಪಿ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ’ ಎಂದು ಪೊಲೀಸರು ಹೇಳಿದ್ದಾರೆ.

‘ಟೈಲರಿಂಗ್ ಕೆಲಸ ಮಾಡುತ್ತಿದ್ದ ಆಫ್ರಿನಾ, ಪತಿ ಲಾಲು ಖಾನ್ ಹಾಗೂ ಇಬ್ಬರು ಮಕ್ಕಳ ಜೊತೆ ಯಾರಬ್ ನಗರದಲ್ಲಿ ವಾಸವಿದ್ದರು. ಲಾಲು ಅವರ ಸಹೋದರಿಯ ಮಗನಾಗಿರುವ ಆರೋಪಿ, ಆಗಾಗ ಮನೆಗೆ ಬರುತ್ತಿದ್ದ. ಆಫ್ರಿನಾ ಜೊತೆ ಸಲುಗೆಯಿಂದಲೇ ಇರುತ್ತಿದ್ದ. ಹತ್ತಿರದ ಸಂಬಂಧಿಯೇ ಆಗಿದ್ದರಿಂದ ಇಬ್ಬರ ನಡುವೆ ಅಕ್ರಮ ಸಂಬಂಧ ಏರ್ಪಟ್ಟಿರುವ ಬಗ್ಗೆ ಯಾರಿಗೂ ಅನುಮಾನ ಮೂಡಿರಲಿಲ್ಲ’ ಎಂದು ತಿಳಿಸಿದ್ದಾರೆ.

ಅಪರಾಧ ಸುದ್ದಿ

‘ಪತ್ನಿಯ ಶೀಲ ಶಂಕಿಸಿ ಲಾಲು ಆಗಾಗ ಜಗಳವಾಡುತ್ತಿದ್ದರು. ಸೋಮವಾರ ರಾತ್ರಿಯೂ ಇಬ್ಬರ ನಡುವೆ ಜಗಳ ನಡೆದಿತ್ತು. ಹೀಗಾಗಿ ಆಫ್ರಿನಾ, ಇಬ್ಬರೂ ಮಕ್ಕಳನ್ನು ತಾಯಿಯ ಮನೆಗೆ ಕಳುಹಿಸಿದ್ದರು. ಗುರಪ್ಪನಪಾಳ್ಯದ ಟಿಂಬರ್ ಯಾರ್ಡ್‌ನಲ್ಲಿ ಕೆಲಸ ಮಾಡುತ್ತಿದ್ದ ಲಾಲು ಖಾನ್, ಮಂಗಳವಾರ ಬೆಳಿಗ್ಗೆ ಕೆಲಸಕ್ಕೆ ಹೋಗಿದ್ದರು. ಆಫ್ರಿನಾ ಏಕಾಂಗಿಯಾಗಿ ಇರುವುದನ್ನು ಗಮನಿಸಿದ್ದ ಆರೋಪಿ ಮನೆಗೆ ಹೋಗಿದ್ದ. ನಂತರ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿತ್ತು. ಕೋಪಗೊಂಡ ಆರೋಪಿ, ಕತ್ತರಿಯಿಂದ ಮಹಿಳೆಯ ದೇಹಕ್ಕೆ ಮನಬಂದಂತೆ ಚುಚ್ಚಿದ್ದ. ಚಾಕುವಿನಿಂದ ಇರಿದು ಕೊಲೆ ಮಾಡಿದ್ದ’ ಎಂದು ವಿವರಿಸಿದ್ದಾರೆ.

‘ಕೊಲೆ ಮಾಡಿರುವುದು ಗೊತ್ತಾಗಬಾರದು ಎಂಬ ಕಾರಣಕ್ಕೆ ಆರೋಪಿಯು ಬಟ್ಟೆಯೊಂದಕ್ಕೆ ಬೆಂಕಿ ಹಚ್ಚಿ ಅದನ್ನುಮೃತದೇಹದಮೇಲೆಎಸೆದಿದ್ದ.ಬಳಿಕ ಮನೆಗೆ ಬೀಗ ಹಾಕಿಕೊಂಡು ಪರಾರಿಯಾಗಿದ್ದ. ಸಂಜೆ 4.30ರ ಸುಮಾರಿಗೆ ಮನೆಯೊಳಗಿಂದ ಹೊಗೆ ಬರುತ್ತಿದ್ದುದ್ದನ್ನು ಗಮನಿಸಿದ್ದ ನೆರೆಹೊರೆಯವರು ಆಫ್ರಿನಾ ಸಹೋದರರಿಗೆ ವಿಷಯ ತಿಳಿಸಿದ್ದರು. ಕೂಡಲೇ ಸ್ಥಳಕ್ಕೆ ಧಾವಿಸಿದ್ದ ಅವರು ಮನೆ ಬಾಗಿಲು ಒಡೆದು ಒಳ ನುಗ್ಗಿದ್ದರು. ಕೊಠಡಿಯಲ್ಲಿದ್ದ ಮಂಚದ ಮೇಲೆ ಮೃತದೇಹ ಕಂಡುಬಂದಿತ್ತು. ಈ ವಿಚಾರವನ್ನು ಆಕೆಯ ಪತಿಗೆ ತಿಳಿಸಿದ್ದ ಅವರು ಬಳಿಕ ನಮಗೂ ಮಾಹಿತಿ ಮುಟ್ಟಿಸಿದ್ದರು’ ಎಂದು ತಿಳಿಸಿದ್ದಾರೆ.

‘ಬೆಂಕಿಯಿಂದಾಗಿ ಹಾಸಿಗೆಯ ಒಂದು ಭಾಗ ಹಾಗೂ ಮೃತದೇಹದ ಮೇಲಿದ್ದ ಬಟ್ಟೆ ಸುಟ್ಟಿದೆ. ಆರೋಪಿಯು ಕೋಣನಕುಂಟೆ ನಿವಾಸಿ ಎಂಬುದು ತಿಳಿದುಬಂದಿದೆ. ಆತ ಅಪ್ರಾಪ್ತನಾಗಿರುವುದರಿಂದ ಕಾನೂನು ಪ್ರಕ್ರಿಯೆ ಮುಗಿಸಿ ಬಾಲಾಪರಾಧ ಕೇಂದ್ರಕ್ಕೆ ಕಳುಹಿಸಲಾಗುತ್ತದೆ’ ಎಂದು ಹೇಳಿದ್ದಾರೆ.

ಫಾರ್ಚೂನರ್ ಕಾರು ಕದ್ದವನ ಬಂಧನ

ಬೆಂಗಳೂರು: ತಾನು ಕೆಲಸಕ್ಕಿದ್ದ ಮನೆಯ ಮಾಲೀಕರ ಫಾರ್ಚೂನರ್ ಕಾರನ್ನೇ ಕದ್ದು ಪುಣೆಯಲ್ಲಿ ಮಾರಲು ಯತ್ನಿಸಿದ್ದ ಚಾಲಕ ಚೇತನ್ (26) ಎಂಬಾತನನ್ನು ರಾಮಮೂರ್ತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನ ಚೇತನ್, ಕಸ್ತೂರಿನಗರದ ನಿವಾಸಿ ಪ್ರಕಾಶ್ ಅವರ ಬಳಿ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದ. ಎರಡು ತಿಂಗಳ ಹಿಂದೆ ಕೆಲಸ ತೊರೆದಿದ್ದ. ಹಲವರ ಬಳಿ ಸಾಲ ಮಾಡಿಕೊಂಡಿದ್ದ ಆತ ಹಣ ಹಿಂತಿರುಗಿಸಲಾಗದೆ ತಲೆ ಮರೆಸಿಕೊಂಡು ಓಡಾಡುತ್ತಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಪ್ರಕಾಶ್ ಬಳಿ ಕೆಲಸ ಮಾಡುತ್ತಿರುವಾಗಲೇ ಕಾರಿನ ಮತ್ತೊಂದು ಕೀಲಿಯನ್ನು ಕದ್ದು ತನ್ನ ಬಳಿ ಇಟ್ಟುಕೊಂಡಿದ್ದ ಆರೋಪಿ, ಅದೇ ಕೀಲಿ ಬಳಸಿ ಮನೆಯ ಎದುರು ನಿಲ್ಲಿಸಿದ್ದ ಕಾರನ್ನು ಕದ್ದಿದ್ದ. ಈ ಬಗ್ಗೆ ಮಾಲೀಕರು ದೂರು ದಾಖಲಿಸಿದ್ದರು. ಈ ಕೃತ್ಯದಲ್ಲಿ ಚೇತನ್ ಭಾಗಿಯಾಗಿರುವ ಅನುಮಾನ ಇತ್ತು. ಆತನಿಗೆ ಕರೆ ಮಾಡಿದಾಗಲೆಲ್ಲಾ ಒಮ್ಮೊಮ್ಮೆ ಒಂದೊಂದು ಊರಿನಲ್ಲಿರುವುದಾಗಿ ತಿಳಿಸುತ್ತಿದ್ದ. ಆತನ ಮೊಬೈಲ್ ಲೊಕೇಷನ್ ಪರಿಶೀಲಿಸಿದಾಗ ಪುಣೆಯಲ್ಲಿ ಇರುವುದು ಗೊತ್ತಾಗಿತ್ತು. ಅಲ್ಲಿ ಆತನನ್ನು ಬಂಧಿಸಿ, ಕಾರು ಜಪ್ತಿ ಮಾಡಲಾಯಿತು’ ಎಂದು ಮಾಹಿತಿ ನೀಡಿದ್ದಾರೆ.

‘ಹಲವರ ಬಳಿ ಸಾಲ ಮಾಡಿಕೊಂಡಿದ್ದೆ. ದುಬಾರಿ ಕಾರು ಕದ್ದು ಮಾರಿದರೆ ಲಕ್ಷಾಂತರ ಹಣ ಸಿಗುತ್ತದೆ. ಅದರಿಂದ ಸಾಲವೂ ತೀರುತ್ತದೆ ಎಂಬ ಕಾರಣಕ್ಕೆ ಕಳ್ಳತನ ಮಾಡಿರುವುದಾಗಿ ಆರೋಪಿಯು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ’ ಎಂದು ಹೇಳಿದ್ದಾರೆ.

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ಆಕ್ರಮಣಕ್ಕೆ ಖಂಡನೆ

ಹಿಂದೂ ಜನಜಾಗೃತಿ ಸಮಿತಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ಆಕ್ರಮಣ ಖಂಡಿಸಿ ಹಿಂದೂ ಜನಜಾಗೃತಿ ಸಮಿತಿ ಹಾಗೂ ವಿವಿಧ ಹಿಂದೂ ಸಂಘಟನೆಯವರು ಜಂಟಿಯಾಗಿ ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

‘ಬಾಂಗ್ಲಾದೇಶದ ಹಿಂದೂಗಳ ರಕ್ಷಣೆಯ ವಿಚಾರವಾಗಿ ಕೇಂದ್ರ ಸರ್ಕಾರ ಅಲ್ಲಿನ ಸರ್ಕಾರದ ಜೊತೆ ಚರ್ಚಿಸಬೇಕು. ಈ ಸಮಸ್ಯೆ ಬಗೆಹರಿಯುವವರೆಗೆ ಬಾಂಗ್ಲಾದೇಶದ ಜೊತೆಗಿನ ಎಲ್ಲ ವ್ಯಾಪಾರ ವಹಿವಾಟು ನಿಲ್ಲಿಸಬೇಕು’ ಎಂದು ಸಂಘಟನೆಗಳ ಸದಸ್ಯರು ಒತ್ತಾಯಿಸಿದರು.

‘ಹಿಂದೂಗಳ ರಕ್ಷಣೆಯ ಸಂಬಂಧ ವಿಶ್ವಸಂಸ್ಥೆಯಲ್ಲಿ ಧ್ವನಿ ಎತ್ತಬೇಕು. ಹಿಂದೂಗಳ ಮೇಲೆ ಆಕ್ರಮಣ ನಡೆಸಿದ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಲೇಬೇಕು’ ಎಂದೂ ಆಗ್ರಹಿಸಿದರು.


‘ನವರಾತ್ರಿ ಸಂದರ್ಭದಲ್ಲಿ ಬಾಂಗ್ಲಾದೇಶದ 315 ದೇವಸ್ಥಾನಗಳ ಮೇಲೆ ಮುಸಲ್ಮಾನರು ಆಕ್ರಮಣ ನಡೆಸಿದ್ದಾರೆ’ ಎಂದು ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ವಕ್ತಾರ ಮೋಹನ ಗೌಡ ಆಕ್ರೋಶ ವ್ಯಕ್ತಪಡಿಸಿದರು.

‘1,500ಕ್ಕೂ ಹೆಚ್ಚು ಹಿಂದೂ ಹಿಂದೂ ಜನರು ವಾಸವಿದ್ದ ಮನೆಗಳ ಧ್ವಂಸ ಮಾಡಿದ್ದೂ ಅಲ್ಲದೆ, ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದ್ದಾರೆ’ ಎಂದರು.

ಪ್ರತಿಭಟನೆಯಲ್ಲಿ ಶ್ರೀರಾಮ ಸೇನೆಯ ಚಂದ್ರಶೇಖರ್, ಅಖಿಲ ಭಾರತ ಹಿಂದೂ ಮಹಾಸಭಾದ ಸುರೇಶ ಜೈನ್, ಬಜರಂಗ ದಳದ ಎಂ.ಎಲ್. ಶಿವಕುಮಾರ್, ವಿಜಯ ವಿವೇಕ ಪ್ರತಿಷ್ಠಾನದ ಶಕಿಲಾ ಶೆಟ್ಟಿ, ಅಯ್ಯಪ್ಪ ಸೇವಾ ಸಮಾಜದ ಜಯರಾಮ, ಹಿಂದೂ ಮಹಾಸಭಾದ ಕಂಗನ್ ಇದ್ದರು.



ವಿವಿಧ ಹಿಂದೂ ಸಂಘಟನೆಗಳ ಸದಸ್ಯರು ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.



ರಾಜರಾಜೇಶ್ವರಿ ನಗರದ ಸಪ್ನ ಬುಕ್ ಹೌಸ್ ನೂತನ ಶಾಖೆಯಲ್ಲಿನ ಪುಸ್ತಕಗಳನ್ನು ನಿರ್ಮಲಾನಂದನಾಥ ಸ್ವಾಮೀಜಿ ವೀಕ್ಷಿಸಿದರು. ಹಂ.ಪ.ನಾಗರಾಜಯ್ಯ, ಸಚಿವ ಬಿ.ಸಿ.ನಾಗೇಶ್, ವಿಶ್ವೇಶ್ವರ ಭಟ್, ನಿತಿನ್ ಷಾ ಹಾಗೂ ಇತರರು ಇದ್ದರು –ಪ್ರಜಾವಾಣಿ ಚಿತ್ರ

ಸಪ್ನ ಬುಕ್ ಹೌಸ್ ನೂತನ ಶಾಖೆ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಮಕ್ಕಳಿಗೆ ಬಾಲ್ಯದಲ್ಲಿ ಪುಸ್ತಕ ಓದುವ ಸಂಸ್ಕೃತಿ ಬೆಳೆಸಬೇಕು' ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.

ರಾಜರಾಜೇಶ್ವರಿ ನಗರದಲ್ಲಿ ಸಪ್ನ ಬುಕ್ ಹೌಸ್ ನೂತನ ಶಾಖೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪುಸ್ತಕ ಓದುವ ಅಭ್ಯಾಸವನ್ನು ಮೈಗೂಡಿಸಿಕೊಂಡರೆ ಸಹನೆ, ಶ್ರದ್ಧೆ, ಶಿಸ್ತು, ಸಂಯಮದ ಜೊತೆಗೆ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು. ಒತ್ತಡದ ಜೀವನಶೈಲಿ, ಮಾನಸಿಕವಾಗಿ ಕುಗ್ಗಿ ಹೋಗಿರುವ ಮನಸ್ಸುಗಳಿಗೆ ನವ ಚೈತನ್ಯ ಪಡೆದುಕೊಳ್ಳಲು ಮತ್ತು ಮಾನಸಿಕ ಸದೃಢತೆ ಸಾಧಿಸಲು ಪುಸ್ತಕಗಳು ಸಹಕಾರಿ' ಎಂದರು.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, 'ಜನರ ಆಶಯ ಮತ್ತು ಅವಶ್ಯಕತೆಗೆ ಅನುಗುಣವಾಗಿ ಪುಸ್ತಕ ಮಳಿಗೆಯನ್ನು ಸ್ಥಾಪಿಸಿ, ಸಪ್ನ ಬುಕ್ ಹೌಸ್ ಜನಮನ್ನಣೆಯೊಂದಿಗೆ ಇತಿಹಾಸ ನಿರ್ಮಿಸಿದೆ' ಎಂದು ಶ್ಲಾಘಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಹಂ.ಪ.ನಾಗರಾಜಯ್ಯ,'ಭಾರತ ದುಡಿಮೆಗೆ ಬದಲಾಗಿ ರಜೆಗಳ ದೇಶವಾಗಿ ಪರಿವರ್ತನೆಗೊಂಡಿದ್ದು, ಇದರಿಂದ ದೇಶದ ಪ್ರಗತಿಗೆ ತೊಡಕಾಗಿದೆ. ಆ.15ರ ಸ್ವಾತಂತ್ರ್ಯ ದಿನಕ್ಕೆ ರಜೆ ಕೊಟ್ಟರೆ ಸಾಕು. ಉಳಿದ ರಜೆಗಳು ಅಗತ್ಯವಿಲ್ಲ' ಎಂದು ಹೇಳಿದರು.

ಸಪ್ನ ಬುಕ್ ಹೌಸ್ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ,'ಸಂಸ್ಥೆಯು 50ಕ್ಕೂ ಹೆಚ್ಚು ವರ್ಷಗಳಿಂದ ಪುಸ್ತಕ ಪ್ರಪಂಚದಲ್ಲಿ ತನ್ನದೇ ಆದ ದೂರದೃಷ್ಟಿ ಚಿಂತನೆಯಿಂದ ಕನ್ನಡ ಪುಸ್ತಕಗಳನ್ನು ಪ್ರಕಟಿಸಿ, ಹೊಸ ಮೈಲಿಗಲ್ಲು ಸ್ಥಾಪಿಸಿದೆ' ಎಂದರು.

ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಸಾಹಿತಿ ಕಮಲಾ ಹಂಪನಾ ಮಾತನಾಡಿದರು.

ಈವರೆಗೆ 60.5 ಕೋಟಿ ಪ್ರಯಾಣಿಕರಿಂದ ಮೆಟ್ರೊ ಬಳಕೆ • ಒಟ್ಟು ಆರು ವಿಸ್ತರಿತ ಮಾರ್ಗಗಳು ಲೋಕಾರ್ಪಣೆ

ದಶಕದ ಹಾದಿ ಕ್ರಮಿಸಿದ 'ನಮ್ಮ ಮೆಟ್ರೊ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಂಚಾರ ಸೌಕರ್ಯಕ್ಕೆ ಹೊಸ ದಿಸೆ ತೋರಿದ 'ನಮ್ಮ ಮೆಟ್ರೊ' ವಾಣಿಜ್ಯ ಕಾರ್ಯಾಚರಣೆಯು ಬುಧವಾರಕ್ಕೆ ಹತ್ತು ವರ್ಷ ಪೂರ್ಣಗೊಳಿಸಿತು. ಈ 10 ವರ್ಷಗಳ ಪಯಣದಲ್ಲಿ 60.5 ಕೋಟಿ ಪ್ರಯಾಣಿಕರು ಮೆಟ್ರೊ ಬಳಸಿದ್ದಾರೆ.

ಮಹಾತ್ಮ ಗಾಂಧಿ ರಸ್ತೆ– ಬೈಯಪ್ಪನಹಳ್ಳಿವರೆಗಿನ 6.7 ಕಿ.ಮೀ ಉದ್ದದ ಎತ್ತರಿಸಿದ ಮಾರ್ಗದಲ್ಲಿ 2011 ಅ.20ರಂದು 'ನಮ್ಮ ಮೆಟ್ರೊ' ವಾಣಿಜ್ಯ ಸಂಚಾರ ಆರಂಭವಾಗಿತ್ತು. ಆರು ನಿಲ್ದಾಣಗಳನ್ನು ಈ ಮಾರ್ಗವು ಹೊಂದಿತ್ತು. ಅದಾದ ಬಳಿಕ ಒಟ್ಟು ಆರು ವಿಸ್ತರಿತ ಮಾರ್ಗಗಳು ಲೋಕಾರ್ಪಣೆಗೊಂಡಿವೆ. ಈಗ ಮೆಟ್ರೊ ಜಾಲದ ವಾಣಿಜ್ಯ ಕಾರ್ಯಾಚರಣೆ ಈವರೆಗೆ 56 ಕಿ.ಮೀವರೆಗೆ ವಿಸ್ತರಣೆಗೊಂಡಿದೆ. ಮೆಜೆಸ್ಟಿಕ್‌ನ ಇಂಟರ್ ಚೇಂಜ್ ನಿಲ್ದಾಣವೂ ಸೇರಿ ಒಟ್ಟು 74 ನಿಲ್ದಾಣಗಳು ಕಾರ್ಯಾಚರಿಸುತ್ತಿವೆ.

10 ವರ್ಷಗಳ ವಾಣಿಜ್ಯ ಕಾರ್ಯಾಚರಣೆ ಪೂರ್ಣಗೊಳಿಸಿದ ಸಂಭ್ರಮವನ್ನು ಹಂಚಿಕೊಂಡ ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್, 'ನಾವು ನಗರದ ಸಾರಿಗೆ ವ್ಯವಸ್ಥೆ ಸುಧಾರಣೆಗಾಗಿ ಇನ್ನೂ ಸಾಕಷ್ಟು ಕೆಲಸ ಮಾಡಬೇಕಾಗಿದೆ. ಸದ್ಯ 56 ಕಿ.ಮೀ ಮಾರ್ಗದಲ್ಲಿ ಮಾತ್ರ ಮೆಟ್ರೊ ಸಂಚಾರ ಸಾಧ್ಯವಾಗಿದೆ. 'ನಮ್ಮ ಮೆಟ್ರೊ' ಯೋಜನೆಯ 2, 2ಎ, 2ಬಿ ಹಂತಗಳಲ್ಲಿ ಮೆಟ್ರೊ ಜಾಲವನ್ನು 175 ಕಿ.ಮೀ.ವರೆಗೆ ವಿಸ್ತರಣೆಗೊಳ್ಳಲಿದೆ. ಇವುಗಳ ಕಾಮಗಾರಿಗಳನ್ನು 2024ರ ಗಡುವಿನ ಒಳಗೆ ಪೂರ್ಣಗೊಳಿಸಲು ಜನರ ಹಾಗೂ ಉದ್ಯೋಗಿಗಳ ಸಹಕಾರವೂ ಅಗತ್ಯ' ಎಂದರು.



ಮಹಾತ್ಮ ಗಾಂಧಿ ರಸ್ತೆ– ಬೈಯಪ್ಪನಹಳ್ಳಿ ಎತ್ತರಿಸಿದ ಮಾರ್ಗದಲ್ಲಿ 'ನಮ್ಮ ಮೆಟ್ರೊ' ಸೇವೆಗೆ 2011ರ ಅ.20ರಂದು ಕೇಂದ್ರದ ಆಗಿನ ನಗರಾಭಿವೃದ್ಧಿ ಸಚಿವ ಕಮಲ್ ನಾಥ್ ಚಾಲನೆ ನೀಡಿದ್ದರು. ಆಗ ರಾಜ್ಯಸಭಾ ವಿರೋಧ ಪಕ್ಷದ ನಾಯಕರಾಗಿದ್ದ ಅರುಣ್ ಜೇಟ್ಲಿ, ಮುಖ್ಯಮಂತ್ರಿಯಾಗಿದ್ದ ಡಿ.ವಿ.ಸದಾನಂದ ಗೌಡ, ಸಚಿವರಾಗಿದ್ದ ಆರ್.ಅಶೋಕ, ಸಂಸದರಾಗಿದ್ದ ಅನಂತ್ ಕುಮಾರ್ ಅವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

ಮೆಟ್ರೊ ವಿವಿಧ ಹಂತ– ದಶಕದ ಪಥ

ರೀಚ್	ಎಲ್ಲಿಂದ ಎಲ್ಲಿಗೆ	ಉದ್ದ (ಕಿ.ಮೀ)	ನಿಲ್ದಾಣಗಳು	ಆರಂಭವಾದ ದಿನ
ರೀಚ್–1	ಬೈಯಪ್ಪನಹಳ್ಳಿ– ಎಂ.ಜಿ.ರಸ್ತೆ	6.7	6	2011 ಅ. 20
ರೀಚ್–3, 3ಎ	ಪೀಣ್ಯ ಕೈಗಾರಿಕೆ– ಮಂತ್ರಿ ಸ್ಕ್ವೇರ್ ಸಂಪಿಗೆ ರಸ್ತೆ	10.3	10	2014 ಮಾರ್ಚ್ 1
ರೀಚ್–3ಬಿ	ಪೀಣ್ಯ ಕೈಗಾರಿಕೆ– ನಾಗಸಂದ್ರ	2.5	3	2015 ಮೇ 1
ರೀಚ್–2	ಮಾಗಡಿ ರಸ್ತೆ– ಮೈಸೂರು ರಸ್ತೆ	6.5	6	2015 ನ. 16
ಸುರಂಗ ಮಾರ್ಗ–2	ಕಬ್ಬನ್ ಉದ್ಯಾನ– ನಗರ ರೈಲು ನಿಲ್ದಾಣ	4.8	5	2016 ಏ 29
ಸುರಂಗ ಮಾರ್ಗ–1 ಮತ್ತು ರೀಚ್–4, 4ಎ	ಮಂತ್ರಿ ಸ್ಕ್ವೇರ್ ಸಂಪಿಗೆ ರಸ್ತೆ– ಯಲಚೇನಹಳ್ಳಿ	11.3	11	2017 ಜೂನ್ 17
ರೀಚ್ 4ಬಿ	ಯಲಚೇನಹಳ್ಳಿ–ರೇಷ್ಮೆ ಸಂಸ್ಥೆ	6.29 ಕಿ.ಮೀ	5	2021 ಜ.14
ರೀಚ್ 2ಎ	ಮೈಸೂರು ರಸ್ತೆ– ಕೆಂಗೇರಿ	7.53	6	2021 ಆ.29



ಹತ್ತು ವರ್ಷಗಳಲ್ಲಿ ನಮ್ಮ ಮೆಟ್ರೊ ಬೆಂಗಳೂರಿನ ಹೆಮ್ಮೆಯಾಗಿ ರೂಪುಗೊಂಡಿದೆ. ಮೆಟ್ರೊ ಮಾರ್ಗಕ್ಕೆ ಜಾಗ ಬಿಟ್ಟುಕೊಟ್ಟವರಿಗೆ, ಸಹಕರಿಸಿದ ಪ್ರಯಾಣಿಕರಿಗೆ ಹಾಗೂ ಸಿಬ್ಬಂದಿಗೆ ಧನ್ಯವಾದ

ಅಂಜುಂ ಪರ್ವೇಜ್, ವ್ಯವಸ್ಥಾಪಕ ನಿರ್ದೇಶಕ, ಬಿಎಂಆರ್‌ಸಿಎಲ್

'ಬಿಐಇಸಿ, ವೈಟ್‌ಫೀಲ್ಡ್‌ಗೆ ಮುಂದಿನ ವರ್ಷ ಮೆಟ್ರೊ'

ನಾಗಸಂದ್ರದಿಂದ ಬೆಂಗಳೂರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದ (ಬಿಐಇಸಿ) ವರೆಗಿನ 3.77 ಕಿ.ಮೀ ಉದ್ದದ ರೀಚ್ 3 ಸಿ ಮಾರ್ಗ ಮತ್ತು ಬೈಯಪ್ಪನಹಳ್ಳಿ– ವೈಟ್‌ಫೀಲ್ಡ್‌ವರೆಗಿನ 15.20 ಕಿ.ಮೀ ಉದ್ದದ ಮಾರ್ಗದ ಕಾಮಗಾರಿಗಳು ತ್ವರಿತಗತಿಯಲ್ಲಿ ನಡೆಯುತ್ತಿವೆ.

'ಬಿಐಇಸಿವರೆಗಿನ ರೀಚ್– 3ಸಿ ವಿಸ್ತರಿತ ಮಾರ್ಗವು 2022ರ ಸೆಪ್ಟೆಂಬರ್‌ನಲ್ಲಿ ಹಾಗೂ ವೈಟ್‌ಫೀಲ್ಡ್‌ವರೆಗಿನ ವಿಸ್ತರಿತ ಮಾರ್ಗವನ್ನು 2022ರ ಡಿಸೆಂಬರ್ ಒಳಗೆ ಲೋಕಾರ್ಪಣೆಗೊಳಿಸುವ ಉದ್ದೇಶ ಹೊಂದಿದ್ದೇವೆ. ಎರಡನೇ ಹಂತದ ವಿಸ್ತರಣೆಯ ಎಲ್ಲ ಕಾಮಗಾರಿಗಳನ್ನು 2024ರ ಒಳಗೆ ಪೂರ್ಣಗೊಳಿಸುವ ಗುರಿ ನಿಗದಿಪಡಿಸಿದ್ದೇವೆ' ಎಂದು ಅಂಜುಮ್ ಪರ್ವೇಜ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಮ್ಮ ಮೆಟ್ರೊ ಮೂರನೇ ಹಂತದಲ್ಲಿ ಹೊರವರ್ತುಲ ರಸ್ತೆಯಲ್ಲಿ ಮೆಟ್ರೊ ಮಾರ್ಗ ನಿರ್ಮಿಸುವ ಉದ್ದೇಶವಿದೆ. ಇದರ ಸಮಗ್ರ ಯೋಜನಾ ವರದಿ ತಯಾರಿಸುವ ಕಾರ್ಯ ಪ್ರಗತಿಯಲ್ಲಿದೆ. ಈ ಕುರಿತ ಸರ್ವೆ ಕಾರ್ಯಗಳು ನಡೆಯುತ್ತಿವೆ' ಎಂದು ಮಾಹಿತಿ ನೀಡಿದರು.

ಸದ್ಯ ಹೊರವರ್ತುಲ ರಸ್ತೆಯಲ್ಲಿ ಸದ್ಯ ಸಿಲ್ಕ್‌ಬೋರ್ಡ್– ಕೆ.ಆರ್.ಪುರ– ಹೆಬ್ಬಾಳವರೆಗೆ ಮೆಟ್ರೊ ಮಾರ್ಗದ ಕಾಮಗಾರಿ ಪ್ರಗತಿಯಲ್ಲಿದೆ. ಹೊರ ವರ್ತುಲ ರಸ್ತೆಯ ಇನ್ನುಳಿದ ಭಾಗದ ಮೆಟ್ರೊ ಮಾರ್ಗಕ್ಕೆ ಇನ್ನಷ್ಟೇ ಮಂಜೂರಾತಿ ಸಿಗಬೇಕಿದೆ.

'ಸಿಬ್ಬಂದಿ ಪಡೆಯೇ ಸಂಸ್ಥೆಯ ಯಶಸ್ಸು'

'ಪ್ರಯಾಣಿಕರ ನಿರೀಕ್ಷೆಗಳಿಗೆ ತಕ್ಕಂತೆ ಸೇವೆ ಒದಗಿಸುವ ನುರಿತ ಸಿಬ್ಬಂದಿ ವರ್ಗವನ್ನು ಸಜ್ಜುಗೊಳಿಸುವುದು ದೊಡ್ಡ ಸವಾಲಾಗಿತ್ತು. ಇಂದು ನಮ್ಮ ಮೆಟ್ರೊ ಸಮಯ ಪರಿಪಾಲನೆಯಲ್ಲಿ ಶೇ 99.5ರಷ್ಟು ಸಾಧನೆ ಮಾಡಿದೆ. ಯಾವುದೇ ಅವಘಡಗಳಿಗೆ ಅವಕಾಶ ನೀಡದಂತೆ ಸೇವೆ ಮುಂದುವರಿಸುವ ಮೂಲಕ ಈ ಸವಾಲನ್ನು ಮೆಟ್ಟಿನಿಂತಿದೆ' ಎಂದು ನಿಗಮದ ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗದ ಕಾರ್ಯಕಾರಿ ನಿರ್ದೇಶಕ ಎ.ಎಸ್.ಶಂಕರ್ ತಿಳಿಸಿದರು.

'ಮೆಟ್ರೊ ರೈಲಿನ ಮೂರು ಬೋಗಿಗಳ ಸಂಖ್ಯೆ ಮೂರಕ್ಕೆ ಸೀಮಿತವಾಗಿದ್ದಾಗ ದಟ್ಟಣೆ ಅವಧಿಯಲ್ಲಿ ಪ್ರತಿ ಒಂದೂವರೆ ನಿಮಿಷಕ್ಕೊಂದು ರೈಲು ಓಡಿಸಿದ್ದೇವೆ. ಆಗ ಪ್ರಯಾಣಿಕರ ದಟ್ಟಣೆಯ ಒತ್ತಡವನ್ನು ನಿರ್ವಹಿಸುವಾಗ ಅತ್ಯಂತ ಕ್ಲಿಷ್ಟಕರ ದಿನಗಳನ್ನು ಎದುರಿಸಿದ್ದೇವೆ. ನಿಲ್ದಾಣಗಳನ್ನು ದೇಶ ಬೇರೆ ಯಾವುದೇ ಮೆಟ್ರೊ ಸಂಸ್ಥೆಗಳಿಗಿಂತಲೂ ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿದ ತೃಪ್ತಿ ನಮಗಿದೆ' ಎಂದರು.

ಮುಂಗಾರು ಹಿಂದಕ್ಕೆ: 26ಕ್ಕೆ ಹಿಂಗಾರು ಪ್ರವೇಶ

ಮುಂಬೈ (ಪಿಟಿಐ): ಮುಂಗಾರು ಮಳೆ ಮಾರುತಗಳು ಇದೇ 26ರ ಹೊತ್ತಿಗೆ ಇಡೀ ದೇಶದಿಂದ ಹಿಂದಕ್ಕೆ ಸರಿಯಬಹುದು. ಇದರಿಂದಾಗಿ ಹಿಂಗಾರು ಮಾರುತಕ್ಕೆ ಅವಕಾಶ ಆಗಲಿದೆ ಎಂದು ಹವಾಮಾನ ಇಲಾಖೆ ಬುಧವಾರ ಹೇಳಿದೆ.

ಈ ಬಾರಿ ಮುಂಗಾರು ಮಾರುತಗಳ ಹಿಂದೆ ಸರಿಯುವಿಕೆ ಪ್ರಕ್ರಿಯೆಯು ವಿಳಂಬವಾಗಿತ್ತು. ಮುಂಗಾರು ಮಾರುತಗಳು ದೇಶದ ವಿವಿಧ ಭಾಗಗಳಲ್ಲಿ ಸಕ್ರಿಯವಾಗಿದ್ದ ಕಾರಣ ಹಲವೆಡೆ ಮಳೆಯೂ ಆಗಿದೆ. ಪ್ರಸ್ತುತ ಮುಂಗಾರು ಮಾರುತವು ಕೊಹಿಮಾ, ಸಿಲ್ಚಾರ್, ಕೃಷ್ಣನಗರ, ಬರಿಪಾಡ, ಮಲ್ಕನ್‌ಗಿರಿ, ನಲ್ಗೊಂಡ ಪ್ರದೇಶವನ್ನು ಹಾದು ಸಾಗುತ್ತಿದೆ ಎಂದು ಇಲಾಖೆ ತಿಳಿಸಿದೆ.

ಈಶಾನ್ಯ ಭಾರತ, ಬಂಗಾಳ ಕೊಲ್ಲಿಯ ಉತ್ತರ ಭಾಗ, ಪಶ್ಚಿಮ ಬಂಗಾಳ ಮತ್ತು ಒಡಿಶಾ, ಆಂಧ್ರ ಪ್ರದೇಶ ಮತ್ತು ತೆಲಂಗಾಣದ ಕೆಲವು ಭಾಗಗಳು, ಕರ್ನಾಟಕದ ಕೆಲವು ಭಾಗಗಳು ಮತ್ತು ಗೋವಾದಿಂದ ಮುಂಗಾರು ಮಾರುತವು ಪೂರ್ಣವಾಗಿ ಹಿಂದಕ್ಕೆ ಸರಿಯುವುದಕ್ಕೆ ಪೂರಕವಾದ ವಾತಾವರಣ ಸೃಷ್ಟಿಯಾಗಿದೆ ಎಂದು ಇಲಾಖೆ ಮಾಹಿತಿ ಕೊಟ್ಟಿದೆ.

ಬಂಗಾಳ ಕೊಲ್ಲಿ ಮತ್ತು ಭಾರತದ ದಕ್ಷಿಣದ ತುತ್ತ ತುದಿಯತ್ತ ಈಶಾನ್ಯ ಮಾರುತ (ಹಿಂಗಾರು) ಬೀಸಲು ಆರಂಭವಾಗಲಿದೆ. ಇದೇ 26ರಿಂದಲೇ ಹಿಂಗಾರು ಮಳೆ ಆರಂಭವಾಗುವ ಸಾಧ್ಯತೆ ದಟ್ಟವಾಗಿದೆ ಎಂದು ಇಲಾಖೆ ತಿಳಿಸಿದೆ.

ಪೂರ್ಣವಾಗಿ ತಮಿಳುನಾಡು ಮತ್ತು ಕೇರಳ, ಆಂಧ್ರ ಪ್ರದೇಶ, ಕರ್ನಾಟಕ, ಪುದುಚೇರಿ ಹಾಗೂ ಆಂಧ್ರ ಪ್ರದೇಶದ ಕೆಲವು ಭಾಗಗಳಲ್ಲಿ ಹಿಂಗಾರು ಮಳೆ ಸುರಿಯುತ್ತದೆ.


ಕೇರಳ, ತಮಿಳುನಾಡು, ಪುದುಚೇರಿ, ಕರ್ನಾಟಕದ ಕರಾವಳಿ ಮತ್ತು ದಕ್ಷಿಣ ಒಳನಾಡಿನಲ್ಲಿ ಇದೇ 24ವರೆಗೆ ಮಳೆ ಬೀಳುವ ಸಾಧ್ಯತೆ ಇದೆ.

22ರಿಂದ ಕುಪ್ಪಳಿಯಲ್ಲಿ ರಾಜ್ಯಮಟ್ಟದ ವಿಮರ್ಶಾ ಕಮ್ಮಟ

ತೀರ್ಥಹಳ್ಳಿ: ಬಂಡಾಯ, ನವೋತ್ತರ ಸಾಹಿತ್ಯದ ಅರಿಕೆಯ ವ್ಯಾಪ್ತಿ ಹೆಚ್ಚಿಸಿಕೊಳ್ಳಲು ವಿಮರ್ಶೆಯ ದೃಷ್ಟಿಕೋನ ಮುಖ್ಯ. ಸಾಹಿತಿ, ಓದುಗನ ನಡುವಿನ ಅಂತರವನ್ನು ಭರ್ತಿ ಮಾಡಲು ಪುನರಾವಲೋಕನದ ಅಗತ್ಯ ಇದೆ. ಈ ನಿಟ್ಟಿನಲ್ಲಿ ಕುಪ್ಪಳಿಯಲ್ಲಿ ಅ.22ರಿಂದ 26ರವರೆಗೆ ರಾಜ್ಯ ಮಟ್ಟದ ವಿಮರ್ಶಾ ಕಮ್ಮಟ ಆಯೋಜಿಸಲಾಗಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್ ಹೇಳಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದಲ್ಲಿ ಕಮ್ಮಟ ನಡೆಯಲಿದೆ' ಎಂದರು.

ರಾಜ್ಯದ ನಾನಾ ಭಾಗಗಳಿಂದ 60 ಶಿಬಿರಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ಹಿರಿಯ ವಿಮರ್ಶಕ ಪ್ರೊ. ಓ.ಎಲ್. ನಾಗಭೂಷಣಸ್ವಾಮಿ ಉದ್ಘಾಟಿಸಲಿದ್ದಾರೆ. ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಸಮಾರೋಪ ನುಡಿ ಆಡಲಿದ್ದಾರೆ ಎಂದು ಮಾಹಿತಿ ನೀಡಿದರು.



ತನಿಖೆ ಆಮೆಗತಿ: 'ಸುಪ್ರೀಂ' ಮತ್ತೆ ಅತೃಪ್ತಿ

ಲಖಿಂಪುರ–ಖೇರಿ ಪ್ರಕರಣ: 44 ಸಾಕ್ಷಿಗಳಲ್ಲಿ ನಾಲ್ವರ ಹೇಳಿಕೆ ಮಾತ್ರ ದಾಖಲು

ಪ್ರಜಾವಾಣಿ ವಾರ್ತೆ

ನವದೆಹಲಿ: ರೈತರ ಮೇಲೆ ಎಸ್‌ಯುವಿ ಹರಿಸಿ ಹತ್ಯೆಗೈದ ಲಖಿಂಪುರ–ಖೇರಿ ಪ್ರಕರಣದ ತನಿಖೆಯು ಎಂದೂ ಮುಗಿಯದ ಪ್ರಕ್ರಿಯೆಯಾಗುವುದು ಸಾಧ್ಯವಿಲ್ಲ ಎಂದು ಉತ್ತರ ಪ್ರದೇಶ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ. ತನಿಖೆಯನ್ನು ಉದ್ದೇಶಪೂರ್ವಕವಾಗಿ ವಿಳಂಬ ಮಾಡಲಾಗುತ್ತಿದೆ ಎಂಬ ಭಾವನೆಯನ್ನು ಹೋಗಲಾಡಿಸಬೇಕು ಎಂದೂ ಸೂಚಿಸಿದೆ.

ಸಾಕ್ಷಿಗಳ ಹೇಳಿಕೆಯನ್ನು ಮ್ಯಾಜಿಸ್ಟ್ರೇಟ್ ಮುಂದೆ ಆದಷ್ಟು ಬೇಗನೆ ದಾಖಲಿಸುವಂತೆ ನೋಡಿಕೊಳ್ಳಿ. ಸಾಕ್ಷಿಗಳಿಗೆ ಅಗತ್ಯ ಭದ್ರತೆ ಒದಗಿಸಿ ಎಂದು ಉತ್ತರ ಪ್ರದೇಶ ಸರ್ಕಾರದ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಹರೀಶ್ ಸಾಳ್ವೆ ಅವರಿಗೆ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠವು ಹೇಳಿತು.

ಮುಖ್ಯಾಂಶಗಳು

- ಇನ್ನಷ್ಟು ವಿವರ ಸಲ್ಲಿಸಲು ಸಮಯಾವಕಾಶ ಕೋರಿದ ರಾಜ್ಯ ಸರ್ಕಾರ
- ವಿಚಾರಣೆ ಇದೇ 26ಕ್ಕೆ ಮುಂದೂಡಿಕೆ
- 25ರೊಳಗೆ ಸ್ಥಿತಿಗತಿ ವರದಿ ಸಲ್ಲಿಸುವುದಾಗಿ ಭರವಸೆ



ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಅವರು ಪ್ರಮುಖ ಆರೋಪಿಯಾಗಿರುವ ಪ್ರಕರಣಕ್ಕೆ ಸಂಬಂಧಿಸಿ ದಾಖಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ಪೀಠವು ನಡೆಸಿತು.

ಸಾಕ್ಷಿಗಳ ಹೇಳಿಕೆಯನ್ನು ಮ್ಯಾಜಿಸ್ಟ್ರೇಟ್ ಮುಂದೆ ದಾಖಲಿಸಲು ವಿಳಂಬ ಏಕೆ ಎಂದು ಕೋರ್ಟ್ ಪ್ರಶ್ನಿಸಿತು. ಸರ್ಕಾರವು ಸಲ್ಲಿಸಿದ್ದ ವರದಿಯನ್ನು ಅವಲೋಕಿಸಿದ ಪೀಠವು 44 ಸಾಕ್ಷಿಗಳ ಪೈಕಿ ನಾಲ್ವರ ಹೇಳಿಕೆ ಮಾತ್ರ ದಾಖಲಾಗಿದೆ ಎಂಬುದನ್ನು ಕಂಡು ಆಶ್ಚರ್ಯ ವ್ಯಕ್ತಪಡಿಸಿತು. ಮ್ಯಾಜಿಸ್ಟ್ರೇಟ್ ಮುಂದೆ ದಾಖಲಿಸಲಾದ ಸಾಕ್ಷ್ಯಕ್ಕೆ ಹೆಚ್ಚು ಮೌಲ್ಯವಿದೆ ಎಂಬುದನ್ನು ನೆನಪಿಸಿತು. ತನಿಖೆಯ ಆಮೆಗತಿಯ ಬಗ್ಗೆ ಪೀಠವು ಹಿಂದೆಯೂ ಅಸಮಾಧಾನ ವ್ಯಕ್ತಪಡಿಸಿತ್ತು.

ಆರೋಪಿಗಳನ್ನು ಬಂಧಿಸಲಾಗಿದೆಯೇ ಎಂದು ಪೀಠವು ಪ್ರಶ್ನಿಸಿತು. ಹತ್ತು ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದೆ ಮತ್ತು ನಾಲ್ವರನ್ನು ವಶಕ್ಕೆ ಪಡೆಯಲಾಗಿದೆ. ರೈತರ ಮೇಲೆ ಎಸ್‌ಯುವಿ ಹರಿಸಿ ನಾಲ್ವರ ಹತ್ಯೆ ಪ್ರಕರಣದಲ್ಲಿ ಒಂದು ಮತ್ತು ಎಸ್‌ಯುವಿಯಲ್ಲಿ ಇದ್ದವರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಇನ್ನೊಂದು ಎಫ್‌ಐಆರ್ ದಾಖಲಾಗಿದೆ ಎಂದು ಸಾಳ್ವೆ ಅವರು ಮಾಹಿತಿ ನೀಡಿದರು. ಪ್ರಕರಣವು ಇದೇ 3ರಂದು ನಡೆದಿತ್ತು.

ಪ್ರಕರಣಕ್ಕೆ ಸಂಬಂಧಿಸಿದ ಹಲವು ವಿಡಿಯೊಗಳನ್ನು ಸಂಗ್ರಹಿಸಲಾಗಿದೆ. ಅವುಗಳನ್ನು ವಿಧಿವಿಜ್ಞಾನ ಪರಿಶೀಲನೆಗೆ ಕಳುಹಿಸಲಾಗಿದೆ ಎಂದು ಸಾಳ್ವೆ ತಿಳಿಸಿದರು.


ತನಿಖೆಯ ಸ್ಥಿತಿಗತಿ ವರದಿಯನ್ನು ಕೊನೆಯ ಕ್ಷಣದಲ್ಲಿ ಅದೂ ಮೊಹರು ಮಾಡಿದ ಲಕೋಟೆಯಲ್ಲಿ ಸಲ್ಲಿಸಿದ ರಾಜ್ಯ ಸರ್ಕಾರದ ಕ್ರಮವನ್ನು ಪೀಠವು ತರಾಟೆಗೆ ತೆಗೆದುಕೊಂಡಿದೆ. ಮುಂದಿನ ಸ್ಥಿತಿಗತಿ ವರದಿಯನ್ನು ವಿಚಾರಣೆಗೆ ಒಂದು ದಿನ ಮೊದಲೇ ಸಲ್ಲಿಸಲಾಗುವುದು ಎಂದು ಸಾಳ್ವೆ ಭರವಸೆ ಕೊಟ್ಟರು.

ಮೇಘಸ್ಫೋಟ: ಕಲಬುರಗಿ ಜಿಲ್ಲೆಯ 9 ಮಂದಿ ಸುರಕ್ಷಿತ

ಕಲಬುರಗಿ: ಆಳಂದ ತಾಲ್ಲೂಕಿನ ಭೂಸನೂರ ಗ್ರಾಮದಿಂದ ಅಕ್ಟೋಬರ್ 14ರಂದು ಉತ್ತರಾಖಂಡ ಪ್ರವಾಸಕ್ಕೆ ತೆರಳಿದ್ದ 9 ಮಂದಿ ಪ್ರವಾಸಿಗರು ಕೇದಾರನಾಥ ಬಳಿಯ ಗೌರಿಕುಂಡದಿಂದ ಬುಧವಾರ ಸುರಕ್ಷಿತವಾಗಿ ಹರಿದ್ವಾರ ತಲುಪಿದ್ದಾರೆ. ಮೇಘಸ್ಫೋಟದಿಂದ ಸಂಕಷ್ಟಕ್ಕೆ ಸಿಲುಕಿದ್ದ ಅವರು ಈಗ ನಿರಾಳರಾಗಿದ್ದಾರೆ.

ಉತ್ತರಾಖಂಡದ ಗೌರಿಕುಂಡದಲ್ಲಿ ಪ್ರವಾಸಿಗರು ಸಿಲುಕಿದ್ದ ಬಗ್ಗೆ ಮಾಹಿತಿ ಪಡೆದ ಜಿಲ್ಲೆಯ ಬಿಜೆಪಿ ಮುಖಂಡ ಭೀಮಾಶಂಕರ ಪಾಟೀಲ ಈ ಬಗ್ಗೆ ಮುಖ್ಯಮಂತ್ರಿ ಕಚೇರಿಗೆ ಮಾಹಿತಿ ನೀಡಿದರು. ಅಧಿಕಾರಿಗಳ ತಂಡವು ಉತ್ತರಾಖಂಡ ಸರ್ಕಾರದೊಂದಿಗೆ ಮಾತನಾಡಿ ಅವರ ಸುರಕ್ಷಿತ ಬರುವಿಕೆಯನ್ನು ಖಚಿತಪಡಿಸಿಕೊಂಡಿದೆ.

'ದೆಹಲಿಯಿಂದ ಶುಕ್ರವಾರ ಕಲಬುರಗಿಗೆ ವಾಪಸಾಗಲಿದ್ದಾರೆ. ಅವರಿಗೆ ಟಿಕೆಟ್ ವ್ಯವಸ್ಥೆ ಮಾಡಲಾಗಿದೆ' ಎಂದು ಭೀಮಾಶಂಕರ ಪಾಟೀಲ ತಿಳಿಸಿದ್ದಾರೆ.



ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ಭೇಟಿ

ರಾಜಕಾಲುವೆ ತಡೆಗೋಡೆ ಮರುನಿರ್ಮಾಣ ವಿಳಂಬಕ್ಕೆ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಹೆದ್ದಾರಿ ರಸ್ತೆಯ ಪಕ್ಕದ ಬಿಡಿಎ ಸಂಕೀರ್ಣದ ಬಳಿ ಕುಸಿದಿದ್ದ ರಾಜಕಾಲುವೆ ತಡೆಗೋಡೆ ಮರುನಿರ್ಮಾಣ ಕಾಮಗಾರಿ ಆಮೆಗತಿಯಲ್ಲಿ ನಡೆಯುತ್ತಿರುವ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅಸಮಾಧಾನ ವ್ಯಕ್ತಪಡಿಸಿದರು.

ಈ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ಆರ್.ಆರ್.ನಗರದ ವಲಯ ಆಯುಕ್ತರು, ವಿಶೇಷ ಆಯುಕ್ತರು (ಯೋಜನೆ) ಹಾಗೂ ಮುಖ್ಯ ಎಂಜಿನಿಯರ್‌ಗಳಿಗೆ ಸೂಚಿಸಿದರು.

ರಾಜರಾಜೇಶ್ವರಿ ನಗರ ವಲಯ ಮತ್ತು ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಮಳೆಯಿಂದ ಹಾನಿ ಉಂಟಾಗಿರುವ ಪ್ರದೇಶಗಳಿಗೆ ಬುಧವಾರ ಭೇಟಿ ನೀಡಿ ಅವರು ಪರಿಶೀಲಿಸಿದರು. ಈ ವೇಳೆ ಅವರು ಈ ರಾಜಕಾಲುವೆ ತಡೆಗೋಡೆಯ ಕಾಮಗಾರಿಯನ್ನೂ ಪರಿಶೀಲಿಸಿದರು. ₹ 19.20 ಕೋಟಿ ವೆಚ್ಚದಲ್ಲಿ ರಾಜಕಾಲುವೆಯ ತಡೆಗೋಡೆಯ ಮರು ನಿರ್ಮಾಣ ಹಾಗೂ ಮೋರಿ ಮೂಲಕ ನೀರು ಸರಾಗವಾಗಿ ಹರಿಯುವ ಸಲುವಾಗಿ ಕಾಲುವೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿರುವ ಬಗ್ಗೆ 'ಪ್ರಜಾವಾಣಿ' ಇದೇ 16ರ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿ ಗಮನ ಸೆಳೆದಿತ್ತು.

ರಾಜರಾಜೇಶ್ವರಿ ವಾರ್ಡ್ ವ್ಯಾಪ್ತಿಯ ಅಕ್ಕಮಹಾದೇವಿ ಕಲ್ಯಾಣ ಮಂಟಪದ ಹಿಂಭಾಗದ ಇತ್ತೀಚಿನ ಮಳೆಯಲ್ಲಿ ಜಾನುವಾರುಗಳು ಕೊಚ್ಚಿ ಹೋಗಿದ್ದ ಪ್ರದೇಶಕ್ಕೂ ಮುಖ್ಯ ಆಯುಕ್ತರು ಭೇಟಿ ನೀಡಿದರು. ಶೀಘ್ರವೇ ಟೆಂಡರ್ ಕರೆದು ಇಲ್ಲಿ ರಾಜಕಾಲುವೆಗೆ ತಡೆಗೋಡೆ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರಮೋದ ಬಡಾವಣೆಯಲ್ಲಿ ಮಳೆಯಿಂದ ತಗ್ಗು ಪ್ರದೇಶಗಳಲ್ಲಿ ಮನೆಗಳಿಗೆ ನೀರು ಹರಿದು ಹಾನಿ ಉಂಟಾಗಿತ್ತು. ಈ ಬಡಾವಣೆಯಲ್ಲಿರುವ ರಾಜಕಾಲುವೆಗೂ ತಡೆಗೋಡೆ ನಿರ್ಮಿಸುವಂತೆ ಅಧಿಕಾರಿಗಳಿಗೆ ಮುಖ್ಯ ಆಯುಕ್ತರು ಆದೇಶಿಸಿದರು.

ಸ್ಮಾರ್ಟ್ ಸಿಟಿ ರಸ್ತೆ ಕಾಮಗಾರಿ ಅಧ್ವಾನ: ಬಿಬಿಎಂಪಿ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್ ಸಂಸ್ಥೆಯು ನಿರ್ವಹಿಸುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಅಧ್ವಾನಗಳ ಬಗ್ಗೆ ಬಿಬಿಎಂಪಿ ಅಸಮಾಧಾನ ವ್ಯಕ್ತಪಡಿಸಿದೆ.

ಸ್ಮಾರ್ಟ್‌ಸಿಟಿ ಯೋಜನೆಯಡಿ ಅಭಿವೃದ್ಧಿಗೊಳ್ಳುತ್ತಿರುವ ಎಲ್ಲ ರಸ್ತೆಗಳು ನಗರದ ಕೇಂದ್ರ ವಾಣಿಜ್ಯ ಪ್ರದೇಶದಲ್ಲಿವೆ. ಈ ರಸ್ತೆ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ಸೂಚಿಸಿ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ಅವರಿಗೆ ಪತ್ರ ಬರೆದಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಬೆಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್ ಸಂಸ್ಥೆಯು 36 ರಸ್ತೆಗಳನ್ನು ಟೆಂಡರ್ ಶ್ಯೂರ್ ಮಾದರಿಯಲ್ಲಿ ಅಭಿವೃದ್ಧಿಗೊಳಿಸಲಾಗುತ್ತಿದೆ. ಒಟ್ಟು 58 ಕಿ.ಮೀ ಉದ್ದದ ರಸ್ತೆಗಳು ಈ ಯೋಜನೆ ಅಡಿ ಮೇಲ್ದರ್ಜೆಗೇರುತ್ತಿವೆ. ಇವುಗಳಲ್ಲಿ ಹಲವು ಕಾಮಗಾರಿಗಳು ಪೂರ್ಣಗೊಂಡಿವೆ.

'ಸ್ಮಾರ್ಟ್‌ಸಿಟಿ ಯೋಜನೆಯ ಕಾಮಗಾರಿ ಪ್ರಗತಿಯಲ್ಲಿರುವ ಕೆಲವು ರಸ್ತೆಗಳ ಮೇಲ್ಪದರ ಇತ್ತೀಚಿನ ಮಳೆಯಿಂದಾಗಿ ಹಾಳಾಗಿದೆ. ಅನೇಕ ಕಡೆ ಈ ರಸ್ತೆಗಳಲ್ಲಿ ನೀರು ಸರಾಗವಾಗಿ ಹರಿಯದೆಯೇ ವಾಹನ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ. ಕೆಲವು ರಸ್ತೆಗಳ ತಳಮಟ್ಟದ ಜಲ್ಲಿ–ಡಾಂಬರಿನ ದಟ್ಟ ಮಿಶ್ರಣವು ಡಾಂಬರೀಕರಣ ಕಾಮಗಾರಿ ವಿಳಂಬದಿಂದಾಗಿ ಕಿತ್ತು ಹೋಗುತ್ತಿದೆ. ಇದನ್ನು ಸರಿಪಡಿಸಿ ಕೂಡಲೇ ಮೇಲ್ಪದರದ ಡಾಂಬರೀಕರಣ ನಡೆಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕು' ಎಂದು ಮುಖ್ಯ ಆಯುಕ್ತರು ಸೂಚಿಸಿದ್ದಾರೆ.

ಮುಖ್ಯಾಂಶಗಳು

- ರಸ್ತೆ ಮಟ್ಟಕ್ಕಿಂತ ಎತ್ತರದಲ್ಲಿವೆ ಮಳೆ ನೀರನ್ನು ಚರಂಡಿಗೆ ಹರಿಸಲು ಅಳವಡಿಸಿದ ಜಾಲರಿಗಳು
- ಮಳೆಗೆ ಕಿತ್ತು ಹೋಗುತ್ತಿದೆ ಜಲ್ಲಿ–ಡಾಂಬರಿನ ದಟ್ಟ ಮಿಶ್ರಣ
- ರಸ್ತೆಗಳು ಕೂಡುವಲ್ಲಿ ಕೊಳವೆಗಳ ಮತ್ತು ನಾಳಗಳ (ಡಕ್ಟ್) ಕಾಮಗಾರಿ ಅಪೂರ್ಣ

ರಸ್ತೆ ಬದಿಯ ಚರಂಡಿಗೆ ಮಳೆನೀರು ಹರಿಯಲು ಅಳವಡಿಸಿರುವ ಜಾಲರಿಗಳು (ಗ್ರೇಟಿಂಗ್) ರಸ್ತೆಮಟ್ಟಕ್ಕಿಂತ ಎತ್ತರದಲ್ಲಿವೆ. ಇದರಿಂದಾಗಿ ನೀರು ಸರಾಗವಾಗಿ ಚರಂಡಿಗೆ ಹರಿಯದೆ ರಸ್ತೆಯ ಮೇಲೆ ನಿಲ್ಲುತ್ತಿದೆ. ಇದರಿಂದಲೂ ವಾಹನ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ. ರಸ್ತೆ ಮೇಲ್ಪದರವೂ ಹಾಳಾಗಿರುತ್ತದೆ. ಇಂತಹ ಜಾಲರಿಗಳನ್ನು ಗುರುತಿಸಿ ಲೋಪವನ್ನು ಸರಿಪಡಿಸಬೇಕು ಎಂದೂ ಅವರು ಸೂಚಿಸಿದ್ದಾರೆ.

ಟೆಂಡರ್ ಶ್ಯೂರ್ ಮಾದರಿಯಲ್ಲಿ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ನಿರ್ಮಿಸಲಾಗುತ್ತಿದೆ. ಕೆಲವೆಡೆ ಎರಡು ರಸ್ತೆಗಳು ಪರಸ್ಪರ ಜೋಡುವಲ್ಲಿ ಕೊಳವೆಗಳ ಮತ್ತು ನಾಳಗಳ (ಡಕ್ಟ್) ಕಾಮಗಾರಿ ಪೂರ್ಣಗೊಂಡಿಲ್ಲ. ಜಲಮಂಡಳಿ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಿ ಅಂತಹ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದೂ ನಿರ್ದೇಶನ ನೀಡಿದ್ದಾರೆ.

ಹಳೆಯ ವಿದ್ಯುತ್ ಕಂಬಗಳನ್ನು ತೆರವುಗೊಳಿಸಿ ನೆಲದಡಿಯಲ್ಲಿ ಪ್ರತ್ಯೇಕ ನಾಳಗಳಲ್ಲಿ ವಿದ್ಯುತ್ ಸರಬರಾಜು ಕೇಬಲ್ ಅಳವಡಿಸಲು ಕ್ರಮವಹಿಸಬೇಕು. ಕೆಲವು ರಸ್ತೆಗಳ ಪಾದಚಾರಿ ಮಾರ್ಗದ ಕಾಮಗಾರಿ ಪೂರ್ಣಗೊಂಡಿದೆ. ಇಂತಹ ರಸ್ತೆಗಳ ಅಂತಿಮ ಹಂತದ ಡಾಂಬರೀಕರಣಕ್ಕೆ ಕ್ರಮಕೈಗೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

ಮಳೆಯ ಬಳಿಕ ಸ್ಮಾರ್ಟ್‌ಸಿಟಿ ಯೋಜನೆಯಡಿ ಅಭಿವೃದ್ಧಿಗೊಂಡ ರಸ್ತೆ ಕಾಮಗಾರಿಗಳ ಬಣ್ಣ ಬಯಲಾಗಿರುವ ಬಗ್ಗೆ 'ಪ್ರಜಾವಾಣಿ'ಯು ಇದೇ 19ರ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿ ಗಮನ ಸೆಳೆದಿತ್ತು.

ನ್ಯಾಯಾಧೀಶರ ಹತ್ಯೆ ಪ್ರಕರಣ: ಸಿಬಿಐನಿಂದ ಚಾರ್ಜ್‌ಶೀಟ್

ನವದೆಹಲಿ (ಪಿಟಿಐ): ಜಾರ್ಖಂಡ್‌ನ ಧನಬಾದ್ ಜಿಲ್ಲಾ ಸೆಷನ್ಸ್ ನ್ಯಾಯಾಧೀಶ ಉತ್ತಮ್ ಆನಂದ್ ಅವರ ಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಸಿಬಿಐ, ಇಬ್ಬರು ಆರೋಪಿಗಳ ವಿರುದ್ಧ ಇಲ್ಲಿನ ವಿಶೇಷ ನ್ಯಾಯಾಲಯಕ್ಕೆ ಬುಧವಾರ ಚಾರ್ಜ್‌ಶೀಟ್ ಸಲ್ಲಿಸಿದೆ.

ಆಟೊ ಚಾಲಕ ಲಖನ್ ವರ್ಮಾ ಹಾಗೂ ಆತನ ಸಹಚರ ರಾಹುಲ್ ವರ್ಮಾ ಆರೋಪಿಗಳು.

ನ್ಯಾಯಾಧೀಶ ಉತ್ತಮ್ ಆನಂದ್ ಅವರು ಜುಲೈ 28ರಂದು ಬೆಳಿಗ್ಗೆ ವಾಯುವಿಹಾರಕ್ಕೆ ತೆರಳಿದ್ದಾಗ, ಹಿಂದಿನಿಂದ ಬಂದ ಆಟೊ ಅವರಿಗೆ ಡಿಕ್ಕಿ ಹೊಡೆದಿತ್ತು. ಅವರು ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಮೃಪಟ್ಟಿದ್ದರು.

ಕಾರ್ಮಿಕ ಸಾವು

ತೋರಣಗಲ್ಲು (ಬಳ್ಳಾರಿ ಜಿಲ್ಲೆ): ಇಲ್ಲಿಯ ಜಿಂದಾಲ್ ಕಾರ್ಖಾನೆಯ ಪಿಪಿ-3 ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕ ಬುಧವಾರ ಆಕಸ್ಮಿಕವಾಗಿ 16 ಅಡಿ ಎತ್ತರದಿಂದ ಕೆಳಗೆ ಬಿದ್ದು ಗಾಯಗೊಂಡಿದ್ದು, ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ.

ಕುರುಗೋಡು ತಾಲ್ಲೂಕಿನ ಗೇಣಿಕಿಹಾಳು ಗ್ರಾಮದ ಚಂದ್ರಶೇಖರ್(27) ಮೃತ ಕಾರ್ಮಿಕ. ಕ್ರೇನ್‌ನಲ್ಲಿ ಕೆಲಸ ಮಾಡುವ ವೇಳೆ ಈ ಅವಘಡ ಸಂಭವಿಸಿದೆ ಎನ್ನಲಾಗಿದೆ. ತೋರಣಗಲ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿರಂಜೀವಿ ಸಿಂಗ್ ಅವರ 'ಯಾವ ಜನ್ಮದ ಮೈತ್ರಿ?' ಕೃತಿ ಕುರಿತು ಸಂವಾದ

'ವಿಷಯ ವೈವಿಧ್ಯದಿಂದ ಕೂಡಿದ ಕೃತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿರಂಜೀವಿ ಸಿಂಗ್ ಅವರ ಕೃತಿಯು ವಿಷಯ ವೈವಿಧ್ಯದಿಂದ ಕೂಡಿದೆ. ಪ್ರವಾಸೋದ್ಯಮ, ಹಸಿವು, ಪ್ರಕೃತಿ ಹೀಗೆ ಹಲವು ವಿಷಯಗಳ ಉಲ್ಲೇಖ ಇದರಲ್ಲಿದೆ. ಸಂವೇದನೆ ಹಾಗೂ ಸಂಬದ್ಧತೆಯೂ ಪುಸ್ತಕದಲ್ಲಿದೆ' ಎಂದು ಕವಿ ಎಚ್.ಎಸ್.ಶಿವಪ್ರಕಾಶ್ ತಿಳಿಸಿದರು.

ನವಕರ್ನಾಟಕ ಪುಸ್ತಕ ಪ್ರಕಾಶನವು 60 ವಸಂತಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ಸಾಹಿತಿ–ಕಲಾವಿದರ ಬಳಗದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಅವರ 'ಯಾವ ಜನ್ಮದ ಮೈತ್ರಿ?' ಕೃತಿ ಕುರಿತಾದ ಸಂವಾದ ಕಾರ್ಯಕ್ರಮದಲ್ಲಿ ಮಂಗಳವಾರ ಮಾತನಾಡಿದರು.

'ಈ ಕೃತಿಯನ್ನು ಓದಿದಾಗ ನಮ್ರತೆಯ ಭಾವ ಮೂಡುತ್ತದೆ. ಇದು ಆತ್ಮಚರಿತ್ರೆಯ ವಿವಿಧ ಖಂಡಗಳಂತೆ ಭಾಸವಾಗುತ್ತದೆ. ಅಖಂಡ ಪ್ರಜ್ಞೆ ಮತ್ತು ಲೋಕ ಕಾರುಣ್ಯವೂ ಪುಸ್ತಕದಲ್ಲಿ ಅಡಕವಾಗಿದೆ. ಲೇಖಕರು ವಿಶೇಷವಲ್ಲದ ವಸ್ತುಗಳಲ್ಲೂ ವಿಶೇಷತೆ ಕಾಣುವ ಪ್ರಯತ್ನ ಮಾಡಿದ್ದಾರೆ' ಎಂದರು.



ಕಾರ್ಯಕ್ರಮದಲ್ಲಿ ಚಿರಂಜೀವಿ ಸಿಂಗ್ ಅವರನ್ನು ಗೌರವಿಸಲಾಯಿತು (ನಿಂತವರು;ಎಡದಿಂದ) ಅಜಯ್‌ಕುಮಾರ್ ಸಿಂಗ್, ಸಾಹಿತಿ ಹಂ.ಪ.ನಾಗರಾಜಯ್ಯ, ಎಚ್.ಎಸ್.ಶಿವಪ್ರಕಾಶ್, ನಿವೃತ್ತ ಐಎಎಸ್ ಅಧಿಕಾರಿ ಐ.ಎಂ.ವಿಠ್ಠಲಮೂರ್ತಿ, ಸುಗತ ಶ್ರೀನಿವಾಸರಾಜು ಹಾಗೂ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಜೆ.ಸದಾಶಿವ ಇದ್ದರು ಪ್ರಜಾವಾಣಿ ಚಿತ್ರ

ಪತ್ರಕರ್ತ ಸುಗತ ಶ್ರೀನಿವಾಸರಾಜು, 'ಚಿರಂಜೀವಿ ಅವರ ಬರವಣಿಗೆ ತೊರೆಯ ಅನುಭವ ನೀಡುತ್ತಿತ್ತು. ಅವರ ಮಾತುಗಳಲ್ಲಿನ ಮೃದುತ್ವ ಬರಹದಲ್ಲೂ ಕಾಣಸಿಗುತ್ತದೆ. ಚಿರಂಜೀವಿ ಅವರಿಗೆ ಎಲ್ಲವನ್ನೂ ಅಪ್ಪಿಕೊಳ್ಳುವ ಮನೋಭಾವವಿದೆ. ಇದು ಅವರ ಬರಹದ ಗುಣವೂ ಆಗಿದೆ. ಲೇಖಕರಿಗೆ ಯಾವುದೂ ಅಮುಖ್ಯವಲ್ಲ. ಎಲ್ಲವೂ ಮುಖ್ಯವೇ ಆಗಿದೆ. ಅವರ ವಿಚಾರಗಳಲ್ಲಿ ಸೌಂದರ್ಯ, ವಿಜ್ಞಾನ ಹಾಗೂ ಆಧ್ಯಾತ್ಮಿಕ ದೃಷ್ಟಿಕೋನವೂ ಅಡಕವಾಗಿದೆ' ಎಂದರು.

ನಿವೃತ್ತ ಪೊಲೀಸ್ ಮಹಾನಿರ್ದೇಶಕ ಅಜಯ್‌ಕುಮಾರ್ ಸಿಂಗ್, 'ಚಿರಂಜೀವಿ ಅವರು ಪಂಜಾಬ್ ರಾಜ್ಯದವರಾದರೂ ಕನ್ನಡವನ್ನು ಕಲಿತು ಕನ್ನಡಿಗರಿಗೇ ಮಾದರಿಯಾಗಿದ್ದಾರೆ. ನಿಷ್ಠುರ ಅಧಿಕಾರಿಯಾಗಿದ್ದ ಅವರು ಪ್ರಾಮಾಣಿಕ ಬದುಕು ಕಟ್ಟಿಕೊಂಡಿದ್ದಾರೆ. ಎಲ್ಲರೊಂದಿಗೆ ಆತ್ಮೀಯವಾಗಿ ಬೆರೆಯುವ ಅವರ ಗುಣ ತುಂಬಾ ಹಿಡಿಸುತ್ತದೆ' ಎಂದು ತಿಳಿಸಿದರು.



‘ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ’ಯನ್ನು ಭಟ್ರಹಳ್ಳಿ ಗೂಳಪ್ಪ, ಅಶ್ವತ್ಥರಾಮಯ್ಯ, ಕೆ.ಸಿ. ನಾಗರಾಜು, ಪ್ರೊ.ಎಸ್‌ಆರ್‌ ನಿರಂಜನ, ಜಂಬಯ್ಯ ನಾಯಕ, ಲಕ್ಷ್ಮಿ ಗಣಪತಿ ಸಿದ್ದಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು – ಪ್ರಜಾವಾಣಿ ಚಿತ್ರ



‘ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ’ಯನ್ನು ಗೌರಿ ಕೊರಗ, ಎಚ್‌. ತಿಪ್ಪೇಸ್ವಾಮಿ, ಡಾ.ಕೆ.ಆರ್‌. ಪಾಟೀಲ, ಬಿ.ಎಲ್‌. ವೇಣು, ಮಾರಪ್ಪ ನಾಯಕ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು – ಪ್ರಜಾವಾಣಿ ಚಿತ್ರ

ವಾಲ್ಮೀಕಿ ಸಮುದಾಯಕ್ಕೆ ಭರವಸೆ ಕೊಟ್ಟ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಮೀಸಲಾತಿ: ಕಾನೂನು ಚೌಕಟ್ಟಿನಲ್ಲಿ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿ ಹೆಚ್ಚಿಸಬೇಕೆಂಬ ವಾಲ್ಮೀಕಿ ಸಮುದಾಯದ ಬೇಡಿಕೆಯನ್ನು ಕಾನೂನು ಚೌಕಟ್ಟಿನಲ್ಲಿ ಈಡೇರಿಸಿ ನ್ಯಾಯ ಒದಗಿಸಲು ಪ್ರಯತ್ನಿಸುತ್ತೇನೆ. ಆದರೆ, ಇದು ಅಷ್ಟು ಸುಲಭ ಅಲ್ಲ, ಸವಾಲಿನ ಕೆಲಸ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸೌಧದ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ಬುಧವಾರ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ‘ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕು. ಇದನ್ನು ಶೇ 50ರ ಮೀಸಲಾತಿ ಮಿತಿಯ ಒಳಗೇ ಮಾಡಬೇಕಿದೆ. ಇದಕ್ಕೆ ಎಲ್ಲರ ಸಹಕಾರ ಅಗತ್ಯ. ವಾಲ್ಮೀಕಿ ಸಮುದಾಯದ ಶ್ರೀಗಳ ಆಶೀರ್ವಾದವೂ ಮುಖ್ಯ’ ಎಂದರು.

‘ಯಾವ ರೀತಿ ಮೀಸಲಾತಿ ಹೆಚ್ಚಿಸಬಹುದೆಂಬ ಬಗ್ಗೆ ಕಾನೂನು ತಜ್ಞರ ಸಮಿತಿ ರಚಿಸಲಾಗಿದೆ. ಸಾಮಾಜಿಕ ತಜ್ಞರ ಸಲಹೆ, ಸೂಚನೆಯನ್ನೂ ಪಡೆಯುತ್ತೇನೆ. ನಾಡಿನ ಹಿತ ಮತ್ತು ಜನಾಂಗದ ಹಿತ ಗಮನದಲ್ಲಿಟ್ಟು ತೀರ್ಮಾನ ತೆಗೆದುಕೊಳ್ಳಬೇಕಾಗಿದೆ’ ಎಂದರು.

‘ನಾನು ಮುಖ್ಯಮಂತ್ರಿ ಆಗುತ್ತಿದ್ದಂತೆ ಎಸ್‌ಟಿ ಸಮುದಾಯಕ್ಕೆ ಪ್ರತ್ಯೇಕ ಸಚಿವಾಲಯ ರಚಿಸಿದ್ದೇನೆ. ಇಲಾಖೆಗೆ ₹ 7,600 ಕೋಟಿ ಅನುದಾನ ನೀಡಲಾಗಿದೆ. ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಜಮೀನು ಕೊಡಬೇಕು ಎನ್ನುವುದು ನನ್ನ ಸರ್ಕಾರದ ಸಂಕಲ್ಪ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಿದ್ದೇನೆ. ಶಿಕ್ಷಣ, ಉದ್ಯೋಗ ಮತ್ತು ಸಬಲೀಕರಣ ಈ ಮೂರು ಸೂತ್ರಗಳಿಂದ ಸಮಾಜ ಕಲ್ಯಾಣ ಇಲಾಖೆಯನ್ನು ನಡೆಸಲು ತೀರ್ಮಾನಿಸಿದ್ದೇನೆ’ ಎಂದರು.

ಇದೇ ಸಂದರ್ಭದಲ್ಲಿ ಅವರು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸಾಮಾಜಿಕ ಮಾಧ್ಯಮಗಳಾದ ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಮ್, ಯೂಟ್ಯೂಬ್ ಚಾನೆಲ್‌ಗೆ ಚಾಲನೆ ನೀಡಿದರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ. ಶ್ರೀರಾಮುಲು ಮಾತನಾಡಿ, ‘ವಾಲ್ಮೀಕಿ ಸಮುದಾಯಕ್ಕೆ ಮೀಸಲಾತಿ ಹೆಚ್ಚಿಸುವ ಬಗ್ಗೆ ಮುಖ್ಯಮಂತ್ರಿ ಬೊಮ್ಮಾಯಿ ನಮ್ಮ ಹಿಂದಿದ್ದಾರೆ. ಅವರು ಹೆಚ್ಚಿಸುತ್ತಾರೆಂಬ ವಿಶ್ವಾಸವೂ ಇದೆ’ ಎಂದರು.

ದಾವಣಗೆರೆ ಜಿಲ್ಲೆಯ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್‌.ವಿ. ರಾಮಚಂದ್ರ, ವಿಧಾನ ಪರಿಷತ್ ಸದಸ್ಯ ಶಾಂತರಾಮ ಸಿದ್ದಿ ಇದ್ದರು.

ಕಾರ್ಯಕ್ರಮಕ್ಕೂ ಮೊದಲು ಶ್ರೀ ಮಹರ್ಷಿ ವಾಲ್ಮೀಕಿ ತಪೋವನದಲ್ಲಿರುವ (ಶಾಸಕರ ಭವನ ಮುಂಭಾಗ) ವಾಲ್ಮೀಕಿ ಪ್ರತಿಮೆಗೆ ಬೊಮ್ಮಾಯಿ ಮಾಲಾರ್ಪಣೆ ಮಾಡಿದರು.

ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪ್ರದಾನ

2020ರ ಸಾಲಿಗೆ ಐವರು ಮತ್ತು 2021ನೇ ಸಾಲಿಗೆ ಆರು ಸಾಧಕರಿಗೆ ‘ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ’ಯನ್ನು ಮುಖ್ಯಮಂತ್ರಿ ಪ್ರದಾನ ಮಾಡಿದರು. ಡಾ.ಕೆ.ಆರ್. ಪಾಟೀಲ, (ಸಾಮಾಜಿಕ ಸೇವೆ), ಬಿ.ಎಲ್. ವೇಣು (ಸಾಹಿತ್ಯ), ಗೌರಿ ಕೊರಗ (ಸಮಾಜ ಸೇವೆ), ಮಾರಪ್ಪ ನಾಯಕ (ಸಂಘಟನೆ), ಎಚ್. ತಿಪ್ಪೇಸ್ವಾಮಿ (ಸಮಾಜ ಸೇವೆ), ಕೆ.ಸಿ. ನಾಗರಾಜು (ಸಮಾಜ ಸೇವೆ), ಲಕ್ಷ್ಮಿ ಗಣಪತಿ ಸಿದ್ದಿ (ಸಮಾಜ ಸೇವೆ), ಪ್ರೊ.ಎಸ್.ಆರ್. ನಿರಂಜನ (ಶಿಕ್ಷಣ ಕ್ಷೇತ್ರ), ಭಟ್ರಹಳ್ಳಿ ಗೂಳಪ್ಪ (ಸಮಾಜ ಸೇವೆ), ಅಶ್ವತ್ಥರಾಮಯ್ಯ (ಸಮಾಜ ಸೇವೆ), ಜಂಬಯ್ಯ ನಾಯಕ (ಸಮಾಜ ಸೇವೆ) ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸುದ್ದಿ 2 ನಿಮಿಷ

ನ. 2ರಿಂದ 7ರವರೆಗೆ ಸಾಣೇಹಳ್ಳಿ ನಾಟಕೋತ್ಸವ ಬೆಳ್ಳಿಹಬ್ಬ

ಸಾಣೇಹಳ್ಳಿ(ಹೊಸದುರ್ಗ): ತಾಲ್ಲೂಕಿನ ಸಾಣೇಹಳ್ಳಿ ತರಳಬಾಳು ಶಾಖಾ ಮಠದಿಂದ ಈ ಬಾರಿ ಶಿವಸಂಚಾರ ನಾಟಕೋತ್ಸವ ಬೆಳ್ಳಿಹಬ್ಬ ಕಾರ್ಯಕ್ರಮ ನ. 2ರಿಂದ 7ರವರೆಗೆ ನಡೆಯಲಿದೆ ಎಂದು ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸ್ವಾಮೀಜಿ, ‘ನ. 2ರಂದು ಸಂಜೆ 6 ಗಂಟೆಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸಿಜಿಕೆ ನುಡಿ–ಚಿತ್ರ ಟಂಕಸಾಲೆ (ಡಿಜಿಟಲ್ ಎವಿ ರೆಕಾರ್ಡಿಂಗ್ ಸ್ಟುಡಿಯೊ) ಉದ್ಘಾಟಿಸುವರು. ಬೆಂಗಳೂರಿನ ರಾಷ್ಟ್ರೀಯ ರಂಗಶಾಲೆ ನಿರ್ದೇಶಕಿ ವೀಣಾ ಶರ್ಮಾ ಭೂಸನೂರಮಠ ಅವರು ಶಿವಸಂಚಾರ ನಾಟಕಗಳನ್ನು ಉದ್ಘಾಟಿಸುವರು. ಕವಿ ಡಾ.ದೊಡ್ಡರಂಗೇಗೌಡ ಕನ್ನಡ ರಾಜ್ಯೋತ್ಸವ ಉದ್ಘಾಟಿಸುವರು. ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ನಾಟಕೋತ್ಸವ ಉದ್ಘಾಟಿಸುವರು. ನ. 7ರಂದು ನಡೆಯುವ ಶಿವಕುಮಾರ ಪ್ರಶಸ್ತಿ ಪ್ರದಾನ ಹಾಗೂ ನಾಟಕೋತ್ಸವ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಭಾಗವಹಿಸಲಿದ್ದಾರೆ’ ಎಂದು ತಿಳಿಸಿದರು.

‘ಶಿವಸಂಚಾರ ನಾಟಕೋತ್ಸವ ಆರಂಭವಾಗಿ 25 ವರ್ಷ ತುಂಬುತ್ತಿದೆ. 12ನೇ ಶತಮಾನದಲ್ಲಿ ಅನುಭವ ಮಂಟಪದಲ್ಲಿ ಇದ್ದ ಸಾಹಿತ್ಯ ವರ್ಗ ವಿವಿಧ ವರ್ಗದ ಕಾಯಕ ಜೀವಿಗಳಾಗಿದ್ದರು. ಅವರಲ್ಲಿ ಒಕ್ಕಲಿಗ ಮುದ್ದಣ್ಣ ಬದುಕಿನ ಪೂರ್ಣ ಕೃಷಿ ಕಾಯಕ ಇಟ್ಟುಕೊಂಡಿದ್ದರು. ನಮ್ಮದು ಕೃಷಿ ಪ್ರಧಾನ ರಾಷ್ಟ್ರ. ಕೃಷಿಕರು ಇಂದು ತಮ್ಮ ಉಳಿವಿಗಾಗಿ ಹೋರಾಟ ನಡೆಸುತ್ತಿರುವುದು ಕಾಣುತ್ತಿದ್ದೇವೆ. ಅವರ ಹಿತ ಕಾಪಾಡುವ ಪ್ರಾಮಾಣಿಕ ಪ್ರಯತ್ನ ಆಗುತ್ತಿಲ್ಲ. ಕೃಷಿಕ ಒಕ್ಕಲುತನ ಬಿಟ್ಟರೆ ಜಗತ್ತಿಗೆ ಆಹಾರ ಧಾನ್ಯವೇ ಇಲ್ಲದಂತಾಗುತ್ತದೆ. ಹೀಗಾಗಿ ಅನ್ನದಾತರನ್ನು ಎಲ್ಲರೂ ಗೌರವಿಸಬೇಕು ಎಂಬ ಉದ್ದೇಶದಿಂದ ಈ ಬಾರಿ ‘ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು’ ಎಂಬ ಧ್ಯೇಯ ವಾಕ್ಯದಡಿ ನಾಟಕೋತ್ಸವ ನಡೆಸಲಾಗುತ್ತಿದೆ’ ಎಂದು ಸ್ವಾಮೀಜಿ ತಿಳಿಸಿದರು.



ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಒಂಬತ್ತು ಐಪಿಎಸ್ ಅಧಿಕಾರಿಗಳನ್ನು ಸರ್ಕಾರ ವರ್ಗಾವಣೆ ಮಾಡಿದೆ.

ವಿನಾಯಕ್ ವಸಂತರಾವ್ ಪಾಟೀಲ– ಡಿಸಿಪಿ, ಬೆಂಗಳೂರು ಉತ್ತರ ವಿಭಾಗ, ಪ್ರಕಾಶ್ ಅಮೃತ್ ನಿಕ್ಕಂ– ಎಸ್ಪಿ, ನಕ್ಸಲ್ ನಿಗ್ರಹ ಪಡೆ, ಉಡುಪಿ, ಇಳಕ್ಕಿಯ ಕರುಣಾಕರನ್– ಪ್ರಾಂಶುಪಾಲರು, ಪೊಲೀಸ್ ತರಬೇತಿ ಶಾಲೆ, ಥಣಿಸಂದ್ರ, ಬೆಂಗಳೂರು, ಧರ್ಮೇಂದ್ರ ಕುಮಾರ್ ಮೀನಾ– ಎಸ್ಪಿ, ನಿರ್ದೇಶಕ, ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು, ಸವಿತಾ.ಎಸ್– ಡಿಸಿಪಿ ಸಂಚಾರ (ಉತ್ತರ ವಿಭಾಗ), ಬೆಂಗಳೂರು.

ಎಂ.ಅಶ್ವಿನಿ– ಎಐಜಿಪಿ (ಕೇಂದ್ರ ಕಚೇರಿ), ಮುಖ್ಯಸ್ಥರ ಕಚೇರಿ, ಬೆಂಗಳೂರು, ಸುಮನ್ ಡಿ.ಪೆನ್ನೇಕರ್–ಎಸ್ಪಿ, ಮಂಡ್ಯ ಜಿಲ್ಲೆ, ನಿಖಿಲ್.ಬಿ– ಎಸ್ಪಿ, ರಾಯಚೂರು ಜಿಲ್ಲೆ, ದೀಪನ್ ಎಂ.ಎನ್– ಸಹಾಯಕ ಪೊಲೀಸ್ ಕಮಿಷನರ್, ಕಲಬುರಗಿ ಬಿ.ವಿಭಾಗ, ಕಲಬುರಗಿ ನಗರ.

ದಾಳಿಗೊಳಗಾಗಿದ್ದ ಕೋಳಿ ಮಾಂಸದಂಗಡಿ ಮಾಲೀಕನಿಗೆ ದ್ವಿಚಕ್ರವಾಹನ ಡಿಕ್ಕಿ, ಗಾಯ

ಒಂದನೇ ಪುಟದಿಂದ...

ಅವರು ನಗರದಿಂದ ಪತ್ನಿಯೊಂದಿಗೆ ಯಮನಾಪುರ ಕಡೆಗೆ ಹೋಗುವಾಗ ಶ್ರೀನಗರ ಉದ್ಯಾನದ ಬಳಿ ಈ ಘಟನೆ ನಡೆದಿದೆ. ‘ದ್ವಿಚಕ್ರವಾಹನದಲ್ಲಿ ವೇಗವಾಗಿ ಬಂದ ಇಬ್ಬರು ಡಿಕ್ಕಿ ಹೊಡೆದರು. ಇದರಿಂದ ನಾವಿಬ್ಬರೂ ಬಿದ್ದೆವು. ಪತಿಯ ಎಡಗಾಲು ಮತ್ತಿತರ ಕಡೆಗಳಲ್ಲಿ ಗಾಯವಾಗಿದೆ. ನನಗೆ ಸಣ್ಣಪುಟ್ಟ ಗಾಯವಾಗಿದೆ. ಡಿಕ್ಕಿ ಮಾಡಿದವರು ನಮ್ಮ ಕಡೆಗೆ ತಿರುಗಿಯೂ ನೋಡದೆ, ಸಹಾಯಕ್ಕೂ ಬಾರದೆ (ಹಿಟ್ ಅಂಡ್ ರನ್) ಹೋದರು. ಇದೊಂದು ಪೂರ್ವಯೋಜಿತ ಕೃತ್ಯದಂತೆ ಎನಿಸುತ್ತಿದೆ’ ಎಂದು ಹಸನ್ ಪತ್ನಿ ಅಫ್ಸಾನಾ ಆರೋಪಿಸಿದ್ದಾರೆ.

‘ಸ್ಥಳದಲ್ಲಿದ್ದ ಕೆಲವರ ಸಹಾಯದಿಂದ ನಾವು ಆಸ್ಪತ್ರೆಗೆ ಹೋದೆವು’ ಎಂದು ತಿಳಿಸಿದ್ದಾರೆ.

ಮತೀಯ ಗೂಂಡಾಗಿರಿ: ಉತ್ತರಿಸದೆ ನಡೆದ ಮುಖ್ಯಮಂತ್ರಿ

ಒಂದನೇ ಪುಟದಿಂದ...

‘ಹಾನಗಲ್‌ನಲ್ಲಿ ಮೂರು ದಿನ ಪ್ರಚಾರ ಮಾಡುತ್ತೇನೆ. ಅ.23ಕ್ಕೆ ಜಿಲ್ಲೆಯ ಚನ್ನಮ್ಮನ ಕಿತ್ತೂರಿನಲ್ಲಿ ನಡೆಯುವ ಕಿತ್ತೂರು ಉತ್ಸವದಲ್ಲಿ ಭಾಗಿಯಾಗಲು ಬರುತ್ತೇನೆ’ ಎಂದರು.

‘ಮುಂಬೈ ಕರ್ನಾಟಕವನ್ನು ಕಿತ್ತೂರು ಕರ್ನಾಟಕ ಎಂದು ಮರುನಾಮಕರಣ ಮಾಡುವ ಬಗ್ಗೆ ಸಚಿವ ಸಂಪುಟದಲ್ಲಿ ನಿರ್ಣಯ ಆಗಬೇಕಾಗುತ್ತದೆ. ಆ ಬಗ್ಗೆ ನೋಡೋಣ’ ಎಂದು ಪ್ರತಿಕ್ರಿಯಿಸಿದರು.

ಬೆಳಗಾವಿಯಲ್ಲಿ ಕರ್ನಾಟಕ ರಾಜ್ಯೋತ್ಸವದಂದು ಅದ್ಧೂರಿ ಮೆರವಣಿಗೆಗೆ ಅವಕಾಶ ನೀಡುವಂತೆ ಕನ್ನಡ ಪರ ಸಂಘಟನೆಗಳು ಆಗ್ರಹಿಸಿರುವ ಕುರಿತು ಪ್ರತಿಕ್ರಿಯಿಸಿದ ಅವರು, ‘ಕೋವಿಡ್ ಹಿನ್ನೆಲೆಯಲ್ಲಿ ತಜ್ಞರ ಜೊತೆಗೆ ಚರ್ಚಿಸಿ ತೀರ್ಮಾನ ಮಾಡಲಾಗುವುದು. ರಾಜ್ಯೋತ್ಸವದಂದು ಮೆರವಣಿಗೆಗಳಿಗೆ ಅವಕಾಶ ಕೊಡುವ ಬಗ್ಗೆ ಇನ್ನೂ ನಿರ್ಧರಿಸಿಲ್ಲ’ ಎಂದರು.

ಕನ್ನಡ ಮನಸ್ಸುಗಳ ಪ್ರತಿಷ್ಠಾನ, ‘ಜನಧ್ವನಿ ಫೌಂಡೇಷನ್’ ಪ್ರಯತ್ನ

ಹಳ್ಳಿ ಕನ್ನಡ ಶಾಲೆಗೆ ಕಾಯಕಲ್ಪ

• ಎಚ್.ಎಸ್.ಸಚ್ಚಿತ್

ಹುಣಸೂರು: ಶತಮಾನ ಕಂಡಿರುವ ರಾಜ್ಯದ ‘ಕನ್ನಡ ಶಾಲೆ’ಗಳ ಕಾಯಕಲ್ಪಕ್ಕೆ ಮುಂದಾಗಿರುವ ಬೆಂಗಳೂರಿನ ‘ಕನ್ನಡ ಮನಸ್ಸುಗಳ ಪ್ರತಿಷ್ಠಾನ’ದ ಸದಸ್ಯರು ಅದಕ್ಕಾಗಿ ತಮ್ಮ ಗಳಿಕೆಯ ಶೇ 25ರಷ್ಟು ಪಾಲನ್ನು ಮೀಸಲಿಟ್ಟಿದ್ದಾರೆ. ಮೈಸೂರು ಜಿಲ್ಲೆಯ ಶಾಲೆಗಳ ಅಭಿವೃದ್ಧಿಗಾಗಿ ಹುಣಸೂರಿನ ‘ಜನಧ್ವನಿ ಫೌಂಡೇಷನ್’ ಕೈಜೋಡಿಸಿದೆ.

ಈಗಾಗಲೇ ಕಾಸರಗೋಡು ಮಂಜೇಶ್ವರ ಕಡಂಬಾರು ಪ್ರೌಢಶಾಲೆ, ತುಮಕೂರು ಜಿಲ್ಲೆಯ ಕುಣಿಗಲ್‌ನ ಜೆಕೆಬಿಎಂಎಸ್ ಶಾಲೆ, ಮಂಡ್ಯ ಜಿಲ್ಲೆಯ ಲಾಳನಕೆರೆ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಕೋಲ್ಚಾರು ಶಾಲೆ, ಮದ್ದೂರು ತಾಲ್ಲೂಕಿನ ಹೊನ್ನಲಗೆರೆ, ಕಡಿಲುವಾಗಿಲು ಶಾಲೆ, ಹಾಸನ ಜಿಲ್ಲೆಯ ಅರಕಲಗೂಡು ಬೆಳವಾಡಿ ಶಾಲೆ, ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಬ್ಯಾಕೋಡು ಮತ್ತು ಕೊಡನವಳ್ಳಿ ಶಾಲೆಗಳನ್ನು ಪ್ರತಿಷ್ಠಾನ ಅಭಿವೃದ್ಧಿಪಡಿಸಿದೆ.

ಶಿವಮೊಗ್ಗದ ಪವನ್ ಹೆಗಡೆ ಅವರು ‘ಕನ್ನಡ ಮನಸ್ಸುಗಳ ಪ್ರತಿಷ್ಠಾನ’ವನ್ನು 2015ರಲ್ಲಿ ಸ್ಥಾಪಿಸಿದ್ದರು. ಅವರೊಂದಿಗೆ ವೈದ್ಯರು, ವಕೀಲರು, ಐ.ಟಿ, ಬಿ.ಟಿ, ಸಿವಿಲ್ ಎಂಜಿನಿಯರ್ ಹಾಗೂ ವಿದ್ಯಾರ್ಥಿಗಳು ಕೈಜೋಡಿಸಿದ್ದಾರೆ. ಸದ್ಯ 100ಕ್ಕೂ ಹೆಚ್ಚು ಸದಸ್ಯರಿದ್ದಾರೆ. ಗಡಿ ಭಾಗದಲ್ಲಿ ಕನ್ನಡ ಬಾವುಟ ಹಾರಿಸಲಷ್ಟೇ ಸೀಮಿತವಾಗಿದ್ದ ಕನ್ನಡ ಸೇವೆಯು 2017ರಿಂದ ಶಾಲೆಗಳ ಜೀರ್ಣೋದ್ಧಾರದ ಕಡೆಗೂ ಗಮನ ಹರಿಸಿದೆ. ಸದಸ್ಯರು ವಾರಾಂತ್ಯದಲ್ಲಿ, ಶಿಥಿಲಗೊಂಡ ಶಾಲೆಗಳಿಗೆ ತೆರಳಿ ಅಭಿವೃದ್ಧಿಪಡಿಸುತ್ತಾರೆ.

ಕಲಿಕೆಗೆ ಪೂರಕವಾಗುವ ಚಿತ್ರಗಳನ್ನು ಶಾಲೆ ಗೋಡೆಗಳ ಮೇಲೆ ರಚಿಸಲು ಚಿತ್ರಕಲಾವಿದರಾದ ಯಲ್ಲಪ್ಪ ಕುಂಬಾರ್, ಚಿನ್ಮಯ್, ನವೀನ್ ಸಿಂಗ್, ಹನುಮಂತ್, ಅಭಿಗೌಡ, ಅರ್ಪಿತ ಸೇನ್, ಹರೀಶ್ ಅರಸು, ರವಿಕುಮಾರ್ ಜೊತೆಯಾಗಿದ್ದಾರೆ.



ಹುಣಸೂರು ತಾಲ್ಲೂಕಿನ ಹೊಸೂರು ಕೊಡಗು ಕಾಲೊನಿಯ ಸರ್ಕಾರಿ ಶಾಲೆಯ ಗೋಡೆ ಮೇಲೆ ಹುಣಸೂರು ಕೃಷ್ಣಮೂರ್ತಿಯವರ ಚಿತ್ರ ಬಿಡಿಸಿದ ಕಲಾವಿದ ಯಲ್ಲಪ್ಪ ಕುಂಬಾರ್

ಮುಖ್ಯಾಂಶಗಳು

- ರಾಜ್ಯದ ಪ್ರತಿ ಜಿಲ್ಲೆಯ ಎರಡು ಶಾಲೆಗೆ ಆದ್ಯತೆ
- 2017ರಿಂದ ಸರ್ಕಾರಿ ಶಾಲೆಗಳ ಜೀರ್ಣೋದ್ಧಾರ
- ದುಡಿಮೆಯ ಶೇ 25ರಷ್ಟು ಪಾಲು ಸೇವಾ ಕಾರ್ಯಕ್ಕೆ ಮೀಸಲು

‘ಜನಧ್ವನಿ ಫೌಂಡೇಷನ್’ ಸಹಯೋಗದಲ್ಲಿ ಹುಣಸೂರು ತಾಲ್ಲೂಕಿನ ಗಡಿ ಗ್ರಾಮ ಹೊಸೂರು ಕೊಡಗು ಕಾಲೊನಿಯಲ್ಲಿ ಶಿಥಿಲ ಪ್ರಾಥಮಿಕ ಶಾಲೆ ಕಟ್ಟಡ, ಕಾಂಪೌಂಡ್ ದುರಸ್ತಿಪಡಿಸಲಾಗಿದೆ. ಕಟ್ಟಡಕ್ಕೆ ಬಣ್ಣ ಬಳಿದು, ಗೀತ ರಚನೆಕಾರ ಹುಣಸೂರು ಕೃಷ್ಣಮೂರ್ತಿ ಸೇರಿದಂತೆ ತಾಲ್ಲೂಕಿನ ಸಾಧಕರ ಚಿತ್ರಗಳನ್ನು ರಚಿಸಲಾಗಿದೆ.

‘ಸರ್ಕಾರಿ ಶಾಲೆಯಲ್ಲಿ ಓದಿ ಬದುಕು ಕಟ್ಟಿಕೊಂಡ ನಾವು, ನಮ್ಮ ಶಾಲೆಗೆ ಏನನ್ನಾದರೂ ಕೊಡುಗೆ ನೀಡಬೇಕು ಎಂಬ ಉದ್ದೇಶದಿಂದ ಅಳಿಲುಸೇವೆ ಸಲ್ಲಿಸುತ್ತಿದ್ದೇವೆ. ಶತಮಾನ ಕಂಡ ಶಾಲೆಗಳನ್ನು ಆದ್ಯತೆ ಮೇರೆಗೆ ಅಭಿವೃದ್ಧಿಪಡಿಸುತ್ತಿದ್ದೇವೆ’ ಎಂದು ಪ್ರತಿಷ್ಠಾನದ ರವಿಕಿರಣ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸರ್ಕಾರಿ ಶಾಲೆಗಳನ್ನು ಪುನಶ್ಚೇತನಗೊಳಿಸಿ ಕಲಿಕೆಗೆ ಪೂರಕ ವಾತಾವರಣ ಸೃಷ್ಟಿಸುವುದು ಉದ್ದೇಶ’ ಎಂದು ಫೌಂಡೇಷನ್ ಅಧ್ಯಕ್ಷ ಪ್ರವೀಣ್, ಕಾರ್ಯದರ್ಶಿ ಭಾಸ್ಕರ್ ಕಲ್ಕುಣಿಕೆ ಹೇಳಿದರು.

58 ಶಾಲೆ ದುರಸ್ತಿಗೆ ಪ್ರಸ್ತಾವ

‘ಮಳೆ ಹಾನಿ ಯೋಜನೆಯಡಿ ತಾಲ್ಲೂಕಿನ 58 ಶಾಲೆಗಳ ದುರಸ್ತಿಗಾಗಿ ಶಿಕ್ಷಣ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಬ್ಲ್ಯಾಕ್ ಬೋರ್ಡ್ ಯೋಜನೆಯಡಿ ನಿರ್ಮಾಣಗೊಂಡ 103 ಶಾಲೆಗಳು ಶಿಥಿಲಗೊಂಡಿವೆ. ಆ ಪಟ್ಟಿಯನ್ನು ಇಲಾಖೆಗೆ ಸಲ್ಲಿಸಲಾಗಿದೆ. ಖಾಸಗಿ ಸಂಸ್ಥೆಗಳು ಶಾಲೆ ಉಳಿಸುವ ಪ್ರಯತ್ನಕ್ಕೆ ಕೈ ಜೋಡಿಸಿವೆ’ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ನಾಗರಾಜ್ ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಜಾವಾಣಿ ವಿಶೇಷ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	120.05	8,097	6,720
ಹಾರಂಗಿ	2,859	2,858.13	888	1,200
ಕಬಿನಿ	2,284	2,281.4	3,000	2,000
ಹೇಮಾವತಿ	2,922	2,910.75	2,247	4,331
ಲಿಂಗನಮಕ್ಕಿ	1,819	1,815.25	2971	-
ಸೂಪಾ (ಮೀ)	564	556.70	646	5,534
ಮಾಣಿ	594.36	587.20	231	-
ತುಂಗಭದ್ರಾ	1,633	1,632.91	7,768	11,476
ಮಲಪ್ರಭಾ	2,079.50	2,079.50	694	694
ಘಟಪ್ರಭಾ	2,175	2,175	906	906
ಭದ್ರಾ	186	186	4,474	4,474
ಆಲಮಟ್ಟಿ (ಮೀ)	519.60	519.60	11,256	11,256
ನಾರಾಯಣಪುರ (ಮೀ)	492.25	492.21	9,300	9,200

* ನೆಲಮಟ್ಟದಿಂದ

ಉತ್ತರಾಖಂಡ ಪ್ರವಾಹದಲ್ಲಿ ಸಿಲುಕಿದ ಸಿಂದಗಿಯ ವೈದ್ಯೆ

ಸಿಂದಗಿ: ಉತ್ತರಾಖಂಡ ಭೀಕರ ಪ್ರವಾಹದಲ್ಲಿ ಪಟ್ಟಣದ ವಿಶ್ರಾಂತ ಪ್ರಾಚಾರ್ಯ ಎಸ್.ಬಿ.ಪಂಪಣ್ಣವರ ಅವರು ಪುತ್ರಿ ಡಾ.ಅನಿತಾ ಪಂಪಣ್ಣವರ ಸಿಲುಕಿದ್ದಾರೆ.

ಅವರು ಉತ್ತರಾಖಂಡ ಪಿತೋಘರ ಆರ್ಮಿ ಆಸ್ಪತ್ರೆಯಲ್ಲಿ ಕಳೆದ ಐದು ವರ್ಷದಿಂದ ಸೇವೆ ಸಲ್ಲಿಸುತ್ತಿದ್ದಾರೆ. ರಜೆಯ ಹಿನ್ನೆಲೆಯಲ್ಲಿ ತಮ್ಮೂರು ಸಿಂದಗಿಗೆ ಬರುವ ಸಂದರ್ಭದಲ್ಲಿ ಹಲದವಾಣಿ ಹತ್ತಿರ ಎರಡು ಕಡೆ ಗುಡ್ಡ ಕುಸಿದ ಹಿನ್ನೆಲೆಯಲ್ಲಿ ಅವರು ಮೂರು ದಿನಗಳಿಂದ ಅಲ್ಲಿಯೇ ಪರದಾಡುತ್ತಿದ್ದಾರೆ ಎಂದು ಅವರ ತಂದೆ ತಿಳಿಸಿದ್ದಾರೆ.



ಅನಿತಾ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕೋವಿಡ್: 29.84 ಲಕ್ಷಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರ 462 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದ್ದು, ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.84 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 1.16 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ಮೈಸೂರಿನಲ್ಲಿ 43 ಹಾಗೂ ದಕ್ಷಿಣ ಕನ್ನಡದಲ್ಲಿ 29 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ ಏರಿಕೆ ಕಂಡಿದ್ದು, 253 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ.

ತಳವಾರರಿಗೆ ಎಸ್‌ಟಿ ಪ್ರಮಾಣಪತ್ರ: ಸಿಎಂ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರದ ಆದೇಶದಂತೆ ತಳವಾರ ಸಮುದಾಯಕ್ಕೆ ಪರಿಶಿಷ್ಟ ಪಂಗಡ(ಎಸ್‌ಟಿ) ಜಾತಿ ಪ್ರಮಾಣಪತ್ರ ನೀಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ.

ತಳವಾರ ಸಮಾಜದ ಅಧ್ಯಕ್ಷ ಶಾಣಪ್ಪ ಪೀರಪ್ಪ ಕಣಮೇಶ್ವರ್ ನೇತೃತ್ವದ ನಿಯೋಗ ಮುಖ್ಯಮಂತ್ರಿ ಅವರನ್ನು ಬುಧವಾರ ಭೇಟಿ ಮಾಡಿತು.

ಸಿಂದಗಿ ಚುನಾವಣಾ ಪ್ರಚಾರಕ್ಕೆ ಇತ್ತೀಚೆಗೆ ಮುಖ್ಯಮಂತ್ರಿ ತೆರಳಿದ್ದ ಸಂದರ್ಭದಲ್ಲಿ ಭೇಟಿ ಮಾಡಿದ್ದ ಸಮುದಾಯದ ಮುಖಂಡರು, ಕೇಂದ್ರ ಸರ್ಕಾರದ ಆದೇಶದಂತೆ ಎಸ್.ಟಿ ಪ್ರಮಾಣಪತ್ರ ನೀಡಲು ಒತ್ತಾಯಿಸಿದ್ದರು. ಸೂಕ್ತ ದಾಖಲಾತಿಯೊಂದಿಗೆ ಬೆಂಗಳೂರಿಗೆ ಬಂದು ಭೇಟಿ ಮಾಡುವಂತೆ ಮುಖ್ಯಮಂತ್ರಿ ತಿಳಿಸಿದ್ದರು.

ಮುಖ್ಯಮಂತ್ರಿ ಭೇಟಿಯ ಬಳಿಕ ಮಾತನಾಡಿದ ಶಾಣಪ್ಪ ಪೀರಪ್ಪ ಕಣಮೇಶ್ವರ್, ‘ನಮ್ಮ ಸಮುದಾಯವನ್ನು ಎಸ್.ಟಿ ಪಟ್ಟಿಗೆ ಸೇರಿಸಬೇಕೆಂದು ಕೇಂದ್ರ ಸರ್ಕಾರದ ಗೆಜೆಟ್‌ನಲ್ಲಿದೆ. ಆದರೆ, ರಾಜ್ಯ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿದೆ’ ಎಂದರು.

‘ಮುಖ್ಯಮಂತ್ರಿ ತಿಳಿಸಿದಂತೆ ದಾಖಲಾತಿಗಳ ಜೊತೆ ಭೇಟಿ ಮಾಡಿದ್ದೇವೆ. ಎಸ್.ಟಿ ಪ್ರಮಾಣಪತ್ರ ನೀಡುವ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಉಪ ಚುನಾವಣೆಯಲ್ಲಿ ತಳವಾರ ಸಮುದಾಯ ಬಿಜೆಪಿಗೆ ಬೆಂಬಲ ನೀಡಲಿದೆ’ ಎಂದರು.

ಸಮುದಾಯದ ಯುವ ಮುಖಂಡ ಅಮರೇಶ್ ಕಾಮನಕೆರೆ ಮಾತನಾಡಿ, ‘ನಮ್ಮ ಬಹುದಿನಗಳ ಬೇಡಿಕೆ ಈಡೇರಿಸುವವರ ಪರ ನಾವು ನಿಲ್ಲಲಿದ್ದೇವೆ. ಬೇಡಿಕೆಯನ್ನು ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ ಮುಂಬೈ– ಕಲ್ಯಾಣ ಕರ್ನಾಟಕದಲ್ಲಿರುವ ಸಮುದಾಯದ 22 ಲಕ್ಷಕ್ಕೂ ಹೆಚ್ಚು ಜನರು ಬಿಜೆಪಿಗೆ ತಕ್ಕ ಪಾಠ ಕಲಿಸಲಿದ್ದಾರೆ’ ಎಂದರು.

ನಿಯೋಗದಲ್ಲಿ ತಮ್ಮಣ್ಣ ಸುಣಗಾರ, ಷಣ್ಮುಖಪ್ಪ ಸೋಮನಾಯಕ, ಈರಣ್ಣ ಕುರಿ, ಯಲ್ಲುಬಾಳುಡಗಿ, ಶ್ರೀಶೈಲಗುಯ್ಯಾರ, ಶಿವಾಜಿ ಮಟಗರ, ಬಸವರಾಜ ತಾವರಖೇಡಾ ಇದ್ದರು.

ಶೌಚಾಲಯದ ಗುಂಡಿಯಲ್ಲಿ ಶಿಶುವಿನ ಮೃತ ದೇಹ ಪತ್ತೆ

ಹೊಳೆಹೊನ್ನೂರು: ಸಮೀಪದ ಆಗರದಳ್ಳಿ ಗ್ರಾಮದ ಸಿದ್ದರ ಕಾಲೊನಿಯ ನಿವಾಸಿ ಮಹಾದೇವ ಅವರ ಮನೆಯ ಹಿಂಭಾಗದ ಶೌಚಾಲಯ ಗುಂಡಿಯಲ್ಲಿ ಬುಧವಾರ ನವಜಾತ ಶಿಶುವಿನ ಮೃತದೇಹ ಪತ್ತೆಯಾಗಿದೆ.

ಮಹಾದೇವ ಅವರು ಹೊಸದಾಗಿ ಶೌಚಾಲಯ ಗುಂಡಿಯನ್ನು ತೆಗೆಸಿದ್ದರು. ಈಚೆಗೆ ಸುರಿದ ಭಾರಿ ಮಳೆಯಿಂದ ಗುಂಡಿ ತುಂಬಿತ್ತು. ಮಹಾದೇವ ಅವರು ಬೆಳಿಗ್ಗೆ ಗಮನಿಸಿದಾಗ, 2 ದಿನಗಳ ಹಿಂದೆ ಜನಿಸಿದ ಗಂಡು ಮಗುವಿನ ಮೃತದೇಹ ಗುಂಡಿಯಲ್ಲಿ ಪತ್ತೆಯಾಗಿದೆ. ತಕ್ಷಣ ಅವರು ಹೊಳೆಹೊನ್ನೂರು ಪೊಲೀಸರಿಗೆ ಮಾಹಿತಿ ನೀಡಿದರು.

ಜೀವ ಬೆದರಿಕೆ ಆರೋಪ; ಕಣ್ಣೀರಿಟ್ಟ ದೈಹಿಕ ಶಿಕ್ಷಣ ಶಿಕ್ಷಕ

ಹುಬ್ಬಳ್ಳಿ: ‘ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ವಿರುದ್ಧ ಚುನಾವಣಾ ಪ್ರಚಾರ ಮಾಡುತ್ತೀಯಾ? ಎಂದು ಮೂವರು ನನಗೆ ಜೀವ ಬೆದರಿಕೆ ಒಡ್ಡಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಇಲ್ಲಿನ ವಿಜಯನಗರದ ಬಾಲಕಿಯರ ಪ್ರೌಢಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಆರ್. ಎಚ್. ಪಾಟೀಲ ಆಗ್ರಹಿಸಿದ್ದಾರೆ.

ಕರ್ನಾಟಕ ರಾಜ್ಯ ಶಿಕ್ಷಣಸಂಸ್ಥೆಗಳ ನೌಕರರ ಸಂಘದ ಕೋಶಾಧ್ಯಕ್ಷರೂ ಆದ ಪಾಟೀಲ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ‘ಅ. 16ರಂದು ಜೆಡಿಎಸ್ ಮುಖಂಡ ಗಜಾನನ ಅಣ್ವೇಕರ ಹಾಗೂ ಇನ್ನಿಬ್ಬರು ಹಿಂಬಾಲಿಸಿಕೊಂಡು ಮನೆಗೆ ಬಂದು ಅವಾಚ್ಯ ಪದಗಳಿಂದ ನಿಂದನೆ ಮಾಡಿದ್ದಾರೆ. ಮೊಬೈಲ್ ಕಸಿದು, ಹೊರಟ್ಟಿ ಅವರ ವಿರುದ್ಧ ಸಂಘ ಕಟ್ಟಿ ಕೆಲಸ ಮಾಡುತ್ತಿದ್ದೀಯಾ, ನಿನ್ನನ್ನು ಜೀವ ಸಹಿತ ಬಿಡುವುದಿಲ್ಲವೆಂದು ಬೆದರಿಕೆ ಒಡ್ಡಿದ್ದಾರೆ’ ಎಂದು ಆರೋಪಿಸಿದರು. ಪತ್ರಿಕಾಗೋಷ್ಠಿಯಲ್ಲಿ ಅವರು ಕಣ್ಣೀರು ಸುರಿಸಿದರು. ಈ ಕುರಿತು ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಹೊರಟ್ಟಿ ಅವರು, ‘ಶಿಕ್ಷಕನ ಆರೋಪಕ್ಕೂ, ನನಗೂ ಯಾವುದೇ ಸಂಬಂಧವಿಲ್ಲ. ಎಫ್‌ಐಆರ್ ದಾಖಲಾಗಿದ್ದು, ಪೊಲೀಸರು ಕಾನೂನು ರೀತಿಯಲ್ಲಿ ಕ್ರಮಕೈಗೊಳ್ಳುವರು’ ಎಂದರು.

ಡಿಸಿಪಿಗೆ ನಿಂದನೆ: ಎಫ್‌ಐಆರ್ ದಾಖಲು

ಹುಬ್ಬಳ್ಳಿ: ಕ್ರೈಸ್ತ ಧರ್ಮಕ್ಕೆ ಮತಾಂತರಕ್ಕೆ ಪ್ರಚೋದಿಸಿದ ವ್ಯಕ್ತಿಯನ್ನು ಬಂಧಿಸುವಂತೆ ಆಗ್ರಹಿಸಿ ಹಿಂದೂಪರ ಸಂಘಟನೆಯವರು ನವನಗರ ಪೊಲೀಸ್ ಠಾಣೆ ಎದುರು ಪ್ರತಿಭಟಿಸುವಾಗ ವ್ಯಕ್ತಿಯೊಬ್ಬರು ಡಿಸಿಪಿಯನ್ನು ಬಹಿರಂಗವಾಗಿ ಅವಾಚ್ಯ ಪದಗಳಿಂದ ನಿಂದಿಸಿದ ಘಟನೆಗೆ ಸಂಬಂಧಿಸಿದಂತೆ ನಗರದ ಅಶೋಕ ಅಣ್ವೇಕರ ಹಾಗೂ ಇತರ 100 ಜನರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಡಿಸಿಪಿ (ಕಾನೂನು ಮತ್ತು ಸುವ್ಯವಸ್ಥೆ) ಕೆ. ರಾಮರಾಜನ್ ದೂರು ದಾಖಲಿಸಿದ್ದಾರೆ.

‘ಅಶೋಕ ಅಣ್ವೇಕರ ಜೊತೆಗಿದ್ದ ಬಜರಂಗದಳ ಹಾಗೂ ಇತರ ಹಿಂದೂಪರ ಸಂಘಟನೆಯ 100 ಜನ ಕಾರ್ಯಕರ್ತರು ಪೊಲೀಸ್ ಇಲಾಖೆಯಿಂದ ಅನುಮತಿ ಪಡೆಯದೆ ಅ. 17ರಂದು ನವನಗರ ಪೊಲೀಸ್ ಠಾಣೆಯ ಮುಂದೆ ಏಕಾಏಕಿ ಪ್ರತಿಭಟಿಸಿ, ಗುಂಪು ಕಟ್ಟಿಕೊಂಡು ಠಾಣೆಗೆ ನುಗ್ಗಿ ಸರ್ಕಾರಿ ಕರ್ತವ್ಯ ನಿಭಾಯಿಸಲು ಪೊಲೀಸರಿಗೆ ಅಡ್ಡಿಯುಂಟು ಮಾಡಿದ್ದಾರೆ. ಸಮಾಜದ ಕೋಮು ಸಾಮರಸ್ಯಕ್ಕೆ ಧಕ್ಕೆಯಾಗುವ ರೀತಿಯಲ್ಲಿ ಮತ್ತು ಶಾಂತಿಗೆ ಭಂಗವಾಗುವಂತೆ ಪ್ರಚೋದನಾಕಾರಿಯಾಗಿ ಮಾತನಾಡಿದ್ದಾರೆ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ಒಬ್ಬ ಡಿಸಿಪಿಯಿಂದಾಗಿ ಪೊಲೀಸ್ ಇಲಾಖೆ ಮರ್ಯಾದೆ ಹರಾಜು ಆಗಿದೆ. ನೀನು ಯಾವ ಧರ್ಮಕ್ಕೆ ಹೋಗಿದ್ದೀಯಾ?, ಆ ಧರ್ಮದ ಯಾವ ವ್ಯಕ್ತಿಯನ್ನು ಆದರ್ಶವಾಗಿ ಇಟ್ಟುಕೊಂಡು ಹೋಗಿದ್ದೀಯಾ? ಆ ವ್ಯಕ್ತಿಯ ಮೈತುಂಬಾ ಮೊಳೆ ಹೊಡೆದಿದ್ದನ್ನು ನೀನು ನೋಡಿದ್ದೀಯಾ?’ ಎಂದು ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗುವಂತೆ ಪ್ರಚೋದನಕಾರಿಯಾಗಿ ಮಾತನಾಡಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ರಾಮರಾಜನ್ ದೂರಿನಲ್ಲಿ ತಿಳಿಸಿದ್ದಾರೆ. ಈ ಕುರಿತ ವಿಡಿಯೊ ಸಾಮಾಜಿಕ ತಾಣದಲ್ಲಿ ವೈರಲ್ ಆಗಿತ್ತು.

ಮಿತಿಮೀರಿದ ಕಳೆನಾಶಕ ಕಾರಣ: ಅಧಿಕಾರಿಗಳ ಹೇಳಿಕೆ

ಅಡಿಕೆಗೆ ಕಾಂಡ ರಸ ಸೋರುವ ರೋಗ

• ಕೆ.ಎಸ್.ವೀರೇಶ್ ಪ್ರಸಾದ್

ಸಂತೇಬೆನ್ನೂರು (ಚನ್ನಗಿರಿ ತಾ.): ಚನ್ನಗಿರಿ ತಾಲ್ಲೂಕಿನ ಹಲವೆಡೆ ಅಡಿಕೆಗೆ ವಿಚಿತ್ರ ರೋಗ ಕಂಡುಬಂದಿದ್ದು, ಇದೊಂದು ಕಾಂಡ ರಸ ಸೋರುವ ರೋಗ ಎಂದು ತೋಟಗಾರಿಕಾ ಇಲಾಖೆಯ ಅಧಿಕಾರಿಗಳು ಸಂಶಯ ವ್ಯಕ್ತಪಡಿಸಿದ್ದಾರೆ.

ಸಮೀಪದ ಭೀಮನೆರೆ ಗ್ರಾಮದ ರಂಗನಾಥ್ ಅವರ ಅಡಿಕೆ ತೋಟದಲ್ಲಿ ಮರದ ತುದಿಯ ಎಲೆಗಳು ಒಣಗುತ್ತಿವೆ. ಅಡಿಕೆ ಕುಂಚದಲ್ಲಿ ಕಾಯಿಗಳು ಉದುರುತ್ತಿವೆ. ಬುಡದ ಕಾಂಡದಲ್ಲಿ ಅಂಟಿನಂತಹ ಬಿಳಿ ದ್ರವ ಒಸರುತ್ತಿದೆ. ಚಿಕ್ಕ ಚಿಕ್ಕ ರಂಧ್ರಗಳ ಮೂಲಕ ರಸ ಜಿನುಗುತ್ತಿರುವ ಭಾಗದಲ್ಲಿ ಮುಟ್ಟಿದರೆ ಮೆತ್ತಗಾದ ಅನುಭವವಾಗುತ್ತಿದೆ. ಗಡಸುತನ ಕಳೆದುಕೊಳ್ಳುವ ಭೀತಿ



ಅಡಿಕೆ ಮರದ ಬುಡದ ಕಾಂಡದಲ್ಲಿ ಬಿಳಿ ರಸ ಒಸರುತ್ತಿರುವುದು

ಪ್ರಜಾವಾಣಿ ವಿಶೇಷ

ಉಂಟಾಗಿದೆ.

‘ಫಸಲಿಗೆ ಬಂದ ನಾಲ್ಕೈದು ಮರಗಳಲ್ಲಿ ಈ ಲಕ್ಷಣ ಕಂಡುಬಂದಿದೆ. ಪಕ್ಕದ ಮರಗಳಿಗೂ ಹಬ್ಬುವ ಲಕ್ಷಣಗಳು ಕಾಣುತ್ತಿವೆ. 1,400 ಅಡಿಕೆ ಗಿಡಗಳು ಇದ್ದು, ಸಮಸ್ಯೆಯಾಗಿದೆ. ಈಗಾಗಲೇ ಗೇಣಿಗೆ ನೀಡಲಾಗಿದ್ದು, ಅಡಿಕೆ ಕೊಯ್ಲು ನಡೆಯುತ್ತಿದೆ. ತೋಟದಲ್ಲಿ ಏಕಾಏಕಿ ವಿಚಿತ್ರ ರೋಗದ ಲಕ್ಷಣ ಕಾಣಿಸಿಕೊಂಡಿರುವುದು ಭಯ ಉಂಟುಮಾಡಿದೆ’ ಎಂದು ರೈತ ರಂಗನಾಥ್ ತಿಳಿಸಿದ್ದಾರೆ.



ಆರಂಭದಲ್ಲಿ ಕಾಂಡ ರಸ ಸೋರುವ ರೋಗದಂತೆ ಕಂಡುಬಂದರೂ ಮುಂದೆ ಇದು ಅಣಬೆ ರೋಗಕ್ಕೆ ತಿರುಗಬಹುದು. ಈ ರೋಗವನ್ನು ನಿಯಂತ್ರಿಸಬಹುದು.

ರೋಹಿತ್, ಹಿರಿಯ ತೋಟಗಾರಿಕಾ ಅಧಿಕಾರಿ, ಚನ್ನಗಿರಿ

‘ಕಾಂಡ ರಸ ಸೋರುವ ರೋಗ ಮಿತಿಮೀರಿದ ಕಳೆನಾಶಕ ಹಾಗೂ ರಾಸಾಯನಿಕ ಬಳಕೆಯಿಂದ ಬರುತ್ತದೆ. ಮಣ್ಣಿನಲ್ಲಿನ ಉಪಯುಕ್ತ ಬ್ಯಾಕ್ಟೀರಿಯಾ ನಾಶಗೊಳ್ಳುವುದರಿಂದ ರೋಗ ಉಲ್ಬಣಿಸುತ್ತದೆ. ಕಪ್ಪು ಮಣ್ಣಿನಲ್ಲಿ ಹೆಚ್ಚಾಗಿ ಕಂಡುಬರುವುದರಿಂದ ಮಣ್ಣಿನ ನಿರ್ವಹಣೆ ಮೂಲಕ ರೋಗ ನಿವಾರಿಸಬಹುದು’ ಎಂದು ಚನ್ನಗಿರಿಯ ಹಿರಿಯ ತೋಟಗಾರಿಕಾ ಅಧಿಕಾರಿ ರೋಹಿತ್ ಸಲಹೆ ನೀಡಿದರು. ಈ ರೋಗಕ್ಕೆ 2 ಎಂ.ಎಲ್ ಎಕ್ಸಾಕೊನೊಜೋಲ್ ಅನ್ನು ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿ ಒಂದು ಗಿಡದ ಬುಡಕ್ಕೆ 5 ಲೀಟರ್ ಹಾಕಬೇಕು. ಟ್ರೈಕೊಡರ್ಮಾ, ಸುಡೊಮಾನಸ್, ವ್ಯಾಮ್ ಇತ್ಯಾದಿ ಜೈವಿಕ ರೋಗ ನಿಯಂತ್ರಕಗಳನ್ನು ಬಳಸಬೇಕು.

ಸರಣಿ ಟ್ವೀಟ್ ಮಾಡಿ ಪ್ರಶ್ನಿಸಿರುವ ಜೆಡಿಎಸ್ ರಾಜ್ಯ ಘಟಕ; ಬಿಜೆಪಿಯಿಂದಲೂ ತಿರುಗೇಟು

ಆರೆಸ್ಸೆಸ್ ಕೆಲಸ ಸೇವೆಯೋ ಹಣ ಮಾಡುವುದೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರೆಸ್ಸೆಸ್ ಅಧಿಕೃತ ಸಂಸ್ಥೆಯೇ? ಅದು ಎಲ್ಲಿ? ಯಾವಾಗ ನೋಂದಣಿ ಆಗಿದೆ? ಅದರ ಅಧಿಕೃತ ಕಚೇರಿ ಎಲ್ಲಿದೆ? ಅದರ ಕೆಲಸ ಸಮಾಜ ಸೇವೆಯೋ ಅಥವಾ ರಾಜಕೀಯವೋ? ಅಥವಾ ಹಣ ಮಾಡುವುದೋ' ಎಂದು ಜೆಡಿಎಸ್ ರಾಜ್ಯ ಘಟಕ ಪ್ರಶ್ನಿಸಿದೆ.

ಸರಣಿ ಟ್ವೀಟ್ ಮಾಡಿರುವ ಜೆಡಿಎಸ್, 'ಗುರುದಕ್ಷಿಣೆ ಸೇರಿದಂತೆ ದೇಶ-ವಿದೇಶಗಳಿಂದ ಕೋಟ್ಯಂತರ ರೂಪಾಯಿ ದೇಣಿಗೆ ಬರುತ್ತಿದೆ. ಅದರ ಲೆಕ್ಕವನ್ನು ಸಂಘ ಲೆಕ್ಕ ಕೊಟ್ಟಿದೆಯಾ? ಅದರ ವಹಿವಾಟನ್ನು ಪರಿಶೀಲನೆ ಮಾಡಿದ ಲೆಕ್ಕ ಪರಿಶೋಧಕರು ಯಾರು? ಶಾಲೆಗಳಲ್ಲಿ ಬಾಲ ಸ್ವಯಂ ಸೇವಕರ ಬ್ರೈನ್ ವಾಶ್ ಮಾಡುತ್ತಿರುವುದು ಸುಳ್ಳೇ' ಎಂದೂ ಕೇಳಿದೆ.

'ಶಿಕ್ಷಣ ಕೊಡುವ ನೆಪದಲ್ಲಿ ಮತಾಂಧತೆಯ ವಿಷಪ್ರಾಶನ ಮಾಡುತ್ತಿರುವುದು ಸುಳ್ಳಾ? ಸಂಘದ ಶಾಖೆಗಳಲ್ಲಿ ತ್ರಿಶೂಲ, ಖಡ್ಗದಂಥ ಆಯುಧಗಳನ್ನು ಇಡುವುದು ಅಕ್ರಮ. ಇದಕ್ಕೆ ಪರವಾನಗಿ ಪಡೆಯಲಾಗಿದೆಯಾ? ಎಂಬ ಪ್ರಶ್ನೆಗಳನ್ನು ಪಕ್ಷದ ನಾಯಕರಾದ ಕುಮಾರಸ್ವಾಮಿ ಕೇಳಿದ್ದರು. ಈ ಪ್ರಶ್ನೆಗಳಿಗೆ ಉತ್ತರ ಕೊಡುವ ಎದೆಗಾರಿಕೆಯನ್ನು ಬಿಜೆಪಿ ಏಕೆ ತೋರಲಿಲ್ಲ' ಎಂದೂ ಪ್ರಶ್ನಿಸಿದೆ.

'ಆರೆಸ್ಸೆಸ್ ಬಗ್ಗೆ ಕುಮಾರಸ್ವಾಮಿ ಎತ್ತಿರುವುದು ವೈಯಕ್ತಿಕ ವಿಷಯಗಳಲ್ಲ. ಆದರೆ, ಬಿಜೆಪಿ ಅವರ ವೈಯಕ್ತಿಕ ವಿಚಾರಗಳಲ್ಲಿ ಮೂಗು ತೂರಿಸಿದೆ. ಸದನದಲ್ಲಿಯೇ ತಮ್ಮ ಖಾಸಗಿ ಬದುಕಿನ ಬಗ್ಗೆ ಮಾತನಾಡುವ ಎದೆಗಾರಿಕೆ ತೋರಿದ ಕುಮಾರಸ್ವಾಮಿ ಅವರೆಲ್ಲಿ? ಅದೇ ಸದನದಲ್ಲಿ ನೀಚ ಕೃತ್ಯ ಎಸಗಿದ ಬಿಜೆಪಿ ನಾಯಕರು ಎಲ್ಲಿ?' ಎಂದು ಜೆಡಿಎಸ್ ಕೇಳಿದೆ.

'ಬಿಎಸ್‌ವೈ ಕೆಳಗಿಳಿಸಿದ್ದೇ ವಿಶ್ವಾಸದ್ರೋಹ'


ಟಿ.ಎ.ಶರವಣ

'ಬಿಜೆಪಿ ಕಟ್ಟಿ ಬೆಳೆಸಿದ ಯಡಿಯೂರಪ್ಪ ಅವರನ್ನು ಅವಮಾನ ಮಾಡಿದ್ದಲ್ಲದೇ, ಅವರಿಂದ ಹೀನಾಯವಾಗಿ ರಾಜೀನಾಮೆ ಪಡೆದಿದ್ದು ಅವರ ಪಕ್ಷದ ನಾಯಕರು ಮಾಡಿದ ದೊಡ್ಡ ವಿಶ್ವಾಸದ್ರೋಹ' ಎಂದು ಜೆಡಿಎಸ್ ಮುಖಂಡ ಟಿ.ಎ. ಶರವಣ ಟೀಕಿಸಿದ್ದಾರೆ.

ಬಿಜೆಪಿಯ ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಅವರು, 'ವಿಶ್ವಾಸ ದ್ರೋಹದ ಬಗ್ಗೆ ಮಾತನಾಡುವ ಯೋಗ್ಯತೆಯೇ ನಿಮಗಿಲ್ಲ. ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತದ ಬಗ್ಗೆ ಬಿಜೆಪಿ ಮಾತನಾಡುವುದೇ ಹಾಸ್ಯಾಸ್ಪದ. ಭ್ರಷ್ಟಾಚಾರದ ಕಾರಣಕ್ಕೆ ಆ ಪಕ್ಷದ ನಾಯಕರೇ ಜೈಲು ಸೇರಿದ್ದಾರೆ. ಮಾಜಿ ಮುಖ್ಯಮಂತ್ರಿಯವರ ಆಪ್ತ ಸಿಬ್ಬಂದಿ, ಅವರ ನಿಕಟವರ್ತಿ ಗುತ್ತಿಗೆದಾರರ ಮೇಲೆಯೇ ಆದಾಯ ತೆರಿಗೆ ದಾಳಿ ನಡೆದಿದೆ. ಗಾಜಿನ ಮನೆಯಲ್ಲಿ ಕುಳಿತು ಕಲ್ಲು ಹೊಡೆಯುತ್ತಿರುವುದು ಸರಿಯಲ್ಲ' ಎಂದು ಅವರು ಹೇಳಿದ್ದಾರೆ.

'ಆರೆಸ್ಸೆಸ್ ಬಗ್ಗೆ ಹಗುರ ಮಾತು ಶೋಭೆಯಲ್ಲ'


ಸೋಮಶೇಖರ ರೆಡ್ಡಿ

ಬಳ್ಳಾರಿ: 'ಆರ್‌ಎಸ್‌ಎಸ್ ಬಗ್ಗೆ ಹಗುರವಾಗಿ ಮಾತನಾಡುತ್ತಿರುವ ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ಮತಿಭ್ರಮಣೆಯಾಗಿದೆ' ಎಂದು ಬಳ್ಳಾರಿ ನಗರ ಶಾಸಕ ಸೋಮಶೇಖರ ರೆಡ್ಡಿ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದೇಶಪ್ರೇಮ, ದೇಶಭಕ್ತಿಯ ಪ್ರತೀಕವಾಗಿರುವ ಆರ್‌ಎಸ್‌ಎಸ್ ವಿಪತ್ತು ಸಂದರ್ಭದಲ್ಲಿ ಎನ್‌ಡಿಆರ್‌ಎಫ್ ಮಾದರಿಯಲ್ಲಿ ಕೆಲಸಮಾಡುತ್ತದೆ. ಅಂಥ ಸಂಘಟನೆ ಬಗ್ಗೆ ಇಲ್ಲಸಲ್ಲದ ಆರೋಪ ಮಾಡುವುದು ಅವರಿಗೆ ಶೋಭೆತರುವುದಿಲ್ಲ' ಎಂದರು.

'ದೇಶಸೇವೆಯಲ್ಲಿ ತೊಡಗಿರುವ ಸಂಘದ ಬಗ್ಗೆ ಮಾತನಾಡುವ ಮುನ್ನ ಅದರ ಬಗ್ಗೆ ಪರಿಪೂರ್ಣ ಮಾಹಿತಿ ಪಡೆದುಕೊಳ್ಳಬೇಕು. ಉಪ ಚುನಾವಣೆಯಲ್ಲಿ ಮತಗಳಿಕೆಗಾಗಿ ಬೇಕಾಬಿಟ್ಟಿ ಮಾತನಾಡುವುದು ತರವಲ್ಲ' ಎಂದರು.

'ಜಿಲ್ಲೆ ವಿಭಜನೆಗೆ ಕಾರಣರಾದ ಆನಂದ್ ಸಿಂಗ್ ಜಿಲ್ಲಾ ಉಸ್ತುವಾರಿ ಸಚಿವರಾಗಿ ಮುಂದುವರಿಯುವುದು ಬೇಡ ಎಂಬ ನನ್ನ ಹೇಳಿಕೆಯಲ್ಲಿ ಬದಲಾವಣೆ ಇಲ್ಲ. ಬಿ.ಎಸ್. ಯಡಿಯೂರಪ್ಪ ಅವರಿಗೂ ಹೇಳಿದ್ದೆವು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೂ ಹೇಳಿದ್ದೇವೆ. ಉಪ ಚುನಾವಣೆಯ ನಂತರ ಜಿಲ್ಲಾ ಉಸ್ತುವಾರಿ ಸಚಿವರನ್ನು ಬದಲಿಸಿ ಶ್ರೀರಾಮುಲು ಅವರನ್ನು ನೇಮಿಸುವ ನಿರೀಕ್ಷೆ ಇದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೃಷಿ ಸಚಿವ ಬಿ.ಸಿ.ಪಾಟೀಲ ಹೇಳಿಕೆ

'ಜೆಡಿಎಸ್‌ನವರು ಗೆಲ್ಲುವುದಕ್ಕಾಗಿ ಅಭ್ಯರ್ಥಿಯನ್ನು ಹಾಕಿದ್ದಾರೆ. ಜನರನ್ನು ತಪ್ಪು ದಾರಿಗೆ ಎಳೆಯುವ ಕೆಲಸವನ್ನು ಸಿದ್ದರಾಮಯ್ಯ ಮಾಡುತ್ತಿದ್ದಾರೆ'

ಡಿಕೆಶಿಗೆ ಸಿ.ಎಂ. ಉದಾಸಿ ವಿಲ್ ಬರೆದುಕೊಟ್ಟಿದ್ದಾರಾ?

ಹಾವೇರಿ: 'ಮಂತ್ರಿ ಸ್ಥಾನ ಸಿಗದ ಕಾರಣಕ್ಕೆ ಕೊನೆಯುಸಿರೆಳೆದ' ಎಂದು ಸಿ.ಎಂ. ಉದಾಸಿ ಅವರು ಡಿ.ಕೆ. ಶಿವಕುಮಾರ್ ಅವರಿಗೆ ಏನಾದರೂ ವಿಲ್ ಬರೆದುಕೊಟ್ಟಿದ್ದಾರಾ?. ಕಾಂಗ್ರೆಸ್‌ನವರಿಗೆ ಸೋಲಿನ ಭಯ ಕಾಡುತ್ತಿರುವುದರಿಂದ ಇಂಥ ಅಪ್ರಬುದ್ಧ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ತಿರುಗೇಟು ನೀಡಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, 'ಜೆಡಿಎಸ್‌ನವರು ಮತ ತೆಗೆದುಕೊಂಡರೆ ಕಾಂಗ್ರೆಸ್ ಸೋಲುತ್ತದೆ ಎನ್ನುತ್ತಾರೆ ಸಿದ್ದರಾಮಯ್ಯ. ಈ ರೀತಿ ಮಾತನಾಡೋಕೆ ಇವರು ಯಾರು? ಎಂದು ಪ್ರಶ್ನಿಸಿದರು.



ಪೊಲೀಸರು ಶಾಲು ಧರಿಸಿದ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, 'ಕಾಂಗ್ರೆಸ್‌ನವರಿಗೆ ಕೇಸರಿ ಕಂಡರೆ ಯಾಕೆ ಅಷ್ಟು ಭಯವೋ ಗೊತ್ತಿಲ್ಲ. ರಾಷ್ಟ್ರಧ್ವಜದಲ್ಲೂ ಕೇಸರಿ ಬಣ್ಣವಿದೆ. ಮುಸ್ಲಿಂ ಕಾನ್‌ಸ್ಟೆಬಲ್ ನಮಾಜು ಮಾಡಲು ಹೋಗಬೇಕು ಎಂದರೆ ಅವರ ಡ್ರೆಸ್‌ಕೋಡ್‌ನಲ್ಲೇ ಹೋಗುತ್ತಾರೆ. ಸಿ.ಎಂ ಆದರೆ ಮುಸ್ಲಿಮರಿಗೆ ಇಷ್ಟು ಕೋಟಿ ಕೊಡ್ತೀವಿ ಎನ್ನುವ ಸಿದ್ದರಾಮಯ್ಯನವರೇ ಹಿಂದೂಗಳಿಗೆ ಎಷ್ಟು ದುಡ್ಡು ಕೊಡ್ತೀರಿ ಹೇಳಿ' ಎಂದು ಸವಾಲು ಹಾಕಿದರು.

ನಳಿನ್ ಕುಮಾರ್ ಕಟೀಲ್ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗೋಕೆ ಯೋಗ್ಯರಲ್ಲ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿ, ಯೋಗ್ಯತೆ ಇರದಿದ್ದರೆ ಕಟೀಲ್ ಅಧ್ಯಕ್ಷರಾಗ್ತಿರಲಿಲ್ಲ. ಕಾಂಗ್ರೆಸ್‌ಗೆ ರಾಷ್ಟ್ರೀಯ ಅಧ್ಯಕ್ಷರನ್ನು ಆಯ್ಕೆ ಮಾಡುವ ಶಕ್ತಿ ಇಲ್ಲ. ಸ್ವಂತ ಮಗನಿಗೆ ಅಧಿಕಾರ ಬಿಟ್ಟು ಕೊಡಲು ತಾಯಿ ಸಿದ್ಧರಿಲ್ಲ ಎಂದು ಕುಟುಕಿದರು.

ಸಿದ್ದರಾಮಯ್ಯ ವಿರುದ್ಧ ದೂರು


ಸಿದ್ದರಾಮಯ್ಯ

ಹಾವೇರಿ: 'ಸಿ.ಎಂ. ಉದಾಸಿ ವಿರುದ್ಧ ನಿರಾಧಾರ ಆರೋಪ ಮಾಡಿರುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ನೀತಿಸಂಹಿತೆ ಉಲ್ಲಂಘಿಸಿದ್ದು ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು' ಎಂದು ಬಿಜೆಪಿ ಕಾನೂನು ಪ್ರಕೋಷ್ಠದ ರಾಜ್ಯ ಸಂಚಾಲಕ ಎಸ್.ಎಸ್. ಮಿಟ್ಟಲಕೊಡ ಅವರು ಹಾನಗಲ್ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿಗೆ ಬುಧವಾರ ದೂರು ಸಲ್ಲಿಸಿದ್ದಾರೆ.

'ಅ.16ರಂದು ಹಾನಗಲ್ ತಾಲ್ಲೂಕಿನ ಮಲಗುಂದ ಗ್ರಾಮದಲ್ಲಿ ನಡೆದ ಕಾಂಗ್ರೆಸ್ ಚುನಾವಣಾ ವೇದಿಕೆಯ ಮೇಲೆ ಸಿದ್ದರಾಮಯ್ಯ ಅವರು ಮಾತನಾಡುತ್ತಾ, ಸಿ.ಎಂ. ಉದಾಸಿ ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಸಂಗೂರ ಸಕ್ಕರೆ ಕಾರ್ಖಾನೆಯಲ್ಲಿ ಭ್ರಷ್ಟಾಚಾರ ಮಾಡಿದ್ದಾರೆ ಎಂದು ಆರೋಪ ಮಾಡಿ ಮತದಾರರನ್ನು ತಪ್ಪು ದಾರಿಗೆ ಎಳೆದಿದ್ದಾರೆ. ಅಗಲಿದ ನಾಯಕನಿಗೆ ಅಗೌರವ ತಂದಿದ್ದಾರೆ. ವಕೀಲರೂ ಆಗಿರುವ ಸಿದ್ದರಾಮಯ್ಯ ಅವರಿಗೆ ನೀತಿಸಂಹಿತೆಯ ಅರಿವು ಇದ್ದರೂ ಉದ್ದೇಶಪೂರ್ವಕವಾಗಿ ಸುಳ್ಳು ಆರೋಪ ಮಾಡಿದ್ದಾರೆ' ಎಂದು ದೂರಿನಲ್ಲಿ ತಿಳಿಸಲಾಗಿದೆ.

'ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಭ್ರಷ್ಟಾಚಾರದ ಬಗ್ಗೆ ಮಾತನಾಡದೆ, ತನಿಖೆಯನ್ನೂ ಮಾಡದೆ ಕೇವಲ ಚುನಾವಣಾ ಲಾಭಕ್ಕಾಗಿ ಹಾಗೂ ಬಿಜೆಪಿ ಅಭ್ಯರ್ಥಿಗೆ ಮುಜುಗರ ಉಂಟು ಮಾಡುವ ಉದ್ದೇಶದಿಂದ ಈ ರೀತಿಯ ಹೇಳಿಕೆ ನೀಡುತ್ತಿದ್ದಾರೆ' ಎಂದು ದೂರಲಾಗಿದೆ.

ನಳಿನ್ ಕುಮಾರ್ ಕಟೀಲ್ ಕರೆದು ಮಾತನಾಡುವೆ: ಬಿ.ಎಸ್. ಯಡಿಯೂರಪ್ಪ

'ರಾಹುಲ್ ಗಾಂಧಿ ಡ್ರಗ್ಸ್ ಪೆಡ್ಲರ್ ಹೇಳಿಕೆ ಸರಿಯಲ್ಲ'

ಪ್ರಜಾವಾಣಿ ವಾರ್ತೆ


ವಿಜಯಪುರ: 'ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಮುಖಂಡ ರಾಹುಲ್ ಗಾಂಧಿ ಡ್ರಗ್ ಪೆಡ್ಲರ್ ಎಂದಿರುವುದು ಸರಿಯಲ್ಲ. ಈ ಸಂಬಂಧ ನಳಿನ್ ಕುಮಾರ್ ಕಟೀಲ್ ಅವರನ್ನು ಕರೆದು ಹಾಗೆಲ್ಲ ಮಾತನಾಡದಂತೆ ಅವರಿಗೆ ಸೂಚಿಸುತ್ತೇನೆ. ಇಂಥ ಅಚಾತುರ್ಯ ನಡೆಯದಂತೆ ಎಚ್ಚರ ವಹಿಸಲು ತಿಳಿಸುತ್ತೇನೆ' ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಸಿಂದಗಿ ತಾಲ್ಲೂಕಿನ ಮೊರಟಗಿಯಲ್ಲಿ ಬುಧವಾರ ಬಿಜೆಪಿ ಅಭ್ಯರ್ಥಿ ರಮೇಶ್ ಭೂಸನೂರ ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಳ್ಳುವ ಮೊದಲು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಯಾರೂ ಯಾರ ಬಗ್ಗೆಯೂ ಈ ರೀತಿ ಅಗೌರವದಿಂದ ಮಾತನಾಡಬಾರದು ಎಂದರು.

'ಬಿಜೆಪಿ ಮುಖಂಡರಿಗೆ ಯಾರ ಬಗ್ಗೆಯೂ ಹಗುರವಾಗಿ ಮಾತನಾಡುವ ಅಭ್ಯಾಸ ಇಲ್ಲ. ಬಿಜೆಪಿ, ಆರ್‌ಎಸ್‌ಎಸ್ ಹಾಗೂ ಪ್ರಧಾನಿ ಮೋದಿ ಅವರು ಇನ್ನೊಬ್ಬರ ಬಗ್ಗೆ ಅಗೌರವವಾಗಿ ಮಾತನಾಡುವುದನ್ನು ನಮಗೆ ಕಲಿಸಿಲ್ಲ' ಎಂದರು.

ಸಿಂದಗಿ, ಹಾನಗಲ್‌ನಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲುವುದು ಶತಸಿದ್ಧ. ನಿಶ್ಚಿತವಾಗಿ ದೊಡ್ಡ ಅಂತರದಲ್ಲಿ ಗೆಲ್ಲಲಿದ್ದೇವೆ. ಉಪ ಚುನಾವಣಾ ಫಲಿತಾಂಶದಿಂದ ರಾಜ್ಯ ರಾಜಕೀಯದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಬದಲಿಗೆ ಬಸವರಾಜ ಬೊಮ್ಮಾಯಿ ಸರ್ಕಾರಕ್ಕೆ ದೊಡ್ಡ ಶಕ್ತಿ ಸಿಗಲಿದೆ ಎಂದರು.

'ಸಿದ್ದರಾಮಯ್ಯ ಅವರು ಅರಿವಿಲ್ಲದೇ ಪ್ರಧಾನಿ ಅವರ ಬಗ್ಗೆ ಮಾತನಾಡುತ್ತಾರೆ. ಇದು ಅವರಿಗೆ ಶೋಭೆ ತರುವುದಿಲ್ಲ. ಗೌರವವಾಗಿ ನಡೆದುಕೊಳ್ಳದಂತೆ ಆಗ್ರಹಿಸುತ್ತೇನೆ' ಎಂದರು.


ಸಿಂದಗಿ ತಾಲ್ಲೂಕಿನ ಮೊರಟಗಿಯಲ್ಲಿ ಬುಧವಾರ ನಡೆದ ಬಿಜೆಪಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಾತನಾಡಿದರು. ಬಿಜೆಪಿ ಅಭ್ಯರ್ಥಿ ರಮೇಶ್ ಭೂಸನೂರ, ಮುಖಂಡರಾದ ಎಸ್.ಕೆ. ಬೆಳ್ಳುಬ್ಬಿ, ಸಚಿವ ಎಂ.ಟಿ.ಬಿ. ನಾಗರಾಜ್ ಇದ್ದಾರೆ —ಪ್ರಜಾವಾಣಿ ಚಿತ್ರ

'ಒಬ್ಬರನ್ನೊಬ್ಬರು ಬೈದಾಡಿಕೊಳ್ಳುತ್ತಿರುವುದು ಸರಿಯಲ್ಲ'


ಬಸವರಾಜ ಹೊರಟ್ಟಿ

ಹುಬ್ಬಳ್ಳಿ: 'ಚುನಾವಣೆಯಲ್ಲಾಗಲಿ, ಯಾವುದೇ ಸಂದರ್ಭದಲ್ಲಾಗಲಿ ರಾಜಕಾರಣಿ ಇನ್ನೊಬ್ಬ ರಾಜಕಾರಣಿಯನ್ನು ವೈಯಕ್ತಿಕವಾಗಿ ನಿಂದಿಸುವ ಕೆಲಸ ಮಾಡಬಾರದು. ಒಬ್ಬರನ್ನೊಬ್ಬರು ಬೈದಾಡಿಕೊಳ್ಳುತ್ತಿರುವುದು ಸರಿಯಲ್ಲ' ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಡ್ರಗ್ಸ್ ಪೆಡ್ಲರ್' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ನೀಡಿದ ಹೇಳಿಕೆಗೆ ಬುಧವಾರ ಪ್ರತಿಕ್ರಿಯಿಸಿದ ಅವರು, 'ನನ್ನ ರಾಜಕೀಯ ಜೀವನದಲ್ಲಿ ಹಲವು ಸರ್ಕಾರ, ಹಲವು ರಾಜಕಾರಣಿಗಳನ್ನು ನೋಡಿರುವೆ. ಇಂದಿನ ರಾಜಕಾರಣಿಗಳ ನಡೆ ನೋವುಂಟು ಮಾಡಿದೆ. ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯ ಇರಲಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಇರಲಿ ಅಥವಾ ಯಾವುದೇ ಪಕ್ಷದ ರಾಜಕಾರಣಿಗಳಿರಲಿ ಕೀಳುಮಟ್ಟದ ಹೇಳಿಕೆ ನೀಡಬಾರದು' ಎಂದು ಅಭಿಪ್ರಾಯಪಟ್ಟರು.

'ಆತ್ಮಸಾಕ್ಷಿಯಾಗಿ ರಾಜಕಾರಣ ಮಾಡಬೇಕು. ನಾವು ಸಮಾಜ ಸುಧಾರಕರು, ಯಾವ ರಾಜಕಾರಣಿಯೂ ಸಮಾಜದ ಸ್ವಾಸ್ಥ್ಯ ಹಾಳುಗೆಡವಬಾರದು. ಸಮಾಜಕ್ಕೆ ಮಾದರಿ ಕೆಲಸ ಮಾಡಬೇಕು' ಎಂದು ಸಲಹೆ ನೀಡಿದರು.

'ಸಿದ್ದರಾಮಯ್ಯಗೆ ಶೋಭೆಯಲ್ಲ'

ಧಾರವಾಡ: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ವಿರುದ್ಧ ಸಿದ್ದರಾಮಯ್ಯ ಅವರು ಹಗುರವಾಗಿ ಮಾತನಾಡುವುದು ಅವರಿಗೆ ಶೋಭೆ ತರುವುದಿಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಹೇಳಿದರು.

ಬುಧವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಟೀಲ್ ಅವರು ರಾಹುಲ್ ಗಾಂಧಿ ಅವರ ಬಗ್ಗೆ ಯಾವ ದೃಷ್ಟಿಕೋನದಿಂದ ಹೇಳಿಕೆ ನೀಡಿದ್ದಾರೋ ನನಗೆ ಗೊತ್ತಿಲ್ಲ. ಅಲ್ಲದೇ, ಒಬ್ಬರು ಪಕ್ಷದ ಅಧ್ಯಕ್ಷರು, ಇನ್ನೊಬ್ಬರು ಮಾಜಿ ಮುಖ್ಯಮಂತ್ರಿ, ವಿಧಾನಸಭೆಯ ವಿರೋಧ ಪಕ್ಷದ ನಾಯಕರು. ಯಾರು ಏನು ಮಾತನಾಡುತ್ತಿದ್ದಾರೆ ಎನ್ನುವುದನ್ನು ರಾಜ್ಯದ ಜನ ನೋಡುತ್ತಿದ್ದಾರೆ' ಎಂದು ಹೇಳಿದರು.

'ಕಣ್ಣೀರಲ್ಲ; ಆನಂದ ಬಾಷ್ಪ'

ಆಲಮಟ್ಟಿ (ವಿಜಯಪುರ): 'ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸುವ ವೇಳೆ ಬಂದಿದ್ದು ಅನಂದ ಬಾಷ್ಪ, ಮುಖ್ಯಮಂತ್ರಿಯಾಗಲು ನಾಡಿನ ಜನರು ಆಶೀರ್ವದಿಸಿದ್ದರಿಂದ ಆ ಹುದ್ದೆ ಅಲಂಕರಿಸಿದ್ದೆ. ರಾಜ್ಯದ ಜನರು ಇಟ್ಟಿರುವ ನಂಬಿಕೆಯನ್ನು ನೆನೆದು ಆನಂದ ಬಾಷ್ಪ ಬಂತು' ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಆಲಮಟ್ಟಿಯಲ್ಲಿ ಬುಧವಾರ ಸುದ್ದಿಗಾರರಿಗೆ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಯುಕೆಪಿ ಕಾಮಗಾರಿಗೆ ಸಾಕಷ್ಟು ಅನುದಾನ ಒದಗಿಸಿದೆ. ಕೃಷ್ಣಾ ನದಿ ನೀರು ಹಂಚಿಕೆಯ ಬಗ್ಗೆ ಅಂತರರಾಜ್ಯದ ವ್ಯಾಜ್ಯವು ಸುಪ್ರೀಂಕೋರ್ಟ್‌ನಲ್ಲಿದೆ. ಅದು ಅತೀ ಶೀಘ್ರದಲ್ಲಿ ಬಗೆಹರಿಯುವ ವಿಶ್ವಾಸವಿದೆ ಎಂದರು.

ವಿವೇಕದಿಂದ ವರ್ತಿಸಿ: ಪೇಜಾವರ ಶ್ರೀ ಚಾಟಿ

ಪ್ರಜಾವಾಣಿ ವಾರ್ತೆ


ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

ಗದಗ: 'ಚುನಾವಣೆ ಬಂದಾಗ ಅಭಿವೃದ್ಧಿಯ ಚರ್ಚೆಗಳು ಕಡಿಮೆಯಾಗಿ, ವ್ಯಕ್ತಿಗತವಾಗಿ ವಿಚಾರ ಪ್ರಸ್ತಾಪದ ಪ್ರವೃತ್ತಿ ನಡೆಯುತ್ತಿದೆ. ಇದರಿಂದ ಯಾರಿಗೂ ಏನೂ ಉಪಯೋಗ ಇಲ್ಲ. ಬದಲಾಗಿ ಚುನಾವಣೆಯಲ್ಲಿ ಜಯಗಳಿಸಿದರೆ ಕ್ಷೇತ್ರಕ್ಕೆ, ಜನತೆಗೆ ತಾವೇನು ಮಾಡುತ್ತೇವೆ ಎಂಬುದನ್ನು ಮತದಾರರ ಮುಂದೆ ಹೇಳಲಿ ' ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸಲಹೆ ನೀಡಿದರು ಹೇಳಿದರು.

ಬುಧವಾರ ರಾತ್ರಿ ನಗರಕ್ಕೆ ಆಗಮಿಸಿದ ವೇಳೆ ಮಾಧ್ಯಮ ಪ್ರತಿನಿಧಿಗಳ ಜತೆಗೆ ಅವರು ಮಾತನಾಡಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಅವರು ರಾಮ ಮಂದಿರ ದೇಣಿಗೆ ಸಂಗ್ರಹ ಲೆಕ್ಕ ಕೇಳಿದ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, 'ರಾಮ ಮಂದಿರ ನಿರ್ಮಾಣ ಹಾಗೂ ಅದಕ್ಕೆ ಸಂಬಂಧಿಸಿದಂತೆ ಒಂದು ಟ್ರಸ್ಟ್ ಇದೆ. ಕಾರ್ಯದರ್ಶಿಗಳಿದ್ದಾರೆ. ಈ ಬಗ್ಗೆ ಯಾವುದೇ ಮಾಹಿತಿ ಬೇಕಿದ್ದರೂ ಸಾರ್ವಜನಿಕವಾಗಿ ಕೇಳುವುದಕ್ಕಿಂತ; ಟ್ರಸ್ಟ್ ಬಳಿ ಲೆಕ್ಕ ಕೇಳಲಿ, ಅವರು ಕೊಡುತ್ತಾರೆ' ಎಂದು ಹೇಳಿದರು.

'ಗದುಗಿನಲ್ಲಿರುವ ಈಗಿನ ಜುಮ್ಮಾ ಮಸೀದಿ ಜಾಗದಲ್ಲಿ ಹಿಂದೆ ವೆಂಕಟೇಶ್ವರ ದೇವಸ್ಥಾನ ಇತ್ತು' ಎಂಬ ಚರ್ಚೆ ಕುರಿತ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, 'ಇದು ನ್ಯಾಯಾಲಯದ ಮೂಲಕ ಇತ್ಯರ್ಥವಾದಲ್ಲಿ ಸ್ವಾಗತಿಸುತ್ತೇವೆ. ಅಯೋಧ್ಯೆ ರಾಮ ಮಂದಿರ ನಿರ್ಮಾಣ ವಿಚಾರ ಕೂಡ ಏಕಪಕ್ಷೀಯವಾಗಿ ಆಗಿಲ್ಲ. ಕೋರ್ಟ್ ಮೂಲಕ ಆಗಿದ್ದರಿಂದಾಗಿ ಎಲ್ಲರೂ ಒಪ್ಪಬೇಕಾಯಿತು. ಯಾವುದೇ ಕೆಲಸ ಶಾಂತಿಯುತವಾಗಿ ನಡೆದರೆ ಮಾತ್ರ ಯಾವುದೇ ಸಮಸ್ಯೆ ಇಲ್ಲ' ಎಂದು ಹೇಳಿದರು.

'ಕಾಂಗ್ರೆಸ್ ಪ್ರತಿಭಟನೆ ಹಾಸ್ಯಾಸ್ಪದ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ರಾಹುಲ್ ಗಾಂಧಿ ವಿರುದ್ಧ ನೀಡಿರುವ ಹೇಳಿಕೆ ಮುಂದಿಟ್ಟುಕೊಂಡು ಪ್ರತಿಭಟನೆಗೆ ಕಾಂಗ್ರೆಸ್‌ನವರು ಮುಂದಾಗಿರುವುದು ಹಾಸ್ಯಾಸ್ಪದ ಎಂದು ಬಿಜೆಪಿ ಮುಖ್ಯ ವಕ್ತಾರ ಗಣೇಶ್ ಕಾರ್ಣಿಕ್ ಹೇಳಿದ್ದಾರೆ.

'ಇದ್ದಿದ್ದು ಇದ್ದ ಹಾಗೆ ಹೇಳಿದರೆ, ಎದ್ದು ಬಂದು ಎದೆಗೆ ಒದ್ದಂತಾಗಿದೆ ಕಾಂಗ್ರೆಸ್‌ನವರ ವರ್ತನೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'2001 ರಲ್ಲಿ 1.60 ಲಕ್ಷ ಡಾಲರ್ ಮೌಲ್ಯದ ಮಾದಕ ದ್ರವ್ಯ ಸಹಿತ ಅಮೆರಿಕಾದಲ್ಲಿ ಸಿಕ್ಕಿ ಬಿದ್ದಿದ್ದರು. ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಮಧ್ಯ ಪ್ರವೇಶಿಸಿ ರಾಹುಲ್ ಅವರನ್ನು ಬಿಡಿಸಿದ್ದರು ಎಂದು ಸುಬ್ರಮಣಿಯನ್ ಸ್ವಾಮಿ ಹೇಳಿದ್ದರು. ಅದನ್ನು ಉಲ್ಲೇಖಿಸಿ ಕಟೀಲ್ ಹೇಳಿಕೆ ನೀಡಿದ್ದಾರೆ' ಎಂದರು.

ಸ್ವಾಮಿ ಅವರು ಈ ಆರೋಪ ಮಾಡಿದಾಗ ಸೋನಿಯಾಗಾಂಧಿ, ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್‌ನ ಯಾವುದೇ ಹಿರಿಯ ನಾಯಕರೂ ಅದನ್ನು ತಳ್ಳಿ ಹಾಕಲಿಲ್ಲ. ಇದು ಮೌನಂ ಸಮ್ಮತಿ ಲಕ್ಷಣಂ ಅಲ್ಲವೇ ಎಂದು ಪ್ರಶ್ನಿಸಿದರು.

ಆರ್‌ಎಸ್‌ಎಸ್ ಕುರಿತು ಎಚ್‌.ಡಿ.ಕುಮಾರಸ್ವಾಮಿ ನೀಡಿರುವ ಅವಹೇಳನಕಾರಿ ಹೇಳಿಕೆ ಹಿಂದಕ್ಕೆ ಪಡೆದು ಕ್ಷಮೆ ಕೇಳಬೇಕು ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣ ಒತ್ತಾಯಿಸಿದರು.

ನಾಡಿನ ಕಲಾವಿದರ ಆತಂಕ ● ಪ್ರತ್ಯೇಕವಾಗಿ ಉಳಿಸಿಕೊಳ್ಳಲು ಆಗ್ರಹ

ಅಮೃತವರ್ಷಿಣಿ: ವಿಲೀನಕ್ಕೆ ಹೆಚ್ಚಿದ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಕಾಶವಾಣಿ ಬೆಂಗಳೂರು ಕೇಂದ್ರದ 'ಅಮೃತವರ್ಷಿಣಿ' ವಾಹಿನಿಯನ್ನು 'ರಾಗಂ' ರಾಷ್ಟ್ರೀಯ ವಾಹಿನಿ ಜೊತೆಗೆ ವಿಲೀನ ಮಾಡಲು ಮುಂದಾಗಿರುವುದಕ್ಕೆ ಸಾಂಸ್ಕೃತಿಕ ವಲಯದ ಪ್ರಮುಖರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

2004ರಲ್ಲಿ ಪ್ರಾರಂಭವಾದ ಈ ವಾಹಿನಿಯಲ್ಲಿ ಪ್ರಾದೇಶಿಕ ಸಂಗೀತ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದವು. ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳಿಗೆ ಇದು ವಿಶೇಷ ವೇದಿಕೆಯಾಗಿತ್ತು. ಈಗ ವಿಲೀನ ಮಾಡಿದರೆ, ವಾಹಿನಿಯು ಬಹುಭಾಷಾ ಸಂಗೀತದ ಭಾಗವಾಗಲಿದೆ. ಬೆಂಗಳೂರು ಸೇರಿದಂತೆ ದೇಶದ 14 ಆಲ್ ಇಂಡಿಯಾ ರೇಡಿಯೊ ಕೇಂದ್ರಗಳಿಂದ ವಿಷಯ ವಸ್ತುಗಳು ಪ್ರಸಾರವಾಗುತ್ತವೆ. ಇದರಿಂದಾಗಿ ಇಲ್ಲಿನ ಕಲಾವಿದರು ಅವಕಾಶ ವಂಚಿತರಾಗುತ್ತಾರೆ ಎಂಬ ಚರ್ಚೆಯೂ ಆರಂಭವಾಗಿದೆ.

100.1 ತರಂಗಾಂತರದಲ್ಲಿ 'ಅಮೃತವರ್ಷಿಣಿ' ಲಭ್ಯವಾಗುತ್ತಿತ್ತು. ಇದೇ ತರಂಗದಲ್ಲಿ 'ರಾಗಂ' ಸಹ ದೊರೆಯಲಿದೆ. ಈವರೆಗೆ ಬೆಳಿಗ್ಗೆ 6ರಿಂದ 9 ಗಂಟೆಗಳವರೆಗೆ ಹಾಗೂ ಸಂಜೆ 6ರಿಂದ 11ರವರೆಗೆ ಸಂಗೀತ ಕಾರ್ಯಕ್ರಮಗಳನ್ನು 'ಅಮೃತವರ್ಷಿಣಿ' ಪ್ರಸಾರ ಮಾಡುತ್ತಿತ್ತು. 'ರಾಗಂ'ನಲ್ಲಿ ಬೆಳಿಗ್ಗೆ 6ರಿಂದ ರಾತ್ರಿ 11ರವರೆಗೆ ಕಾರ್ಯಕ್ರಮ ಪ್ರಸಾರವಾಗಲಿದೆ.

'ಪ್ರಾದೇಶಿಕತೆ ಕಡೆಗಣನೆ ಸರಿಯಲ್ಲ'



ಇಲ್ಲಿನ 'ಅಮೃತವರ್ಷಿಣಿ' ವಾಹಿನಿಯನ್ನು ರಾಷ್ಟ್ರೀಯ ವಾಹಿನಿ 'ರಾಗಂ' ಜೊತೆಗೆ ವಿಲೀನ ಸರಿಯಲ್ಲ. ಈ ಕ್ರಮದಿಂದ ಕನ್ನಡ ಮತ್ತು ಇಲ್ಲಿನ ಕಲಾವಿದರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಪ್ರತಿಭಾವಂತ ಕಲಾವಿದರಿಗೆ ಆಕಾಶವಾಣಿ ಮೊದಲಿನಿಂದಲೂ ವೇದಿಕೆ ಒದಗಿಸುತ್ತಾ ಬಂದಿದೆ. ಆ ಕಾರ್ಯವನ್ನು ಮುಂದುವರಿಸಬೇಕೆ ಹೊರತು, ಅವಕಾಶ ವಂಚಿತರನ್ನಾಗಿ ಮಾಡಬಾರದು. ಎಲ್ಲ ಭಾಷೆಗಳಿಗೂ ಸಮಾನ ಪ್ರಾತಿನಿಧ್ಯ ನೀಡಿ, ಕಾರ್ಯಕ್ರಮಗಳಿಗೆ ಸಮಯವನ್ನಾದರೂ ನಿಗದಿಮಾಡಬೇಕು. ಪ್ರಾದೇಶಿಕ ಕಲೆ ಮತ್ತು ಸಂಸ್ಕೃತಿ ಉಳಿವಿಗೆ ಆಕಾಶವಾಣಿ ಕೈಜೋಡಿಸಬೇಕು.

ಮನು ಬಳಿಗಾರ್, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ

'ಪ್ರಸಿದ್ಧ ಕಲಾವಿದರಿಗೆ ಮಾತ್ರ ಅವಕಾಶ'



'ರಾಗಂ' ಜೊತೆಗೆ ವಿಲೀನ ಮಾಡಿದರೆ ಸ್ಥಳೀಯ ಕಲಾವಿದರು ಅವಕಾಶ ವಂಚಿತರಾಗುತ್ತಾರೆ. ಸಂಗೀತದ ವಿವಿಧ ಪ್ರಕಾರಗಳ ಕಾರ್ಯಕ್ರಮಗಳು 'ಅಮೃತವರ್ಷಿಣಿ'ಯಲ್ಲಿ ನಿರಂತರ ಪ್ರಸಾರ ಆಗುತ್ತಿದ್ದವು. ಇದರಿಂದ ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತಿತ್ತು. ರಾಜ್ಯದ ಸಂಗೀತ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಕಲಿಕೆಗೂ ಇಲ್ಲಿ ಪ್ರಸಾರವಾಗುತ್ತಿದ್ದ ಕಾರ್ಯಕ್ರಮಗಳು ಸಹಕಾರಿಯಾಗಿದ್ದವು. ಇನ್ನುಮುಂದೆ ಸ್ಥಳೀಯ ಪ್ರತಿಭೆಗಳಿಗೆ ಅವಕಾಶ ಸಿಗುವುದು ಕಷ್ಟ. ಮುಂದಿನ ದಿನಗಳಲ್ಲಿ ಪ್ರಸಿದ್ಧ ಕಲಾವಿದರಿಗೆ ಮಾತ್ರ ಅವಕಾಶಗಳು ಸಿಗುತ್ತವೆ. ಇಲ್ಲಿನ ಕಲೆ ಮತ್ತು ಸಂಸ್ಕೃತಿಯನ್ನು 'ಅಮೃತವರ್ಷಿಣಿ' ಪ್ರತಿನಿಧಿಸುತ್ತಿತ್ತು.

ಬಸವರಾಜ ಸಾದರ, ಬೆಂಗಳೂರು ದೂರದರ್ಶನ ಕೇಂದ್ರದ ನಿವೃತ್ತ ನಿರ್ದೇಶಕ


'ಉನ್ನತ ಶ್ರೇಣಿ ಕಲಾವಿದರಿಗೆ ಅವಕಾಶ'



' ಟ್ರಾನ್ಸ್‌ಮೀಟರ್ ಬದಲಾವಣೆಯ ಕಾರಣ ನೀಡಿ, ವಿಲೀನ ಮಾಡಲಾಗುತ್ತಿದೆ. ಹೊಸದಾಗಿ ಟ್ರಾನ್ಸ್‌ಮೀಟರ್ ಅಳವಡಿಕೆಗೆ ₹ 1 ಕೋಟಿ ವೆಚ್ಚವಾಗಬಹುದು. ಈ ಹಣ ಸರ್ಕಾರಕ್ಕೆ ಹೊರೆ ಆಗುತ್ತಿರಲಿಲ್ಲ. 'ರಾಗಂ'ನಲ್ಲಿ 'ಎ' ಹಾಗೂ ಅದಕ್ಕಿಂತ ಮೇಲಿನ ಶ್ರೇಣಿಯ ಕಲಾವಿದರಿಗೆ ಮಾತ್ರ ಕಾರ್ಯಕ್ರಮಗಳು ಸಿಗಲಿವೆ. 'ಬಿ' ಹಾಗೂ ಅದಕ್ಕಿಂತ ಕೆಳಗಿನ ಶ್ರೇಣಿಯ ಕಲಾವಿದರು ಅವಕಾಶ ವಂಚಿತರಾಗುತ್ತಾರೆ. ಹಾಗಾಗಿ, 'ಅಮೃತವರ್ಷಿಣಿ' ವಾಹಿನಿಯನ್ನು ಉಳಿಸಿಕೊಳ್ಳಬೇಕು. ಈ ಹಿಂದೆ ಆಕಾಶವಾಣಿ ಕಲಾವಿದರಿಗೆ ಮೂರು ತಿಂಗಳಿಗೆ ಒಮ್ಮೆ ಕಾರ್ಯಕ್ರಮಗಳು ಸಿಗುತ್ತಿದ್ದವು. ಬಳಿಕ ಆರು ತಿಂಗಳು ವರ್ಷಕ್ಕೆ ಕಾರ್ಯಕ್ರಮ ದೊರೆಯುತ್ತಿತ್ತು. ಈಗ ಅದು ಕೂಡ ಇಲ್ಲವಾಗುತ್ತದೆ.

ಆನೂರು ಅನಂತಕೃಷ್ಣ ಶರ್ಮ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ

'ನೆಲ ಮೂಲದ ಧ್ವನಿ ನಾಶ'



ಕೇಂದ್ರದಲ್ಲಿ ಸರ್ಕಾರ ನಡೆಸುವವರಿಗೆ ಪ್ರಾದೇಶಿಕತೆಯ ವೈವಿಧ್ಯತೆಗಳು ಬೇಕಾಗಿಲ್ಲ. ಇದು ಹಿಂದಿ ಹೇರಿಕೆಯ ಹುನ್ನಾರವಾಗಿದೆ. ಸ್ಥಳೀಯ ಕಲಾವಿದರನ್ನು ಹಾಗೂ ಕಲೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದಲೇ ಪ್ರಾದೇಶಿಕ ವಾಹಿನಿಗಳನ್ನು ಪ್ರಾರಂಭಿಸಲಾಗಿತ್ತು. ಆದರೆ, ಈಗ ಏಕ ಭಾಷೆಯನ್ನು ಹೇರಿಕೆ ಮಾಡಲು ಮುಂದಾಗಿರುವುದು ವಿಪರ್ಯಾಸ. 6 ತಿಂಗಳಿಗೆ ಅಥವಾ ವರ್ಷಕ್ಕೆ ಒಮ್ಮೆ ಸಿಗುತ್ತಿರುವ ಕಾರ್ಯಕ್ರಮವೂ ಈಗ ಇಲ್ಲದಂತಾಗುತ್ತದೆ. ನೆಲ ಮೂಲದ ಸಂಸ್ಕೃತಿಯನ್ನು ನಾಶ ಮಾಡಲು ಮಾಡುತ್ತಿರುವ ಬಹುದೊಡ್ಡ ಹುನ್ನಾರ ಇದಾಗಿದೆ. ಆಕಾಶವಾಣಿಯನ್ನೂ ಖಾಸಗಿ ಸಂಸ್ಥೆಗಳಿಗೆ ವಹಿಸುವ ಸಂಚು ನಡೆದಿದೆಯೇ ಎಂಬ ಪ್ರಶ್ನೆ ಕಾಡುತ್ತಿದೆ.

ಪಿಚ್ಚಳ್ಳಿ ಶ್ರೀನಿವಾಸ್, ಕರ್ನಾಟಕ ಜಾನಪದ ಅಕಾಡೆಮಿ ಮಾಜಿ ಅಧ್ಯಕ್ಷ

'ಕಲಾವಿದರು ಅವಕಾಶ ವಂಚಿತರಾಗುತ್ತಾರೆ'



'ಅಮೃತವರ್ಷಿಣಿ' ವಾಹಿನಿಯಲ್ಲಿ ಕಾರ್ಯಕ್ರಮಗಳು ಅದ್ಭುತವಾಗಿ ಮೂಡಿಬರುತ್ತಿತ್ತು. 30 ವರ್ಷಗಳ ಹಿಂದೆ ದೂರದರ್ಶನವನ್ನು ರಾಷ್ಟ್ರೀಕರಣ ಮಾಡುವ ಸಂಚು ನಡೆದಿತ್ತು. ಆಗಿನ ಪ್ರಸಾರ ಭಾರತಿ ನಿರ್ದೇಶಕರು ಹಿಂದಿ, ಇಂಗ್ಲಿಷ್ ಮತ್ತು ಉರ್ದು ಭಾಷೆಗೆ ಮಾತ್ರ ಆದ್ಯತೆ ನೀಡಲು ಮುಂದಾಗಿದ್ದರು. ಆಗ ಪ್ರತಿಭಟಿಸಿದ್ದರಿಂದ ಪ್ರಾದೇಶಿಕ ಭಾಷೆಗಳನ್ನು ಕೈಬಿಡುವ ನಿರ್ಧಾರದಿಂದ ಹಿಂದೆ ಸರಿದರು. 'ಅಮೃತವರ್ಷಿಣಿ' ವಾಹಿನಿಯನ್ನು ವಿಲೀನ ಮಾಡಿದರೆ ಕಲಾವಿದರು ಅವಕಾಶ ವಂಚಿತರಾಗುತ್ತಾರೆ. ಮೊದಲಿನಂತೆ 'ಅಮೃತವರ್ಷಿಣಿ' ವಾಹಿನಿಯನ್ನು ಪ್ರಾರಂಭಿಸಬೇಕು. ಆಕಾಶವಾಣಿಯು ಜನಪರವಾಗಿ ನಿಂತು, ಇಲ್ಲಿನ ಜನರು ಹಾಗೂ ಕಲಾವಿದರ ಧ್ವನಿಯಾಗಿ ಕಾರ್ಯನಿರ್ವಹಿಸಬೇಕು.

ವೈ.ಕೆ. ಮುದ್ದುಕೃಷ್ಣ, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ

'ಹಿಂದಿಯೇತರ ಭಾಷೆಗಳ ಕಡೆಗಣನೆ'



'ಪ್ರಾದೇಶಿಕತೆಯನ್ನು ಮೊದಲಿನಿಂದಲೂ ಮೂಲೆಗುಂಪು ಮಾಡಲಾಗಿದೆ. ರಾಜ್ಯದ ಎಷ್ಟು ಮಂದಿ ಕಲಾವಿದರನ್ನು ಕೇಂದ್ರ ಸರ್ಕಾರ ಗುರುತಿಸಿ ಗೌರವಿಸಿದೆ? ಹಿಂದಿಯೇತರ ಭಾಷೆಗಳು ಹಾಗೂ ಕಲಾವಿದರು ನಿರಂತರ ಸಮಸ್ಯೆ ಎದುರಿಸುತ್ತಲೇ ಬಂದಿದ್ದಾರೆ. ಖಾಸಗಿ ವಾಹಿನಿಗಳಿಗೆ ಅವಕಾಶ ಸಿಗದಿದ್ದರೆ ಸರ್ಕಾರಿ ವಾಹಿನಿಯಲ್ಲಿ ಕನ್ನಡದ ಭಿಕ್ಷೆ ಹಾಕುತ್ತಿದ್ದರು. ಕೇಂದ್ರ ಸರ್ಕಾರವು ಕೇವಲ ಹಿಂದಿಯನ್ನು ಪ್ರತಿನಿಧಿಸುವಂತೆ ವರ್ತಿಸುತ್ತಿದೆ.

ಅರುಣ್ ಜಾವಗಲ್, ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಸಂಘಟನಾ ಕಾರ್ಯದರ್ಶಿ

'ಗುಲಾಮರಂತೆ ವರ್ತಿಸುವ ಅಧಿಕಾರಿಗಳು'


ರವಿ ಕೃಷ್ಣಾರೆಡ್ಡಿ

ಸಿಂದಗಿ: 'ವಿಧಾನಸಭೆ ಉಪಚುನಾವಣೆಯಲ್ಲಿ ಬಿಜೆಪಿ--ಕಾಂಗ್ರೆಸ್ ಪಕ್ಷಗಳು ಮಾದರಿ ನೀತಿ ಸಂಹಿತೆಯನ್ನು ಹಲವಾರು ಬಾರಿ ಉಲ್ಲಂಘಿಸಿವೆ. ಆದರೆ ಈ ಭ್ರಷ್ಟ ಪಕ್ಷಗಳ ಗುಲಾಮರಂತೆ ವರ್ತಿಸುತ್ತಿರುವ ಚುನಾವಣಾಧಿಕಾರಿ ಮತ್ತು ಚುನಾವಣಾ ಆಯೋಗದ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ಆರೋಪಿಸಿದರು.

ಸಿಂದಗಿಯಲ್ಲಿ ಬುಧವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಜೆ.ಸಿ.ಬಿ ಪಕ್ಷಗಳ ಚುನಾವಣಾ ಅಕ್ರಮಗಳ ಬಗ್ಗೆ ನಮ್ಮ ಪಕ್ಷದ ವತಿಯಿಂದ ಹಲವಾರು ಬಾರಿ ಚುನಾವಣಾಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ. ಆದರೆ ಅಧಕ್ಷ ಅಧಿಕಾರಿಗಳು ಕ್ರಮಕ್ಕೆ ಮುಂದಾಗುತ್ತಿಲ್ಲ. ಹೊರರಾಜ್ಯಗಳಿಂದ ಬಂದಿರುವ ಐಎಎಸ್, ಐಪಿಎಸ್ ಹುದ್ದೆಗಳ ಚುನಾವಣಾ ವೀಕ್ಷಕರು ಐಷಾರಾಮಿ ಪ್ರವಾಸಿಗರಾಗಿ ಬಂದಿದ್ದಾರೆಯೇ ಹೊರತು ಇಲ್ಲಿ ಅಕ್ರಮಗಳನ್ನು ನಿಲ್ಲಿಸುತ್ತಿಲ್ಲ ಎಂದು ದೂರಿದರು.

ಸುಳ್ಳು ಜಾತಿ ಪ್ರಮಾಣಪತ್ರ ಪ್ರಕರಣ ಕೈಬಿಡಲು ಆಗ್ರಹ

ಪ್ರಜಾವಾಣಿ ವಾರ್ತೆ


ಜಿ.ಟಿ. ದೇವೇಗೌಡ


ಮೈಸೂರು: 'ಪರಿಶಿಷ್ಟ ಪಂಗಡ ಪ್ರಮಾಣ ಪತ್ರ ಪಡೆದಿರುವ ಪರಿವಾರ ಜನಾಂಗದವರ ವಿರುದ್ಧ ದಾಖಲಾಗಿರುವ ಸುಳ್ಳು ಜಾತಿ ಪ್ರಮಾಣ ಪತ್ರ ಪ್ರಕರಣವನ್ನು ಕೈಬಿಡಬೇಕು' ಎಂದು ಶಾಸಕ ಜಿ.ಟಿ. ದೇವೇಗೌಡ ಒತ್ತಾಯಿಸಿದರು.

ಜಿಲ್ಲಾಡಳಿತವು ಇಲ್ಲಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಬುಧವಾರ ಏರ್ಪಡಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, 'ತಳವಾರ, ಪರಿವಾರ ಸಮಾಜದವರಿಗೆ ತೊಂದರೆಯಾಗದಂತೆ ಸಿಂಧುತ್ವದ ಪ್ರಮಾಣಪತ್ರ ನೀಡಬೇಕು. ಅವರಿಗೆ ಪರಿಶಿಷ್ಟ ಪಂಗಡದ ಪ್ರಮಾಣ ಪತ್ರ ನೀಡಲು ಸತಾಯಿಸಬಾರದು ಎಂದು ಅ. 30ರ ಬಳಿಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಲಾಗುವುದು' ಎಂದರು.

'ಪರಿಶಿಷ್ಟ ಪಂಗಡಕ್ಕೆ ಶೇ 7.5ರಷ್ಟು ಮೀಸಲಾತಿ ನೀಡಬೇಕು ಎಂದು ಸಂಸದ ಪ್ರತಾಪಸಿಂಹ ಸಹ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಬೇಕು' ಎಂದು ಸಲಹೆ ನೀಡಿದರು.

ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ತಿರುಗೇಟು

ಲೂಟಿ ಹೊಡೆದಿದ್ದಕ್ಕೆ ಡಿಕೆಶಿ ಜೈಲಿಗೆ ಹೋಗಿದ್ದು?



ಹಾವೇರಿ: 'ಬಿಜೆಪಿಯವರು ನೋಟು ಕೊಟ್ಟರೆ ತೆಗೆದುಕೊಂಡು ಕಾಂಗ್ರೆಸ್‌ಗೆ ಓಟು ಹಾಕಿ ಎಂದು ಹೇಳುವ ಡಿ.ಕೆ. ಶಿವಕುಮಾರ್ ಅವರು ಕೋಟಿಗಟ್ಟಲೆ ಲೂಟಿ ಹೊಡೆದಿದ್ದಕ್ಕೆ ತಾನೇ ಜೈಲಿಗೆ ಹೋಗಿದ್ದು' ಎಂದು ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ತಿರುಗೇಟು ನೀಡಿದರು.

ಬುಧವಾರ ಮಾಧ್ಯಮಗೋಷ್ಠಿಯಲ್ಲಿ ಅವರು ಮಾತನಾಡಿ, 'ಎಲ್ಲಿಯೂ ಮತದಾರರಿಗೆ ದುಡ್ಡು ಹಂಚಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾಧನೆ ಪರ ಮತ ಕೇಳುತ್ತಿದ್ದೇವೆ. ಯಡಿಯೂರಪ್ಪ ಭ್ರಷ್ಟಾಚಾರ ಮಾಡಿದ್ದಾರೆ ಎಂಬುದು ಎಲ್ಲಿಯೂ ಸಾಬೀತಾಗಿಲ್ಲ. ಸೋಲುವ ಭೀತಿಯಿಂದ ಕಾಂಗ್ರೆಸ್‌ನವರು ದಿನಕ್ಕೊಂದು ಹೇಳಿಕೆ ನೀಡುತ್ತಿದ್ದಾರೆ' ಎಂದು ಟೀಕಿಸಿದರು.

ಸಚಿವ ಮುನಿರತ್ನ ಮಾತನಾಡಿ, 'ನರೇಂದ್ರ ಮೋದಿ ರೇಷನ್ ಅಂಗಡಿಗೆ ಹೋಗಿ ಅನುಭವ ಇದೆಯಾ? ಎಂದು ಕಾಂಗ್ರೆಸ್ ವರಿಷ್ಠ ರಣದೀಪ್ ಸುರ್ಜೆವಾಲಾ ಕೇಳುತ್ತಾರೆ. ಮೋದಿ ಚಿನ್ನದ ಚಮಚವನ್ನು ಬಾಯಲ್ಲಿ ಇಟ್ಟುಕೊಂಡು ಹುಟ್ಟಿದವರಲ್ಲ. ಬಡಕುಟುಂಬದಲ್ಲಿ ಹುಟ್ಟಿದ ಅವರು ಸೊಸೈಟಿಯಲ್ಲಿ ಸರದಿ ಸಾಲಿನಲ್ಲಿ ನಿಂತು ಅಕ್ಕಿ ತೆಗೆದುಕೊಂಡು ಬಂದಿದ್ದಾರೆ' ಎಂದು ತಿರುಗೇಟು ನೀಡಿದರು.

'ನಳಿನ್ ಕುಮಾರ್ ಕಟೀಲ್ ಹುಚ್ಚ' ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿ, 'ಯಾರು ಹುಚ್ಚರು? ಯಾರು ಬುದ್ಧಿವಂತರು? ಎಂಬುದನ್ನು ಮತದಾರರು ಶೀಘ್ರದಲ್ಲೇ ತಿಳಿಸಲಿದ್ದಾರೆ, ಕಾದು ನೋಡಿ' ಎಂದರು.

ಉತ್ತರಾಖಂಡದಲ್ಲಿ 52, ಕೇರಳದಲ್ಲಿ 39 ಮಂದಿ ಸಾವು: ಹಲವು ಜನರಿಗಾಗಿ ಮುಂದುವರಿದ ಶೋಧ

ಮಳೆ ಬಿಡುವು: ರಕ್ಷಣೆ, ಪರಿಹಾರವೇ ಸವಾಲು

ಡೆಹ್ರಾಡೂನ್/ತಿರುವನಂತಪುರ (ಪಿಟಿಐ): ಕಳೆದ ಕೆಲವು ದಿನಗಳಿಂದ ಭಾರಿ ಮಳೆಯಿಂದಾಗಿ ನಲುಗಿರುವ ಉತ್ತರಾಖಂಡ ಮತ್ತು ಕೇರಳದಲ್ಲಿ ಬುಧವಾರ ಮಳೆಯು ಅಲ್ಪ ಬಿಡುವು ನೀಡಿತ್ತು. ಹಾಗಾಗಿ, ರಕ್ಷಣೆ ಮತ್ತು ಪರಿಹಾರ ಕಾರ್ಯ ಭರದಿಂದ ನಡೆದಿದೆ.

ಸತತ ಎರಡು ದಿನ ಸುರಿದ ಮಳೆಯ ಪರಿಣಾಮದಿಂದ ಚೇತರಿಸಿಕೊಳ್ಳಲು ಉತ್ತರಾಖಂಡಕ್ಕೆ ಇನ್ನೂ ಬಹಳ ಕಾಲ ಬೇಕಾಗಬಹುದು. ಮಳೆಯಿಂದಾಗಿ ಭಾನುವಾರದಿಂದ ಬುಧವಾರದವರೆಗೆ 52 ಮಂದಿ ಮೃತಪಟ್ಟಿದ್ದಾರೆ. ಮನೆಗಳು ಕುಸಿದಿದ್ದು ಹಲವು ಮಂದಿ ಅವಶೇಷಗಳಡಿ ಸಿಲುಕಿರುವ ಆತಂಕ ವ್ಯಕ್ತವಾಗಿದೆ. 5 ಮಂದಿ ನಾಪತ್ತೆಯಾಗಿದ್ದು ಅವರಿಗಾಗಿ ಶೋಧ ಮುಂದುವರಿದಿದೆ.

ಭೂಕುಸಿತದಿಂದಾಗಿ ರಸ್ತೆ ಸಂಚಾರ ಸ್ಥಗಿತಗೊಂಡಿದೆ. ಹಲವು ರಸ್ತೆಗಳಲ್ಲಿ ದೊಡ್ಡ ದೊಡ್ಡ ಕಲ್ಲುಗಳು ಇವೆ. ಹಲವು ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕ ಸ್ಥಗಿತವಾಗಿದೆ.

ಮಳೆಯ ಅಬ್ಬರ ನಿಂತಿದೆ. ಆದರೆ, ಅವಶೇಷಗಳಡಿಯಲ್ಲಿ ಸಿಲುಕಿದವರ ಪತ್ತೆ ಮತ್ತು ರಕ್ಷಣೆ, ವಿದ್ಯುತ್ ಸಂಪರ್ಕ ಮರಸ್ಥಾಪನೆಯು ದೊಡ್ಡ ಸವಾಲಾಗಿದೆ. ಮಳೆಯಿಂದ ಭಾರಿ ಸಮಸ್ಯೆಗೆ ಒಳಗಾಗಿದ್ದ ಪ್ರವಾಸಿ ತಾಣ ನೈನಿತಾಲ್ ಸಹಜ ಸ್ಥಿತಿಗೆ ಮರಳುತ್ತಿದೆ.



ಉತ್ತರಾಖಂಡದ ಜಲಾವೃತ ಗ್ರಾಮ ತನಕಪುರದಲ್ಲಿ ಸಿಲುಕಿದ್ದ ಮಗುವನ್ನು ಭಾರತೀಯ ಸೇನೆಯ ಯೋಧರೊಬ್ಬರು ರಕ್ಷಿಸಿದರು ಪಿಟಿಐ ಚಿತ್ರ

ಕೇರಳದಲ್ಲಿ ಮಳೆ ಮತ್ತು ಪ್ರವಾಹದ ಹೊಡೆತಕ್ಕೆ ಮೃತಪಟ್ಟವರ ಸಂಖ್ಯೆ 39ಕ್ಕೆ ಏರಿದೆ. ಆರು ಮಂದಿಗಾಗಿ ಶೋಧ ಕಾರ್ಯ ಮುಂದುವರಿದಿದೆ. 217 ಮನೆಗಳು ನಾಶವಾಗಿವೆ. ಸಂತ್ರಸ್ತರಿಗಾಗಿ 304 ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ವಿಧಾನಸಭೆಗೆ ಬುಧವಾರ ಮಾಹಿತಿ ನೀಡಿದ್ದಾರೆ.

3,851 ಕುಟುಂಬಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರ ಮಾಡಲಾಗಿತ್ತು. ರಾಷ್ಟ್ರೀಯ ವಿಪತ್ತು ಪರಿಹಾರ ಪಡೆಯ 11 ತಂಡಗಳು ವಿವಿಧ ಜಿಲ್ಲೆಗಳಲ್ಲಿ ಇವೆ. ಭಾರತೀಯ ಸೇನೆಯ ಸಿಬ್ಬಂದಿ ಕೂಡ ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದಾರೆ. ವಾಯುಪಡೆ ಮತ್ತು ನೌಕಾಪಡೆಯ ಹೆಲಿಕಾಪ್ಟರ್‌ಗಳನ್ನು ಕೂಡ ಕಾರ್ಯಾಚರಣೆಗೆ ಬಳಸಿಕೊಳ್ಳಲಾಗಿದೆ.

ಪ್ರವಾಹಪೀಡಿತ ಪ್ರದೇಶಗಳಿಂದ 1,300ಕ್ಕೂ ಹೆಚ್ಚು ಜನರನ್ನು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯು ರಕ್ಷಿಸಿದೆ.

ಕುಮಾವೊನ್ ಪ್ರದೇಶವು ಭಾರಿ ಮಳೆಯಿಂದಾಗಿ ಅತಿ ಹೆಚ್ಚು ತೊಂದರೆಗೆ ಒಳಗಾಗಿದೆ. ಇಲ್ಲಿ ಹಲವು ಮನೆಗಳು ನೆಲಸಮವಾಗಿವೆ. ಹಲವು ಸೇತುವೆಗಳು ಕೊಚ್ಚಿ ಹೋಗಿವೆ.

ಪಶ್ಚಿಮ ಬಂಗಾಳದ ಜಲ್‌ಪೈಗುರಿ ಜಿಲ್ಲೆ, ಉತ್ತರ ಪ್ರದೇಶದ ಲಖಿಂಪುರ–ಖೇರಿ, ಸೀತಾಪುರ, ವಾರಾಣಸಿ, ಗೋರಖಪುರ ಮತ್ತು ಬಹರೈಚ್ ಜಿಲ್ಲೆಗಳಲ್ಲಿಯೂ ಎನ್‌ಡಿಆರ್‌ಎಫ್ ತಂಡಗಳನ್ನು ನಿಯೋಜಿಸಲಾಗಿದೆ.

ಕೇರಳ: ಆರೆಂಜ್ ಅಲರ್ಟ್ ಹಿಂದಕ್ಕೆ

ಭಾರಿ ಮಳೆ ಸುರಿಯಬಹುದು ಎಂಬ ಕಾರಣಕ್ಕೆ ಕೇರಳದ 11 ಜಿಲ್ಲೆಗಳಿಗೆ ಹೊರಡಿಸಲಾಗಿದ್ದ ಆರೆಂಜ್ ಅಲರ್ಟ್ ಅನ್ನು ಹವಾಮಾನ ಇಲಾಖೆಯು ಬುಧವಾರ ಹಿಂದಕ್ಕೆ ಪಡೆದಿದೆ. ಈ ಪ್ರದೇಶಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಸಾಮಾನ್ಯ ಮಳೆಯಾಗಲಿದೆ ಎಂಬ ಮುನ್ಸೂಚನೆ ನೀಡಿದೆ. ಹಾಗೆಯೇ, ಕಳೆದ ಕೆಲವು ದಿನಗಳಲ್ಲಿ ಭಾರಿ ಮಳೆಗೆ ನಲುಗಿರುವ ಇಡುಕ್ಕಿ, ಕೋಟಯಂ ಮತ್ತು ಪತ್ತನಂತಿಟ್ಟ ಜಿಲ್ಲೆಗಳಲ್ಲಿ ಗುರುವಾರ ಭಾರಿ ಮಳೆ ಆಗಬಹುದು ಎಂಬ ಎಚ್ಚರಿಕೆ ನೀಡಿದೆ.

ಕೆಲವು ದಿನಗಳಿಂದ ಮಳೆಗೆ ನಲುಗಿದ್ದ ರಾಜ್ಯವು ಸ್ವಲ್ಪ ಮಟ್ಟಿಗೆ ನಿರಾಳ ಆಗುವಂತಾಗಿದೆ. ಹಾಗಿದ್ದರೂ ಹಲವು ಜಲಾಶಯಗಳಿಂದ ನೀರನ್ನು ಹೊರಗೆ ಬಿಡುವುದನ್ನು ಮುಂದುವರಿಸಲಾಗಿದೆ. ನಿಯಂತ್ರಣ ಮತ್ತು ಲೆಕ್ಕಾಚಾರದ ಮೂಲಕ ನೀರು ಹರಿಸಿದ್ದರಿಂದಾಗಿ ಎಲ್ಲಿಯೂ ಪ್ರವಾಹ ಸ್ಥಿತಿ ತಲೆದೋರಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಅಮರಿಂದರ್ ಸಿಂಗ್ ಅವಕಾಶವಾದಿ: ರಾಂಧವ ಕಿಡಿ

ಚಂಡೀಗಡ (ಪಿಟಿಐ): ಅಮರಿಂದರ್ ಸಿಂಗ್ ಒಬ್ಬ 'ಅವಕಾಶವಾದಿ', ಪಂಜಾಬ್‌ಗೆ ದ್ರೋಹ ಮಾಡಿದ್ದಾರೆ ಎಂದು ಪಂಜಾಬ್ ಉಪಮುಖ್ಯಮಂತ್ರಿ ಸುಖಜಿಂದರ್ ಸಿಂಗ್ ರಾಂಧವ ಬುಧವಾರ ಕಿಡಿಕಾರಿದ್ದಾರೆ.

ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರು ತಮ್ಮದೇ ರಾಜಕೀಯ ಪಕ್ಷ ಆರಂಭಿಸುವುದಾಗಿ ಘೋಷಿಸಿದ ಒಂದು ದಿನದ ನಂತರ ರಾಂಧವಾ ಈ ಟೀಕೆ ಮಾಡಿದ್ದಾರೆ.



'ಅಮರಿಂದರ್ ಸಿಂಗ್ ತಮ್ಮ ಬಗ್ಗೆ, ತಮ್ಮ ಕುಟುಂಬ ಮತ್ತು ತಮ್ಮ ಸ್ನೇಹಿತರ ಬಗ್ಗೆ ಮಾತ್ರ ಯೋಚಿಸುತ್ತಾರೆ. ರಾಜ್ಯದ ಹಿತದ ಬಗ್ಗೆ ಎಂದಿಗೂ ಯೋಚಿಸದವರ ಪರ ನಿಂತಿದ್ದಾರೆ. ಕಳೆದ ನಾಲ್ಕೂವರೆ ವರ್ಷಗಳಿಂದ ಅವರು ಪಂಜಾಬ್‌ಗೆ ದ್ರೋಹ ಮಾಡಿದ್ದಾರೆ' ಎಂದು ಆರೋಪಿಸಿದರು.

'ಪಂಜಾಬ್ ಪಾಕಿಸ್ತಾನ ಅಥವಾ ಚೀನಾಕ್ಕೆ ಹೆದರುವುದಿಲ್ಲ. ಇಂದು ಪಂಜಾಬ್ ಯಾವುದಾದರೂ ಬೆದರಿಕೆಯನ್ನು ಎದುರಿಸುತ್ತಿದ್ದರೆ, ಅದು ಅಮರಿಂದರ್ ಸಿಂಗ್ ಅವರಿಂದ' ಎಂದರು.

ಅಮರಿಂದರ್ ಸಿಂಗ್ ಒಬ್ಬ ದೇಶಭಕ್ತ: ಬಿಜೆಪಿ

ನವದೆಹಲಿ (ಪಿಟಿಐ): 'ಅಮರಿಂದರ್ ಸಿಂಗ್ ಒಬ್ಬ ದೇಶಭಕ್ತ. ರಾಷ್ಟ್ರೀಯ ಹಿತಾಸಕ್ತಿಗೆ ಆದ್ಯತೆ ನೀಡುವವರೊಂದಿಗೆ ಮೈತ್ರಿ ಮಾಡಿಕೊಳ್ಳಲು ಬಿಜೆಪಿ ಮುಕ್ತ ಮನಸ್ಸು ಹೊಂದಿದೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ಪಂಜಾಬ್ ಉಸ್ತುವಾರಿ ದುಷ್ಯಂತ್ ಗೌತಮ್ ಬುಧವಾರ ಹೇಳಿದರು.

ತಮ್ಮದೇ ರಾಜಕೀಯ ಪಕ್ಷ ಸ್ಥಾಪಿಸುವುದಾಗಿ ಸಿಂಗ್ ಘೋಷಿಸಿದ ಮರು ದಿನವೇ ಬಿಜೆಪಿ ನಾಯಕರು ಈ ಹೇಳಿಕೆ ನೀಡಿದ್ದಾರೆ.

ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಸಿಂಗ್ ಅವರು, 'ಶೀಘ್ರದಲ್ಲೇ ತಮ್ಮದೇ ರಾಜಕೀಯ ಪಕ್ಷ ಸ್ಥಾಪಿಸುತ್ತೇನೆ. ರೈತರ ಹಿತದೃಷ್ಟಿಯಿಂದ ರೈತರ ಸಮಸ್ಯೆಯನ್ನು ಬಗೆಹರಿಸಿದರೆ ಬಿಜೆಪಿಯೊಂದಿಗೆ ಸೀಟು ಹೊಂದಾಣಿಕೆ ಮಾಡಿಕೊಳ್ಳಲು ಸಿದ್ಧ' ಎಂದು ಮಂಗಳವಾರ ಘೋಷಿಸಿದ್ದರು.

'ಸಿಂಗ್ ರೈತರ ಸಮಸ್ಯೆಗಳ ಬಗ್ಗೆ ಮಾತನಾಡಿದ್ದಾರೆ. ನಾವೂ ಅದಕ್ಕೆ ಬದ್ಧರಾಗಿದ್ದೇವೆ. ರೈತರ ಹಿತಕ್ಕಾಗಿ ಕೆಲಸ ಮಾಡುತ್ತಿದ್ದೇವೆ. ಸಮಯ ಬಂದರೆ ಇಬ್ಬರೂ ಒಟ್ಟಿಗೆ ಕುಳಿತು ರೈತರ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತೇವೆ' ಎಂದು ಗೌತಮ್ ತಿಳಿಸಿದರು.

'ನಮ್ಮ ಪ್ರಮುಖ ಕಾರ್ಯಸೂಚಿ ರಾಷ್ಟ್ರೀಯತೆ. ರಾಷ್ಟ್ರವೇ ನಮಗೆ ಮೊದಲು. ಈ ಕಾರ್ಯಸೂಚಿಯಲ್ಲಿ ನಮ್ಮೊಂದಿಗೆ ಮೈತ್ರಿ ಮಾಡಿಕೊಳ್ಳಲು ಬಯಸುವ ಎಲ್ಲ ಪಕ್ಷಗಳನ್ನೂ ಸ್ವಾಗತಿಸುತ್ತೇವೆ' ಎಂದು ಅವರು ಹೇಳಿದರು.

'ಅಮರಿಂದರ್ ಸಿಂಗ್ ಸೈನಿಕರಾಗಿದ್ದವರು. ರಾಷ್ಟ್ರೀಯ ಭದ್ರತೆಯ ವಿಷಯಗಳಲ್ಲಿ ಅವರ ನಿಲುವನ್ನು ಪ್ರಶಂಸಿಸಬೇಕು' ಎಂದರು.

ಹಡಗಿನಲ್ಲಿ ಪತ್ತೆಯಾದ ಡ್ರಗ್ಸ್ ಪ್ರಕರಣ

ಈ ಪ್ರಕರಣದಲ್ಲಿ ಇಲ್ಲಿಯವರೆಗೆ 20 ಜನರನ್ನು ಬಂಧಿಸಲಾಗಿದೆ.

ಆರ್ಯನ್ ಖಾನ್ ಜಾಮೀನು ಅರ್ಜಿ ತಿರಸ್ಕೃತ

ಮುಂಬೈ (ಪಿಟಿಐ): ಐಷಾರಾಮಿ ಹಡಗಿನಲ್ಲಿ ಪತ್ತೆಯಾದ ಡ್ರಗ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಿವುಡ್ ನಟ ಶಾರುಖ್ ಖಾನ್ ಅವರ ಪುತ್ರ ಆರ್ಯನ್ ಖಾನ್ ಮತ್ತು ಇತರ ಇಬ್ಬರಿಗೆ ಜಾಮೀನು ಮಂಜೂರು ಮಾಡಲು ಇಲ್ಲಿನ ವಿಶೇಷ ನ್ಯಾಯಾಲಯ ಬುಧವಾರ ನಿರಾಕರಿಸಿದೆ.

ವಿಶೇಷ ನ್ಯಾಯಾಧೀಶ ವಿ.ವಿ.ಪಾಟೀಲ್ ಅವರು, ಆರ್ಯನ್ ಖಾನ್, ಆತನ ಸ್ನೇಹಿತ ಅರ್ಬಾಜ್ ಮರ್ಚೆಂಟ್ ಮತ್ತು ಮುನ್‌ಮುನ್ ಧಮೇಚ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದರು.



ಆರ್ಯನ್ ಖಾನ್

'ಡ್ರಗ್ಸ್ ಕಳ್ಳಸಾಗಣೆ ವಿಚಾರದಲ್ಲಿ ಆರ್ಯನ್ ಖಾನ್ ಪಿತೂರಿ ಮಾಡಿರುವುದಾಗಿ ಎನ್‌ಸಿಬಿ ಮಾಡಿರುವ ವಾದ ಅಸಂಬದ್ಧವಾಗಿದೆ. ಅಲ್ಲದೆ ಎನ್‌ಸಿಬಿಯು ಆರ್ಯನ್ ಅವರಿಂದ ಯಾವುದೇ ಮಾದಕ ವಸ್ತುವನ್ನು ವಶಕ್ಕೆ ಪಡೆದಿಲ್ಲ. ಹಾಗಾಗಿ ಜಾಮೀನು ಮಂಜೂರು ಮಾಡಬೇಕು' ಎಂದು ಆರ್ಯನ್ ಖಾನ್ ಪರ ವಕೀಲರು ವಾದಿಸಿದರು.

ಜಾಮೀನು ಅರ್ಜಿಯನ್ನು ವಿರೋಧಿಸಿದ ಎನ್‌ಸಿಬಿ, ಆರ್ಯನ್ ಖಾನ್ ಡ್ರಗ್ಸ್ ಸೇವಿಸುತ್ತಾರೆ. ಅಲ್ಲದೆ ಅವರು ಡ್ರಗ್ಸ್ ಖರೀದಿಗೆ ಅಂತರರಾಷ್ಟ್ರೀಯ ಡ್ರಗ್ಸ್ ಜಾಲದ ಭಾಗವಾಗಿರುವ ಕೆಲ ವ್ಯಕ್ತಿಗಳೊಂದಿಗೆ ಸಂಪರ್ಕದಲ್ಲಿದ್ದಾರೆ. ಇದಕ್ಕೆ ಆರ್ಯನ್ ಖಾನ್ ಅವರ ವಾಟ್ಸ್‌ಆ್ಯಪ್ ಚಾಟ್‌ಗಳು ಪುರಾವೆಯಾಗಿವೆ ಎಂದು ವಾದಿಸಿತು.

'ದಾಳಿ ವೇಳೆಯಲ್ಲಿ ಆರ್ಯನ್ ಅವರಲ್ಲಿ ಯಾವುದೇ ಮಾದಕ ವಸ್ತು ಕಂಡು ಬಂದಿಲ್ಲ. ಆದರೆ ಅವರ ಸ್ನೇಹಿತ ಅರ್ಬಾಜ್ ಮರ್ಚೆಂಟ್ ಬಳಿಯಿದ್ದ ಆರು ಗ್ರಾಂ ಚರಸ್ ಅನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಎನ್‌ಸಿಬಿ ಹೇಳಿದೆ.

ಶ್ರೀನಗರ: ಇಬ್ಬರು ಎಲ್‌ಇಟಿ ಉಗ್ರರ ಹತ್ಯೆ, ಯೋಧ ಹುತಾತ್ಮ

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ಶೋಪಿಯಾನ ಜಿಲ್ಲೆಯಲ್ಲಿ ಲಷ್ಕರ್-ಇ-ತಯಬಾದ (ಎಲ್‌ಇಟಿ) ಇಬ್ಬರು ಉಗ್ರರನ್ನು ಭದ್ರತಾ ಪಡೆಗಳು ಬುಧವಾರ ನಡೆಸಿದ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿವೆ. ಕಾರ್ಯಾಚರಣೆಯಲ್ಲಿ ಯೋಧರೊಬ್ಬರು ಹುತಾತ್ಮರಾಗಿದ್ದು, ಇಬ್ಬರು ಗಾಯಗೊಂಡಿದ್ದಾರೆ.

ಮೃತ ಉಗ್ರರಲ್ಲಿ ಒಬ್ಬ ಕಳೆದ ವಾರ ದಕ್ಷಿಣ ಕಾಶ್ಮೀರದಲ್ಲಿ ನಡೆದಿದ್ದ ಕಾರ್ಪೆಂಟರ್ ಸಗೀರ್ ಅಹ್ಮದ್ ಅನ್ಸಾರಿ (ಉತ್ತರ ಪ್ರದೇಶ ಮೂಲದ) ಹತ್ಯೆಯಲ್ಲಿ ಭಾಗಿಯಾಗಿದ್ದವನು. ಈ ಉಗ್ರನನ್ನು ಆದಿಲ್ ವಾನಿ ಎಂದು ಗುರುತಿಸಲಾಗಿದೆ.

ಆದಿಲ್ ವಾನಿ ನಿಷೇಧಿತ ಭಯೋತ್ಪಾದಕ ಸಂಘಟನೆಯಾದ ಎಲ್‌ಇಟಿಯ ಶೋಪಿಯಾನ್ ಜಿಲ್ಲಾ ಕಮಾಂಡರ್ ಆಗಿದ್ದ ಎಂದು ಕಾಶ್ಮೀರ ವಲಯದ ಐಜಿಪಿ ವಿಜಯ್ ಕುಮಾರ್ ತಿಳಿಸಿದ್ದಾರೆ. ಎರಡು ವಾರಗಳಲ್ಲಿ 15 ಉಗ್ರರನ್ನು ಹತ್ಯೆ ಮಾಡಲಾಗಿದೆ ಎಂದು ಐಜಿಪಿ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಶೋಪಿಯಾನ ಜಿಲ್ಲೆಯ ಡ್ರಾಗಡ್ ಪ್ರದೇಶದಲ್ಲಿ ಉಗ್ರರು ಅಡಗಿರುವ ಮಾಹಿತಿ ಆಧರಿಸಿ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆ ಕೈಗೊಂಡವು. ಈ ವೇಳೆ ಭದ್ರತಾ ಪಡೆಗಳ ಮೇಲೆ ಉಗ್ರರು ಗುಂಡು ಹಾರಿಸಿದ್ದರು. ಪ್ರತಿಯಾಗಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಇಬ್ಬರು ಉಗ್ರರು ಹತರಾದರು ಎಂದು ಪೊಲೀಸರು ತಿಳಿಸಿದ್ದಾರೆ.

ಈ ತಿಂಗಳು ಕಾಶ್ಮೀರ ಕಣಿವೆಯ ವಿವಿಧ ಭಾಗಗಳಲ್ಲಿ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ ಕೆಲ ನಾಗರಿಕರು ಪ್ರಾಣ ಕಳೆದುಕೊಂಡಿದ್ದಾರೆ. ಇವರಲ್ಲಿ ಹೊರ ರಾಜ್ಯದಿಂದ ವಲಸೆ ಬಂದ ವಲಸೆ ಕಾರ್ಮಿಕರೇ ಹೆಚ್ಚು.

ನ. 18ರಿಂದ 'ಮುಂಬೈ ಲಿಟ್‌ಫೆಸ್ಟ್'

ಮುಂಬೈ (ಪಿಟಿಐ): 'ಟಾಟಾ ಲಿಟರೇಚರ್ ಲೈವ್! ಮುಂಬೈ ಲಿಟ್‌ಫೆಸ್ಟ್'ನ 12ನೇ ಆವೃತ್ತಿಯು ನವೆಂಬರ್ 18ರಿಂದ 21ರವರೆಗೆ ನಡೆಯಲಿದೆ. ಕೋವಿಡ್ ಕಾರಣದಿಂದ ಸತತ ಎರಡನೇ ವರ್ಷವೂ ಈ ಉತ್ಸವ ವರ್ಚುವಲ್ ವೇದಿಕೆ ಮೂಲಕ ಜರುಗಲಿದೆ.

ಸಾಹಿತ್ಯ ಲೋಕದ ದಿಗ್ಗಜರಾದ ಅಮಿತಾವ್ ಘೋಷ್, ಸಲ್ಮಾನ್ ರಶ್ದಿ, ಆನಿ ಎನ್‌ರೈಟ್, ರಸ್ಕಿನ್ ಬಾಂಡ್, ನಿಕ್ ಹಾರ್ನ್‌ಬಿ ಸೇರಿದಂತೆ ಹಲವರು ಖ್ಯಾತನಾಮರು ಉತ್ಸವದಲ್ಲಿ ಭಾಗವಹಿಸಲಿದ್ದಾರೆ.

ಸಾಹಿತ್ಯ, ತತ್ವಶಾಸ್ತ್ರ, ವಿಜ್ಞಾನ, ವ್ಯಾಪಾರ ಮತ್ತು ಕಲಾ ಕ್ಷೇತ್ರದ ಅಗ್ರಗಣ್ಯರು ಉತ್ಸವದಲ್ಲಿ ಪಾಲ್ಗೊಳ್ಳುವರು ಎಂದು ಉತ್ಸವದ ನಿರ್ದೇಶಕರಾದ ಆಮಿ ಫರ್ನಾಂಡಿಸ್ ತಿಳಿಸಿದ್ದಾರೆ.

ಎನ್‌ಇಇಟಿ: ಅಕ್ರಮ ತನಿಖೆಗೆ ಕೋರಿ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಸೆ.12ರಂದು ನಡೆದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯಲ್ಲಿ (ಎನ್‌ಇಇಟಿ–ಯುಜಿ) ಅಕ್ರಮಗಳಾಗಿವೆ ಎಂದು ಆರೋಪಿಸಿ ವಿವಿಧ ರಾಜ್ಯಗಳಲ್ಲಿ ದಾಖಲಾಗಿರುವ ಎಫ್‌ಐಆರ್‌ಗಳನ್ನು ಆಧರಿಸಿ ತನಿಖೆ ನಡೆಸಲು ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಈ ರೀತಿ ಹಸ್ತಕ್ಷೇಪ ಮಾಡುವುದರಿಂದ ತುಂಬಾ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಲ್. ನಾಗೇಶ್ವರ ರಾವ್ ನೇತೃತ್ವದ ನ್ಯಾಯಪೀಠ, ಅರ್ಜಿದಾರರು ಎತ್ತಿರುವ ಸಮಸ್ಯೆಗಳನ್ನು ಅರಿತುಕೊಂಡಿದ್ದೇನೆ. ಆದರೆ, ಈ ವಿಷಯದಲ್ಲಿ ಮಧ್ಯಪ್ರವೇಶಿಸಲು ಆಸಕ್ತಿ ತೋರುವುದಿಲ್ಲ ಎಂದು ಹೇಳಿದೆ.

'ನಮಗೆ ನೀವು ಹೇಳುತ್ತಿರುವುದು ಅರ್ಥವಾಗಿದೆ. ಆದರೆ, ಅದು ಬಹಳಷ್ಟು ಗೊಂದಲವನ್ನು ಸೃಷ್ಟಿಸುತ್ತದೆ. ಒಂದೊಮ್ಮೆ ನಾವು ಹಸ್ತಕ್ಷೇಪ ಮಾಡಿದರೆ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಗೆ ಹಾನಿಕಾರಕವಾಗುತ್ತದೆ' ಎಂದು ಪೀಠ ಹೇಳಿದೆ.

ಆಕ್ಷೇಪಾರ್ಹ ಪೋಸ್ಟ್ ಕಲ್ಲು ತೂರಾಟ

ಔರಂಗಾಬಾದ್ (ಪಿಟಿಐ): ಮೊಘಲ್ ಚಕ್ರವರ್ತಿ ಔರಂಗಜೇಬ್ ವಿರುದ್ಧ ಫೇಸ್‌ಬುಕ್‌ನಲ್ಲಿ ಆಕ್ಷೇಪಾರ್ಹ ಪೋಸ್ಟ್ ಹಾಕಿರುವುದನ್ನು ಖಂಡಿಸಿ 150ಕ್ಕೂ ಹೆಚ್ಚು ಜನರ ಉದ್ರಿಕ್ತ ಗುಂಪು ಮಹಾರಾಷ್ಟ್ರದ ಉಸ್ಮಾನಾಬಾದ್ ನಗರದ ರಸ್ತೆಯಲ್ಲಿ ವಾಹನಗಳು ಮತ್ತು ಹೋರ್ಡಿಂಗ್‌ಗಳ ಮೇಲೆ ಕಲ್ಲು ತೂರಾಟ ನಡೆಸಿದೆ ಎಂದು ಪೊಲೀಸರು ಬುಧವಾರ ಹೇಳಿದ್ದಾರೆ.

ವಿಜಯ್ ಚೌಕ್ ಪ್ರದೇಶದಲ್ಲಿ ಮಂಗಳವಾರ ರಾತ್ರಿ 10.30ರ ಸುಮಾರಿಗೆ ಈ ಘಟನೆ ನಡೆದಿದೆ. ಉದ್ರಿಕ್ತ ಗುಂಪನ್ನು ತಡೆಯಲು ಯತ್ನಿಸುವಾಗ ನಾಲ್ವರು ಪೊಲೀಸರು ಗಾಯಗೊಂಡಿದ್ದಾರೆ. ವಿಜಯ್ ಚೌಕ್ ಪ್ರದೇಶದಲ್ಲಿ ಪೊಲೀಸ್ ವಾಹನ ಮತ್ತು ಆಟೊ ರಿಕ್ಷಾವನ್ನು ಉದ್ರಿಕ್ತ ಜನರು ಧ್ವಂಸಗೊಳಿಸಿದ್ದಾರೆ' ಎಂದು ಅವರು ಹೇಳಿದರು.

ಕಸದಲ್ಲಿ 100 ಗ್ರಾಂ ಚಿನ್ನದ ನಾಣ್ಯ ಪತ್ತೆ ಮಾಲೀಕರಿಗೆ ಹಿಂತಿರುಗಿಸಿದ ಮಹಿಳೆ

ಚೆನ್ನೈ: ತಮಿಳುನಾಡಿನಲ್ಲಿ ಪೌರಕಾರ್ಮಿಕ ಮಹಿಳೆಯೊಬ್ಬರು ತಾವು ಕೆಲಸ ಮಾಡುವ ಸಂದರ್ಭದಲ್ಲಿ ಕಸದ ತೊಟ್ಟಿಯಲ್ಲಿ ಸಿಕ್ಕ 100 ಗ್ರಾಂ ಚಿನ್ನದ ನಾಣ್ಯವನ್ನು ಮಾಲೀಕರಿಗೆ ಹಿಂತಿರುಗಿಸುವ ಮೂಲಕ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಈ ನಾಣ್ಯದ ಬೆಲೆ ₹7.5 ಲಕ್ಷ ಎಂದು ಹೇಳಲಾಗಿದೆ. ಪೌರ ಕಾರ್ಮಿಕ ಮಹಿಳೆ ಮೇರಿ ಅವರು ತಿರುವೊಟ್ಟಿಯುರ್ ಬೀದಿಯಲ್ಲಿ ಕಸ ಬೇರ್ಪಡಿಸುತ್ತಿದ್ದ ಸಂದರ್ಭದಲ್ಲಿ ನಾಣ್ಯದ ಶಬ್ದ ಕೇಳಿಸಿತ್ತು. ಚೀಲದಲ್ಲಿ ಚಿನ್ನದ ನಾಣ್ಯ ಇರುವುದು ಪತ್ತೆಯಾಗಿತ್ತು. ಕೂಡಲೇ ಮೇರಿ ಅದನ್ನು ಸಮೀಪದ ಪೊಲೀಸ್ ಠಾಣೆಗೆ ಒಪ್ಪಿಸಿದ್ದರು.

ಇದರ ನಡುವೆ ತಿರುವೊಟ್ಟಿಯುರ್ನ ಗಣೇಶ್ ರಾಮನ್ ಅವರು ತಮ್ಮ ಮನೆಯಲ್ಲಿ 100 ಗ್ರಾಂ ಚಿನ್ನದ ನಾಣ್ಯ ನಾಪತ್ತೆಯಾಗಿದೆ ಎಂದು ಪೊಲೀಸರಿಗೆ ದೂರು ನೀಡಿದ್ದರು. ಚಿನ್ನದ ನಾಣ್ಯವನ್ನು ಚಿಕ್ಕ ಚೀಲದಲ್ಲಿ ಸುತ್ತಿ ತನ್ನ ಹಾಸಿಗೆಯ ಕೆಳಗೆ ಇಟ್ಟುಕೊಂಡಿದ್ದೆ. ಈ ಮಾಹಿತಿ ಅರಿಯದ ನನ್ನ ಪತ್ನಿ ಆ ಚೀಲವನ್ನು ಕಸದ ಬುಟ್ಟಿಗೆ ಎಸೆದಿರುವುದಾಗಿ ಪೊಲೀಸರ ಬಳಿ ಹೇಳಿದ್ದರು.

ಪ್ರಕರಣ ಸಂಬಂಧ ತನಿಖೆ ನಡೆಸಿದ ಪೊಲೀಸರು ಸಮೀಪದ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಿದ್ದರು. ಜತೆಗೆ, ಮೇರಿ ಹಾಗೂ ಮನೆ ಮಾಲೀಕರನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಿದ್ದರು. ಇದೇ ವೇಳೆ ಮಾಲೀಕರಿಗೆ ನಾಣ್ಯವನ್ನು ಹಿಂತಿರುಗಿಸಿದ್ದಾರೆ. ಜತೆಗೆ, ಮೇರಿಯವರ ಪ್ರಾಮಾಣಿಕತೆಗೆ ಪೊಲೀಸರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಬಂದ್ ನಿರ್ಬಂಧ: 'ಸುಪ್ರೀಂ' ಆದೇಶ ಉಲ್ಲಂಘಿಸಿದರೆ ಗಂಭೀರವಾಗಿ ಪರಿಗಣನೆ– ಕೇರಳ ಹೈಕೋರ್ಟ್

ಕೊಚ್ಚಿ (ಪಿಟಿಐ): ರಾಜ್ಯದಲ್ಲಿ ಬಂದ್ ಅಥವಾ ಮುಷ್ಕರವನ್ನು ನಿರ್ಬಂಧಿಸುವಂತೆ ಸುಪ್ರೀಂ ಕೋರ್ಟ್ ಮತ್ತು ತಾನು ನೀಡಿರುವ ನಿರ್ದೇಶನಗಳನ್ನು ಎಲ್ಲ ಅಧಿಕಾರಿಗಳು ಕಡ್ಡಾಯವಾಗಿ ಜಾರಿಗೊಳಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಸೂಚಿಸಿರುವ ಕೇರಳ ಹೈಕೋರ್ಟ್, 'ಆದೇಶ ಉಲ್ಲಂಘಿಸುವುದನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ' ಎಂದು ಎಚ್ಚರಿಕೆ ನೀಡಿದೆ.

ವಿದ್ಯಾರ್ಥಿ ಸಂಘಟನೆಗಳು ಅಥವಾ ರಾಜಕೀಯ ಪಕ್ಷಗಳು ಕರೆ ನೀಡುವ 'ಶೈಕ್ಷಣಿಕ ಬಂದ್' ಗಳು ಕಾನೂನುಬಾಹಿರ, ಅಸಾಂವಿಧಾನಿಕ ಮತ್ತು ಸುಪ್ರೀಂ ಕೋರ್ಟ್ ನೀಡಿದ ಆದೇಶದ ಉಲ್ಲಂಘನೆ ಎಂಬುದಾಗಿ ಘೋಷಿಸಬೇಕೆಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿ ವಿಲೇವಾರಿ ಮಾಡುವಾಗ ಹೈಕೋರ್ಟ್ ಈ ರೀತಿ ಹೇಳಿದೆ.

2018ರಲ್ಲಿ ಕೆಲವು ವಿದ್ಯಾರ್ಥಿ ಸಂಘಟನೆಗಳು ಕರೆ ನೀಡಿದ್ದ ಬಂದ್‌ನಿಂದಾಗಿ, ಕೊಲ್ಲಂ ಜಿಲ್ಲೆಯಲ್ಲಿರುವ ಕೊಟ್ಟಾರಕರ, ಪೆರ್ಮುಕುಲಂನಲ್ಲಿನ ಸರ್ಕಾರಿ ಪಿವಿಎಚ್‌ಎಸ್ ಶಾಲೆ ಕೆಲವು ದಿನಗಳವರೆಗೆ ಮುಚ್ಚಬೇಕಾಯಿತು. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿರಲಿಲ್ಲ.

ಬಳಿಕ ಪೊಲೀಸರು ಶಾಲೆಗೆ ಸಂಬಂಧಿಸಿದವರು, ಪೋಷಕರು ಮತ್ತು ಶಿಕ್ಷಕರನ್ನು ಕರೆದು ಸಭೆ ನಡೆಸಿ ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸಿದ್ದರು. ಇದಾದ ನಂತರ ಇಂಥ ಘಟನೆ ನಡೆದಿಲ್ಲ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿತ್ತು.

ರಾಜ್ಯ ಸರ್ಕಾರ ಸಲ್ಲಿಸಿರುವ ಈ ಮಾಹಿತಿಯ ಹಿನ್ನೆಲೆಯಲ್ಲಿ ಹೈಕೋರ್ಟ್ ಈ ಪ್ರಕರಣದ ಅರ್ಜಿಯನ್ನು ಹಾಗೆ ಉಳಿಸಿಕೊಳ್ಳುವುದಿಲ್ಲ' ಎಂದು ಹೇಳಿದೆ.

'ಈ ಪ್ರಕರಣದಲ್ಲಿನ ಸತ್ಯಾಸತ್ಯತೆ ಮತ್ತು ಸನ್ನಿವೇಶಗಳನ್ನು ಗಮನಿಸುವ ಜೊತೆಗೆ, ಎಲ್ಲಾ ಅಧಿಕಾರಿಗಳು ಸುಪ್ರೀಂ ಕೋರ್ಟ್ ಮತ್ತು ಈ ನ್ಯಾಯಾಲಯದ ನಿರ್ದೇಶನವನ್ನು ಅನುಷ್ಠಾನಗೊಳಿಸಬೇಕು. ನ್ಯಾಯಾಲಯ ಹೇಳಿರುವಂತೆ ಭವಿಷ್ಯದಲ್ಲಿ ಇಂಥ ಯಾವುದೇ ದೂರು ಬರದಂತೆ, ನ್ಯಾಯಾಲಯದ ಆದೇಶ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು. ಒಂದೊಮ್ಮೆ ಆದೇಶ ಉಲ್ಲಂಘನೆಯಾದರೆ, ಅದನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ' ಎಂದು ನ್ಯಾಯಪೀಠ ತಿಳಿಸಿದೆ.

ದತ್ತಾಂಶ ಮಾರಾಟಕ್ಕಿಟ್ಟ ಸರ್ಕಾರ !

ಒಂದನೇ ಪುಟದಿಂದ...

ಯಾವ ಮಾಹಿತಿಯನ್ನು ಹಂಚಿಕೊಳ್ಳಬೇಕು ಮತ್ತು ಯಾವುದನ್ನು ಹಂಚಿಕೊಳ್ಳಬಾರದು ಎಂಬುದಕ್ಕೆ ಸಂಬಂಧಿಸಿದಂತೆ ನೀತಿಯು ಸ್ಪಷ್ಟತೆಯನ್ನು ಒಳಗೊಂಡಿದೆ.

'ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಹಲವು ಬಗೆಯ ಸಂಶೋಧನೆಗಳು ನಡೆಯುತ್ತವೆ. ಅದಕ್ಕೆ ದತ್ತಾಂಶ ಅತ್ಯಗತ್ಯ. ಕಾನೂನು ಬದ್ಧವಾಗಿ ದತ್ತಾಂಶವನ್ನು ಒದಗಿಸಲಾಗುವುದು. ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಡೆಟಾ ಸೆಟ್‌ಗಳನ್ನು ಬಿಟ್ಟು, ಇತರ ಎಲ್ಲಾ ಡೇಟಾ ಸೆಟ್‌ಗಳನ್ನು 'ಕರ್ನಾಟಕ ಓಪನ್ ಡೇಟಾ ಪ್ಲಾಟ್ ಫಾರಂ' ಅಡಿ ಪ್ರಕಟಿಸಲು ಪರಿಗಣಿಸಲಾಗುತ್ತದೆ. ಇದನ್ನು ಸಾರ್ವಜನಿಕರು ಉಚಿತವಾಗಿಯೂ ಬಳಸಬಹುದು' ಎಂದರು.

ಎಲ್ಲ ಇಲಾಖೆಯಲ್ಲೂ ಸಿಡಿಒ: ಎಲ್ಲಾ ಇಲಾಖೆಗಳಲ್ಲೂ ಮುಖ್ಯ ದತ್ತಾಂಶ ಅಧಿಕಾರಿ (ಚೀಫ್ ಡೇಟಾ ಆಫೀಸರ್)ಗಳನ್ನು ನೇಮಿಸಲಾಗುವುದು. ಇವರ ಮೂಲಕ ದತ್ತಾಂಶವನ್ನು ಪ್ರಕಟಿಸಲಾಗುತ್ತದೆ. ಇದಕ್ಕಾಗಿ 'ಡೇಟಾ ಕಂಟ್ರೋಲರ್'ಗಳನ್ನೂ ನೇಮಿಸಿಕೊಳ್ಳಬಹುದು. ಇವರು ಮಾಹಿತಿಗಳನ್ನು ವರ್ಗೀಕರಿಸಿ ಯಾವುದನ್ನು ಹಾಕಬೇಕು ಮತ್ತು ಯಾವುದನ್ನು ಹಾಕಬಾರದು ಎಂಬುದನ್ನು ನಿರ್ಧರಿಸಿ, ಹಂಚಿಕೊಳ್ಳಬಹುದಾದ ದತ್ತಾಂಶವನ್ನು ಮಾತ್ರ ಸಾರ್ವಜನಿಕ ವೇದಿಕೆಯಲ್ಲಿ ಒದಗಿಸುತ್ತಾರೆ ಎಂದು ಶ್ರೀವ್ಯಾಸ್ ವಿವರಿಸಿದರು.

'ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಯು ದತ್ತಾಂಶವನ್ನು ಸುಲಭವಾಗಿ ಪಡೆಯಬಹುದು. ಈಗ ಪತ್ರ ಬರೆದು, ವಿವಿಧ ಪ್ರಕ್ರಿಯೆಗಳನ್ನು ಅನುಸರಿಸಿ ಪಡೆಯಬೇಕಾಗಿದೆ. ಕೆಲವು ರಾಜ್ಯಗಳು ಈಗಾಗಲೇ ಈ ಪದ್ಧತಿಯನ್ನು ಆರಂಭಿಸಿವೆ. ಆಡಳಿತದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವಕ್ಕೆ ಪೂರಕವಾಗಿದೆ. ಮುಂದುವರಿದ ದೇಶಗಳಲ್ಲಿ ಈ ಪದ್ಧತಿ ಚಾಲ್ತಿಯಲ್ಲಿದೆ' ಎಂದರು.

'ಕೇಂದ್ರ ಸರ್ಕಾರವು 'ಉಜ್ವಲಾ' ಯೋಜನೆ ಮತ್ತು ಕೋವಿಡ್ ಲಸಿಕೆ ವಿತರಣೆಗೆ ದತ್ತಾಂಶವನ್ನು ಬಳಸಿಕೊಂಡಿದೆ. ಉಜ್ವಲಾ ಯೋಜನೆಯಲ್ಲಿ ಫಲಾನುಭವಿಗಳಿಗೆ ಸಮೀಪದಲ್ಲಿರುವ ಏಜೆನ್ಸಿಗಳನ್ನು ಜೋಡಿಸಲಾಯಿತು. ಲಸಿಕೆ ವಿತರಣೆಗೆ 65 ವರ್ಷ ಮೇಲ್ಪಟ್ಟವರಿಗೆ ಮೊದಲು, ಆ ಬಳಿಕ 45 ರಿಂದ 65 ಎಂದು ವರ್ಗೀಕರಿಸಲು ದತ್ತಾಂಶ ಸಹಾಯಕವಾಯಿತು' ಎಂದು ಅವರು ಹೇಳಿದರು.

'ಮಾರಾಟಕ್ಕೆ ಪ್ರತ್ಯೇಕ ನೀತಿ ಇರಲಿ'

ಯಾವುದೋ ಒಂದು ನಗರದಲ್ಲಿ ಬೀದಿ ದೀಪಗಳ ಬಗ್ಗೆ ಬಗ್ಗೆ ದತ್ತಾಂಶ ಕೊಟ್ಟರೆ ಸಮಸ್ಯೆ ಇಲ್ಲ. ಆದರೆ, ಸ್ವತ್ತುಗಳ ದತ್ತಾಂಶ ಕೊಟ್ಟರೆ ರಿಯಲ್ ಎಸ್ಟೇಟ್ ಅದರ ದುರುಪಯೋಗ ಮಾಡಿಕೊಳ್ಳಬಹುದು. ಯಾವುದೇ ಮಾಹಿತಿಯನ್ನು ಅನಾಮಧೇಯವಾಗಿ ಮಾಡಲು ಸಾಧ್ಯವಿಲ್ಲ. ಇದೂ ಕೂಡಾ ಅಪಾಯಕಾರಿ. ಯಾವುದೇ ದತ್ತಾಂಶ ಮಾರುವುದೇ ಇದ್ದರೆ, ಅದಕ್ಕೆ ಪ್ರತ್ಯೇಕ ದತ್ತಾಂಶ ನೀತಿ ಪ್ರಕಟಿಸಬೇಕು. ಮುಕ್ತ ದತ್ತಾಂಶ ನೀತಿಯಲ್ಲಿ ಸೇರಿಸಿದ್ದು ಸರಿಯಲ್ಲ.

ಜಿ.ಎನ್.ತೇಜೇಶ್, ಸಾರ್ವಜನಿಕ ಹಿತಾಸಕ್ತಿ ತಜ್ಞ, ದತ್ತಾಂಶ ಕಾರ್ಯಕರ್ತ

'ಸಾರ್ವಜನಿಕ ಚರ್ಚೆ ಆಗಲಿ'

ಈ ನೀತಿಯ ಬಗ್ಗೆ ಸಾರ್ವಜನಿಕ ಚರ್ಚೆ ನಡೆಯಬೇಕು. ನೀತಿ ರೂಪಿಸುವ ಹಂತದಲ್ಲೇ ಸಲಹೆ ಸೂಚನೆಗಳನ್ನು ಪಡೆಯಬೇಕಿತ್ತು. ಈ ನೀತಿ ಪ್ರಕಟಿಸಿದ್ದೇ ಗೊತ್ತಿರಲಿಲ್ಲ. ದತ್ತಾಂಶ ಮುಕ್ತವಾಗಿ ಹಂಚಿಕೊಳ್ಳುವ ಉದ್ದೇಶ ಏನು ಎಂಬ ಸ್ಪಷ್ಟತೆ ಇಲ್ಲ. ಸರ್ಕಾರದ ಬಳಿ ತುಂಬಾ ಡೇಟಾ ಇದೆ, ಅದನ್ನು ಮಾರಿದರೆ, ಹಣ ಸಿಗುತ್ತದೆ ಎಂಬ ಭಾವನೆ ಮೂಡುತ್ತದೆ. ಯುರೋಪ್‌ನಲ್ಲಿ ಸಾರ್ವಜನಿಕರ ಬಳಕೆಗೆ ಅತಿ ಕಡಿಮೆ ಬೆಲೆಗೆ ದತ್ತಾಂಶ ಮಾರಲಾಗುತ್ತದೆ. ಅನಾಮಧೇಯ ದತ್ತಾಂಶ ಬಳಕೆ ಮಾಡುವಾಗ ಪ್ರಯೋಜನ ಸಾರ್ವಜನಿಕರಿಗೆ ಆಗುತ್ತದೆ ಎಂಬುದು ಮುಖ್ಯ

ನಂದಿನಿ , ಐಟಿ ಫಾರ್ ಚೇಂಜ್

ಮಾರುವ ದತ್ತಾಂಶದಲ್ಲಿ ಯಾವುದೇ ವ್ಯಕ್ತಿ ಮತ್ತು ಆತನಿಗೆ ಸಂಬಂಧಿಸಿದ ಮಾಹಿತಿ ಇರುವುದಿಲ್ಲ. ಇಲಾಖೆಗಳೇ ದತ್ತಾಂಶವನ್ನು ಅನಾಮಧೇಯಗೊಳಿಸುತ್ತವೆ

ಶ್ರೀವ್ಯಾಸ್, ಯೋಜನಾ ನಿರ್ದೇಶಕ, ಕರ್ನಾಟಕ ಓಪನ್ ಡೇಟಾ

ಉತ್ತರ ಪ್ರದೇಶದ ಕುಶಿನಗರದಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಉದ್ಘಾಟನೆ

ನಾಗರಿಕ ವಿಮಾನಯಾನ ಕ್ಷೇತ್ರಕ್ಕೆ ಹೊಸ ಶಕ್ತಿ: ಪ್ರಧಾನಿ

ಕುಶಿನಗರ (ಉತ್ತರ ಪ್ರದೇಶ) (ಪಿಟಿಐ): ನೂತನ ವಿಮಾನ ನಿಲ್ದಾಣಗಳ ನಿರ್ಮಾಣ, ಹೊಸ ವಾಯು ಮಾರ್ಗಗಳ ಅನುಮೋದನೆ ಸೇರಿದಂತೆ ನಾಗರಿಕ ವಿಮಾನಯಾನ ಕ್ಷೇತ್ರಕ್ಕೆ ಹೊಸ ಶಕ್ತಿಯನ್ನು ತುಂಬಲು ನಮ್ಮ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

ಕುಶಿನಗರದಲ್ಲಿ ಬುಧವಾರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಈ ನೂತನ ವಿಮಾನ ನಿಲ್ದಾಣ, ರಾಷ್ಟ್ರೀಯ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂಪರ್ಕವನ್ನು ಹೆಚ್ಚಿಸುವ ಜೊತೆಗೆ, ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ. ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸುವ ಜೊತೆಗೆ, ಉದ್ಯೋಗಾವಕಾಶಗಳ ಸೃಷ್ಟಿಗೂ ನೆರವಾಗುತ್ತದೆ' ಎಂದು ಹೇಳಿದರು.

ಭಗವಾನ್ ಬುದ್ಧನ ತಾಣಗಳ ಅಭಿವೃದ್ಧಿ ಬಗ್ಗೆ ಸರ್ಕಾರ ವಿಶೇಷ ಗಮನ ಹರಿಸುತ್ತಿದೆ ಎಂದು ಹೇಳಿದರು.

ಏರ್ ಇಂಡಿಯಾ ವಿಮಾನಯಾನ ಸಂಸ್ಥೆಯನ್ನು ಖಾಸಗೀಕರಣಗೊಳಿಸಿರುವ ಸರ್ಕಾರದ ನಿರ್ಧಾರವನ್ನು ಉಲ್ಲೇಖಿಸಿದ ಮೋದಿ, 'ಏರ್‌ಇಂಡಿಯಾವನ್ನು ಖಾಸಗೀಕರಣಗೊಳಿಸುವ ಮೂಲಕ ಬಹುದೊಡ್ಡ ಕ್ರಮವನ್ನು ಕೈಗೊಂಡಿದೆ. ಇದರಿಂದಾಗಿ ವಿಮಾನಯಾನ ಕ್ಷೇತ್ರವು ಮತ್ತಷ್ಟು ವೃತ್ತಿಪರವಾಗಿ ನಡೆಯಬೇಕು ಮತ್ತು ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವ ಜೊತೆಗೆ, ಸುರಕ್ಷತೆಗೂ ಆದ್ಯತೆ ನೀಡಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ' ಎಂದರು.



ಉತ್ತರ ಪ್ರದೇಶದ ಕುಶಿನಗರದಲ್ಲಿ ಬುಧವಾರ ಉದ್ಘಾಟನೆಗೊಂಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬೌದ್ಧ ಧರ್ಮಗುರುಗಳ ಗುಂಪೊಂದು ಶ್ರೀಲಂಕಾ ಏರ್‌ಲೈನ್ಸ್ ಮೂಲಕ ಬಂದಿಳಿಯಿತು

ಇತ್ತೀಚೆಗೆ ಉದ್ಘಾಟಿಸಿದ ನೂತನ ಯೋಜನೆ 'ಗತಿ ಶಕ್ತಿ'– ರಾಷ್ಟ್ರೀಯ ಮಾಸ್ಟರ್ ಪ್ಲಾನ್' ಕುರಿತು ಮಾತನಾಡಿದ ಮೋದಿ, 'ಈ ಯೋಜನೆ ಕೇವಲ ಆಡಳಿತ ಸುಧಾರಿಸುವುದಷ್ಟೇ ಅಲ್ಲದೇ, ರಸ್ತೆ, ರೈಲು ಅಥವಾ ವಿಮಾನ ಯಾವುದೇ ಕ್ಷೇತ್ರವಿರಲಿ ಅವು ಪರಸ್ಪರ ಬೆಂಬಲಿಸುವ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೂ ನೆರವಾಗುತ್ತದೆ' ಎಂದು ಹೇಳಿದರು.

ಉತ್ತರ ಪ್ರದೇಶ ರಾಜ್ಯದಲ್ಲಿರುವ ಕುಶಿನಗರ, ಭಗವಾನ್ ಗೌತಮ ಬುದ್ಧ ತೀರಿಕೊಂಡ ತಾಣ. ಇದನ್ನು ಬುದ್ಧ ಮಹಾಪರಿನಿರ್ವಾಣಗೊಂಡ ಸ್ಥಳ ಎಂದು ಕರೆಯುತ್ತಾರೆ. ಜಗತ್ತಿನಲ್ಲಿರುವ ಬೌದ್ಧ ತಾಣಗಳಲ್ಲಿ ಇದು ಬಹಳ ಪ್ರಮುಖವಾದ ತಾಣ. ಜಗತ್ತಿನ ಬೇರೆ ಬೇರೆ ಭಾಗದಲ್ಲಿರುವ ಬೌದ್ಧ ಕ್ಷೇತ್ರಗಳನ್ನು ತಲಪಲು ಹಾಗೂ ವಿಶ್ವದ ವಿವಿಧ ಭಾಗಗಳಲ್ಲಿರುವ ಬೌದ್ಧರ ಅನುಯಾಯಿಗಳಿಗೆ ಬುದ್ಧನ ಪರಿನಿರ್ವಾಣ ಸ್ಥಳಕ್ಕೆ ಸುಲಭವಾಗಿ ತಲುಪಲು ಈ ವಿಮಾನ ನಿಲ್ದಾಣ ಸಹಕಾರಿಯಾಗಲಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯದ ಪ್ರಕಟಣೆ ತಿಳಿಸಿದೆ.

3600 ಚದರ ಮೀಟರ್ ವಿಸ್ತೀರ್ಣದಲ್ಲಿರುವ ನೂತನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ₹260 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಮತ್ತು ಉತ್ತರ ಪ್ರದೇಶ ಸರ್ಕಾರ ಸಹಯೋಗದಲ್ಲಿ ನಿರ್ಮಾಣವಾಗಿದೆ.

ರೈತರ ಹತ್ಯೆ: ಹಾನಿ ತಡೆಗೆ ಮೋದಿ ಯತ್ನ

ಕುಶಿನಗರ/ಲಖನೌ: ಲಖಿಂಪುರ-ಖೇರಿಯಲ್ಲಿ ಕೇಂದ್ರ ಸಚಿವರ ಕಾರು ಹರಿಸಿ, ರೈತರ ಹತ್ಯೆಯ ಪರಿಣಾಮವು ಚುನಾವಣೆಯ ಮೇಲೆ ಆಗುವುದನ್ನು ತಡೆಯಲು ಮೋದಿ ಅವರು ಪ್ರಯತ್ನಿಸಿದ್ದಾರೆ. ರೈತರಿಗಾಗಿ ಸರ್ಕಾರ ಏನೇನು ಮಾಡಿದೆ ಎಂಬ ಪಟ್ಟಿಯನ್ನು ಜನರ ಮುಂದೆ ಇಟ್ಟಿದ್ದಾರೆ

'ಕೇಂದ್ರ ಮತ್ತು ರಾಜ್ಯ ಸರ್ಕಾರವು ರೈತರ ಉತ್ಪನ್ನಗಳನ್ನು ಖರೀದಿಸುವಲ್ಲಿ ದಾಖಲೆ ನಿರ್ಮಿಸಿವೆ. ಕೃಷಿ ಉತ್ಪನ್ನಗಳ ಖರೀದಿ ಮೂಲಕ ಎರಡೂ ಸರ್ಕಾರಗಳು ಉತ್ತರ ಪ್ರದೇಶದ ರೈತರ ಖಾತೆಗಳಿಗೆ ಒಟ್ಟು ₹80,000 ಕೋಟಿ ಹಣ ವರ್ಗಾವಣೆ ಮಾಡಿವೆ. ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಅಡಿ ರಾಜ್ಯದ ರೈತರ ಬ್ಯಾಂಕ್ ಖಾತೆಗಳಿಗೆ ₹37,000 ಕೋಟಿಗೂ ಹೆಚ್ಚು ಹಣವನ್ನು ವರ್ಗಾವಣೆ ಮಾಡಲಾಗಿದೆ' ಎಂದು ಮೋದಿ ಅವರು ವಿವರಿಸಿದ್ದಾರೆ.

ಮುಂದಿನ ಚುನಾವಣೆಯಲ್ಲಿ ಶೇ 40ರಷ್ಟು ಟಿಕೆಟ್‌ಗಳನ್ನು ಮಹಿಳೆಯರಿಗೆ ಮೀಸಲಿರಿಸುವ ಕಾಂಗ್ರೆಸ್‌ನ ಘೋಷಣೆಗೂ ಪ್ರಧಾನಿ ಮೋದಿ ಪರೋಕ್ಷವಾಗಿ ತಿರುಗೇಟು ನೀಡಿದ್ದಾರೆ.

'ರಾಜ್ಯದಲ್ಲಿ ಮಹಿಳೆಯರ ಸಬಲೀಕರಣಕ್ಕೆ ನಮ್ಮ ಸರ್ಕಾರವು ಮಹತ್ವದ ಹೆಜ್ಜೆಗಳನ್ನು ಇರಿಸಿದೆ. ರಾಜ್ಯದಲ್ಲಿ ಈಚೆಗೆ ನೋಂದಣಿಯಾದ ಹೊಸ ಮನೆಗಳಲ್ಲಿ, ಬಹುಪಾಲು ಮನೆಗಳು ಮಹಿಳೆಯರ ಹೆಸರಿನಲ್ಲೇ ಇವೆ. ಬಡವರಿಗೆ ಪಕ್ಕಾ ಮನೆ, ಶೌಚಾಲಯ, ವಿದ್ಯುತ್ ಸಂಪರ್ಕ, ಎಲ್‌ಪಿಜಿ ಸಂಪರ್ಕ ದೊರೆತರೆ ಅವರ ಆತ್ಮವಿಶ್ವಾಸ ವೃದ್ಧಿಸುತ್ತದೆ. ಈ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ' ಎಂದು ಅವರು ಹೇಳಿದ್ದಾರೆ.

ಪ್ರಜಾವಾಣಿ ಗುರುವಾರ, 21 ಅಕ್ಟೋಬರ್ 2021

ಸ್ಪರ್ಧಾ ವಾಣಿ

ಬ್ಯಾಂಕಿಂಗ್ ಪರೀಕ್ಷೆಯ ಬೀಗಕ್ಕೆ ತಯಾರಿ ಎಂಬ ಕೀಲಿಕೈ





ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉದ್ಯೋಗ ಹೊಂದಬೇಕೆಂಬ ಲಕ್ಷಾಂತರ ಅಭ್ಯರ್ಥಿಗಳಿಗೆ ಸದ್ಯ ಮತ್ತೊಂದು ಅವಕಾಶ ಒದಗಿಬಂದಿದೆ. ಎಸ್‌ಬಿಐ ಹಲವಾರು ಹುದ್ದೆಗಳ ನೇಮಕಾತಿ ಪರೀಕ್ಷೆಗೆ ಅರ್ಜಿ ಆಹ್ವಾನಿಸಿದ್ದು, ಈ ಪರೀಕ್ಷೆ ತಯಾರಿ ಹೇಗಿರಬೇಕು?

ಅರುಣ ಬ. ಚೂರಿ

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉದ್ಯೋಗ ಹೊಂದಬೇಕೆಂಬ ಲಕ್ಷಾಂತರ ಅಭ್ಯರ್ಥಿಗಳಿಗೆ ಸದ್ಯ ಮತ್ತೊಂದು ಅವಕಾಶ ಒದಗಿಬಂದಿದೆ. ನೇಮಕಾತಿಯ ಸ್ಪರ್ಧಾತ್ಮಕ ಯುಗದಲ್ಲಿ ಅದು ಪ್ರಶಂಸನೀಯ ವಿಷಯವೇ ಸರಿ ಹಾಗೂ ಭವಿಷ್ಯದಲ್ಲಿ ಔದ್ಯೋಗಿಕ ಭದ್ರತೆ ಬಯಸುವ ಅಭ್ಯರ್ಥಿಗಳಿಗೆ ಸೂಕ್ತ ಅವಕಾಶ. ಸದ್ಯ ಎಸ್‌ಬಿಐ ಪ್ರೊಬೇಷನರಿ ಆಫೀಸರ್ಸ್ (SBI PO)-2021, ಐಬಿಪಿಎಸ್ ಪ್ರೊಬೇಷನರಿ ಆಫೀಸರ್ಸ್ (IBPS PO)-2021 ಹಾಗೂ ಐಬಿಪಿಎಸ್ ಕ್ಲರ್ಕ್ (IBPS Clerk)-2021 ಪರೀಕ್ಷೆಗಳಿಗಾಗಿ ನೇಮಕಾತಿ ಅಧಿಸೂಚನೆ ಹೊರಡಿಸಿದೆ. ಮುಂಬರುವ ದಿನಗಳಲ್ಲಿ ಇನ್ನುಳಿದ ಬ್ಯಾಂಕಿಂಗ್ ಪರೀಕ್ಷೆಗಳಿಗಾಗಿ ನೇಮಕಾತಿ ಅಧಿಸೂಚನೆ ಹೊರಬೀಳಲಿದೆ. ಹಾಗಾಗಿ ವಿದ್ಯಾರ್ಥಿಗಳು ಉತ್ತಮ ಪರೀಕ್ಷಾ ತಯಾರಿ ನಡೆಸಿ ತಮ್ಮ ಭವಿಷ್ಯ ರೂಪಿಸಿಕೊಳ್ಳುವಲ್ಲಿ ಸಫಲರಾಗಬೇಕು.

ಪರೀಕ್ಷಾ ಅಧಿಸೂಚನೆ ಅವಲೋಕಿಸಿ

ಬ್ಯಾಂಕಿಂಗ್ ಪರೀಕ್ಷೆ ಎಂದಾಕ್ಷಣ ಅಧಿಸೂಚನೆ ಹೊರಡಿಸಿದ ಎಲ್ಲಾ ಪರೀಕ್ಷೆಗಳಿಗೂ ಅರ್ಜಿ ಸಲ್ಲಿಸದಿರಿ. ಇದರಿಂದ ನಿಮ್ಮ ಹಣ ಅದರಲ್ಲೂ ಮುಖ್ಯವಾಗಿ ನಿಮ್ಮ ಸಮಯ ಸಹ ವ್ಯರ್ಥ. ಸಾಕಷ್ಟು ಆತ್ಮವಿಶ್ವಾಸ ಹಾಗೂ ಅದಕ್ಕೆ ತಕ್ಕಂತೆ ಪ್ರಯತ್ನ ನಡೆಸಿ ಅಭ್ಯಾಸಿಸಿದಲ್ಲಿ ಒಂದಕ್ಕಿಂತ ಹೆಚ್ಚು ಪರೀಕ್ಷೆಗಳಲ್ಲಿ ಉತ್ತೀರ್ಣ ಹೊಂದಿ ತಮಗೆ ಇಷ್ಟವಾದ ಉದ್ಯೋಗ ಆಯ್ದುಕೊಂಡ ಉದಾಹರಣೆಗಳು ಸಾಕಷ್ಟಿವೆ. ಅದರಲ್ಲಿ ಯಾವುದೇ ಸಂಶಯವಿಲ್ಲ.

ಆದರೆ ನಿರಂತರವಾಗಿ ಪ್ರತಿವರ್ಷ ಪರೀಕ್ಷೆಗಳಿಗೆ ಹಾಜರಾಗಿ ವೈಫಲ್ಯತೆ ಹೊಂದಿದ ನಂತರ ಇದು ಕಡೆಯ ಅವಕಾಶ ಎಂಬ ಕಾರಣಕ್ಕೆ ಕ್ಲರ್ಕ್ ಜೊತೆಗೆ ಪ್ರೊಬೇಷನರಿ ಆಫೀಸರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸುವುದು ಸೂಕ್ತವಲ್ಲ. ಅಭ್ಯರ್ಥಿಯದ್ದು ಕ್ಲರ್ಕ್ ಪರೀಕ್ಷೆಗೆ ಕೊನೆಯ ಅವಕಾಶ ಇರುವಂತಹ ಸಂದರ್ಭದಲ್ಲಿ ಹೆಚ್ಚಿನ ಕ್ಲಿಷ್ಟತೆ ಇರುವ ಪ್ರೊಬೇಷನರಿ ಆಫೀಸರ್ಸ್ ಹುದ್ದೆಗಳಿಗೂ ಕೂಡ ಅರ್ಜಿ ಸಲ್ಲಿಸುವುದು ಸೂಕ್ತವಲ್ಲ. ಅಭ್ಯರ್ಥಿಯು ಕ್ಲರ್ಕ್ ಪರೀಕ್ಷೆಗೆ ತನ್ನ ಕೊನೆಯ ಅವಕಾಶವನ್ನು ಸಮಂಜಸವಾಗಿ ಬಳಸಿಕೊಳ್ಳಬೇಕೇ ಹೊರತು ಪ್ರೊಬೇಷನರಿ ಆಫೀಸರ್ಸ್ ಪರೀಕ್ಷೆಗಳಿಗೂ ಸಹ ಅರ್ಜಿ ಸಲ್ಲಿಸಿ ಅಭ್ಯಾಸ ನಡೆಸಿದಾಗ ಸಹಜವಾಗಿಯೇ ಎರಡು ಪರೀಕ್ಷೆಗಳ ಕ್ಲಿಷ್ಟತೆಯ ಮಟ್ಟ ಬೇರೆ ಬೇರೆಯಾಗಿರುವುದರಿಂದ ಸಂಪೂರ್ಣ ಒಂದೇ ಪರೀಕ್ಷೆಯ ಮೇಲೆ ನಿಮ್ಮ ಗಮನ ಕೇಂದ್ರೀಕರಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ ದೊರಕಿದ ಎಲ್ಲಾ ಅವಕಾಶಗಳು ಕೈತಪ್ಪುವ ಸಂಭವವಿರುತ್ತದೆ ಹಾಗೂ ಇದು ಅವರವರ ವೈಯಕ್ತಿಕ ಆತ್ಮವಿಶ್ವಾಸದ ಮೇಲೆಯೂ ಕೂಡ ಅವಲಂಬಿತವಾಗಿರುತ್ತದೆ. ಉದಾಹರಣೆಗೆ ಕ್ಲರ್ಕ್ ಪರೀಕ್ಷೆಗಳಿಗೆ ವೇಗದ ಹಾಗೂ ಪ್ರೊಬೇಷನರಿ ಆಫೀಸರ್ಸ್ ಪರೀಕ್ಷೆಗಳಿಗೆ ನಿಖರತೆಯ ಅವಶ್ಯಕತೆ ಇರುತ್ತದೆ. ಅದನ್ನೆಲ್ಲ ಗಮನಿಸಿ ಅಭ್ಯರ್ಥಿಯು ನಿಮ್ಮ ಪ್ರಯತ್ನ ವ್ಯರ್ಥವಾಗದಂತಹ ಸೂಕ್ತ ನಿರ್ಧಾರ ತೆಗೆದುಕೊಳ್ಳುವುದು ಒಳಿತು.

ಸ್ಪರ್ಧೆಯ ಕಠಿಣತೆಯ ಬಗ್ಗೆ ಅಂದಾಜಿಸದಿರಿ

ಇದು ಸಾಮಾನ್ಯವಾಗಿ ಬಹಳ ವರ್ಷಗಳಿಂದ ನಿರಂತರ ಪರೀಕ್ಷೆಗೆ ಹಾಜರಾಗಿ ಆಯ್ಕೆ ಆಗದಿರುವ ಅಭ್ಯರ್ಥಿಗಳು ಮಾಡುವ ತಪ್ಪು. ಅಭ್ಯರ್ಥಿಯು ಇಲ್ಲಿಯವರೆಗೂ ತಾನು ಬರೆದ ಪರೀಕ್ಷೆಗಳಲ್ಲಿ ವಿಫಲವಾಗಲು ಯಾವ ವಿಭಾಗ ಹಾಗೂ ಯಾವ ಟಾಪಿಕ್‌ನಲ್ಲಿನ ದೌರ್ಬಲ್ಯತೆ ಕಾರಣ ಎಂಬುದನ್ನು ಅವಲೋಕಿಸಿ ಆ ವಿಭಾಗ ಮತ್ತು ಟಾಪಿಕ್‌ಗಳನ್ನು ಅಭ್ಯಾಸಿಸಿ ಪರೀಕ್ಷೆಗೆ ತಯಾರಿ ನಡೆಸಬೇಕೇ ಹೊರತು ಪರೀಕ್ಷೆ ಈಗ ತೀವ್ರ ಸ್ಪರ್ಧೆ ಹಾಗೂ ಕಠಿಣತೆಯಿಂದ ಕೂಡಿದೆ ಎಂದು ತಮ್ಮಷ್ಟಕ್ಕೆ ತಾವೇ ಅಂದಾಜಿಗೆ ಬರಬಾರದು. ಸ್ಪರ್ಧೆ ಎಷ್ಟೇ ಕಠಿಣವಾಗಿದ್ದರೂ ಸಹ ಪಠ್ಯಕ್ರಮ ಆಧರಿಸಿ ಪರಿಶ್ರಮದಿಂದ ಅಭ್ಯಾಸ ನಡೆಸಿದಲ್ಲಿ ಯಶಸ್ಸು ಕಷ್ಟವೇನಲ್ಲ.

ವಯಸ್ಸಿನ ಮಿತಿಯನ್ನು ಅಧಿಸೂಚನೆಯಲ್ಲಿ ಪರಿಶೀಲಿಸಿ

ಕೆಲವೊಂದು ಅಭ್ಯರ್ಥಿಗಳು ಹಲವಾರು ವರ್ಷಗಳಿಂದ ಬ್ಯಾಂಕಿಂಗ್ ಪರೀಕ್ಷೆಗಳಿಗೆ ಹಾಜರಾಗಿ ಮೇನ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗುವಲ್ಲಿ ವಿಫಲಗೊಂಡಿರುತ್ತಾರೆ ಹಾಗೂ ಹಿಂದಿನ ವರ್ಷಗಳ ಅಧಿಸೂಚನೆಯಲ್ಲಿನ ವಯಸ್ಸಿನ ಮಿತಿಯನ್ನು ಗಮನದಲ್ಲಿಟ್ಟುಕೊಂಡು ಈ ಬಾರಿ ನಾವು ಅರ್ಜಿ ಸಲ್ಲಿಸಲು ಸಾಧ್ಯವಿಲ್ಲ ಎಂಬ ತಪ್ಪು ನಿರ್ಧಾರಕ್ಕೆ ಬಂದಿರುತ್ತಾರೆ. ಆದರೆ ವಾಸ್ತವ ಏನೆಂದರೆ ಪ್ರಸಕ್ತ ವರ್ಷದ ಅಧಿಸೂಚನೆಯನ್ನು ಗಮನಿಸಿದಾಗ ಅಭ್ಯರ್ಥಿಯ ವಯಸ್ಸಿನ ಮಿತಿಯನ್ನು ನಿಗದಿತ ದಿನಾಂಕಕ್ಕೆ ಅನ್ವಯವಾಗುವಂತೆ ಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ. ಇಂತಹ ಸಂದರ್ಭಗಳಲ್ಲಿ ಕೇವಲ ಒಂದು ದಿನಾಂಕದ ಅಂತರದಿಂದಲೂ ಸಹ ಅಭ್ಯರ್ಥಿಗೆ ಪ್ರಸಕ್ತ ವರ್ಷದಲ್ಲಿ ಪರೀಕ್ಷೆ ಬರೆಯುವ ಮತ್ತೊಂದು ಅವಕಾಶ ಸಿಗುವ ಸಾಧ್ಯತೆ ಇರುತ್ತದೆ. ಹಾಗಾಗಿ ಪರೀಕ್ಷೆಗೆ ನಾವು ವಯೋಮಿತಿ ಕಾರಣದಿಂದಾಗಿ ಅರ್ಹರಲ್ಲ ಎಂದು ಕೇವಲ ಅಂದಾಜಿಸುವ ಬದಲು ಒಮ್ಮೆ ಅಧಿಸೂಚನೆಯನ್ನು ಪರಿಶೀಲಿಸಿ ಹಾಗೂ ನಿಮ್ಮಲ್ಲಿ ಇನ್ನೂ ಪರೀಕ್ಷೆ ತೆಗೆದುಕೊಳ್ಳುವ ಇಚ್ಛೆಯಿದ್ದಲ್ಲಿ ದೊರೆತ ಅವಕಾಶವನ್ನು ಸದ್ವಿನಿಯೋಗ ಮಾಡಿಕೊಳ್ಳಿರಿ.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 80

1096. ನೀವು ಕೆಲವು ಪಠ್ಯವನ್ನು ಒಂದು ಪುಟದಿಂದ ಬೇರೆ ಪುಟಕ್ಕೆ ಸರಿಸಲು ಬಯಸಿದಾಗ ಉತ್ತಮ ವಿಧಾನ----
ಎ) ಕಾಪಿ, ಪೇಸ್ಟ್ ಮತ್ತು ಡಿಲೀಟ್
ಬಿ) ಕಟ್ ಮತ್ತು ಪೇಸ್ಟ್
ಸಿ) ಫೈಂಡ್ ಮತ್ತು ರಿಪ್ಲೇಸ್
ಡಿ) ಡಿಲೀಟ್ ಮತ್ತು ರಿಟೈಪ್

1097. 'ಹಂಗಾರಕಟ್ಟೆ ಬಂದರು' ಈ ಕೆಳಗಿನವುಗಳಲ್ಲಿ ಯಾವುದು ಅದರ ಬಗ್ಗೆ ನಿಜವಾಗಿದೆ?
ಎ) ಇದು ಉಡುಪಿ ಜಿಲ್ಲೆಯಲ್ಲಿದೆ
ಬಿ)ಇದನ್ನು ಪ್ರಮುಖವಾಗಿ ಮೀನುಗಾರಿಕೆ ದೋಣಿಗಳು ಬಳಸುತ್ತವೆ.
ಸಿ)ಈ ಬಂದರು ಸ್ವರ್ಣ ಮತ್ತು ಸೀತಾ ನದಿಯ ದಡದಲ್ಲಿದೆ
ಡಿ) ಇವುಗಳಲ್ಲಿ ಎಲ್ಲವೂ

1098.ಈ ಕೆಳಗಿನ ಯಾವ ಅಭಯಾರಣ್ಯ ವಿರಳ ಗ್ಯಾಂಗ್ ಟೆಕ್ ಡಾಲ್ಫಿನ್ ಮತ್ತು ಮೊಸಳೆ ಮತ್ತು ಘರಿಯಾಲ್‌ಗೆ ಹೆಸರುವಾಸಿಯಾಗಿದೆ?
ಎ) ಗಲ್ಫ್ ಆಫ್ ಕಚ್ ಮರೈನ್ ರಾಷ್ಟ್ರೀಯ ಉದ್ಯಾನ
ಬಿ) ಮಹಾತ್ಮ ಗಾಂಧಿ ಮರೈನ್ ರಾಷ್ಟ್ರೀಯ ಉದ್ಯಾನ
ಸಿ) ಫೋಹಿರ್ ಮಾತಾ ಮರೈನ್ ರಾಷ್ಟ್ರೀಯ ಉದ್ಯಾನ
ಡಿ) ರಾಷ್ಟ್ರೀಯ ಚಂಬಲ್ ಅಭಯಾರಣ್ಯ

1099. ಆಗ್ರಾ ಯಾವ ನದಿಯ ದಡದಲ್ಲಿದೆ?
ಎ) ಯಮುನಾ ಬಿ) ಗಂಗೋತ್ರಿ
ಸಿ) ಗಂಡಕಿ ಡಿ) ಚಂಬಲ್

1100. ಸುವರ್ಣ ವಿಧಾನಸೌಧ ಯಾವ ಸ್ಥಳದಲ್ಲಿದೆ?
ಎ) ಧಾರವಾಡ ಬಿ) ಬೆಳಗಾವಿ
ಸಿ) ಬೆಂಗಳೂರು ಡಿ) ಮೈಸೂರು

1101. ಈ ಕೆಳಗಿನ ಯಾವ ದೇಶವು ಭಾರತದೊಂದಿಗೆ ಭೂಗಡಿಯನ್ನು ಹಂಚಿಕೊಂಡಿಲ್ಲ?
ಎ) ಬಾಂಗ್ಲಾದೇಶ ಬಿ) ಭೂತಾನ್
ಸಿ) ತಜಕಿಸ್ತಾನ್ ಡಿ) ನೇಪಾಳ

1102. ಸಹ್ಯಾದ್ರಿಯ ಇನ್ನೊಂದು ಹೆಸರು ಏನು?
ಎ) ಅರಾವಳಿ ಬಿ) ಪಶ್ಚಿಮಘಟ್ಟ
ಸಿ) ಶಿವಾಲಿಕ ಡಿ) ಹಿಮಾದ್ರಿ

1103. ಕೆಳಗಿನ ಯಾವ ವನ್ಯಜೀವಿ ಅಭಯಾರಣ್ಯಗಳು ಕರ್ನಾಟಕದಲ್ಲಿ ಇಲ್ಲ?
ಎ) ಕಾವೇರಿ ವನ್ಯಜೀವಿ ಅಭಯಾರಣ್ಯ
ಬಿ) ದಾಂಡೇಲಿ ವನ್ಯಜೀವಿ ಅಭಯಾರಣ್ಯ
ಸಿ) ಭದ್ರಾ ವನ್ಯಜೀವಿ ಅಭಯಾರಣ್ಯ
ಡಿ) ಮದುಮಲೈ ವನ್ಯಜೀವಿ ಅಭಯಾರಣ್ಯ

1104. ಬೆಳಕಿನ ವರ್ಷ ಎಂದರೇನು?
ಎ) ಸಮಯದ ಘಟಕ ಬಿ) ಅಂತರದ ಘಟಕ
ಸಿ) ವೇಗದ ಘಟಕ
ಡಿ) ಇವುಗಳಲ್ಲಿ ಯಾವುದೂ ಅಲ್ಲ

1105. ಈ ಕೆಳಗಿನ ಯಾವ ಪಟ್ಟಣವು ನದಿಯ ದಂಡೆಯಲ್ಲಿಲ್ಲ?
ಎ) ಅಹಮದಾಬಾದ್ ಬಿ) ಮುಂಬೈ
ಸಿ) ಕೋಲ್ಕತ್ತಾ ಡಿ) ಪಟ್ನಾ

1106. ಶ್ರವಣಬೆಳಗೊಳ ಪಟ್ಟಣವು ಕೆಳಗಿನ ಯಾರ ಒಂದು ಪ್ರಮುಖ ಯಾತ್ರಾ ಕೇಂದ್ರವಾಗಿದೆ?
ಎ) ಹಿಂದೂಗಳು ಬಿ) ಜೈನರು
ಸಿ) ಸಿಖ್ಖರು ಡಿ) ಮುಸ್ಲಿಮರು

1107. ಈ ಕೆಳಗಿನ ಯಾವ ನದಿಯು ಭಾರತದಲ್ಲಿ ಹುಟ್ಟುವುದಿಲ್ಲ?
ಎ) ಗಂಗಾ ಬಿ) ಯಮುನಾ
ಸಿ) ಕೋಸಿ ಡಿ) ಸಿಂಧು

1108. ದಾಲ್ ಸರೋವರ (ಲೇಕ್) ಎಲ್ಲಿದೆ?
ಎ) ಜೈಪುರ್ ಬಿ) ಶಿಮ್ಲಾ ಸಿ) ಶ್ರೀನಗರ
ಡಿ) ಕಾಶ್ಮೀರ

1109. ವಿಶ್ವದ ಅತಿ ದೊಡ್ಡ ಸಾಗರ ಯಾವುದು?
ಎ) ಪೆಸಿಫಿಕ್ ಬಿ) ಇಂಡಿಯನ್
ಸಿ) ಅಟ್ಲಾಂಟಿಕ್ ಡಿ) ನಾರ್ದನ್

1110. ಸರಣಿಯಲ್ಲಿ ಮುಂದಿನ ಸಂಖ್ಯೆಯನ್ನು ಹುಡುಕಿ 6, 11, 21, 36, 56 ---?
ಎ) 91 ಬಿ) 51 ಸಿ) 81 ಡಿ) 42

1111. ಫೋಟೊವನ್ನು ತೋರಿಸುತ್ತಾ ನಿಶಾಂತ ಹೇಳುವನು 'ಅವರ ತಂದೆ ನನ್ನ ತಾಯಿಯ ಏಕೈಕ ಪುತ್ರ' ಅದು ಯಾರ ಫೋಟೊ?
ಎ) ನಿಶಾಂತ ಬಿ) ನಿಶಾಂತನ ಸಹೋದರ
ಸಿ) ನಿಶಾಂತನ ತಂದೆ ಡಿ) ನಿಶಾಂತನ ಮಗ

1112. ಮೂರು ಸಂಖ್ಯೆಗಳ ಮೊತ್ತ 138 ಆಗಿದೆ. ಸಂಖ್ಯೆಗಳು 1:2:3 ರ ಅನುಪಾತದಲ್ಲಿದೆ. ಹಾಗಾದರೆ ಸಂಖ್ಯೆಗಳು ಯಾವುವು?
ಎ) 23, 46, 69 ಬಿ) 21, 42, 63
ಸಿ) 20, 40, 60 ಡಿ) 33, 66, 99

1113. ಒಬ್ಬ ಕಾರ್ಮಿಕನ ಸಂಬಳ ₹ 4,000. ಅದನ್ನು ಶೇ 10ಕ್ಕೆ ಹೆಚ್ಚಿಸಿದರೆ ಮತ್ತು ನಂತರದಲ್ಲಿ ಶೇ 10 ಕ್ಕೆ ಹೆಚ್ಚಿಸಿದರೆ, ಸಂಬಳದಲ್ಲಿನ ಬದಲಾವಣೆ ಎಷ್ಟು?
ಎ) 440 ಬಿ) 40 ಸಿ) 400 ಡಿ) 140

1114. ಈ ಕೆಳಗಿನ ಭಾರತದ ಯಾವ ರಾಜ್ಯದಲ್ಲಿ ಅತಿ ಹೆಚ್ಚು ನೈಸರ್ಗಿಕ ರಬ್ಬರ್ ಉತ್ಪತ್ತಿಯಾಗುತ್ತದೆ?
ಎ) ತಮಿಳುನಾಡು ಬಿ) ಕರ್ನಾಟಕ
ಸಿ) ಅಸ್ಸಾಂ ಡಿ) ಕೇರಳ

1115. 'ಇಂದಿರಾ ಪಾಯಿಂಟ್' ಎಲ್ಲಿದೆ?
ಎ) ಕೇರಳ ಬಿ) ನಿಕೋಬಾರ್
ಸಿ) ತಮಿಳುನಾಡು ಡಿ) ಲಡಾಖ್

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 79ರ ಉತ್ತರ: 1081. ಎ, 1082. ಸಿ, 1083. ಬಿ, 1084. ಎ, 1085. ಡಿ, 1086. ಸಿ, 1087. ಡಿ, 1088. ಬಿ, 1089. ಬಿ, 1090. ಬಿ, 1091. ಡಿ, 1092. ಸಿ, 1093. ಸಿ, 1094. ಸಿ, 1095. ಡಿ

ಭಾಗ 80ರ ಉತ್ತರ: 1096. ಬಿ, 1097. ಡಿ, 1098. ಡಿ, 1099. ಎ, 1100. ಬಿ, 1101. ಸಿ, 1102. ಬಿ, 1103. ಸಿ, 1104. ಬಿ, 1105. ಬಿ, 1106. ಬಿ, 1107. ಡಿ, 1108. ಸಿ, 1109. ಎ, 1110. ಸಿ, 1111. ಡಿ, 1112. ಎ, 1113. ಎ, 1114. ಡಿ, 1115. ಬಿ

ಪ್ರಜಾವಾಣಿ ಉದ್ಯೋಗ ವಾರ್ತೆ

ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆ

ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಭರ್ತಿಗೆ ಸರ್ಕಾರ ಅರ್ಜಿಗಳನ್ನು ಆಹ್ವಾನಿಸಿದೆ. ಈ ಸಂಬಂಧ ಸ್ಪರ್ಧಾತ್ಮಕ ಪರೀಕ್ಷೆ ಇರಲಿದ್ದು ಅರ್ಹರು ಅರ್ಜಿ ಸಲ್ಲಿಸಬಹುದಾಗಿದೆ.

ಹುದ್ದೆ: ಸಹಾಯಕ ಪ್ರಾಧ್ಯಾಪಕ

ಹುದ್ದೆಗಳ ಸಂಖ್ಯೆ: 1242

ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಸಂಬಂಧಿಸಿದ ವಿಷಯದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿರಬೇಕು. ಎನ್‌ಇಟಿ, ಕೆಎಸ್‌ಇಟಿ ಹಾಗೂ ಪಿಎಚ್‌ಡಿ ಮುಗಿಸಿರಬೇಕು.

ವಯೋಮಿತಿ: ಕನಿಷ್ಠ 22 ವರ್ಷ ಹಾಗೂ ಗರಿಷ್ಠ 40 ವರ್ಷ. 2ಎ, 2ಬಿ, ಹಾಗೂ 3ಎ ಅಭ್ಯರ್ಥಿಗಳಿಗೆ 3 ವರ್ಷ ವಯೋಮಿತಿ ಸಡಿಲಿಕೆ ಇದೆ. ಎಸ್‌ಸಿ/ ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ ವಯೋಮಿತಿ ಸಡಿಲಿಕೆ ಇದೆ.

ಅರ್ಜಿ ಶುಲ್ಕ: ಸಾಮಾನ್ಯ ಹಾಗೂ ಇತರ ಪ್ರವರ್ಗಗಳಿಗೆ ₹ 2000, ಎಸ್‌ಸಿ/ ಎಸ್‌ಟಿ ಹಾಗೂ ಪ್ರವರ್ಗ -1 ರ ಅಭ್ಯರ್ಥಿಗಳಿಗೆ ₹ 1000.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಅಕ್ಟೋಬರ್ 31, 2021

ಹೆಚ್ಚಿನ ಮಾಹಿತಿಗೆ: https://kea.kar.nic.in

ಒಎನ್‌ಜಿಸಿಯಲ್ಲಿ ವಿವಿಧ ಹುದ್ದೆಗಳು

ತೈಲ ಹಾಗೂ ನೈಸರ್ಗಿಕ ಅನಿಲ ನಿಗಮ (ಒಎನ್‌ಜಿಸಿ) ಖಾಲಿ ಇರುವ ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಅರ್ಹರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆಗಳು: ಮೆಟೀರಿಯಲ್ ಮ್ಯಾನೇಜ್‌ಮೆಂಟ್ ಆಫೀಸರ್, ಅಸೋಸಿಯೇಷನ್ ಆಫ್ ಎನರ್ಜಿ ಎಂಜಿನಿಯರ್, ಜಿಯಾಲಜಿಸ್ಟ್, ಕೆಮಿಸ್ಟ್, ಟ್ರಾನ್ಸ್‌ಪೋರ್ಟ್ ಆಫೀಸರ್

ಹುದ್ದೆಗಳ ಸಂಖ್ಯೆ: 309

ಸ್ಥಳ: ಭಾರತದೆಲ್ಲೆಡೆ

ವಿದ್ಯಾರ್ಹತೆ: ಅಭ್ಯರ್ಥಿಗಳು ಹುದ್ದೆಗಳಿಗೆ ಅನುಗುಣವಾಗಿ ಬಿಇ, ಬಿಟೆಕ್ ಹಾಗೂ ಎಂಡಿ ಪೂರ್ಣಗೊಳಿಸಿರಬೇಕು.

ವಯೋಮಿತಿ: ಅಸೋಸಿಯೇಶನ್ ಆಫ್ ಎನರ್ಜಿ ಎಂಜಿನಿಯರ್ ಹುದ್ದೆಗೆ ಗರಿಷ್ಠ 28 ವರ್ಷ ಹಾಗೂ ಇತರ ಹುದ್ದೆಗಳಿಗೆ ಗರಿಷ್ಠ 30 ವರ್ಷ.

ಅರ್ಜಿ ಶುಲ್ಕ: ಸಾಮಾನ್ಯ ಹಾಗೂ ಒಬಿಸಿ ಅಭ್ಯರ್ಥಿಗಳಿಗೆ ₹ 300. ಎಸ್‌ಸಿ/ ಎಸ್‌ಟಿ ಅಂಗವಿಕಲ ಅಭ್ಯರ್ಥಿಗಳಿಗೆ ಯಾವುದೇ ಅರ್ಜಿ ಶುಲ್ಕವಿಲ್ಲ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ನವೆಂಬರ್ 1, 2021

ಹೆಚ್ಚಿನ ಮಾಹಿತಿಗೆ: www.ongcindia.com

ಗ್ರೂಪ್-ಸಿ ತಾಂತ್ರಿಕೇತರ ಹುದ್ದೆ ಸ್ಪರ್ಧಾತ್ಮಕ ಪರೀಕ್ಷೆ

ಕರ್ನಾಟಕದ ಸಮರ್ಥ ಆಡಳಿತಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರ

ಕರ್ನಾಟಕ ಲೋಕ ಸೇವಾ ಆಯೋಗವು ಗ್ರೂಪ್ ಸಿ ವೃಂದದ ತಾಂತ್ರಿಕೇತರ ಹುದ್ದೆಗಳಿಗೆ ಸದ್ಯದಲ್ಲಿಯೇ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಿದೆ. ಈ ಹಿನ್ನೆಲೆಯಲ್ಲಿ ಸಾಮಾನ್ಯ ಜ್ಞಾನ ವಿಭಾಗದಲ್ಲಿರುವ 'ಕರ್ನಾಟಕದ ಸಮರ್ಥ ಆಡಳಿತಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರ' ವಿಭಾಗದಲ್ಲಿರುವ ವಿಷಯದ ಕುರಿತಾದ ಬಹು ಆಯ್ಕೆ ಪ್ರಶ್ನೆಗಳನ್ನು ಇಲ್ಲಿ ನೀಡಲಾಗಿದೆ.



1. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ವಿಶ್ವದ ಮೊದಲ ಸ್ಥಾನದಲ್ಲಿರುವ 500 ಫಾರ್ಚೂನ್ ಕಂಪನಿಗಳ ಪೈಕಿ 400ಕ್ಕೂ ಹೆಚ್ಚು ಕಂಪನಿಗಳು ನಮ್ಮ ಕರ್ನಾಟಕದ ಬೆಂಗಳೂರಿನಲ್ಲಿರುವ ಮಾಹಿತಿ ತಂತ್ರಜ್ಞಾನ ಕಂಪನಿಗಳಿಗೆ ಹೊರಗುತ್ತಿಗೆಯನ್ನು ನೀಡುತ್ತಿವೆ.
2. ಕರ್ನಾಟಕವು ಭಾರತದಲ್ಲಿಯೇ ಅತಿದೊಡ್ಡ ಸಾಫ್ಟ್‌ವೇರ್ ರಫ್ತು ಮಾಡುವ ರಾಜ್ಯವಾಗಿದ್ದು ದೇಶದ ಒಟ್ಟಾರೆ ಸಾಫ್ಟ್‌ವೇರ್ ರಫ್ತಿಗೆ ಮೂರನೇ ಒಂದರಷ್ಟು ಕೊಡುಗೆಯನ್ನು ನೀಡುತ್ತಿದೆ.
3. ಕರ್ನಾಟಕವು ಜಗತ್ತಿನಲ್ಲಿಯೇ 4ನೇ ದೊಡ್ಡ ತಂತ್ರಜ್ಞಾನ ಸಮೂಹವಾಗಿದೆ.
4. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲದೇ ಕಾರ್ಪೊರೇಟ್ ವಲಯದ 400 ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳು ನಮ್ಮ ರಾಜ್ಯದಲ್ಲಿವೆ. ಅವು ವಿಜ್ಞಾನ ತಂತ್ರಜ್ಞಾನ ಮತ್ತು ಆವಿಷ್ಕಾರಕ್ಕೆ ಕೊಡುಗೆ ನೀಡುತ್ತಿವೆ.
5. ಕರ್ನಾಟಕವು ದೇಶದಲ್ಲಿಯೇ 2ನೇ ಅತಿದೊಡ್ಡ ಚಿಪ್ ವಿನ್ಯಾಸ ಕೇಂದ್ರವಾಗಿದೆ.

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?
ಎ. 1ರಿಂದ 4ರತನಕ ಎಲ್ಲವೂ ಸರಿಯಾಗಿದೆ. ಆದರೆ 5ನೇ ಹೇಳಿಕೆ ಮಾತ್ರ ತಪ್ಪಾಗಿದೆ.
ಬಿ. ಹೇಳಿಕೆ 1, 2, 4 ಮತ್ತು 5 ಮಾತ್ರ ಸರಿಯಾಗಿದೆ
ಸಿ. ಹೇಳಿಕೆ 1ರಿಂದ 5ರತನಕ ಎಲ್ಲವೂ ಸರಿಯಾಗಿದೆ
ಡಿ. ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.

ಉತ್ತರ: ಸಿ

2. ಬ್ರೆಜಿಲ್ ದೇಶದಲ್ಲಿ ಪಿಡಿಪಿಯು ಆರೋಗ್ಯ ಕ್ಷೇತ್ರದಲ್ಲಿ ಬಹಳದೊಡ್ಡ ಕ್ರಾಂತಿಯನ್ನೇ ಮಾಡಿದೆ. ಇದನ್ನು ನಮ್ಮ ರಾಜ್ಯದಲ್ಲಿಯೂ ಅಳವಡಿಸುವಂತೆ ರಾಜ್ಯ ಸರ್ಕಾರ ಪ್ರಕಟಿಸಿದ 'ಕರ್ನಾಟಕ ಇನೊವೇಷನ್ ವಿಷನ್-2030' ಕರೆಕೊಟ್ಟಿದೆ. ಹಾಗಾದರೆ ಪಿಡಿಪಿ ಎಂದರೆ ....
ಎ. ಪ್ರಾಡಕ್ಟಿವ್ ಡೆವಲಪ್‌ಮೆಂಟ್ ಪಾರ್ಟನರ್‌ಶಿಪ್
ಬಿ. ಪರ್ಸನಲ್ ಡೆವಲಪ್‌ಮೆಂಟ್ ಪಾರ್ಟನರ್‌ಶಿಪ್
ಸಿ. ಪ್ರೈವೇಟ್ ಡೆವಲಪ್‌ಮೆಂಟ್ ಪಾರ್ಟನರ್‌ಶಿಪ್
ಡಿ. ಮೇಲಿನ ಯಾವುದೂ ಅಲ್ಲ

ಉತ್ತರ:ಎ

(ವಿವರಣೆ: ಖಾಸಗಿ ಕಂಪನಿಗಳು ತಾಂತ್ರಿಕತೆಯನ್ನು ನೀಡಿದರೆ ಅದನ್ನು ಬಳಸಿ ಸರ್ಕಾರಿ/ ಸಾರ್ವಜನಿಕ ಏಜೆನ್ಸಿಗಳು ಉತ್ಪಾದನೆಯನ್ನು ಹೆಚ್ಚಿಸುವುದಲ್ಲದೇ ಅಂತಿಮವಾಗಿ ತಲುಪಬೇಕಾದ ಜನರಿಗೆ ತಲುಪಿಸುವ ವ್ಯವಸ್ಥೆಯೇ ಪಿಡಿಪಿ)

3. ವರ್ಲ್ಡ್ ಎಕಾನಾಮಿಕ್ ಫೋರಂ ನೀಡಿರುವ ಅಂಕಿಅಂಶಗಳ ಪ್ರಕಾರ 50 ಮಿಲಿಯನ್ ಯೂಸರ್ ಅಥವಾ ಗ್ರಾಹಕರನ್ನು ತಲುಪಲು ವಿಮಾನಯಾನ ಕೈಗಾರಿಕೆ 68 ವರ್ಷಗಳನ್ನು, ಆಟೊಮೊಬೈಲ್ ಕೈಗಾರಿಕೆ 62 ವರ್ಷಗಳನ್ನು, ದೂರವಾಣಿ/ ಟೆಲಿಫೋನ್ ಕೈಗಾರಿಕೆ 50 ವರ್ಷಗಳನ್ನು ಹಾಗೂ ಎಲೆಕ್ಟ್ರಿಸಿಟಿ 46 ವರ್ಷಗಳನ್ನು ತೆಗೆದುಕೊಂಡರೆ ತಂತ್ರಜ್ಞಾನ ಹಾಗೂ ಇನೊವೇಷನ್ ಕಾರಣದಿಂದಾಗಿ ಅದೇ 50 ಮಿಲಿಯನ್ ಗ್ರಾಹಕರನ್ನು ತಲುಪಲು ಸಾಮಾಜಿಕ ಜಾಲತಾಣ ಫೇಸ್‌ಬುಕ್ ಕೇವಲ .... ವರ್ಷಗಳನ್ನು ತೆಗೆದುಕೊಂಡಿತು ಅಂದರೆ ತಂತ್ರಜ್ಞಾನ ಯಾವ ರೀತಿ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂಬುದು ತಿಳಿಯುತ್ತದೆ.
ಎ. 5 ಬಿ. 10 ಸಿ. 8 ಡಿ. 3

ಉತ್ತರ: ಡಿ

4. ಕರ್ನಾಟಕ ಸರ್ಕಾರ ಪ್ರಕಟಿಸಿದ 'ಇನೊವೇಷನ್ ವಿಷನ್-2030' ಪ್ರಕಾರ ಸ್ಟಾರ್ಟ್‌ಅಪ್ ಇಕೋಸಿಸ್ಟಮ್ ಬೆಳೆಸುವಲ್ಲಿ ಜಗತ್ತಿನಲ್ಲಿ ನಮ್ಮ ಬೆಂಗಳೂರು (2021ರಲ್ಲಿ) ಯಾವ ಸ್ಥಾನದಲ್ಲಿದೆ ?
ಎ. 23ನೇ ಸ್ಥಾನ ಬಿ. 50ನೇ ಸ್ಥಾನ
ಸಿ. 78ನೇ ಸ್ಥಾನ ಡಿ. 12ನೇ ಸ್ಥಾನ

ಉತ್ತರ: ಎ

5. ಬೆಂಗಳೂರಿನ ನಾಗರಿಕರಿಗೆ, ವಿದ್ಯುತ್ ಬಿಲ್ ಪಾವತಿ, ದೂರವಾಣಿ ಬಿಲ್ ಪಾವತಿ, ದೂರಶಿಕ್ಷಣಕ್ಕೆ ಅರ್ಜಿ ಸಲ್ಲಿಸುವಿಕೆ, ರೇಷನ್ ಕಾರ್ಡ್ ಅರ್ಜಿ ಸಲ್ಲಿಸುವಿಕೆ, ಮಹಾನಗರ ಪಾಲಿಕೆ ಆಸ್ತಿ ತೆರಿಗೆ ಪಾವತಿ ಹೀಗೆ ವಿವಿಧ ಸರ್ಕಾರಿ ಯೋಜನೆಯಲ್ಲಿ ಭಾಗವಹಿಸಲು ಹಾಗೂ ಅದರ ಪ್ರಯೋಜನವನ್ನು ಪಡೆಯಲು ಅನುಕೂಲವಾಗುವಂತೆ ....ರಲ್ಲಿ 'ಬೆಂಗಳೂರು ಒನ್' ಸೇವೆಯನ್ನು ಆರಂಭಿಸಲಾಯಿತು.
ಎ. 2 ಏಪ್ರಿಲ್ 2005 ಬಿ. 2 ಅಕ್ಟೋಬರ್ 2006
ಸಿ. 26 ಜನವರಿ 2008 ಡಿ. 9 ಮಾರ್ಚ್ 2004

ಉತ್ತರ: ಎ

6. 'ಬೆಂಗಳೂರು ಒನ್' ಯಶಸ್ಸು ಪಡೆದ ಹಿನ್ನೆಲೆಯಲ್ಲಿ 2010ರಲ್ಲಿ 'ಕರ್ನಾಟಕ ಒನ್' ಎಂಬ ಸೇವಾ ಯೋಜನೆಯನ್ನು ಆರಂಭಿಸಲಾಯಿತು. ನಮ್ಮ ಕರ್ನಾಟಕದಲ್ಲಿ ಈಗ ಎಷ್ಟು ನಗರಗಳಲ್ಲಿ ಈ ಸೇವೆಯನ್ನು ಒದಗಿಸಲಾಗುತ್ತಿದೆ?
ಎ. 12 ಬಿ. 9 ಸಿ. 18 ಡಿ. 8

ಉತ್ತರ: ಬಿ

7. ಜಿಲ್ಲೆಯ ಕೇಂದ್ರಗಳಲ್ಲಿ ವಿವಿಧ ಇಲಾಖೆಗಳ ಹಲವಾರು ಸೇವೆಗಳನ್ನು ನಾಗರಿಕರಿಗೆ ತಡೆರಹಿತವಾಗಿ ನೀಡಲು ಅನುವಾಗಲು ಮತ್ತು ಇಲಾಖೆಗಳ ದಕ್ಷತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಈ ಕೆಳಗಿನ ಯಾವುದು ಕೆಲಸ ಮಾಡುತ್ತಿದೆ?
ಎ. ಸೇವಾ ಸಿಂಧು ಯೋಜನೆ
ಬಿ. ಭೂಮಿ ಸಿ. ಇ-ಸ್ಪಂದನಾ
ಡಿ. ಮಾಹಿತಿ ಕಣಜ


ಉತ್ತರ: ಎ

8. ಕೆಳಗಿನ ಹೇಳಿಕೆಗಳನ್ನು ಗಮನಿಸಿ
1. ನಾಗರಿಕರು ವಿವಿಧ ಇಲಾಖೆಗಳ ಸೇವೆಯನ್ನು ಪಡೆಯಲು ಸೇವಾ ಸಿಂಧು ಅಂತರ್‌ಜಾಲ ತಾಣವು ಏಕರೂಪ ವೇದಿಕೆಯನ್ನು ಸೃಷ್ಟಿಸುತ್ತದೆ.
2. ನಮ್ಮ ರಾಜ್ಯದಲ್ಲಿ ಇಲ್ಲಿಯ ತನಕ 1,12,000 ವ್ಯವಹಾರಗಳನ್ನು ಸೇವಾ ಸಿಂಧು ಅಂತರ್ಜಾಲದ ತಾಣದ ಮೂಲಕ ಯಶಸ್ವಿಯಾಗಿ ಮಾಡಲಾಗಿದೆ.
3. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಔಷಧ ನಿಯಂತ್ರಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಯೋಜನಾ ಇಲಾಖೆ ಸೇರಿದಂತೆ 18 ಸೇವೆಗಳನ್ನು ಸೇವಾ ಸಿಂಧು ಅಂತರ್ಜಾಲ ತಾಣಕ್ಕೆ ಸಂಯೋಜಿಸಲಾಗಿದೆ.
4. ನಾಗರಿಕರು ಕಚೇರಿಯ ಸಮಯದ ಹೊರತಾಗಿಯೂ ತಮಗೆ ಅನುಕೂಲವಾದ ಸಮಯದಲ್ಲಿ ಸರ್ಕಾರಿ ಸೇವೆಗಳನ್ನು ಪಡೆಯಲು ಸೇವಾ ಸಿಂಧು ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿದೆ

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?
ಎ.1 ರಿಂದ 4ರತನಕ ಎಲ್ಲವೂ ಸರಿಯಾಗಿದೆ
ಬಿ. ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿದೆ
ಸಿ. ಹೇಳಿಕೆ 1ರಿಂದ 3ರ ತನಕ ಎಲ್ಲವೂ ಸರಿಯಾಗಿದೆ ಆದರೆ 4ನೇ ಹೇಳಿಕೆ ಮಾತ್ರ ತಪ್ಪಾಗಿದೆ
ಡಿ. ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.

ಉತ್ತರ: ಎ

9. ಸರ್ಕಾರದ ಸೇವೆಗಳನ್ನು ತಮ್ಮ ಅನುಕೂಲವಾದ ಸಮಯಕ್ಕೆ ನಾಗರಿಕರು ಪಡೆಯಲು ನೆರವಾಗುವ 'ಸಾಮಾನ್ಯ ಸೇವಾ ಕೇಂದ್ರ (ಸಿಎಸ್‌ಸಿ)ಗಳು ಯಾವ ಹಂತದಲ್ಲಿ ಕಾರ್ಯನಿರ್ವಹಿಸುತ್ತವೆ?



ಎ. ಜಿಲ್ಲಾ ಮಟ್ಟದ ಹಂತದಲ್ಲಿ
ಬಿ. ತಾಲ್ಲೂಕು ಮಟ್ಟದ ಹಂತದಲ್ಲಿ
ಸಿ. ಗ್ರಾಮ ಮಟ್ಟದ ಹಂತದಲ್ಲಿ
ಡಿ. ರಾಜ್ಯ ಮಟ್ಟದ ಹಂತದಲ್ಲಿ

ಉತ್ತರ: ಸಿ

10. ನಮ್ಮ ರಾಜ್ಯದಲ್ಲಿ ಸಲ್ಲಿಕೆಯಾಗುವ 'ಸಕಾಲ' ಅರ್ಜಿಗಳ ಪೈಕಿ ಶೇ ಎಷ್ಟು ಅರ್ಜಿ ಆನ್‌ಲೈನ್ ಮೂಲಕ ಸಲ್ಲಿಕೆಯಾಗುತ್ತಿವೆ?
ಎ. ಶೇ 54 ಬಿ. ಶೇ 81 ಸಿ. ಶೇ 64 ಡಿ. ಶೇ 24

ಉತ್ತರ: ಬಿ

11. ತಂತ್ರಜ್ಞಾನದ ಸಹಾಯ ಹಾಗೂ ಅಧಿಕಾರಿ ವರ್ಗದ ಸಹಕಾರದಿಂದ ಜಾರಿಗೆ ಬರಲಿರುವ 'ಜನಸೇವಕ' ಯೋಜನೆಯ ಕುರಿತಾದ ಕೆಳಗಿನ ಹೇಳಿಕೆಗಳನ್ನು ಗಮನಿಸಿ
1. ಕರ್ನಾಟಕ ಸರ್ಕಾರದ ಸೌಲಭ್ಯಗಳನ್ನು ಜನರ ಮನೆ ಬಾಗಿಲಿಗೆ ಒಯ್ಯುವ ಜನ ಸೇವಕ ಕಾರ್ಯಕ್ರಮ ಜಾರಿಗೆ ತರಲು ನಮ್ಮ ರಾಜ್ಯ ಸರ್ಕಾರ ಮುಂದಾಗಿದೆ.
2. 2021ರ ನವೆಂಬರ್ 1ರಿಂದ ಬೆಂಗಳೂರಿನ 28 ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಜನಸೇವಕ ಯೋಜನೆ ಸಿಗಲಿದೆ. 2022ರ ಜನವರಿ 26ರಿಂದ ನಮ್ಮ ರಾಜ್ಯದಲ್ಲಿರುವ ಎಲ್ಲಾ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಲಭ್ಯವಾಗಲಿದೆ.
3. ಗ್ರಾಹಕರಿಗೆ ತಲುಪಬೇಕಾದ ರೇಷನ್, ಸಾಮಾಜಿಕ ಭದ್ರತೆ ಯೋಜನೆಗಳು, ಗ್ರಾಮದ ನಾಗರಿಕರ ಮನೆ ಬಾಗಿಲಿಗೆ ತಲುಪಿಸುವ, ಆರೋಗ್ಯ ತಪಾಸಣೆ ಮನೆ ಬಾಗಿಲಿನಲ್ಲೇ ಆಗುವಂತೆ ನೋಡಿಕೊಳ್ಳುವ ಯೋಜನೆಯೇ ಜನಸೇವಕ ಯೋಜನೆಯಾಗಿದೆ.
4. ಆದಾಯ ಪ್ರಮಾಣ ಪತ್ರದಿಂದ ಹಿಡಿದು ಎಲ್ಲಾ ತರಹದ ಪ್ರಮಾಣಪತ್ರಗಳು ಗ್ರಾಮ ಪಂಚಾಯ್ತಿಯಲ್ಲೇ ಸಿಗುವಂತೆ ಮಾಡುವ ಮಹತ್ವದ ಗುರಿ ಜನಸೇವಕ ಯೋಜನೆಯಲ್ಲಿದೆ.

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?
ಎ. 1ರಿಂದ 4ರ ತನಕ ಎಲ್ಲವೂ ತಪ್ಪಾಗಿದೆ
ಬಿ. ಹೇಳಿಕೆ 1, 2 ಮತ್ತು 4 ಮಾತ್ರ ಸರಿಯಾಗಿದೆ
ಸಿ. ಹೇಳಿಕೆ 1, 2, 3ರ ಮಾತ್ರ ಸರಿಯಾಗಿದೆ
ಡಿ. 1 ರಿಂದ 4ರ ತನಕ ಎಲ್ಲಾ ಹೇಳಿಕೆಗಳು ಸರಿಯಾಗಿವೆ

ಉತ್ತರ: ಡಿ

12. ಕೆಳಗಿನ ಹೇಳಿಕೆಗಳನ್ನು ಗಮನಿಸಿ
1. ಕರ್ನಾಟಕ ಸರ್ಕಾರ ಪ್ರಕಟಿಸಿದ 'ಇನೊವೇಷನ್ ವಿಷನ್-2030' ಪ್ರಕಾರ ಸ್ಟಾರ್ಟ್ ಅಪ್ ಇಕೋಸಿಸ್ಟಮ್ ಬೆಳೆಸುವಲ್ಲಿ ಜಗತ್ತಿನಲ್ಲಿ ನಮ್ಮ ಬೆಂಗಳೂರು 2021ರಲ್ಲಿ 23ನೇ ಸ್ಥಾನದಲ್ಲಿದೆ.
2. ಗ್ಲೋಬಲ್ ಇನೊವೇಷನ್ ಇಂಡೆಕ್ಸ್ 2021ರ ಪ್ರಕಾರ ನಮ್ಮ ಬೆಂಗಳೂರು ವಿಶ್ವ ಟಾಪ್ 100 ಸೈನ್ಸ್ ಎಂಡ್ ಟೆಕ್ನಾಲಜಿ ಕ್ಲಸ್ಟರ್‌ಗಳಲ್ಲಿ 62ನೇ ಸ್ಥಾನವನ್ನು ಪಡೆದಿದೆ
3. ಕರ್ನಾಟಕವು ಭಾರತದ ಅತಿದೊಡ್ಡ ಬಯೋಟೆಕ್ ಹಬ್ ಆಗಿದ್ದು ನಮ್ಮ ರಾಜ್ಯದಲ್ಲಿ 100ಕ್ಕೂ ಹೆಚ್ಚು ಮೆಡಿಕಲ್ ಸ್ಟಾರ್ಟ್ ಅಪ್‌ಗಳಿವೆ. ಎಂಬುದು ಖುಷಿಯ ಸಂಗತಿಯಾಗಿದೆ.
4. ಕರ್ನಾಟಕವು ಇಸ್ರೇಲ್ ದೇಶದೊಡನೆ ಒಪ್ಪಂದ ಮಾಡಿಕೊಂಡಿದ್ದು ಇದರ ಮೂಲಕ ಇಸ್ರೇಲ್ ದೇಶದ ಪ್ರಮುಖ ಕಂಪನಿಗಳೊಡನೆ ಸೇರಿಕೊಂಡು ಕೈಗಾರಿಕಾ ಕ್ಷೇತ್ರದಲ್ಲಿ ರೀಸರ್ಚ್ ಎಂಡ್ ಡೆವಲಪ್‌ಮೆಂಟ್ ಮಾಡಲು ಹೊಸ ಅವಕಾಶವನ್ನು ಕಲ್ಪಿಸಲಾಗಿದೆ.

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?
ಎ. 1 ರಿಂದ 4ರತನಕ ಎಲ್ಲವೂ ಸರಿಯಾಗಿದೆ
ಬಿ. ಹೇಳಿಕೆ 1, 2 ಮತ್ತು 3 ಮಾತ್ರ ಸರಿಯಾಗಿದೆ
ಸಿ. ಹೇಳಿಕೆ 1, 2, 4 ಮಾತ್ರ ಸರಿಯಾಗಿದೆ
ಡಿ. 1 ರಿಂದ 4ರ ತನಕ ಎಲ್ಲವೂ ತಪ್ಪಾಗಿವೆ

ಉತ್ತರ: ಎ

ಮಾಹಿತಿ : Spardha Bharati UPSC ಯೂಟ್ಯೂಬ್ ಚಾನೆಲ್

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



❦ ಸುಭಾಷಿತ ❦

ನಿಮ್ಮ ಬಗ್ಗೆ ಮೊದಲು ಕಾಳಜಿ ವಹಿಸಿ. ಆಗ ಕುಟುಂಬದ ಉಳಿದವರೆಲ್ಲರನ್ನೂ ಇನ್ನಷ್ಟು ಚೆನ್ನಾಗಿ ನೋಡಿಕೊಳ್ಳಲು ನೀವು ಸಮರ್ಥರಾಗುತ್ತೀರಿ.

–ದೀಪಕ್ ಚೋಪ್ರಾ

ಬೈಗುಳವೇ ಚುನಾವಣಾ ವಿಷಯ? ನಾಲಗೆ ಮೇಲೆ ಇರಲಿ ನಿಯಂತ್ರಣ

ಕರ್ನಾಟಕದ ರಾಜಕೀಯ ವಲಯದಲ್ಲಿ ಸಭ್ಯರು ಕಣ್ಣು, ಕಿವಿ ಮುಚ್ಚಿಕೊಂಡು ಓಡಾಡಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆಯೇ? ರಾಜಕೀಯ ಭಾಷಣ ಎಂದರೆ ವಿರೋಧಿಗಳನ್ನು ಕೀಳು ಮಟ್ಟದ, ಅಸಭ್ಯ ಭಾಷೆಯಲ್ಲಿ ನಿಂದಿಸುವುದು ಮಾತ್ರ ಎಂದಾಗಿದೆಯೇ? ಯಾವುದೇ ವಿವೇಚನೆಯಿಲ್ಲದೆ ಮನಸ್ಸಿಗೆ ಬಂದಂತೆ ಎದುರಾಳಿಗಳನ್ನು ಸಾರ್ವಜನಿಕವಾಗಿ ನಿಂದಿಸುವ ಈ ಚಾಳಿ ರಾಜಕೀಯದ ಕುರಿತು ಈಗಿನ ತಲೆಮಾರಿಗೆ ಇರುವ ಜುಗುಪ್ಸೆ ಮತ್ತು ಅಸಹ್ಯದ ಭಾವವನ್ನು ಇನ್ನಷ್ಟು ಗಟ್ಟಿಗೊಳಿಸುವುದಿಲ್ಲವೇ? ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯನ್ನು ಮುಂದಿಟ್ಟುಕೊಂಡು ರಾಜ್ಯದಲ್ಲೀಗ ಮೂರೂ ಪ್ರಮುಖ ಪಕ್ಷಗಳ ಮುಖಂಡರು ಸಾರ್ವಜನಿಕ ಸಭೆಗಳಲ್ಲಿ ಮಾಡುತ್ತಿರುವ ಭಾಷಣಗಳನ್ನು ಗಮನಿಸಿದರೆ ಈ ಎಲ್ಲ ಪ್ರಶ್ನೆಗಳೂ ಉದ್ಭವಿಸುತ್ತಿವೆ. 'ರಾಹುಲ್ ಗಾಂಧಿ ಒಬ್ಬ ಡ್ರಗ್ಸ್ ವ್ಯಸನಿ ಮತ್ತು ಡ್ರಗ್ಸ್ ಪೆಡ್ಲರ್ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ. ಅಂಥವರು ಹೇಗೆ ರಾಷ್ಟ್ರ ಮುನ್ನಡೆಸಲು ಸಾಧ್ಯ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಭಾಷಣವೊಂದರಲ್ಲಿ ಪ್ರಶ್ನಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ ಕಾಂಗ್ರೆಸ್ ನಾಯಕರು ಕಟೀಲ್ ಅವರನ್ನು 'ಹುಚ್ಚ, ಮಾನಸಿಕ ಸ್ಥಿಮಿತ ಕಳೆದುಕೊಂಡವ, ಅಯೋಗ್ಯ, ಜೋಕರ್' ಎಂದೆಲ್ಲ ಟೀಕಿಸಿದ್ದಾರೆ. 'ಮಾನಸಿಕ ಸ್ಥಿಮಿತ ಕಳೆದುಕೊಂಡಿರುವ ನಳಿನ್ ಕುಮಾರ್ ಅವರನ್ನು ವ್ಯಸನಮುಕ್ತ ಕೇಂದ್ರಕ್ಕೆ ಸೇರಿಸಬೇಕು' ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಹೇಳಿದರೆ, 'ನಿಮ್ಹಾನ್ಸ್‌ಗೆ ಸೇರಿಸಬೇಕು' ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಕಾಂಗ್ರೆಸ್ ಮುಖಂಡ ಎಚ್.ಸಿ.ಮಹದೇವಪ್ಪ, ನಳಿನ್ ಕುಮಾರ್ ಅವರನ್ನು 'ಅಯೋಗ್ಯ' ಎಂದಿದ್ದರೆ, ಶಾಸಕ ದಿನೇಶ್ ಗುಂಡೂರಾವ್, 'ಜೋಕರ್, ಸಂಸ್ಕಾರವಿಲ್ಲದ ತುಚ್ಛ ವ್ಯಕ್ತಿ' ಎಂದು ಟೀಕಿಸಿದ್ದಾರೆ. ಈ ರೀತಿ ಪರಸ್ಪರರ ಬಗ್ಗೆ ಅವಹೇಳನಕಾರಿ ಪದಪ್ರಯೋಗಗಳನ್ನು ಮಾಡುವುದು ರಾಜಕೀಯದಲ್ಲಿ ಈಗ ಸಹಜ ಎಂಬಂತಾಗಿರುವುದು ರಾಜ್ಯದ ರಾಜಕೀಯಕ್ಕೆ ಬಡಿದಿರುವ ಬೌದ್ಧಿಕ ದಾರಿದ್ರ್ಯವನ್ನು ಎತ್ತಿ ತೋರಿಸುವಂತಿದೆ. ಹಿಂದೆಲ್ಲಾ ಹೊಸದಾಗಿ ಶಾಸಕರಾದವರು ಆವೇಶದಿಂದ ಇಂತಹ ಕೀಳುಮಟ್ಟದ ಭಾಷೆಯನ್ನು ಬಳಸಿದಾಗ, ಆಯಾ ಪಕ್ಷದ ಹಿರಿಯರು ಬುದ್ಧಿ ಹೇಳಿ ತಿದ್ದುತ್ತಿದ್ದರು. ಒಂದು ಕಾಲದಲ್ಲಿ ಬಿಜೆಪಿಯಲ್ಲಿಯೇ ಅಟಲ್ ಬಿಹಾರಿ ವಾಜಪೇಯಿ ಅವರಂತಹ ಅತ್ಯುತ್ತಮ ಸಂಸದೀಯ ಪಟುಗಳಿದ್ದರು. ಸಾರ್ವಜನಿಕ ಸಭೆಗಳಲ್ಲಿ ವಾಜಪೇಯಿ ಅವರ ಆಕರ್ಷಕ ನುಡಿಗಟ್ಟುಗಳ ಭಾಷಣವನ್ನು ಕೇಳಲು ವಿರೋಧಿಗಳೂ ಬಂದು ಸೇರುತ್ತಿದ್ದರು. ವಿರೋಧಿಗಳನ್ನು ಎಷ್ಟೇ ಕಟುವಾಗಿ ಟೀಕಿಸಿದರೂ ಘನತೆ, ವ್ಯಂಗ್ಯ ಮತ್ತು ಕಾವ್ಯಾತ್ಮಕತೆಯಿಂದ ಕೂಡಿದ ಸಭ್ಯ ಭಾಷೆಯನ್ನೇ ಅವರು ಬಳಸುತ್ತಿದ್ದರು. ಆದರೆ ಈಗ ಬಿಜೆಪಿಯಲ್ಲಿ ಇಂತಹ ಮುತ್ಸದ್ದಿ ನಾಯಕರ ಕೊರತೆ ಎದ್ದು ಕಾಣುವಂತಿದೆ. ರಾಜ್ಯ ಘಟಕದ ಅಧ್ಯಕ್ಷತೆಯಂತಹ ಜವಾಬ್ದಾರಿಯುತ ಸ್ಥಾನದಲ್ಲಿರುವ ನಳಿನ್ ಅವರೇ ಇಂತಹ ಅಭಿರುಚಿಹೀನ ಹೇಳಿಕೆಯನ್ನು ನೀಡಿರುವುದು ಪಕ್ಷ ಯಾವ ದಿಕ್ಕಿನತ್ತ ಸಾಗುತ್ತಿದೆ ಎನ್ನುವುದನ್ನು ಸೂಚಿಸುತ್ತದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾತ್ರ ನಳಿನ್ ಹೀಗೆ ಅಗೌರವದಿಂದ ಮಾತನಾಡಿರುವುದು ಎಳ್ಳಷ್ಟೂ ಸರಿಯಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಕೆಪಿಸಿಸಿ ಐ.ಟಿ ಘಟಕವು ಪ್ರಧಾನಿ ನರೇಂದ್ರ ಮೋದಿ ಅವರನ್ನು ಈಚೆಗೆ 'ಹೆಬ್ಬೆಟ್ಟು ಗಿರಾಕಿ' ಎಂದು ಅವಹೇಳನ ಮಾಡಿದೆ. ಇದಕ್ಕೆ ಪ್ರತಿಕ್ರಿಯೆ ನೀಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಪಕ್ಷದ ಪರವಾಗಿ ಕ್ಷಮೆ ಯಾಚಿಸಿದ್ದಲ್ಲದೆ, ಇದಕ್ಕೆ ಕಾರಣರಾದವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವುದಾಗಿಯೂ ಹೇಳಿದ್ದಾರೆ. ಇವು ಒಂದೆರಡು ಅಪವಾದಗಳಷ್ಟೇ. ಬಹುತೇಕ ರಾಜಕಾರಣಿಗಳು ಪಕ್ಷಭೇದವಿಲ್ಲದೆ ಅಭಿರುಚಿಹೀನ, ಕೀಳು ಮಟ್ಟದ ಭಾಷಾ ಪ್ರಯೋಗವನ್ನೇ ದೊಡ್ಡಸ್ತಿಕೆ ಎಂದು ತಿಳಿದುಕೊಂಡಂತಿದೆ. 'ರಾಜಕೀಯ ಎನ್ನುವುದು ಘಟಿಂಗರ ಕೊನೆಯ ತಾಣ' ಎಂಬ ಜನಪ್ರಿಯ ಆಡುಮಾತೊಂದನ್ನು ಸಮರ್ಥಿಸುವಂತೆ ಕರ್ನಾಟಕದ ರಾಜಕಾರಣಿಗಳು ಇವತ್ತು ವರ್ತಿಸುತ್ತಿರುವುದು ಖಂಡನೀಯ.



ಸಾರ್ವಜನಿಕ ಜೀವನದಲ್ಲಿ ಇರುವ ವ್ಯಕ್ತಿ, ಭಾಷೆಯನ್ನು ಬಳಸುವಾಗ ಮೈಯೆಲ್ಲ ಎಚ್ಚರ ಇಟ್ಟುಕೊಂಡಿರಬೇಕು

ನಳಿನ್ ಕುಮಾರ್ ಮಾತನಾಡಿದ್ದು ವಿಧಾನ ಪರಿಷತ್ ಚುನಾವಣೆಯ ಪೂರ್ವಭಾವಿ ಸಭೆಯಲ್ಲಿ. ಸಾಮಾನ್ಯವಾಗಿ ಇಂತಹ ಸಭೆಯಲ್ಲಿ 'ವಿಧಾನ ಪರಿಷತ್‌ಗೆ ಎಂತಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು, ಗೆಲ್ಲುವುದಕ್ಕಾಗಿ ಯಾವ ರೀತಿ ರಾಜಕೀಯ ತಂತ್ರಗಾರಿಕೆ ಮಾಡಬೇಕು' ಎನ್ನುವುದೆಲ್ಲ ಚರ್ಚೆಯಾಗುವುದು ವಾಡಿಕೆ. ಆದರೆ ನಳಿನ್ ಅವರು ಸಭೆಯಲ್ಲಿ ಉದ್ದಕ್ಕೂ ಕಾಂಗ್ರೆಸ್ ಮತ್ತು ಅದರ ನಾಯಕರ ಕುರಿತು ಅವಹೇಳನಕಾರಿ ಮಾತುಗಳನ್ನಾಡಿದ್ದಾರೆ. ಚುನಾವಣೆಯ ಸಂದರ್ಭದಲ್ಲಿ ಆಡಳಿತಾರೂಢ ಪಕ್ಷವು ತನ್ನ ಸರ್ಕಾರದ ಸಾಧನೆಗಳನ್ನು ಜನರ ಮುಂದಿಟ್ಟು ಮತ ಯಾಚಿಸುವುದು ಸಹಜವಾಗಿ ಆಗಬೇಕಾದ ಕೆಲಸ. ಅದೇ ರೀತಿ ವಿರೋಧ ಪಕ್ಷದ ನಾಯಕರು ಆಡಳಿತದ ಹುಳುಕುಗಳನ್ನು ಮತ್ತು ವೈಫಲ್ಯವನ್ನು ಎತ್ತಿ ತೋರಿಸಬೇಕು. ಅದನ್ನು ಬಿಟ್ಟು ನಾಯಕರ ವೈಯಕ್ತಿಕ ತೇಜೋವಧೆಯೇ ಚುನಾವಣಾ ಅಖಾಡದ ಮುಖ್ಯ ವಿಷಯ ಎನ್ನುವಂತಾಗಿರುವುದು ಶೋಚನೀಯ ಸಂಗತಿ.

ಸಂಸತ್ತು ಮತ್ತು ವಿಧಾನಮಂಡಲದಲ್ಲಿ ಅಸಭ್ಯ ಹಾಗೂ ಸಂಸ್ಕೃತಿಹೀನ ಶಬ್ದಗಳನ್ನು ಬಳಸಿದರೆ ಅಸಂಸದೀಯ ಎಂದು ಪರಿಗಣಿಸಿ ಆ ಮಾತುಗಳನ್ನು ಕಡತದಿಂದ ತೆಗೆದುಹಾಕುವ ಪರಂಪರೆ ಇದೆ. ಚುನಾವಣಾ ಭಾಷಣಗಳಲ್ಲಿಯೂ ರಾಜಕಾರಣಿಗಳು ಬಳಸುವ ಭಾಷೆ ಅಸಂಸದೀಯ ಆಗದಂತೆ ನೋಡಿಕೊಳ್ಳಬೇಕು. ಲಂಗುಲಗಾಮಿಲ್ಲದೆ, ಲಜ್ಜೆಯ ಲವಲೇಶವೂ ಇಲ್ಲದೆ ರಾಜಕಾರಣಿಗಳು ಹೀಗೆ ನಾಲಗೆ ಹರಿಬಿಡುವುದನ್ನು ಪ್ರಜ್ಞಾವಂತ ಮತದಾರರು ಸಹಿಸಿಕೊಳ್ಳಬಾರದು. ಇಂತಹ ಅಭಿರುಚಿಹೀನ ವ್ಯಕ್ತಿಗಳೇ ಜವಾಬ್ದಾರಿಯುತ ಸ್ಥಾನಗಳಲ್ಲಿ ಕುಳಿತುಕೊಳ್ಳುವುದರಿಂದ ಆಡಳಿತವೂ ಬಿಗು ಕಳೆದುಕೊಳ್ಳುತ್ತದೆ. ಅದಕ್ಕಿಂತ ಮುಖ್ಯವಾಗಿ ರಾಜಕಾರಣದ ಕುರಿತು ಯುವಜನರಲ್ಲಿ ಜುಗುಪ್ಸೆ ಮತ್ತು ಸಿನಿಕತನ ಹೆಚ್ಚಾಗುತ್ತದೆ. ಇಂತಹ ಹೇಳಿಕೆಗಳಿಗೆ ತಡೆಯೊಡ್ಡಲು ಚುನಾವಣಾ ಆಯೋಗವೂ ತನ್ನ ನೀತಿಸಂಹಿತೆಯಲ್ಲಿ ಕ್ರಮಗಳನ್ನು ಅಡಕಗೊಳಿಸುವ ಬಗ್ಗೆ ಆಲೋಚಿಸಲು ಇದು ಸಕಾಲ.

ದಿನದ ಟ್ವೀಟ್



ಪ್ರಾಶಸ್ತ್ಯ ಯಾವುದಕ್ಕೆ?

ಜನರನ್ನು ಕೊಲ್ಲಲು ಯಾವುದೇ ಮಿಸೈಲ್ ಅಗತ್ಯವಿಲ್ಲ. ಬದಲಿಗೆ ಅದಕ್ಕಿಂತಲೂ ಶಕ್ತಿಯುತವಾದ ಸಾಮಾಜಿಕ ಜಾಲತಾಣ ಎಂಬ ಅಸ್ತ್ರ ಸಾಕು. ಹೌದು, ಇಂದಿನ ದಿನಗಳಲ್ಲಿ ನಾನು ಗಮನಿಸಿದ ಹಾಗೆ ಜನರ ಮಧ್ಯೆ ದ್ವೇಷ ಹೆಚ್ಚಿಸಿ ಒಬ್ಬರಿಗೊಬ್ಬರು ಬಡಿದಾಡಿಕೊಳ್ಳುವ ಹಂತಕ್ಕೆ ಈ ಸಾಮಾಜಿಕ ಜಾಲತಾಣ ಕಾರಣವಾಗುತ್ತಿದೆ. ಅಭಿಪ್ರಾಯ ವಿನಿಮಯಕ್ಕಿಂತ ವೈಯಕ್ತಿಕ ನಿಂದನೆ ಹೆಚ್ಚು.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ



ಚುನಾವಣೆ ಸಂದರ್ಭದಲ್ಲಿ ಯಾವುದೋ ಒಂದು ಗುಂಪು, ಸಮುದಾಯವನ್ನು ಓಲೈಸಲು ರಾಜಕಾರಣಿಗಳು ಇಲ್ಲಸಲ್ಲದ ಮಾತನಾಡುವುದು ಸರಿಯಲ್ಲ. ತಾವು ಆಡುವ ಮಾತಿನಿಂದ ಆಗುವ ದುಷ್ಪರಿಣಾಮದ ಬಗ್ಗೆ ರಾಜಕೀಯ ನಾಯಕರು ಯೋಚಿಸದಿರುವುದು ಬೇಸರದ ಸಂಗತಿ. ಮತಗಳನ್ನು ಸೆಳೆಯುವ ಒಂದೇ ಉದ್ದೇಶದಿಂದ ಇಂಥ ಮಾತುಗಳನ್ನಾಡದೆ ವಿವೇಕದಿಂದ ವರ್ತಿಸಬೇಕು.

ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಪೇಜಾವರ ಮಠಾಧೀಶ

25 ವರ್ಷಗಳ ಹಿಂದೆ

ಸೋಮವಾರ, 21-10-1996

● ವಿದ್ಯುತ್ ಸಮಸ್ಯೆ ನಿವಾರಣೆಗೆ ಮೂರು ಹೊಸ ಯೋಜನೆ

ಹುಬ್ಬಳ್ಳಿ, ಅ. 20– ರಾಜ್ಯದಲ್ಲಿನ ವಿದ್ಯುತ್ ಸಮಸ್ಯೆ ನಿವಾರಣೆಗೆ ಕೊಡಸಹಳ್ಳಿ, ಗೇರುಸೊಪ್ಪ ಮತ್ತು ಕಾಗ್ರಾದಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಮೂರು ಹೊಸ ಜಲವಿದ್ಯುತ್ ಯೋಜನೆಗಳನ್ನು ಜಾರಿಗೆ ತರಲು ಉದ್ದೇಶಿಸಿರುವುದಾಗಿ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಘೋಷಿಸಿದ್ದಾರೆ.

ನರಗುಂದ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಇಂದು ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

● ಶಿವರಾಜ್ ಉತ್ತಮ ನಟ ಪ್ರೇಮಾ ಉತ್ತಮ ನಟಿ

ಮೈಸೂರು, ಅ. 20 (ಯುಎನ್‌ಐ)– ರಾಜ್ಯ ಸರ್ಕಾರ ಕೊಡಮಾಡುವ 1995– 96ನೇ ಸಾಲಿನ ಉತ್ತಮ ನಟ ಮತ್ತು ಉತ್ತಮ ನಟಿ ಪ್ರಶಸ್ತಿಗೆ 'ಓಂ' ಚಿತ್ರದಲ್ಲಿನ ನಟನೆಗಾಗಿ ಕ್ರಮವಾಗಿ ಶಿವರಾಜ್ ಕುಮಾರ್ ಹಾಗೂ ಪ್ರೇಮಾ ಆಯ್ಕೆಯಾಗಿದ್ದಾರೆ.

ಉತ್ತಮ ಪೋಷಕ ನಟ ಪ್ರಶಸ್ತಿಗೆ ಗಿರೀಶ್ ಕಾರ್ನಾಡ್ ಅವರನ್ನು ಆಯ್ಕೆ ಮಾಡಲಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 21-10-1971

● ಬಾಂಗ್ಲಾ ಸಮಸ್ಯೆ: ಶೀಘ್ರ ರಾಜಕೀಯ ಪರಿಹಾರಕ್ಕೆ ಇಂದಿರಾ–ಟಿಟೋ ಕರೆ

ನವದೆಹಲಿ, ಅ. 20– ಬಾಂಗ್ಲಾದೇಶದ ಸಮಸ್ಯೆ ಬಗ್ಗೆ ಪೂರ್ವ ಬಂಗಾಳದ ಜನರ ಚುನಾಯಿತ ಪ್ರತಿನಿಧಿಗಳಿಗೆ ಒಪ್ಪಿಗೆಯಾಗುವಂಥ ರಾಜಕೀಯ ಪರಿಹಾರ ಕಂಡುಕೊಳ್ಳುವುದು ಅತ್ಯಗತ್ಯವೆಂದು ಇಂದು ಬೆಳಿಗ್ಗೆ ಇಲ್ಲಿ ನೀಡಿದ ಭಾರತ– ಯುಗೋಸ್ಲಾವಿಯಾ ಜಂಟಿ ಪ್ರಕಟಣೆ ಕರೆ ಇತ್ತಿದೆ.

ಈ ರಾಜಕೀಯ ಪರಿಹಾರವು ಪೂರ್ವ ಬಂಗಾಳದ ಜನರ ಆಸೆ– ಆಕಾಂಕ್ಷೆಗಳು ಹಕ್ಕುಗಳು ಹಾಗೂ ಕಾನೂನುಬದ್ಧ ಹಿತಾಸಕ್ತಿಗಳಿಗೆ ಅನುಗುಣವಾಗಿರಬೇಕೆಂದೂ ಆ ಪ್ರಕಟಣೆ ತಿಳಿಸಿದೆ. ಬಾಂಗ್ಲಾ ದೇಶದ ನಿರಾಶ್ರಿತರ ಸಮಸ್ಯೆಗೆ ಪರಿಹಾರ ಹುಡುಕುವುದನ್ನು ಮುಂದಕ್ಕೆ ಹಾಕಿದರೆ 'ಪರಿಸ್ಥಿತಿಯ ತೀವ್ರ ಉಲ್ಬಣಕ್ಕೆ' ಅವಕಾಶವಾಗುವ ಸಂಭವವಿದೆ ಎಂದು ಎಚ್ಚರಿಸಿದೆ.

ಉತ್ತರಪ್ರದೇಶ, ಪಂಜಾಬ್ ವಿಧಾನಸಭೆ ಚುನಾವಣೆಯಲ್ಲಿ ಪ್ರಾದೇಶಿಕ ಪಕ್ಷಗಳ ಪಾತ್ರ ಪರೀಕ್ಷೆಗೆ ಒಳಪಡಲಿದೆ

ವಿರೋಧ ಪಕ್ಷ: ಸ್ಥಾನಭದ್ರತೆಗೆ ಕಸರತ್ತು



ಜನರಾಜಕಾರಣ

ಸಂದೀಪ್ ಶಾಸ್ತ್ರಿ

ಬಿಜೆಪಿ ನೇತೃತ್ವದ ಈಗಿನ ಎನ್‌ಡಿಎ ಸರ್ಕಾರವು ಮುಂದಿನ ತಿಂಗಳ ವೇಳೆಗೆ ತನ್ನ ಎರಡನೇ ಅಧಿಕಾರ ಅವಧಿಯ ಮಧ್ಯಭಾಗದಲ್ಲಿರುತ್ತದೆ. ಮುಂದಿನ ವರ್ಷ ನಡೆಯಲಿರುವ ಉತ್ತರಪ್ರದೇಶ ಹಾಗೂ ಪಂಜಾಬ್ ವಿಧಾನಸಭೆ ಚುನಾವಣೆಗಳ ಸುತ್ತ ಬಹಳಷ್ಟು ರಾಜಕೀಯ ಆಸಕ್ತಿ ಮೂಡಿದ್ದರೂ ಈ ಚುನಾವಣೆಗಳು 2024ರಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಯ ಮುಂಚಿನ ಸೆಮಿಫೈನಲ್ ಆಗಿರುತ್ತವೆ ಅಷ್ಟೆ.


ಇತ್ತೀಚಿನ ದಿನಗಳಲ್ಲಿ ಗೋಚರಿಸುತ್ತಿರುವ ಸ್ಪಷ್ಟ ಮಾದರಿ ಎಂದರೆ, ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಚುನಾವಣೆ ಪ್ರವೃತ್ತಿಗಳಲ್ಲಿ ಎದ್ದು ಕಾಣಿಸುವಂತಹ ವ್ಯತ್ಯಾಸಗಳು. ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನ ಗಳಿಸಿಕೊಂಡ ಪಕ್ಷವು ರಾಜ್ಯ ವಿಧಾನಸಭೆ ಚುನಾವಣೆಯಲ್ಲೂ ಅಂತಹದೇ ಸಾಧನೆ ತೋರಬೇಕೆಂದೇನೂ ಇಲ್ಲ ಅಥವಾ ತೋರುತ್ತದೆ ಎಂದೇನೂ ಇಲ್ಲ. ಇಂತಹದೊಂದು ಮಾದರಿಯ ಹಿನ್ನೆಲೆಯಲ್ಲಿ, ಅಧಿಕಾರ ಸ್ಥಾನದಲ್ಲಿ ಒಂದು ದಶಕ ಪೂರೈಸಲು ಸಜ್ಜಾಗುತ್ತಿರುವ ಪಕ್ಷ– ಮೈತ್ರಿಕೂಟಕ್ಕೆ ಸವಾಲು ಹಾಕಲು ಪ್ರತಿಪಕ್ಷದ ಸ್ಥಾನವನ್ನು ಆಕ್ರಮಿಸಿಕೊಳ್ಳುವುದಕ್ಕಾಗಿಯೇ ನಡೆಯಲಿರುವ ಸಮರವನ್ನು ಮುಂದಿನ ಮೂವತ್ತು ತಿಂಗಳುಗಳಲ್ಲಿ ಕಾಣಬಹುದು.

ಸತತ ಎರಡು ಅವಧಿ ಪೂರೈಸಿದ್ದ ಕಾಂಗ್ರೆಸ್ ನೇತೃತ್ವದ ಯುಪಿಎ, 2014ರ ಮಹಾಚುನಾವಣೆಯಲ್ಲಿ ಮಹಾಸೋಲನ್ನು ಕಂಡಿತು. ಬಲವಾದ ಆಡಳಿತ ವಿರೋಧಿ ಅಲೆಯನ್ನೇರಿ ಬಿಜೆಪಿ ನೇತೃತ್ವದ ಎನ್‌ಡಿಎ ಅಧಿಕಾರದ ಗದ್ದುಗೆಗೆ ಏರಿತು. ಕಾಲು ಶತಮಾನದ ನಂತರ ಮೊದಲ ಬಾರಿಗೆ ಲೋಕಸಭೆಯಲ್ಲಿ ಬಹುಮತ ಸಾಧಿಸಲು ಏಕಪಕ್ಷವೊಂದು (ಬಿಜೆಪಿ) ಸಫಲವಾಗಿತ್ತು. ಬಲಿಷ್ಠ ನಾಯಕತ್ವದ ಪ್ರಭಾವ ಹಾಗೂ ದುರ್ಬಲ ಮತ್ತು ವಿಭಜಿತ ಪ್ರತಿಪಕ್ಷದ ಅಂಶಗಳು ಸೇರಿದಂತೆ ಹಲವು ಕಾರಣಗಳಿಗಾಗಿ 2019ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಪುನಃ ಅಧಿಕಾರ ಹಿಡಿಯಿತು. 2014ರಲ್ಲಿ ಬಿಜೆಪಿ ಗೆಲುವಿನ ನಂತರ, ಲೋಕಸಭೆಯಲ್ಲಿ ವಿರೋಧ ಪಕ್ಷದ ಉಪಸ್ಥಿತಿ ಸೀಮಿತವಾಗಿದೆ. ಈ ಎರಡೂ ಚುನಾವಣೆಗಳಲ್ಲಿ (2014 ಮತ್ತು 2019), ವಿರೋಧ ಪಕ್ಷಗಳ ಪೈಕಿ ದೊಡ್ಡದಾದ ಕಾಂಗ್ರೆಸ್ ಪಕ್ಷವು, ವಿರೋಧ ಪಕ್ಷದ ಅಧಿಕೃತ ಸ್ಥಾನಮಾನ ಪಡೆದುಕೊಳ್ಳಲು ಅಗತ್ಯವಾದಂತಹ ಕನಿಷ್ಠ ಶೇ 10ರಷ್ಟು ಸ್ಥಾನಗಳನ್ನು ಗಳಿಸಲೂ ವಿಫಲವಾಯಿತು. ಹೀಗಾಗಿ, ಲೋಕಸಭೆಯಲ್ಲಿ ಪ್ರತಿಪಕ್ಷದ ಅಧಿಕೃತ ನಾಯಕನೇ ಇಲ್ಲದಂತಹ ಸ್ಥಿತಿ ಉಂಟಾಯಿತು.

2014ರಲ್ಲಿ ಅಧಿಕಾರ ಕಳೆದುಕೊಂಡಾಗಿನಿಂದ, ತಪ್ಪುಗಳನ್ನು ಸರಿಪಡಿಸಿಕೊಂಡು ಹೆಚ್ಚು ಸಂಘಟಿತವಾಗಲು ಕಾಂಗ್ರೆಸ್ ಪ್ರಯತ್ನಿಸುತ್ತಲೇ ಇದೆ. 2014ರ ಲೋಕಸಭೆ ಚುನಾವಣೆಯಲ್ಲಿ ಅತ್ಯಂತ ಕಡಿಮೆ ಸ್ಥಾನಗಳನ್ನು ಗೆದ್ದ ಕಾಂಗ್ರೆಸ್, 2019ರ ಲೋಕಸಭಾ ಚುನಾವಣೆಯಲ್ಲೂ ಅಂಚಿನಲ್ಲೇ ಉಳಿದುಹೋಯಿತು. ನಂತರ ಈ ಎರಡೂವರೆ ವರ್ಷಗಳಲ್ಲಿ ಪ್ರಮುಖ ಪ್ರತಿಪಕ್ಷ ಸ್ಥಾನದ ಉಪಸ್ಥಿತಿಯನ್ನು ಪ್ರತಿಪಾದಿಸಿಕೊಳ್ಳುವಲ್ಲಿಯೂ ವಿಫಲವಾಗಿದೆ. ಪಕ್ಷದೊಳಗೆ ನಾಯಕತ್ವದ ಶೂನ್ಯತೆ ಮುಂದುವರಿದಿದೆ. ಪ್ರಮುಖ ವಿಚಾರಗಳ ಬಗ್ಗೆ ದೀರ್ಘ ಕಾಲ ನಿರ್ಧಾರ ಕೈಗೊಳ್ಳದೇ ಇರುವುದು, 'ರಾಜ್ಯ ಮಟ್ಟದ ನೆಲೆ' ಇರುವ ಪಕ್ಷಗಳಿಗೆ ಪ್ರತಿಪಕ್ಷದ ಜಾಗ ತೆರವು ಮಾಡಿಕೊಡುವಂತಹ ಸ್ಥಿತಿ ಸೃಷ್ಟಿಯಾಗುತ್ತಿದೆ. ಕಾಂಗ್ರೆಸ್ ಅಧಿಕಾರದಲ್ಲಿ ಇರುವ ರಾಜ್ಯಗಳ ಸಂಖ್ಯೆ ಇಳಿಮುಖವಾಗುತ್ತಿದೆ. ಅಧಿಕಾರದಲ್ಲಿರುವೆಡೆಯೂ ತನ್ನನ್ನು ಸಂಘಟಿತವಾಗಿ ಇಟ್ಟುಕೊಳ್ಳಲು ಹೋರಾಡುತ್ತಿದೆ. ಇದು, 'ಪ್ರತಿಪಕ್ಷದ ನೆಲೆ'ಯ 'ಕೇಂದ್ರ ಬಿಂದು'ವಾಗಿ ಯಾವ ರಾಜಕೀಯ ರಚನೆಗಳು ಹೊರಹೊಮ್ಮಲಿವೆ ಎಂಬ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

2014ರ ಲೋಕಸಭೆ ಚುನಾವಣೆಯ ನಂತರ, ಬಿಜೆಪಿಯು ರಾಜಕೀಯ ಭೂಪಟದಲ್ಲಿ ಕೇಂದ್ರ ಸ್ಥಾನವನ್ನು ಹೆಚ್ಚಾಗಿ ಆಕ್ರಮಿಸಿಕೊಳ್ಳುತ್ತಿದೆ. ಪ್ರಬಲ ಪಕ್ಷ ವ್ಯವಸ್ಥೆಯು ಉದಯವಾಗುತ್ತಿರುವುದನ್ನು ಭಾರತ ಕಾಣುತ್ತಿದೆ. 'ಕಾಂಗ್ರೆಸ್‌ಮುಕ್ತ ಭಾರತ' ಎಂಬುದು ಬಿಜೆಪಿಯ ಪ್ರಮುಖ ಘೋಷಣೆ ಆಗಿರುವುದು ಆಕಸ್ಮಿಕವೇನಲ್ಲ. ಕಾಂಗ್ರೆಸ್ ಪಕ್ಷದಲ್ಲಿನ ದಿಕ್ಕು ತಪ್ಪಿದ ಸ್ಥಿತಿ, ಅದರೊಳಗಿನ ಆಂತರಿಕ ಬಿಕ್ಕಟ್ಟು ಹಾಗೂ ವಿರೋಧಾಭಾಸಗಳಿಂದಾಗಿ 'ಪ್ರತಿಪಕ್ಷದ ನೆಲೆ'ಯಲ್ಲಿ 'ನುಸುಳುತ್ತಿರುವ ಅಪ್ರಸ್ತುತತೆ'ಗೆ ಕಾಂಗ್ರೆಸ್ ಪಕ್ಷವೇ ಕೊಡುಗೆ ಸಲ್ಲಿಸುತ್ತಿದೆ ಎಂದು ಅನೇಕ ವೀಕ್ಷಕರು ನಂಬುವುದಕ್ಕೆ ಇದು ಇನ್ನಷ್ಟು ಕಾರಣವಾಗಿದೆ.

2019ರ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಿನ ನಂತರ ಹೊಣೆಗಾರಿಕೆ ಹೊತ್ತುಕೊಂಡು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಹುಲ್ ಗಾಂಧಿ ರಾಜೀನಾಮೆ ನೀಡಿದ ನಂತರ ಉಂಟಾದ ನಾಯಕತ್ವ ಶೂನ್ಯತೆಯು ಪಕ್ಷಕ್ಕೆ ಹೆಚ್ಚಿನ ಪೆಟ್ಟು ನೀಡಿದೆ. ವಿವಿಧ ಬಣಗಳ ನಡುವೆ ಆಂತರಿಕ ಅಧಿಕಾರ ಕಿತ್ತಾಟದಿಂದಾಗಿ ಪಕ್ಷದೊಳಗಿನ ಏಕತೆಗೂ ತೀವ್ರವಾದ ಬೆದರಿಕೆಯುಂಟಾಗಿದೆ. 2019ರ ಲೋಕಸಭೆ ಚುನಾವಣೆ ನಂತರ, ತನ್ನದೇ ಬಲದಿಂದ ಯಾವುದೇ ರಾಜ್ಯದಲ್ಲೂ ಅಧಿಕಾರಕ್ಕೆ ಬರುವಲ್ಲಿ ಕಾಂಗ್ರೆಸ್ ವಿಫಲವಾಗಿದೆ. ಕೇರಳದಲ್ಲಿ ಅಧಿಕಾರ ಹಿಡಿಯಲಾಗಲಿಲ್ಲ. ಮಧ್ಯಪ್ರದೇಶ ಹಾಗೂ ಕರ್ನಾಟಕದಲ್ಲಿ ತನ್ನದೇ ಸರ್ಕಾರಗಳನ್ನು ಕಳೆದುಕೊಂಡಿತು. ಜಾರ್ಖಂಡ್, ತಮಿಳುನಾಡು ಹಾಗೂ ಮಹಾರಾಷ್ಟ್ರದಲ್ಲಿನ ಮೈತ್ರಿ ಸರ್ಕಾರಗಳಲ್ಲಿ ಸಣ್ಣ ಪಾಲುದಾರ ಪಕ್ಷವಾಗಿದೆ ಕಾಂಗ್ರೆಸ್. ತಾನು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಮುಂದಿನ ಎರಡು ವರ್ಷಗಳಲ್ಲಿ ಮತ್ತೆ ಮತದಾರರ ಮುಂದೆ ಹೋಗಲಿದೆ. ಅಷ್ಟೇ ಅಲ್ಲ, ಇದೇ ಅವಧಿಯಲ್ಲಿ ಬಿಜೆಪಿಯೊಂದಿಗೆ ನೇರ ಸ್ಪರ್ಧೆಯಲ್ಲಿರುವ ಕೆಲವು ಪ್ರಮುಖ ರಾಜ್ಯಗಳಲ್ಲಿಯೂ ಬಿಜೆಪಿ ವಿರುದ್ಧ ಕಾಂಗ್ರೆಸ್ ಸೆಣಸಲಿದೆ.



2019ರ ನಂತರ, ರಾಜ್ಯ ಮಟ್ಟದ ಪ್ರಮುಖ ಚುನಾವಣೆ ಸಮರಗಳಲ್ಲಿ ಬಿಜೆಪಿ (ಹಾಗೂ ಅದರ ಮಿತ್ರ ಪಕ್ಷಗಳು) ಅಧಿಕಾರವನ್ನು ಮತ್ತೆ ಹಿಡಿದಿರುವುದನ್ನು ನೋಡಿದ್ದೇವೆ ಅಥವಾ ರಾಜ್ಯ ಮಟ್ಟದ ಪ್ರಾದೇಶಿಕ ಪಕ್ಷವು (ಸ್ವಂತ ಬಲದಿಂದ ಅಥವಾ ಮೈತ್ರಿಯೊಂದಿಗೆ) ಬಿಜೆಪಿ ಅಥವಾ ಎನ್‌ಡಿಎ ಕೂಟವನ್ನು ಸೋಲಿಸಿರುವುದನ್ನು ನೋಡಿದ್ದೇವೆ. ಜಾರ್ಖಂಡ್‌ನಲ್ಲಿ ಜೆಎಂಎಂ ನೇತೃತ್ವದ ಮಿತ್ರಪಕ್ಷಗಳು ಚುನಾವಣೆ ಗೆಲ್ಲುವುದರೊಂದಿಗೆ ಚುನಾವಣಾ ಗೆಲುವುಗಳಲ್ಲಿ 'ರಾಜ್ಯ ಮಟ್ಟದ ಪ್ರಾದೇಶಿಕ ಪಕ್ಷಗಳ' ನೇತೃತ್ವ ಆರಂಭವಾಯಿತು. ನಂತರ ದೆಹಲಿಯಲ್ಲಿ ಎಎಪಿ ಗೆಲುವು ಸಾಧಿಸಿತು. ಈ ಮಧ್ಯೆ, ಮಹಾರಾಷ್ಟ್ರದಲ್ಲಿ ಹೊಸ ಆಡಳಿತ ಮೈತ್ರಿ ರಚನೆ (ರಾಜ್ಯ ಮಟ್ಟದ ಪ್ರಾದೇಶಿಕ ಪಕ್ಷಗಳ ಪ್ರಮುಖ ಪಾತ್ರದೊಂದಿಗೆ) ಆರಂಭವಾಯಿತು. ಕೇರಳದಲ್ಲಿ ಸಿಪಿಎಂ ನೇತೃತ್ವದ ಮೈತ್ರಿಕೂಟ ಅಧಿಕಾರ ಉಳಿಸಿಕೊಂಡಿತು. ತಮಿಳುನಾಡಿನಲ್ಲಿ ಎಐಎಡಿಎಂಕೆ ನೇತೃತ್ವದ ಎನ್‌ಡಿಎ ಮೈತ್ರಿಕೂಟವನ್ನು ಡಿಎಂಕೆ ನೇತೃತ್ವದ ಮೈತ್ರಿಕೂಟ ಸೋಲಿಸಿತು. ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ನೇರ ಚುನಾವಣಾ ಸ್ಪರ್ಧೆಯನ್ನು ಮಣಿಸಿ ತೃಣಮೂಲ ಕಾಂಗ್ರೆಸ್ ಅಧಿಕಾರ ಉಳಿಸಿಕೊಂಡಿತು.

ಹೊಸದಾಗಿ ಹೊಮ್ಮುತ್ತಿರುವ 'ಪ್ರತಿಪಕ್ಷದ ನೆಲೆ'ಯಲ್ಲಿ 'ರಾಜ್ಯ ಮಟ್ಟದ ಪ್ರಾದೇಶಿಕ ಪಕ್ಷಗಳ' ಪ್ರಮುಖ ಪಾತ್ರ ಸ್ಪಷ್ಟವಾಗಿ ಗೋಚರಿಸುತ್ತಿದೆ. ಇದು, ಉತ್ತರ ಪ್ರದೇಶ ಹಾಗೂ ಪಂಜಾಬ್ ವಿಧಾನಸಭೆಗೆ ಮುಂದಿನ ವರ್ಷ ನಡೆಯಲಿರುವ ಚುನಾವಣೆಯಲ್ಲಿ ಪರೀಕ್ಷೆಗೆ ಒಳಪಡಲಿದೆ. ಈ ಚುನಾವಣೆಗಳ ಫಲಿತಾಂಶಗಳು, 2024ರ ಚುನಾವಣಾ ಸ್ಪರ್ಧೆಯ ರೂಪುರೇಷೆಗಳನ್ನು ವ್ಯಾಖ್ಯಾನಿಸಿ ನಿರ್ಧರಿಸಲಿವೆ. ಈ ಸಂಬಂಧ ಮೂರು ಅಂಶಗಳು ಪ್ರಾಮುಖ್ಯ ಗಳಿಸಿಕೊಳ್ಳುತ್ತವೆ. ಮೊದಲಿಗೆ, ಪ್ರತಿಪಕ್ಷಗಳ ಪೈಕಿ 'ನಿರ್ಣಾಯಕ ಆಟಗಾರ'ನ ಸ್ಥಾನವನ್ನು ಕಾಪಾಡಿಕೊಳ್ಳುವುದು ಕಾಂಗ್ರೆಸ್‌ಗೆ ಸಾಧ್ಯವಾಗಲಿದೆಯೇ? ಅಥವಾ 'ಪ್ರತಿಪಕ್ಷದ ನೆಲೆ'ಯಲ್ಲಿ ತಾನೂ ಕೇವಲ ಒಬ್ಬ ಮಾಮೂಲಿ ಆಟಗಾರನಷ್ಟೇ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆಯೇ?

ಎರಡನೆಯದಾಗಿ, ಆಡಳಿತ ಮೈತ್ರಿಕೂಟ ಹಾಗೂ ಪ್ರತಿಪಕ್ಷಗಳ ನಡುವಿನ ಸ್ಪರ್ಧೆಯನ್ನು ನಾಯಕತ್ವಕ್ಕೆ ಸಂಬಂಧಿಸಿದ ಆಯ್ಕೆಯಾಗಿ ಕಾಣುವುದು ಹೆಚ್ಚಾಗುತ್ತಿದೆಯೇ? ನಾಯಕತ್ವದ ಸಮರವೆಂಬಂತೆ ರೂಪುಗೊಳ್ಳುವ ಚುನಾವಣಾ ಸ್ಪರ್ಧೆಯು ಬಿಜೆಪಿಗೆ ಹೆಚ್ಚು ಅನುಕೂಲಕರ ಆಗಲಿದೆ ಹಾಗೂ ಬಿಜೆಪಿಯು ಹೆಚ್ಚು ಅನುಕೂಲಕರ ನೆಲೆಯಲ್ಲಿರುತ್ತದೆ.

ಕಡೆಯದಾಗಿ, ಪ್ರತಿಪಕ್ಷ ನೆಲೆಯಲ್ಲಿರುವ ಮುಖ್ಯ ಆಟಗಾರರು, ಈ ಸಮರವನ್ನು ಬರೀ ನಾಯಕತ್ವ ಸ್ಪರ್ಧೆಯಾಗಿಸದೇ ಪರ್ಯಾಯ ಕಾರ್ಯಕ್ರಮಗಳು ಹಾಗೂ ಆಡಳಿತನೀತಿ ಆದ್ಯತೆಗಳ ಗುಚ್ಛಗಳನ್ನಾಧರಿಸಿದ ಸ್ಪರ್ಧೆಯಾಗಿಸಲು ಶಕ್ತರಾಗಬಲ್ಲರೇ? ಈ ಮೂರೂ ಪ್ರಶ್ನೆಗಳ ಉತ್ತರಗಳನ್ನು ಹೊಸದಾಗಿ 'ಹೊಮ್ಮುತ್ತಿರುವ ಪ್ರತಿಪಕ್ಷ ನೆಲೆ'ಯ ಮುಖ್ಯ ಅಂಶಗಳು ಅವಲಂಬಿಸಲಿವೆ.

ಚುರುಮುರಿ



ಕೊರೊನಾ ಡೈಲಾಗ್ಸ್

● ಆನಂದ

ಅಂದು

ಮಳೆ ಬೆಳೆ ಹೇಗಿದೆ?
ಎಷ್ಟು ಮಕ್ಕಳು? ಗಂಡೆಷ್ಟು ಹೆಣ್ಣೆಷ್ಟು?
ಮಗನಿಗೆ ಕೆಲಸ ಸಿಕ್ಕಿತೆ? ಸದ್ಯ, ನಿಮಗೊಂದಿಷ್ಟು ರಿಲೀಫ್ ಈಗ.
ಮಗಳಿಗೆ ಮದುವೆ ಆಯಿತೆ? ಮೊಮ್ಮಕ್ಕಳು?
ಸೊಸೆ ಬಂದಳೆ? ಹೊಂದಿಕೊಂಡು ಹೋಗ್ತಾಳೆಯೇ?
ಆರೋಗ್ಯ ಹೇಗಿದೆ? ಸಕ್ಕರೆ ಕಾಯಿಲೆ ಎಂದಿದ್ದಿರಿ? ಈಗ?
ಬಿ.ಪಿ ಕಂಟ್ರೋಲ್‌ಗೆ ಬಂತೆ? ಒಳ್ಳೇದಾಯ್ತು.
ಮೊಮ್ಮಕ್ಕಳು ಕೈಗೆ ಬಂದರೇನು?
ಮೊಮ್ಮಗು ನರ್ಸರಿಗೆ ಸೇರಿತೆ? ನಿಜ, ಅಡ್ಮಿಷನ್ ಸಿಗೋದು ತುಂಬಾ ಕಷ್ಟ. ಯಾರನ್ನು ಹಿಡಿದಿರಿ?
ಮನೆ ಗೃಹಪ್ರವೇಶವೆ? ಅಂತೂ ಸಾಧಿಸಿಬಿಟ್ರಿ.
ಎಷ್ಟು ಚದರ ಇದೆ? ಎಷ್ಟಾಯಿತು? ಹೌದು, ಈಗ ವಿಪರೀತ ಖರ್ಚಾಗುತ್ತೆ. ಏನೋ ಮನೇಂತ ಆಯ್ತಲ್ಲ ಬಿಡಿ, ನೆಮ್ಮದಿಯಿಂದ ಇರಬಹುದು. ಬಾಡಿಗೆ ಮನೆ ತಾಪತ್ರಯ ಇರೊಲ್ಲ.

ಇಂದು

ಏನು ಕೊರೊನಾನೆ? ಅಯ್ಯೋ ಟೆಸ್ಟ್ ಸರಿಯಾಗಿ ಮಾಡಿಸಿದ್ದೀರಾ?
ಮನೇಲೇ ಇದ್ದೀರಾ? ಆಸ್ಪತ್ರೆಗೆ ಹೋಗೊಲ್ಲವೆ?
ಒಳ್ಳೆದಾಯ್ತು. ನರ್ಸಿಂಗ್ ಹೋಂನೋರು ಹೀರಿಬಿಡ್ತಾ ಇದ್ದರು. ಬೇಗ ರಿಕವರ್ ಆಗೀಪ್ಪಾ...
ವ್ಯಾಕ್ಸಿನೇಷನ್ ಆಯಿತೆ? ಮೊದಲನೇದು ಅಲ್ವಾ?
ಎಲ್ಲಿ ಸರ್ಕಾರಿ ಆಸ್ಪತ್ರೇಲಾ? ವೆರಿ ಗುಡ್. ದುಡ್ಡು ಉಳಿಸಿದಿರಿ. ನಾನು ಪ್ರೈವೇಟ್ ಆಸ್ಪತ್ರೆಗೆ ಹೋದೆ. ಸರ್ಕಾರಿ ಆಸ್ಪತ್ರೆ ಹೇಗಿರುತ್ತೋ ಏನೋ. ಸುಮ್ಮನೆ ರಿಸ್ಕ್ ಯಾಕೆಂತ.

ನನ್ನ ಸೆಕೆಂಡ್ ಡೋಸೂ ಆಯಿತು. ಅದೇ ಪ್ರೈವೇಟ್ ಆಸ್ಪತ್ರೇಲಿ. ನಿಮ್ಮದು ನಾಳೇನಾ? ಅದೇ ಸರ್ಕಾರಿ ಆಸ್ಪತ್ರೇಲಾ? ದುಡ್ಡು ಉಳಿಸಿದಿರಿ ಮತ್ತೆ!

ಎರಡೂ ಡೋಸ್ ಆಯಿತು ನಮ್ಮಿಬ್ಬರಿಗೂ. ಇನ್ನೇನು ಧೈರ್ಯದಿಂದ ಇರಬಹುದು ಅಲ್ವೇ? ವ್ಯಾಕ್ಸಿನೇಷನ್ ಹಾಕಿಸಿಕೊಂಡ ಮೇಲೆ ಕೊರೊನಾ ಬರೊಲ್ಲ ಅಂತಾರೆ, ನೋಡಬೇಕು. ಏನೆಂದಿರಿ? ಬೂಸ್ಟರ್ ಡೋಸ್ ಬೇಕಾಗಿ ಬರಬಹುದು ಅಂತ ಕೆಲವರು ಹೇಳ್ತಿದಾರಾ? ಇಲ್ಲಾರೀ, ಈಗೇನೂ ಮೂರನೆ ಅಲೆ ಹೆದರಿಕೆ ಇಲ್ವಂತೆ. ಇಲ್ಲದಿದ್ರೆ 1ನೇ ತರಗತಿ ತೆಗೆಯೋದಕ್ಕೆ ಪರ್ಮಿಷನ್ ಎಲ್ಲಿ ಸಿಗ್ತಾ ಇತ್ತು?
ಏನೋ ಎಲ್ಲಾ ಮುಗಿದರೆ ಸಾಕು. ರಸ್ತೆ ಬದಿ ಬೋಂಡಾ ತಿಂದು ಒಂದೂವರೆ ವರ್ಷ ಆಯಿತು.

ಸಂಗತ

ಕೊನೆಯ ಪಯಣ ಮತ್ತು ಸಿದ್ಧತೆ

ಬದುಕಿಗೆ ವಿದಾಯ ಹೇಳುವ ಮುನ್ನ ನಾವು ಮಾಡಬೇಕಾದುದೆಂದರೆ...

● ಮಲ್ಲಿಕಾರ್ಜುನ ಹೆಗ್ಗಳಗಿ

ಕಚೇರಿಗೆ, ಪ್ರವಾಸಕ್ಕೆ, ಸ್ನೇಹಿತರ ಭೇಟಿಗೆ ಹೊರಡುವ ಪೂರ್ವದಲ್ಲಿ ಬಹಳಷ್ಟು ಸಿದ್ಧತೆ ಮಾಡಿಕೊಳ್ಳುತ್ತೇವೆ. ಮಕ್ಕಳ ಶಿಕ್ಷಣ, ಮದುವೆಗಾಗಿ ಭಾರಿ ತಯಾರಿ ಮಾಡಿಕೊಳ್ಳುತ್ತೇವೆ. ಆದರೆ ಕಾಯಂ ಆಗಿ ಈ ವಿಶ್ವವನ್ನು ತೊರೆದು ಹೋಗುವುದಕ್ಕೆ ಮುನ್ನ ಯಾವ ಸಿದ್ಧತೆಯನ್ನೂ ಮಾಡಿಕೊಳ್ಳುವುದಿಲ್ಲ. ಸಾವು ಶತಃಸಿದ್ಧವಾದರೂ ಬಹಳಷ್ಟು ಜನ ತಾವು ಚಿರಂಜೀವಿಗಳೆಂದು ಭಾವಿಸಿರುತ್ತಾರೆ. ಸಾವಿನ ಬಗ್ಗೆ ಮಾತು ಬಂದರೆ ಚರ್ಚೆ ಮುಂದುವರಿಸದೇ ಬೇರೆ ಕಡೆಗೆ ಗಮನ ಹೊರಳಿಸುತ್ತಾರೆ. ಆದರೆ ಕೊನೆಗೆ ಸಾವು ತನ್ನ ತಣ್ಣನೆಯ ಹಸ್ತ ಇಟ್ಟುಬಿಡುತ್ತದೆ. ಸಾವು ಭೂಮಿಯ ಮೇಲಿನ ಎಲ್ಲರನ್ನೂ ಒಳಗೊಳ್ಳುವ ಮತ್ತು ಧರ್ಮ ನಿರಪೇಕ್ಷ ಸಂಗತಿಯಾಗಿದೆ.

ಈ ಲೋಕವನ್ನು ಶಾಶ್ವತವಾಗಿ ಬಿಟ್ಟು ಹೋಗುವ ಮೊದಲು ಪ್ರತಿಯೊಬ್ಬರೂ ಕನಿಷ್ಠ ಸಿದ್ಧತೆ ಮಾಡಿಟ್ಟುಕೊಳ್ಳುವುದು ಅವಶ್ಯ. ಬದುಕು ಎಂದಿಗೂ ಅಪೂರ್ಣವೇ. ಹಾಗಿರುವುದರಲ್ಲಿಯೇ ಅದರ ರಹಸ್ಯ ಅಡಗಿದೆ. ಬದುಕಿನ ಕ್ಷಣಿಕತೆ ಮತ್ತು ನಶ್ವರತೆಯ ಗಮ್ಯವನ್ನು ಅರಿತುಕೊಳ್ಳುವುದು ಅವಶ್ಯವಿದೆ.

ನೀವು ನೆಮ್ಮದಿಯಿಂದ ಸಾಯಬೇಕು ಎಂದು ಬಯಸಿದರೆ ಒಂದು ಉಯಿಲು ಬರೆಯಬೇಕು. ಮುಖ್ಯವಾಗಿ ನಾವು ಬಿಟ್ಟುಹೋಗಬೇಕಾದ ಆಸ್ತಿ ಹಂಚಿಕೆ ವಿವರಗಳು ಮೃತ್ಯುಪತ್ರದಲ್ಲಿ ಇರಬೇಕು. ಸತ್ತ ನಂತರ ಇದ್ದವರು ಆಸ್ತಿಗಾಗಿ ಕಾದಾಡುವುದು ಬಹಳ. ಅನೇಕ ಬಾರಿ ಹೆಣ ಇಟ್ಟುಕೊಂಡೇ ಜಗಳಕ್ಕೆ ನಿಲ್ಲುತ್ತಾರೆ. ಇದನ್ನು ತಪ್ಪಿಸುವ ಯೋಜನೆಯನ್ನು ಬದುಕಿದ್ದಾಗ ಮಾಡದಿದ್ದರೆ ಹೇಗೆ?


ಸಾವು ಅರ್ಥವಾದರೆ ಮಾತ್ರ ಬದುಕು ಅರ್ಥವಾಗುತ್ತದೆ. ಮರಣ ಸಾರ್ವಜನಿಕ ಸಂಗತಿಯಲ್ಲ. ಅಂತಿಮದರ್ಶನ ಇತ್ಯಾದಿ ಪ್ರಕ್ರಿಯೆಗಳು ತೊಂದರೆಯಾಗಬಾರದು ಎಂದು ಶಿವರಾಮ ಕಾರಂತರು ಪದೇ ಪದೇ ಹೇಳುತ್ತಿದ್ದರು.

ನನ್ನ ದೇಹದ ಬೂದಿ ಗಾಳಿಯಲಿ ತೂರಿಬಿಡಿ
ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ
ಬೂದಿ– ಗೊಬ್ಬರದಿಂದ ತೆನೆಯೊಂದು ನೆಗೆದುಬರೆ
ಧನ್ಯವಾಯಿತು ಹುಟ್ಟು ಸಾವಿನಲ್ಲಿ!

ಇದು ಸಂಸದರಾಗಿದ್ದ ದಿನಕರ ದೇಸಾಯಿ ಅವರ ಕವನ. ಈ ಕವನದ ಇಂಗ್ಲಿಷ್ ಅವತರಣಿಕೆ ಓದಿ ಪ್ರಭಾವಿತರಾದ ಪ್ರಧಾನಿ ನೆಹರೂ ತಮ್ಮ ಚಿತಾಭಸ್ಮವನ್ನು ಭಾರತದ ಎಲ್ಲ ನದಿಗಳಲ್ಲಿ ಹಾಕಬೇಕು ಎಂಬ ಕೊನೆಯಾಸೆ ವ್ಯಕ್ತಪಡಿಸಿದ್ದರು.

ಪತ್ರಕರ್ತ ಹಾಗೂ ಕೇಂದ್ರದ ಮಾಜಿ ಸಚಿವ ಅರುಣ್ ಶೌರಿ ಕೊರೊನಾ ಕಾಲಘಟ್ಟದಲ್ಲಿ ಬರೆದ 'ಪ್ರಿಪೇರಿಂಗ್ ಫಾರ್ ಡೆತ್' ಕೃತಿ ಗಮನ ಸೆಳೆಯುತ್ತದೆ. ಅದರಲ್ಲಿ ಅವರು ಬರೆದ ಉಯಿಲು ಅವರ ವೈಚಾರಿಕ ನಿಲುವಿಗೆ ಸಾಕ್ಷಿಯಾಗಿದೆ. 'ನನ್ನ ದೇಹದಲ್ಲಿ ಉಪಯೋಗಕ್ಕೆ ಬರುವ ಅಂಗವಿದ್ದರೆ ಅದನ್ನು ದಾನ ಮಾಡಬೇಕು. ದೇಹವನ್ನು ಯಾವುದೇ ಧಾರ್ಮಿಕ ಆಚರಣೆಗಳಿಲ್ಲದೇ ಸುಟ್ಟುಹಾಕಬೇಕು. ಗಂಧದ ಕಟ್ಟಿಗೆಯ ಆಡಂಬರ ಬೇಡ. ತೋಪು ಹಾರಿಸಿ ಗೌರವಿಸುವುದನ್ನು ನಾನು ಒಪ್ಪುವುದಿಲ್ಲ' ಎಂದು ಹೇಳಿದ್ದಾರೆ.

ಶರಣರು ಸಾವನ್ನು ಒಂದು ಸಹಜ ಕ್ರಿಯೆಯಾಗಿ ಭಾವಿಸಿದ್ದರು. ಆದ್ದರಿಂದ ಮರಣವೇ ಮಹಾನವಮಿ ಎಂದರು. ಮಹಾನವಮಿ ಅತ್ಯಂತ ದೊಡ್ಡ ಹಬ್ಬ. ಅವರು ಸಾವನ್ನು ಕೂಡ ಹಬ್ಬವಾಗಿ ಪರಿಗಣಿಸಿದ್ದು ಗಮನಾರ್ಹ ಸಂಗತಿ. ಶರಣ ಲದ್ದೆಯ ಸೋಮಣ್ಣನ ಒಂದು ವಚನವನ್ನು ಇಲ್ಲಿ ಉದಾಹರಿಸಬಹುದು: ಆವ ಕಾಯಕವಾದಡೂ ಸ್ವ-ಕಾಯಕವ ಮಾಡಿ ಗುರು ಲಿಂಗ ಜಂಗಮದ ಮುಂದಿಟ್ಟು, ಒಕ್ಕುದ ಹಾರೈಸಿ, ಮಿಕ್ಕುದ ಕೈಕೊಂಡು ವ್ಯಾಧಿ ಬಂದಡೆ ನರಳು, ಬೇನೆ ಬಂದಡೆ ಒರಲು, ಜೀವ ಹೋದಡೆ ಸಾಯಿ, ಇದಕ್ಕಾ ದೇವರ ಹಂಗೇಕೆ, ಭಾಪು ಲದ್ದೆಯ ಸೋಮಾ? ಅಲ್ಲಮಪ್ರಭು ಸಾವನ್ನು ಬಯಲಲ್ಲಿ ಬಯಲಾಗುವುದು ಎಂದು ಬಣ್ಣಿಸಿದ್ದಾರೆ. ಸಾವು ಸಹಜವಾದರೂ ಅದು ಅಕಾಲಿಕವಾಗಬಾರದು. ಕಷ್ಟಪಟ್ಟು ಬಹಳಷ್ಟು ಸಂಪಾದನೆ ಮಾಡಿದ ನನ್ನ ಪರಿಚಿತರೊಬ್ಬರು ಈಚೆಗೆ ಏಕಾಏಕಿ ಹೋಗಿಬಿಟ್ಟರು. ಕೋಟಿಗಟ್ಟಲೆ ಸಂಪಾದನೆ ಮಾಡಿದ ಅವರ ಸಂಪತ್ತು ಮಕ್ಕಳಿಗೆ, ಕುಟುಂಬದವರಿಗೆ ದೊರೆಯಲಿಲ್ಲ. ತಾವು ಗಳಿಸಿದ್ದನ್ನೆಲ್ಲ ಅವರು ಎಲ್ಲಿ ಇಟ್ಟಿದ್ದಾರೊ ಯಾರಿಗೂ ತಿಳಿದಿಲ್ಲ. ಆ ಕುಟುಂಬ ಪರಿತಪಿಸುವುದನ್ನು ನೋಡಿ ತುಂಬ ನೋವಾಯಿತು.



ಸಾಹಿತಿ ಡಾ. ವಿ.ಎಸ್.ಮಾಳಿ ಅವರ ಈ ಕಥನ ಕವನ ತುಂಬ ಸ್ವಾರಸ್ಯಕರವಾಗಿದೆ. ರೈತ ಮಹಿಳೆಯನ್ನು ಕರೆದೊಯ್ಯಲು ಬಂದ ಯಮನಿಗೆ– 'ಸ್ವಲ್ಪ ನಿಲ್ಲು, ಮಕ್ಕಳು ಹೊಲಕ್ಕೆ ಹೊರಟಿದ್ದಾರೆ. ಅವರಿಗೆ ಬಿತ್ತುವ ಕಲೆ, ಬೆಳೆದ ಬೆಳೆಯಲ್ಲಿ ದೇವರಿಗೆ ಎಷ್ಟು, ಆಯಗಾರರಿಗೆ ಎಷ್ಟು, ಬಡವರಿಗೆ ಎಷ್ಟು ಹಂಚಬೇಕು ಎಂಬುದನ್ನು ಹೇಳಿಕೊಟ್ಟು ಬರುತ್ತೇನೆ' ಎಂದು ಹೇಳುತ್ತಾಳೆ. ಇದು ಬದುಕಿನ ಒಂದು ರೂಪಕದಂತಿದೆ.

'ನಾನು ಹೊರಟು ಹೋದಮೇಲೆ ಓಡಿ ಬಂದು ಸಂತಾಪ ಸೂಚಿಸುವುದಕ್ಕಿಂತ ಬದುಕಿದ್ದಾಗಲೇ ಬಂದು ಭೇಟಿಯಾದರೆ ಸಂತೋಷ ಪಡುವೆ. ನಾನು ಹೊರಟು ಹೋದ ಮೇಲೆ ದುಃಖಸೂಚಕ ಸಭೆಯಲ್ಲಿ ಹೊಗಳುವುದರಿಂದ ಪ್ರಯೋಜನವಿಲ್ಲ. ಈಗಲೇ ಒಂದು ಒಳ್ಳೆಯ ಮಾತು ಹೇಳಿ ನನ್ನ ಹೃದಯ ಅರಳುತ್ತದೆ' ಎಂಬ ರವಿಂದ್ರನಾಥ ಟ್ಯಾಗೋರ್ ಅವರ ಹೃದಯಸ್ಪರ್ಶಿ ಕವಿತೆ ಈಗ ಮತ್ತೆ ಮತ್ತೆ ನೆನಪಾಗುತ್ತಿದೆ.

ವಾಚಕರ ವಾಣಿ

ವಿಳಂಬಿತ ನ್ಯಾಯದಾನ: ಇತಿಹಾಸದ ಮಾತಾಗಲಿ

ಕರ್ನಾಟಕದ ನ್ಯಾಯಾಲಯಗಳು ಮಾದರಿಯಾಗಿರುವಂತೆ ಶ್ರಮಿಸುವುದಾಗಿ, ದೀನ ದಲಿತರಿಗೆ ನ್ಯಾಯಾಲಯವು ಎಟಕುವಂತೆ ಮಾಡುವುದಾಗಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ರಿತು ರಾಜ್ ಅವಸ್ತಿ ಹೇಳಿದ್ದಾರೆ. ಯಾವ ವರ್ಗಕ್ಕೂ ಈಗ ನ್ಯಾಯಾಲಯ ಎಟುಕದ ಸ್ಥಳವಾಗಿಲ್ಲ. ಆದರೆ ಬಹಳಷ್ಟು ಜನ ಅವಶ್ಯಕತೆ ಇದ್ದರೂ ನ್ಯಾಯಾಲಯಕ್ಕೆ ಬರುವುದಿಲ್ಲ. ಕಾರಣ, ಅತಿ ವಿಳಂಬ ನ್ಯಾಯದಾನ. ಈ ಒಂದು ಸಮಸ್ಯೆಗೆ ಪರಿಹಾರ ದೊರೆತರೆ ಇದಕ್ಕಿಂತ ಇನ್ನೇನೂ ಬೇಕಿಲ್ಲ.

ಒಂದು ಪ್ರಕರಣವು ದಾಖಲಾದ 28 ವರ್ಷಗಳ ನಂತರ ಇತ್ತೀಚೆಗೆ ತೀರ್ಪು ಹೊರಬಿದ್ದಿದೆ. ನ್ಯಾಯದಾನ ಇಷ್ಟೊಂದು ವಿಳಂಬವಾಗುತ್ತಿರುವಾಗ, ಎಷ್ಟೋ ಪ್ರಕರಣಗಳಲ್ಲಿ ದಾವೆ ಹಾಕಿದವರು ಮೃತರಾಗಿರುವುದು ಗೊತ್ತಿರುವ ವಿಷಯ. ಇದನ್ನು ನಿವಾರಿಸಲು ಮಾರ್ಗೋಪಾಯ ಶೋಧಿಸುವುದು ಇಂದಿನ ತುರ್ತು. ವಿಳಂಬಿತ ನ್ಯಾಯವು ನಿರಾಕರಿಸಿದ ನ್ಯಾಯ ಎಂಬ ಮಾತು ಇತಿಹಾಸವಾಗಬೇಕು.

ಕೆ.ವಿ.ಸೀತಾರಾಮಯ್ಯ, ಬೆಂಗಳೂರು

ಮಂತ್ರಗಳ ಅರ್ಥ ಮನಮುಟ್ಟಬೇಕು

'ದಲಿತರಿಗೆ ಅರ್ಚಕ ಹುದ್ದೆ ಮತ್ತು ಮುಜರಾಯಿ ಕಾಯ್ದೆ' ಕುರಿತ 'ಪ್ರಜಾವಾಣಿ ಸಂವಾದ'ದಲ್ಲಿ ಪಾಲ್ಗೊಂಡವರೆಲ್ಲರೂ ಸಂಸ್ಕೃತ ಮಂತ್ರಗಳ ಉಚ್ಚಾರಣೆ ಕುರಿತು ಚರ್ಚಿಸಿದ್ದಾರೆ (ಪ್ರ.ವಾ. ಅ. 20) ಸರಿ. ಕೆಲವರು ಅಭಿಪ್ರಾಯಪಟ್ಟಂತೆ ಇದು ದಲಿತರನ್ನು ಹೊರಗಿಡುವ ಮತ್ತು ಅವರಲ್ಲಿ ಕೀಳರಿಮೆ ಉಂಟುಮಾಡುವ ನೇರ ಹುನ್ನಾರವೂ ಆಗಿದೆ. ಇದಕ್ಕಿಂತಲೂ ಮುಖ್ಯವಾಗಿ ಪೂಜೆ ಮಾಡುವಾಗ ಸಂಸ್ಕೃತ ಮಂತ್ರಗಳನ್ನೇ ಏಕೆ ಹೇಳಬೇಕು? ದೇವರಿಗೆ ಕನ್ನಡ ಬೇಡವೇ ಎಂಬ ಪ್ರಶ್ನೆ ಮೂಡುತ್ತದೆ. ಮಂತ್ರಗಳ ಅರ್ಥ ಮನಸ್ಸಿಗೆ ತಲುಪಿದಾಗ ಮಾತ್ರ ಅವುಗಳಿಗೆ ಸಾರ್ಥಕತೆ ಒದಗುತ್ತದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಇದು ಚುನಾವಣಾ ಪ್ರಚಾರವಲ್ಲ

ರಾಜ್ಯದಲ್ಲಿ ಎರಡು ವಿಧಾನಸಭಾ ಕ್ಷೇತ್ರಗಳಿಗೆ ಈಗ ಉಪಚುನಾವಣೆ ನಡೆಯುತ್ತಿದೆ. ಆಡಳಿತ ಮತ್ತು ವಿರೋಧ ಪಕ್ಷಗಳಿಗೆ ಇದೊಂದು ಸುವರ್ಣಾವಕಾಶ. ಆಡಳಿತ ವಹಿಸಿಕೊಂಡ ದಿನದಿಂದ ಕ್ಷೇತ್ರದಲ್ಲಿ ಆಡಳಿತ ಪಕ್ಷ ಇದುವರೆಗೂ ಏನೆಲ್ಲ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ ಎಂಬುದನ್ನು ಮತದಾರರ ಗಮನಕ್ಕೆ ತಂದು, ಹೆಮ್ಮೆಯಿಂದ ಇನ್ನೂ ಏನು ಮಾಡುವುದಿದೆ ಎಂದು ಹೇಳಿ ಚುನಾವಣೆ ಗೆಲ್ಲಲು ಇದೊಂದು ವೇದಿಕೆ. ಹಾಗೆಯೇ ವಿರೋಧ ಪಕ್ಷಗಳಿಗಂತೂ ದೇವರು ಕೊಟ್ಟ ವರ. ಆಡಳಿತ ಪಕ್ಷದ ಲೋಪದೋಷಗಳನ್ನು ಹೇಳಿ ಅದರ ಅಸಾಮರ್ಥ್ಯವನ್ನು ಎಳೆ ಎಳೆಯಾಗಿ ಜನರ ಮುಂದಿಟ್ಟು 'ಇನ್ನೂ ಅವರ ಪಕ್ಷದ ಅಭ್ಯರ್ಥಿಯನ್ನೇ ಗೆಲ್ಲಿಸುತ್ತೀರಾ?' ಎಂದು ಪ್ರಶ್ನಿಸಿ, ಮತದಾರರ ಮನಗೆದ್ದು ಚುನಾವಣೆ ಗೆಲ್ಲಲು ಒಂದು ಸುಸಂದರ್ಭ.

ಇದು ಮತದಾರರಲ್ಲಿ ಸರ್ಕಾರದ ಆಡಳಿತ ವೈಫಲ್ಯ ಅಥವಾ ಸಾಫಲ್ಯವನ್ನು ಉದಾಹರಣೆ ಸಹಿತ ಬಯಲು ಮಾಡುವ ಸಂದರ್ಭ. ಆದರೆ ಇದರ ಅರಿವು ಇಲ್ಲದೆ ರಾಜಕಾರಣಿಗಳು ಒಬ್ಬರನ್ನೊಬ್ಬರು ಹೀನಾಮಾನವಾಗಿ ತೆಗಳುತ್ತಾ ಪರಸ್ಪರ ಕೆಸರೆರಚಾಡಿಕೊಂಡು ಕುಣಿದಾಡುತ್ತಿರುವುದನ್ನು ಕಂಡು ಜನ ಅಸಹ್ಯಪಡುತ್ತಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರದ ನಾಯಕರ ಹೆಸರುಗಳನ್ನೂ ಎಳೆದುತಂದು ಅವರ ಮರ್ಯಾದೆಯನ್ನು ಹರಾಜು ಹಾಕಲು ಹೊರಟಿರುವುದು ನಾಚಿಕೆಗೇಡು.

ಸತ್ಯಬೋಧ, ಬೆಂಗಳೂರು

ಅತಿರಂಜನೆಯ ಕಥೆಗಳೇಕೆ?

ನದಿಗಳು ಎಲ್ಲಿಯೋ ಹೇಗೋ ಹುಟ್ಟಿ ಹರಿದು ಮುಂದೆ ಪವಿತ್ರ ಸ್ಥಾನ ಪಡೆಯುತ್ತವೆ. ಮಹಾತ್ಮರಾದ ಋಷಿಗಳ ಜೀವನವೂ ಹಾಗೇ! ಹುಟ್ಟುಗುಣ, ಮಹತ್ಸಾಧನೆಗಳು ಪರಿಗಣನೆಗೆ ಮುಖ್ಯ. ಅಂತೆಯೇ ನದಿ ಮೂಲ, ಋಷಿ ಮೂಲ ನೋಡಬಾರದು ಎಂಬ ಮಾತಿದೆ. 'ವಾಲ್ಮೀಕಿ ಪೂರ್ವಾಶ್ರಮದ ಸುತ್ತ' (ಸಂಗತ ಅ. 18) ಅರುಣ್ ಜೋಳದಕೂಡ್ಲಿಗಿ ಅವರು ಸುತ್ತುವುದು ಅಗತ್ಯವೆನಿಸಲಿಲ್ಲ. ವಾಲ್ಮೀಕಿಗಳ ಪೂರ್ವಾಶ್ರಮವನ್ನೇ ಗುರಿಯಾಗಿಸಿ ಪದೇ ಪದೇ ಜರುಗುವ ವಾದಗಳು, ವಿವಾದ ಸೃಷ್ಟಿಯು ಅವರ ಮಹಿಮೆಗೆ ಅಪವಾದವೆನಿಸುತ್ತದೆ.

18 ಪುರಾಣಗಳು ಮತ್ತು ಮಹಾಭಾರತದಂಥ ಗ್ರಂಥಗಳನ್ನು ರಚಿಸಿ ಭಾರತೀಯ ವಾಙ್ಮಯಕ್ಕೆ ಗುರು ಪೂಜ್ಯರೆನಿಸಿದ ವೇದವ್ಯಾಸರು ಅಂಬಿಗರ ಸತ್ಯವತಿಗೆ ಪರಾಶರ ಋಷಿಗಳಿಂದ ಕನ್ಯಾವಸ್ಥೆಯಲ್ಲಿ ಜನಿಸಿದವರು. ಆದರೆ ವಾಲ್ಮೀಕಿ ಋಷಿಗಳ ಪೂರ್ವಾಶ್ರಮದ ಬಗೆಗೆ ಮಾತ್ರ ಏಕೆ ಇಷ್ಟೊಂದು ಅತಿರಂಜನೆಯ ಕಥೆಗಳು?

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಗುಂಡ್ಲು ನದಿ: ಅನಿವಾರ್ಯ ಅಭಿಯಾನ

ಸುಮಾರು 70, 80ರ ದಶಕದಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ಅಸ್ಮಿತೆಯಂತೆ, ಅಲ್ಲಿನ ಜನರಿಗೆ ಜೀವನದಿಯಂತೆ ಇದ್ದ ಗುಂಡ್ಲು ನದಿಯ ಹುಟ್ಟಿನ ಜಾಡು ಹಾಗೂ ಅದು ಹರಿದು ಬರುತ್ತಿದ್ದ ಮಾರ್ಗ ಇಂದು ಮಾನವರ ದುರಾಸೆಯ ಫಲವಾಗಿ ಕಣ್ಮರೆಯಾಗಿವೆ. ಅದರ ಪರಿಣಾಮವಾಗಿ ತಾಲ್ಲೂಕಿನ ಜನತೆ ಹನಿ ಹನಿ ನೀರಿಗೂ ಪರಿತಪಿಸುವಂತಾಗಿದೆ. ಇಂತಹ ಜೀವನದಿಯ ಜೀವಂತಿಕೆಗಾಗಿ ತಾಲ್ಲೂಕಿನ ಕೆಲವು ಜನಪರ ಚಿಂತಕರು 'ಗುಂಡ್ಲು ನದಿ ಅಭಿಯಾನ'ವನ್ನು ಆರಂಭಿಸಿದ್ದು, ಇದಕ್ಕೆ ಸ್ಥಳೀಯರೆಲ್ಲ ಒಗ್ಗಟ್ಟಿನಿಂದ ಕೈ ಜೋಡಿಸುವುದು ಅನಿವಾರ್ಯವಾಗಿದೆ.

ತಾಲ್ಲೂಕಿನಲ್ಲಿರುವ ಹಲವಾರು ಹಳ್ಳಿಗಳ ಲಕ್ಷಾಂತರ ಜನರಿಗೆ ಮಳೆಯಾದರಷ್ಟೇ ಬೆಳೆ, ಇಲ್ಲವಾದಲ್ಲಿ ಇಲ್ಲ. ಮತ್ತೊಂದು ಕಡೆ, ಬೇಸಿಗೆಯ ಕಾಲದಲ್ಲಂತೂ ತಾಲ್ಲೂಕಿನ ಸುತ್ತಮುತ್ತಲಿನ ಹಳ್ಳಿಗಳಲ್ಲಿ ನೀರಿಗಾಗಿ ಭಾರಿ ಹಾಹಾಕಾರ ಶುರುವಾಗಿ ಬಿಡುತ್ತದೆ. ಕುಡಿಯುವ ನೀರು ತರಲು ಜನ ಕಿಲೊಮೀಟರ್‌ಗಟ್ಟಲೆ ಅಲೆಯಬೇಕಾಗುತ್ತದೆ. ಇದು ಹೀಗೇ ಮುಂದುವರಿದರೆ ತಾಲ್ಲೂಕಿನ ಜನರ ಗತಿ ಅಧೋಗತಿಯಾಗುತ್ತದೆ ಎಂದು ಮನಗಂಡು, ಗುಂಡ್ಲು ನದಿಯ ಉಳಿವಿಗಾಗಿ ಅಭಿಯಾನ ಆರಂಭಿಸಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

ರಾಘವೇಂದ್ರ ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಾಂಗ್ಲಾ: ಹಿಂಸಾಚಾರಕ್ಕೆ ಕಾರಣವಾದ ವೈರಲ್ ವಿಡಿಯೊ

ಬಾಂಗ್ಲಾದೇಶದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರಾದ ಹಿಂದೂಗಳನ್ನು ಗುರಿಯಾಗಿಸಿಕೊಂಡು ಒಂದು ವಾರದಲ್ಲಿ ಹಲವು ದಾಳಿಗಳು ನಡೆದಿವೆ. ಹಿಂದೂಗಳ ಮನೆಗಳಿಗೆ, ವಾಹನಗಳಿಗೆ ಮತ್ತು ಅಂಗಡಿಗಳಿಗೆ ಬೆಂಕಿ ಹಚ್ಚಲಾಗಿದೆ. ಈ ಹಿಂಸಾಚಾರದಲ್ಲಿ ಆರು ಹಿಂದೂಗಳು ಮತ್ತು ಪೊಲೀಸರ ದಾಳಿಗೆ ಇಬ್ಬರು ಮುಸ್ಲಿಮರು ಬಲಿಯಾಗಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಆದರೆ ಸರ್ಕಾರ ಇದನ್ನು ದೃಢಪಡಿಸಿಲ್ಲ.

ಎಲ್ಲವೂ ಆರಂಭವಾದದ್ದು ಒಂದು ಫೇಸ್‌ಬುಕ್ ಪೋಸ್ಟ್‌ನಿಂದ. ಕಳೆದ ಬುಧವಾರ ಕೊಮಿಲ್ಲಾ ಜಿಲ್ಲೆಯಲ್ಲಿ ದುರ್ಗಾ ಪೂಜೆ ವೇಳೆಯಲ್ಲಿ, ಮುಸ್ಲಿಮರ ಪವಿತ್ರ ಗ್ರಂಥ ಕುರ್‌-ಆನ್‌ಗೆ ಅಪಮಾನ ಮಾಡಲಾಗಿದೆ ಎಂಬ ವಿವರ ಇರುವ ಬರಹ ಮತ್ತು ದುರ್ಗಾ ಪೂಜೆ ಸಂಭ್ರಮಾಚರಣೆಯ ವಿಡಿಯೊವನ್ನು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಲಾಗಿತ್ತು. ಆ ಪೋಸ್ಟ್ ಕೆಲವೇ ಗಂಟೆಗಳಲ್ಲಿ ವೈರಲ್ ಆಯಿತು. ಕೊಮಿಲ್ಲಾದಲ್ಲಿ ಆನಂತರ ಹಿಂದೂಗಳ ಮೇಲೆ ದಾಳಿ ನಡೆಯಿತು. ದುರ್ಗಾ ಪೂಜೆಯ ಪೆಂಡಾಲ್ ಅನ್ನು ಧ್ವಂಸ ಮಾಡಲಾಯಿತು. ಆದರೆ ನಂತರದ ಮೂರು ದಿನಗಳಲ್ಲಿ ಹಿಂದೂಗಳ ವಿರುದ್ಧದ ಹಿಂಸಾಚಾರದ ತೀವ್ರತೆ ಹೆಚ್ಚಾಯಿತು. ಹಿಂಸಾಚಾರವು ಐದಾರು ಜಿಲ್ಲೆಗಳಿಗೆ ವಿಸ್ತರಿಸಿತು.

ಭಾನುವಾರ ಮಧ್ಯಾಹ್ನ ಹಿಂದೂಗಳಿರುವ ಪ್ರದೇಶಕ್ಕೆ ನುಗ್ಗಿದ ಮುಸ್ಲಿಮರ ಗುಂಪು ದೇವಾಲಯಗಳು, ಮನೆಗಳು ಮತ್ತು ವಾಣಿಜ್ಯ ಕಟ್ಟಡಗಳ ಮೇಲೆ ದಾಳಿ ನಡೆಸಿತು. ಆ ದಾಳಿಯ ವೇಳೆ 20ಕ್ಕೂ ಹೆಚ್ಚು ವಾಹನಗಳು ಮತ್ತು ಹಿಂದೂಗಳ 10 ಮನೆಗಳಿಗೆ ಬೆಂಕಿ ಹಚ್ಚಲಾಯಿತು. ದಾಳಿಯಲ್ಲಿ 66 ಮನೆಗಳಿಗೆ ಹಾನಿಯಾಯಿತು.

ಹಿಂಸಾಚಾರದ ವೇಳೆ ಹಲವು ಹಿಂದೂಗಳು ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ ಮತ್ತು ಹಲವು ಹಿಂದೂಗಳು ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಬರೆದುಕೊಂಡಿದ್ದಾರೆ. ಆದರೆ ಹಿಂಸಾಚಾರದಲ್ಲಿ ಆಗಿರುವ ಸಾವಿನ ಬಗ್ಗೆ ಸರ್ಕಾರ ಯಾವುದೇ ಅಧಿಕೃತ ಮಾಹಿತಿ ನೀಡಿಲ್ಲ.

ಬಾಂಗ್ಲಾದೇಶ ಸರ್ಕಾರವು ಈ ದಾಳಿಯನ್ನು ಖಂಡಿಸಿದೆ. ವಿಶ್ವ ಸಂಸ್ಥೆ ಸಹ ಈ ದಾಳಿಯನ್ನು ಖಂಡಿಸಿದೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಿ ಎಂದು ಪ್ರಧಾನಿ ಶೇಖ್ ಹಸೀನಾ ಅವರು ಆದೇಶಿಸಿದ್ದಾರೆ. ಹಿಂಸಾಚಾರದ ಸಂಬಂಧ ಈವರೆಗೆ 450 ಜನರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ತನಿಖೆ ಪ್ರಗತಿಯಲ್ಲಿ ಇದೆ.



ನೊವಾಖಾಲಿಯಲ್ಲಿ ತೀವ್ರ ಹಿಂಸಾಚಾರ ನಡೆದಿತ್ತು. ಹಲವು ವಾಹನಗಳಿಗೆ ಬೆಂಕಿ ಹಚ್ಚಲಾಗಿತ್ತು ಎಎಫ್‌ಪಿ ಚಿತ್ರ



ಬಾಂಗ್ಲಾದೇಶದ ಹಿಂದೂಗಳು ಇದೇ 18ರಂದು ಢಾಕಾದಲ್ಲಿ ಪ್ರತಿಭಟನೆ ನಡೆಸಿದರು ಎಎಫ್‌ಪಿ ಚಿತ್ರ

ಬಾಂಗ್ಲಾ: ಅಲ್ಪಸಂಖ್ಯಾತರ ಮೇಲೆ ಹಿಂಸಾಚಾರ

ಜಾಗತಿಕ ಖಂಡನೆ

ಬಾಂಗ್ಲಾದೇಶದ ಹಿಂದೂಗಳ ಮೇಲೆ ನಡೆದ ದೌರ್ಜನ್ಯವನ್ನು ಜಾಗತಿಕ ಸಮುದಾಯ ಖಂಡಿಸಿದೆ.

ಅಮೆರಿಕದ ವಿದೇಶಾಂಗ ಸಚಿವಾಲಯ ಈ ಹಿಂಸಾಚಾರವನ್ನು ವಿರೋಧಿಸಿದೆ. 'ಧಾರ್ಮಿಕ ಸ್ವಾತಂತ್ರ್ಯ ಅಥವಾ ನಂಬಿಕೆಯನ್ನು ಮಾನವ ಹಕ್ಕು ಎಂದು ಪರಿಗಣಿಸಲಾಗುತ್ತದೆ. ಜಗತ್ತಿನಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೂ ಆತನ ಧಾರ್ಮಿಕ ಹಿನ್ನೆಲೆ ಅಥವಾ ನಂಬಿಕೆಯ ಹೊರತಾಗಿಯೂ ಸುರಕ್ಷತಾ ಭಾವನೆಯನ್ನು ಹೊಂದುವ ಹಕ್ಕು ಇದೆ ಮತ್ತು ಪ್ರಮುಖ ಹಬ್ಬಗಳನ್ನು ಆಚರಿಸಲು ಆತನಿಗೆ ಬೆಂಬಲವಿರಬೇಕು. ಬಾಂಗ್ಲಾದೇಶದಲ್ಲಿ ಇತ್ತೀಚೆಗೆ ಹಿಂದೂ ಸಮುದಾಯದ ಮೇಲೆ ನಡೆದ ದಾಳಿಗಳನ್ನು ಅಮೆರಿಕ ಖಂಡಿಸುತ್ತದೆ' ಎಂದು ಅಮೆರಿಕದ ವಿದೇಶಾಂಗ ಸಚಿವಾಲಯದ ವಕ್ತಾರರು ಹೇಳಿದ್ದಾರೆ.

ಹಿಂದೂಗಳ ಮೇಲೆ ನಡೆದಿರುವ ದಾಳಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಕೇಳಿಬರುತ್ತಿರುವ ದ್ವೇಷದ ಭಾಷಣಗಳು ಆ ದೇಶ ಅಂಗೀಕಾರ ಮಾಡಿರುವ ಸಂವಿಧಾನಕ್ಕೆ ವಿರುದ್ಧವಾಗಿವೆ. ಬಾಂಗ್ಲಾದೇಶ ಸರ್ಕಾರ ಹಿಂದೂಗಳಿಗೆ ರಕ್ಷಣೆ ನೀಡಬೇಕು ಮತ್ತು ಈ ಹಿಂಸಾಚಾರದ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಬೇಕು. ಬಾಂಗ್ಲಾದಲ್ಲಿ ನಡೆಯುತ್ತಿರುವ ದೌರ್ಜನ್ಯದ ವಿರುದ್ಧ ಕೈಜೋಡಿಸಲು ಎಲ್ಲರಿಗೂ ನಾವು ಕರೆ ನೀಡುತ್ತಿದ್ದೇವೆ ಎಂದು ವಿಶ್ವಸಂಸ್ಥೆ ಸ್ಥಾನಿಕ ಸಂಯೋಜಕರಾದ ಮಿಯಾ ಸೆಪ್ಪೊ ಹೇಳಿದ್ದಾರೆ.

ತನ್ನ ಸಂಸ್ಥೆಗಳ ದೇವಾಲಯಗಳ ಮೇಲೆ ದಾಳಿ ನಡೆದಿರುವುದನ್ನು 'ಇಸ್ಕಾನ್' ಖಂಡಿಸಿದೆ. ಇಸ್ಕಾನ್ ವತಿಯಿಂದ 150 ದೇಶಗಳಲ್ಲಿ ಅ.23ರಂದು ಪ್ರತಿಭಟನೆ ನಡೆಸಲಾಗುವುದು ಎಂದು ಕೋಲ್ಕತ್ತ ಇಸ್ಕಾನ್ ಉಪಾಧ್ಯಕ್ಷ ರಾಧಾರಾಮ್ ದಾಸ್ ಹೇಳಿದ್ದಾರೆ.

ಹಿಂಸಾಚಾರ ಖಂಡಿಸಿ ಭಾರತದ ಹಲವೆಡೆ ಬಿಜೆಪಿ ನೇತೃತ್ವದಲ್ಲಿ ಪ್ರತಿಭಟನೆಗಳು ನಡೆದಿವೆ. ಅಸ್ಸಾಂ ರಾಜಧಾನಿ ಗುವಾಹಟಿ, ತ್ರಿಪುರಾ ರಾಜಧಾನಿ ಅಗರ್ತಲಾ ಸೇರಿ ಈಶಾನ್ಯ ಭಾರತದ ಹಲವೆಡೆ ಪ್ರತಿಭಟನೆಗಳು ನಡೆದಿವೆ. ಕೋಲ್ಕತ್ತ ಸೇರಿ ಪಶ್ಚಿಮ ಬಂಗಾಳದ ಹಲವೆಡೆ ಬಿಜೆಪಿ ನೇತೃತ್ವದಲ್ಲಿ ಪ್ರತಿಭಟನೆಗಳು ನಡೆದಿವೆ.

'ಅವಮಾನ ಸತ್ಯವಲ್ಲ'

ಕೊಮಿಲ್ಲಾ ಜಿಲ್ಲೆಯಲ್ಲಿ ನಡೆಸಲಾಗುತ್ತಿದ್ದ ದುರ್ಗಾ ಪೂಜೆಯ ಪೆಂಡಾಲ್‌ನಲ್ಲಿ ಕುರ್‌ಆನ್‌ಗೆ ಅವಮಾನ ಮಾಡಲಾಗಿದೆ ಎಂಬ ಆರೋಪದ ಆಧಾರದ ಮೇಲೆ ಈ ಹಿಂಸಾಚಾರ ನಡೆದಿದೆ. ಆದರೆ ದುರ್ಗಾ ಪೂಜೆಯ ಪೆಂಡಾಲ್‌ನಲ್ಲಿ ಕುರ್‌ಆನ್‌ಗೆ ಅವಮಾನ ಮಾಡಿಲ್ಲ ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ. ನಡೆದದ್ದು ಏನು ಎಂಬುದನ್ನೂ ಪೊಲೀಸರು ವಿವರಿಸಿದ್ದಾರೆ.

ಕೊಮಿಲ್ಲಾದಲ್ಲಿ ಹಿಂದೂಗಳು ಧಾರ್ಮಿಕ ಅಲ್ಪಸಂಖ್ಯಾತರು. ಇಲ್ಲಿ ದುರ್ಗಾ ಪೂಜೆ ನಡೆಸಲು ಮುಸ್ಲಿಂ ವ್ಯಾಪಾರಿಗಳಿಂದಲೂ ಚಂದಾ ಪಡೆಯಲಾಗುತ್ತದೆ. ಮುಸ್ಲಿಮರ ಬೆಂಬಲವಿಲ್ಲದೆ ದುರ್ಗಾ ಪೂಜೆ ನಡೆಯುವುದಿಲ್ಲ. ರಾತ್ರಿಯೇ ಪೆಂಡಾಲ್‌ನಿಂದ ಎಲ್ಲಾ ಹಿಂದೂಗಳು ನಿರ್ಗಮಿಸುತ್ತಾರೆ. ಬೆಳಿಗ್ಗೆ ಬಂದು ಮತ್ತೆ ಪೂಜೆ ಆರಂಭಿಸುತ್ತಾರೆ.

ಆದರೆ, ಅಕ್ಟೋಬರ್ 12ರ ತಡರಾತ್ರಿ ದುರ್ಗಾ ಪೆಂಡಾಲ್‌ನಲ್ಲಿದ್ದ ಹನುಮಂತನ ಮೂರ್ತಿಯ ಪಾದದ ಬಳಿ ಯಾರೋ, ಕುರ್‌ಆನ್‌ನ ಪ್ರತಿ ಇರಿಸಿದ್ದಾರೆ. ಜತೆಗೆ ಅದರ ಚಿತ್ರ ತೆಗೆದುಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ವಿಡಿಯೊದಲ್ಲಿ ಮಾಡಲಾಗಿರುವ ಆರೋಪಗಳು ಸುಳ್ಳು ಎಂದು ಪೊಲೀಸರು ದೃಢಪಡಿಸಿದ್ದಾರೆ. ಆದರೆ ಅಷ್ಟರಲ್ಲಿ ಪರಿಸ್ಥಿತಿ ಕೈಮೀರಿ ಹೋಗಿತ್ತು. ಹಿಂದೂಗಳ ವಿರುದ್ಧ ಹಿಂಸಾಚಾರ ಎಲ್ಲೆಡೆ ಆರಂಭವಾಗಿತ್ತು.

ಹೊರಗಿನವರ ಕೈವಾಡದ ಶಂಕೆ

'ಬಾಂಗ್ಲಾದೇಶವು ಪಾಕಿಸ್ತಾನದಿಂದ ಸ್ವಾತಂತ್ರ್ಯ ಪಡೆದು 50 ವರ್ಷ ಕಳೆದರೂ, ಕೆಲವರು ಅದನ್ನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಅವರು ಇಲ್ಲಿನ ಶಾಂತಿಯನ್ನು ಕದಡಲು ಸದಾ ಯತ್ನಿಸುತ್ತಲೇ ಇರುತ್ತಾರೆ. ಇದು ಸಹ ಅಂತಹದ್ದೇ ಒಂದು ಕೃತ್ಯ. ಅವರ ಸಂಚಿನಿಂದ ಹಿಂಸಾಚಾರ ಭುಗಿಲೆದ್ದಿದೆ. ತಪ್ಪಿತಸ್ಥರನ್ನು ಶೀಘ್ರವೇ ಬಂಧಿಸಲಾಗುವುದು' ಎಂದು ಬಾಂಗ್ಲಾದೇಶ ಗೃಹ ಸಚಿವಾಲಯವು ಹೇಳಿದೆ.

ಈ ಕೃತ್ಯಗಳ ಹಿಂದೆ ಗಡಿಯಾಚೆಯ ಶಕ್ತಿಗಳ ಕೈವಾಡವೂ ಇದೆ ಎಂದು ಸರ್ಕಾರವು ಹೇಳಿದೆ. ಆದರೆ ಅದು ಬೇರೆ ದೇಶದ ಸರ್ಕಾರದ ಕೈವಾಡವೇ ಅಥವಾ ಉಗ್ರ ಸಂಘಟನೆಗಳ ಕೈವಾಡವೇ ಎಂಬುದನ್ನು ಬಾಂಗ್ಲಾ ಸರ್ಕಾರ ದೃಢಪಡಿಸಿಲ್ಲ.

ಬಾಂಗ್ಲಾದೇಶದಲ್ಲಿ ಅಶಾಂತಿ ಸೃಷ್ಟಿಸಲು ಕೆಲವು ಉಗ್ರ ಸಂಘಟನೆಗಳು ಯತ್ನಿಸುತ್ತಿವೆ. ಆ ಸಂಘಟನೆಗಳೇ ಇಂತಹ ಕೃತ್ಯ ನಡೆಸಿರುವ ಸಾಧ್ಯತೆ ಇದೆ. ಹಿಂದೂಗಳು ಅಲ್ಪಸಂಖ್ಯಾತರಾಗಿರುವ ಕಾರಣ ಮತ್ತು ಅವರಿಂದ ಬರುವ ಪ್ರತಿರೋಧದ ತೀವ್ರತೆ ಕಡಿಮೆ ಇರುವ ಕಾರಣ ಅವರನ್ನು ಗುರಿಯಾಗಿಸಿಕೊಂಡು ಈ ಸಂಚು ರೂಪಿಸಿರುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.



ಪ್ರಿಯಾಂಕಾ ಗಾಂಧಿ ಅವರನ್ನು ವಶಕ್ಕೆ ಪಡೆದಿದ್ದ ಪೊಲೀಸರು ಪಿಟಿಐ ಚಿತ್ರ

ಪ್ರಿಯಾಂಕಾ–ಉ.ಪ್ರದೇಶ ಪೊಲೀಸ್ ಮತ್ತೆ ಜಟಾಪಟಿ

ಪ್ರಜಾವಾಣಿ ವಾರ್ತೆ

ಲಖನೌ/ಆಗ್ರಾ: ಉತ್ತರ ಪ್ರದೇಶ ಪೊಲೀಸರು ಮತ್ತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಮಧ್ಯೆ ಬುಧವಾರ ಮತ್ತೆ ಜಟಾಪಟಿ ನಡೆದಿದೆ. ಪೊಲೀಸ್ ಕಸ್ಟಡಿಯಲ್ಲಿ ಮೃತಪಟ್ಟ ದಲಿತ ಯುವಕನ ಕುಟುಂಬವನ್ನು ಭೇಟಿ ಮಾಡಲು ಮುಂದಾಗಿದ್ದ ಪ್ರಿಯಾಂಕಾ ಅವರನ್ನು ಪೊಲೀಸರು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದ್ದಾರೆ.

ಆಗ್ರಾದಲ್ಲಿ ಪೊಲೀಸ್ ಠಾಣೆಯಿಂದ ₹25 ಲಕ್ಷ ಕದ್ದ ಆರೋಪದಲ್ಲಿ ಅರುಣ್ ವಾಲ್ಮೀಕಿ ಎಂಬ ಯುವಕನನ್ನು ಪೊಲೀಸರು ಮಂಗಳವಾರ ಬಂಧಿಸಿದ್ದರು. ಆದರೆ ಕೆಲವೇ ಗಂಟೆಗಳಲ್ಲಿ ಅರುಣ್ ಮೃತಪಟ್ಟಿದ್ದಾರೆ. 'ಆರೋಗ್ಯ ಸಮಸ್ಯೆಯೇ ಸಾವಿಗೆ ಕಾರಣ' ಎಂದು ಪೊಲೀಸರು ಹೇಳಿದ್ದಾರೆ. ಆದರೆ ಆತನ ಕುಟುಂಬದವರು, 'ಪೊಲೀಸರ ಹಿಂಸೆಯಿಂದ ಅವನು ಮೃತಪಟ್ಟಿದ್ದಾನೆ' ಎಂದು ಆರೋಪಿಸಿದ್ದಾರೆ.

ಮೃತ ಯುವಕನ ಕುಟುಂಬದವರನ್ನು ಭೇಟಿ ಮಾಡಲು ಪ್ರಿಯಾಂಕಾ ಅವರು ಆಗ್ರಾಗೆ ತೆರಳಲು ಮುಂದಾಗಿದ್ದರು. ಆದರೆ ಅವರನ್ನು ಆಗ್ರಾ–ದೆಹಲಿ ಎಕ್ಸ್‌ಪ್ರೆಸ್‌ವೇ ಟೋಲ್ ಘಟಕದಲ್ಲೇ ತಡೆಯಲಾಯಿತು. ಪ್ರಿಯಾಂಕಾ ಅವರಿದ್ದ ಕಾರು, ಅವರ ಬೆಂಗಾವಲು ವಾಹನಗಳು ಮತ್ತು ಹಿಂಬಾಲಕರ ವಾಹನಗಳು ಟೋಲ್ ಘಟಕದಲ್ಲಿ ಸಾಲುಗಟ್ಟಿ ನಿಂತವು.

'ಆಗ್ರಾದಲ್ಲಿ ಸೆಕ್ಷನ್ 144ರ ಅನ್ವಯ ನಿರ್ಬಂಧ ವಿಧಿಸಲಾಗಿದೆ. ನೀವು ಅಲ್ಲಿಗೆ ಹೋದರೆ ಕಾನೂನು ಮತ್ತು ಸುವ್ಯವಸ್ಥೆ ಹದಗೆಡುತ್ತದೆ. ಅಲ್ಲಿಗೆ ಹೋಗಲು ಬಿಡುವುದಿಲ್ಲ' ಎಂದು ಪೊಲೀಸರು, ಪ್ರಿಯಾಂಕಾ ಅವರನ್ನು ತಡೆದರು. ಇದನ್ನು ಪ್ರತಿಭಟಿಸಿದ ಪ್ರಿಯಾಂಕಾ ಅವರನ್ನು ಪೊಲೀಸರು ವಶಕ್ಕೆ ಪಡೆದರು.

> **ನಾನು ಮನೆಯಲ್ಲಿದ್ದರೆ, ಕಚೇರಿಯಲ್ಲಿದ್ದರೆ ತೊಂದರೆಯಿಲ್ಲ. ಹೊರಗೆ ಕಾಲಿಟ್ಟರೆ ಇವರ ತಮಾಶೆ ಆರಂಭವಾಗುತ್ತದೆ. ಇದು ಅತಿಯಾಗುತ್ತಿದೆ**
>
> **ಪ್ರಿಯಾಂಕಾ ಗಾಂಧಿ ವಾದ್ರಾ**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಪೊಲೀಸರು ಪ್ರಿಯಾಂಕಾ ಅವರನ್ನು ವಶಕ್ಕೆ ಪಡೆದಾಗ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಪೊಲೀಸರ ಮಧ್ಯೆ ಮಾತಿನ ಚಕಮಕಿ ನಡೆಯಿತು.

'ನಾನು ಅತಿಥಿಗೃಹದಲ್ಲೇ ಇರಬೇಕು ಎಂದು ಪೊಲೀಸರು ಬಯಸಿದ್ದಾರೆ. ನಾನು ಎಲ್ಲಿಗಾದರೂ ಹೋಗುವಾಗಲೆಲ್ಲಾ, ಇವರ ಅನುಮತಿ ಪಡೆಯಬೇಕೇ? ತನ್ನ ಆಪ್ತರನ್ನು ಕಳೆದುಕೊಂಡಿರುವ ಕುಟುಂಬವನ್ನು ನಾನು ಭೇಟಿ ಮಾಡುವುದು ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆ ಹೇಗಾಗುತ್ತದೆ' ಎಂದು ಅವರು ಪ್ರಶ್ನಿಸಿದರು.

'ಇಂದು ವಾಲ್ಮೀಕಿ ಜಯಂತಿ. ಪೊಲೀಸ್ ಕಸ್ಟಡಿಯಲ್ಲಿ ಸತ್ತ ಯುವಕ ವಾಲ್ಮೀಕಿ ಜನಾಂಗದವನು. ಅವನ ಕುಟುಂಬಕ್ಕೆ ನ್ಯಾಯ ಸಿಗಬೇಕು. ಅವರನ್ನು ನಾನು ಭೇಟಿ ಮಾಡಿದರೆ, ಉತ್ತರ ಪ್ರದೇಶ ಸರ್ಕಾರಕ್ಕೆ ಭಯವೇಕೆ' ಎಂದು ಅವರು ಪ್ರಶ್ನಿಸಿದರು. ಸಂತ್ರಸ್ತ ಕುಟುಂಬದವರನ್ನು ಭೇಟಿ ಮಾಡಲು ಪ್ರಿಯಾಂಕಾ ಮತ್ತು ಇಬ್ಬರಿಗೆ ಮಾತ್ರವೇ ಅವಕಾಶ ನೀಡಿದರು.

ರೈತರ ಹತ್ಯೆ ನಡೆದಿದ್ದ ಲಖಿಂಪುರ-ಖೇರಿ ಜಿಲ್ಲೆಗೆ ಭೇಟಿ ನೀಡಲು ಮುಂದಾಗಿದ್ದ ಪ್ರಿಯಾಂಕಾ ಅವರನ್ನು ಪೊಲೀಸರು ಬಂಧಿಸಿ, 36 ಗಂಟೆಗೂ ಹೆಚ್ಚು ಕಾಲ ಬಂಧನದಲ್ಲಿ ಇರಿಸಿದ್ದರು.

ಶೇ 40ರಷ್ಟು ಟಿಕೆಟ್ ಮೊದಲು ನೀಡಿದ್ದು ನಾವು: ಟಿಎಂಸಿ

'ಚುನಾವಣೆಯಲ್ಲಿ ಶೇ 40ರಷ್ಟು ಟಿಕೆಟ್‌ಗಳನ್ನು ಮಹಿಳೆಯರಿಗೆ ಮೀಸಲಿರಿಸುವ ಕೆಲಸ ಮೊದಲು ಮಾಡಿದ್ದು ಟಿಎಂಸಿ. ಕಾಂಗ್ರೆಸ್ ಅದನ್ನು ಈಗ ಯಥಾವತ್ ಅನುಸರಿಸುತ್ತಿದೆ. ಆದರೆ ಇದು ಕೇವಲ ಘೋಷಣೆಯಾಗದೆ, ಕಾರ್ಯರೂಪಕ್ಕೆ ಬರಬೇಕು' ಎಂದು ಟಿಎಂಸಿ ಹೇಳಿದೆ.

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ 40ರಷ್ಟು ಟಿಕೆಟ್ ನೀಡುತ್ತೇವೆ ಎಂದು ಪ್ರಿಯಾಂಕಾ ಗಾಂಧಿ ಅವರು ಮಂಗಳವಾರ ಘೋಷಿಸಿದ್ದರು. ಅದರ ಮರುದಿನವೇ ಟಿಎಂಸಿ ಈ ಪ್ರತಿಕ್ರಿಯೆ ನೀಡಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ಟಿಎಂಸಿ ಶೇ 40ರಷ್ಟು ಟಿಕೆಟ್‌ಗಳನ್ನು ಮಹಿಳೆಯರಿಗೆ ನೀಡಿತ್ತು.

ಬಾಂಗ್ಲಾದಲ್ಲಿ ಕೋಮು ಹಿಂಸೆ ಹೊಸದಲ್ಲ

1971ರಲ್ಲಿ ಬಾಂಗ್ಲಾದೇಶ ಉದಯವಾದ ಕ್ಷಣದಿಂದಲೂ ಅಲ್ಪಸಂಖ್ಯಾತರು ಅದರಲ್ಲೂ ಮುಖ್ಯವಾಗಿ ಹಿಂದೂಗಳ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 9ರಷ್ಟು ಹಿಂದೂಗಳಿದ್ದು, ಹಿಂಸಾಚಾರಗಳು ಅಲ್ಪಸಂಖ್ಯಾತರಲ್ಲಿ ಭೀತಿ ಹುಟ್ಟಿಸಿವೆ.

ಬಾಂಗ್ಲಾದೇಶದಲ್ಲಿ 2013ರಿಂದ ಹಿಂದೂ ಸಮುದಾಯದ ಮೇಲೆ 3,721 ದಾಳಿಗಳು ವರದಿಯಾಗಿವೆ ಎಂದು ಬಾಂಗ್ಲಾದೇಶದ ಮಾನವ ಹಕ್ಕುಗಳ ಸಂಘಟನೆ 'ಐನ್ ಒ ಸಲೀಶ್' ಕೇಂದ್ರ ತಿಳಿಸಿದೆ. ಈ ಪೈಕಿ 2021ನೇ ವರ್ಷ ಅತ್ಯಂತ ಮಾರಕವಾದದ್ದು.

ಕಳೆದ ಮೂರು ವರ್ಷಗಳಲ್ಲಿ 18 ಹಿಂದೂ ಕುಟುಂಬಗಳು ದಾಳಿಗೆ ಒಳಗಾಗಿವೆ. ಹಿಂದೂ ದೇವಾಲಯಗಳು, ವಿಗ್ರಹಗಳು ಮತ್ತು ಪೂಜಾ ಸ್ಥಳಗಳಿಗೆ ಬೆಂಕಿ ಹಚ್ಚುವುದೂ ಸೇರಿದಂತೆ 1,678 ವಿಧ್ವಂಸಕ ಪ್ರಕರಣಗಳು ವರದಿಯಾಗಿವೆ ಎಂದು ತಿಳಿಸಿದೆ.

2001ರಲ್ಲಿ ಖಲೀದಾ ಜಿಯಾ ಪ್ರಧಾನಿಯಾಗಿ ಮರು ನೇಮಕಗೊಂಡ ನಂತರ, ಅವರ ಬೆಂಬಲಿಗರು ಹಿಂದೂಗಳ ವಿರುದ್ಧ ಹಿಂಸಾಚಾರದ ಅಭಿಯಾನ ಆರಂಭಿಸಿದರು. 18,000ಕ್ಕಿಂತ ಹೆಚ್ಚು ಪ್ರಮುಖ ಅಪರಾಧ ಪ್ರಕರಣಗಳು ದಾಖಲಾಗಿವೆ ಎಂದು ಬಾಂಗ್ಲಾದೇಶದ ನ್ಯಾಯಾಂಗ ಸಮಿತಿ ತನಿಖಾ ವರದಿ ಉಲ್ಲೇಖಿಸಿತ್ತು. ಸಂಡೇ ಗಾರ್ಡಿಯನ್ ಲೈವ್ ವರದಿ ಪ್ರಕಾರ, 1,000ಕ್ಕೂ ಹೆಚ್ಚು ಹಿಂದೂ ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗಿದ್ದರು.

2014ರಲ್ಲಿ 1,201 ಅಲ್ಪಸಂಖ್ಯಾತರ ಮನೆಗಳನ್ನು ದುಷ್ಕರ್ಮಿಗಳು ಧ್ವಂಸಗೊಳಿಸಿದ್ದರು. 2016ರಲ್ಲಿ, 55 ವರ್ಷದ ಹಿಂದೂ ಅರ್ಚಕ ಜೋಗೇಶ್ವರ್ ರಾಯ್ ಅವರನ್ನು ಉಗ್ರರು ಶಿರಚ್ಛೇದನ ಮಾಡಿದರು. ಈ ವರ್ಷದ ಸೆಪ್ಟೆಂಬರ್ ವೇಳೆಗೆ ಸುಮಾರು 196 ಮನೆಗಳು, ವ್ಯಾಪಾರ ಕೇಂದ್ರಗಳು, ದೇವಾಲಯಗಳು, ಮಠಗಳು ಮತ್ತು ಪ್ರತಿಮೆಗಳನ್ನು ಧ್ವಂಸಗೊಳಿಸಲಾಗಿದೆ ಎಂದು 'ಢಾಕಾ ಟ್ರಿಬ್ಯೂನ್' ವರದಿ ಮಾಡಿದೆ.

ದುಷ್ಟಶಕ್ತಿಗಳ ವಿರುದ್ಧ ಕಾವಲು: ಬಾಂಗ್ಲಾ ನಿಲುವು

'ಧರ್ಮವು ವೈಯಕ್ತಿಕವಾಗಿದ್ದರೂ, ಹಬ್ಬಗಳ ಆಚರಣೆ ಎಲ್ಲರಿಗೂ ಸಂಬಂಧಿಸಿದ್ದು' ಎಂಬ ಆಶಯವನ್ನು ಬಾಂಗ್ಲಾದೇಶ ಪ್ರಧಾನಿ ಶೇಖ್ ಹಸೀನಾ ಎಲ್ಲೆಡೆ ಪಸರಿಸುತ್ತಿದ್ದಾರೆ. ಸಮಾಜದ ಪ್ರತಿಯೊಬ್ಬರಿಗೂ ಅವರ ಧರ್ಮ ಪಾಲನೆಗೆ ಅವಕಾಶವಿದೆ ಎಂಬುದು ತಮ್ಮ ಸರ್ಕಾರದ ನಿಲುವು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಆಡಳಿತಾರೂಢ ಅವಾಮಿ ಲೀಗ್ ಪಕ್ಷ ಸೇರಿದಂತೆ ವಿವಿಧ ಸಂಘಟನೆಗಳು ಹಿಂದೂಗಳ ಮೇಲಿನ ದಾಳಿಯನ್ನು ಖಂಡಿಸಿವೆ. ಶಾಂತಿ ಮೆರವಣಿಗೆ ನಡೆಸಿ, ಅಲ್ಪಸಂಖ್ಯಾತ ಹಿಂದೂಗಳಿಗೆ ಬೆಂಬಲ ಸೂಚಿಸಿವೆ. ದೇಶದಾದ್ಯಂತ ಇಂತಹ ಸಾಮರಸ್ಯ ಜಾಥಾ ಆಯೋಜಿಸುವಂತೆ ಪಕ್ಷ ತನ್ನ ಕಾರ್ಯಕರ್ತರಿಗೆ ಸೂಚಿಸಿದೆ. ಘಟನಾ ಸ್ಥಳಗಳಿಗೆ ಭೇಟಿ ನೀಡುವಂತೆ ಸಚಿವರಿಗೆ ಸೂಚಿಸಲಾಗಿದೆ.

ಡಾಕೇಶ್ವರಿ ದೇವಸ್ಥಾನದಲ್ಲಿ ನಡೆದ ಕಾರ್ಯಕ್ರಮದ ಮೂಲಕ ಹಿಂದೂ ಸಮುದಾಯದ ಸದಸ್ಯರಿಗೆ ಸೂಕ್ತ ರಕ್ಷಣೆ ಮತ್ತು ಪರಿಹಾರದ ಭರವಸೆಯನ್ನು ಹಸೀನಾ ನೀಡಿದರು. ತಪ್ಪಿತಸ್ಥರು ಯಾವುದೇ ಧರ್ಮಕ್ಕೆ ಸೇರಿದ್ದರೂ, ಅವರನ್ನು ಹುಡುಕಿ ಶಿಕ್ಷಿಸುವ ಅಭಯ ನೀಡಿದರು.

'ಭಯಪಡಬೇಡಿ, ಹಿಂದೂ ಸಹೋದರ ಸಹೋದರಿಯರೇ. ಶೇಖ್ ಹಸೀನಾ ಮತ್ತು ಅವಾಮಿ ಲೀಗ್ ನಿಮ್ಮೊಂದಿಗಿದೆ. ಹಸೀನಾ ಸರ್ಕಾರವು ಅಲ್ಪಸಂಖ್ಯಾತ ಸ್ನೇಹಿ ಸರ್ಕಾರ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಒಬೈದುಲ್ ಖಾದರ್ ಹೇಳಿದ್ದು, ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಿದ್ದಾರೆ.

ಹಿಂದೂ ಅಲ್ಪಸಂಖ್ಯಾತರ ವಿರುದ್ಧದ ದಾಳಿಗೆ ಕಾರಣರಾದವರ ಮೇಲೆ ಕ್ರಮ ಕೈಗೊಳ್ಳುವ ಭರವಸೆಯನ್ನು ಶೇಖ್ ಹಸೀನಾ ನೀಡಿದ್ದಾರೆ. ದೇಶದಲ್ಲಿ ಮುಸ್ಲಿಮರ ರೀತಿಯಲ್ಲಿ ಹಿಂದೂಗಳು ಸಹ ನಿರ್ಭೀತವಾಗಿ ಪೂಜಿಸುವ ಹಕ್ಕನ್ನು ಹೊಂದಿದ್ದಾರೆ ಎಂದಿದ್ದಾರೆ. ಬಾಂಗ್ಲಾದೇಶ ವಿಮೋಚನೆಯ ಸಮಯದಲ್ಲಿ ಹಿಂದೂಗಳು ಮುಸ್ಲಿಂ ಸಹೋದರರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಹೋರಾಡಿದ್ದನ್ನು ಹಸೀನಾ ಸ್ಮರಿಸಿದ್ದಾರೆ. ಈ ಮೂಲಕ ತಮ್ಮ ಸರ್ಕಾರವು ಹಿಂದೂಗಳ ರಕ್ಷಣೆಗೆ ಬದ್ಧ ಎಂಬ ಸಂದೇಶ ರವಾನಿಸಿದ್ದಾರೆ.

ಏನೇ ಅಡ್ಡಿ ಎದುರಾದರೂ, ಕೋಮು ಸೌಹಾರ್ದ ಕಾಪಾಡಿಕೊಳ್ಳಬೇಕು ಎಂದು ಪ್ರಧಾನಿ ಕರೆ ನೀಡಿದ್ದಾರೆ ಎಂದು ಬಾಂಗ್ಲಾದೇಶದ ವಿದೇಶಾಂಗ ಸಚಿವಾಲಯ ತಿಳಿಸಿದೆ. 'ಸಹಿಷ್ಣುತೆ, ಶಾಂತಿ ಮತ್ತು ಬಹುತ್ವದ ಮನೋಭಾವವನ್ನು ಎತ್ತಿಹಿಡಿಯಬೇಕಿದೆ. ಒಗ್ಗಟ್ಟು ಹಾಗೂ ದೇಶದ ಪ್ರತಿಷ್ಠೆ ಹಾಳುಗೆಡವಲು ಮುಂದಾಗುವ ಶಕ್ತಿಗಳ ವಿರುದ್ಧ ಕಾವಲು ಕಾಯುವಂತೆ ಸರ್ಕಾರ ಎಲ್ಲರಿಗೂ ಮನವಿ ಮಾಡಿದೆ' ಎಂದು ಸಚಿವಾಲಯ ತಿಳಿಸಿದೆ.

ಬಾಂಗ್ಲಾದೇಶದ ಜಾತ್ಯತೀತ, ಕೋಮು ಸೌಹಾರ್ದ ಮತ್ತು ಬಹುಸಂಖ್ಯಾತ ನೆಲೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ದುರ್ಬಲಗೊಳಿಸಲು ಸ್ಥಳೀಯ ಶಕ್ತಿಗಳು ಪ್ರಯತ್ನಿಸುತ್ತಿವೆ ಎಂದು ಸಚಿವಾಲಯ ಆರೋಪಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದುರ್ಗಾ ಪೂಜೆ ಪೆಂಡಾಲ್‌ನಲ್ಲಿ ತೆಗೆಯಲಾಗಿರುವ ಚಿತ್ರವೊಂದು ಫೇಸ್‌ಬುಕ್ ಮತ್ತು ಟ್ವಿಟರ್‌ನಲ್ಲಿ ಭಾರಿ ಸಂಖ್ಯೆಯಲ್ಲಿ ಶೇರ್ ಆಗಿತ್ತು. ಪೆಂಡಾಲ್‌ನ ಒಂದು ಬದಿಯಲ್ಲಿ ಹಾಕಿರುವ ಫಲಕದಲ್ಲಿ ನಮಾಜಿನ ವೇಳಾಪಟ್ಟಿಯನ್ನು ನಮೂದಿಸಲಾಗಿದೆ. 'ಇದು ಪಶ್ಚಿಮ ಬಂಗಾಳದ ದುರ್ಗಾದೇವಿ ಪೆಂಡಾಲ್ ಒಂದರ ಚಿತ್ರ. ನಮಾಜ್ ನಡೆಯುವ ಸಮಯದಲ್ಲಿ ಹಿಂದೂಗಳು ದುರ್ಗಾದೇವಿಗೆ ಪ್ರಾರ್ಥನೆ ಸಲ್ಲಿಸಬಾರದು ಎಂದು ಆದೇಶಿಸಲಾಗಿದೆ' ಎಂದು ಈ ಚಿತ್ರಕ್ಕೆ ಅಡಿಬರಹ ನೀಡಲಾಗಿದೆ.



ಇದು ಪಶ್ಚಿಮ ಬಂಗಾಳದಲ್ಲಿ ತೆಗೆಯಲಾಗಿರುವ ಫೋಟೊ ಅಲ್ಲ ಎಂದು ಆಲ್ಟ್ ನ್ಯೂಸ್ ತಿಳಿಸಿದೆ. ಈ ಫಲಕದ ಕೆಳಗೆ 'ಉತ್ತರ ಸರ್ಬೋಜೋನಿಕ್ ಪೂಜಾ ಕಮಿಟಿ' ಎಂದು ಬರೆಯಲಾಗಿದೆ. ಈ ಸಮಿತಿ ಇರುವುದು ಬಾಂಗ್ಲಾದೇಶದ ಢಾಕಾದಲ್ಲಿ. ನಮಾಜ್ ನಡೆಯುವ ಸಮಯದಲ್ಲಿ ದುರ್ಗಾದೇವಿ ಪೆಂಡಾಲ್‌ನಲ್ಲಿ ಸಂಗೀತ ಮೊಳಗಿಸಬಾರದು ಎಂಬ ಕಾರಣಕ್ಕೆ ನಮಾಜಿನ ವೇಳಾಪಟ್ಟಿಯನ್ನು ಪೆಂಡಾಲ್‌ನಲ್ಲಿ ಹಾಕಲಾಗಿತ್ತು ಎಂದು ವರದಿ ಆಗಿರುವುದು ತಿಳಿದುಬಂದಿದೆ.

ಗುಂಡಣ್ಣ



ದಿನ ಭವಿಷ್ಯ

ಗುರುವಾರ ಅಕ್ಟೋಬರ್ 21, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಚಿತ್ತಾ ಪ್ರತಿಪದೆ ಗಂ. 35-1 (ರಾ. 8-18) ಗುರುವಾರ ನಿತ್ಯ ನಕ್ಷತ್ರ ಅಶ್ವಿನೀ ಗಂ. 23-25 (ಹ. 3-40) ವಜ್ರ ನಾಮ ಯೋಗ ಗಂ. 37-40 ಬಾಲವ ಕರಣ ಗಂ. 3-27 ವಿಷ ಗಂ. 13-26 ಪುನರ್ವಿಷ ಗಂ. 49-29 ಅಮೃತ ಗಂ. 4-44 ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-14 ಸೂರ್ಯಾಸ್ತ: 5-54 ಅದೃಷ್ಟ ಸಂಖ್ಯೆ 6 7

ಮೇಷ: ಮಕ್ಕಳ ಬಗ್ಗೆ ಚಿಂತೆ ಇದೆ. ಗುರುಗಳ ಪ್ರಶಂಸೆಯ ಬಲದಿಂದ ಕಾರ್ಯದಲ್ಲಿ ಉನ್ನತಿ. ಆರೋಗ್ಯದಲ್ಲಿ ಚೇತರಿಕೆ. ಹಿರಿಯರ ಮಾರ್ಗದರ್ಶನದಿಂದ ಸಂತೋಷ.

ವೃಷಭ: ತುಂಬಾ ಶ್ರಮವಹಿಸಿದ ನಿಮ್ಮ ಕಾರ್ಯಗಳಲ್ಲಿ ಶೀಘ್ರಪ್ರಗತಿಯಲ್ಲಿ ಯಶಸ್ಸು ಕಾಣುವಿರಿ. ಮನಸ್ಸಿಗೆ ಸಂಬಂಧಿಸಿದ ವ್ಯವಹಾರಗಳು ನೆರವೇರಲಿವೆ. ಮರು ಪ್ರಯತ್ನದಿಂದ ಕಾರ್ಯ ಸಾಧನೆ.

ಮಿಥುನ: ಈ ದಿನದ ಪ್ರಗತಿ ಉತ್ತಮವಾಗಿದೆ. ದೂರ ಪ್ರದೇಶಗಳಿಗೆ ಪ್ರಯಾಣ ಮಾಡಲಿದ್ದೀರಿ. ದಾಂಪತ್ಯದಲ್ಲಿ ಅತ್ಯಂತ ಸರಸದ ದಿನ. ಮಕ್ಕಳ ಆರೋಗ್ಯದಲ್ಲಿ ಚೇತರಿಕೆ. ಸಂತೋಷಮಯ ಬದುಕು.

ಕರ್ಕಾಟಕ: ನಿಮ್ಮ ಗೌರವ ಹೆಚ್ಚಾಗಲಿದೆ. ಇಷ್ಟಮಿತ್ರರ ಆಗಮನದ ಜೊತೆಗೆ ಮನೆಯಲ್ಲಿ ಹಬ್ಬದ ವಾತಾವರಣ. ವಾಹನ ಚಲಾವಣೆಯಲ್ಲಿ ನಿಗಾ ಇರಲಿ. ಚಿಲ್ಲರೆ ವ್ಯಾಪಾರಿಗಳಿಗೆ ಶುಭದಿನ.

ಸಿಂಹ: ಅನಾರೋಗ್ಯದ ಬಗ್ಗೆ ಎಚ್ಚರದಿಂದಿರಿ. ಪ್ರತಿಸ್ಪರ್ಧಿಗಳ ಸವಾಲು. ಯೋಚಿಸಿ ಕಾರ್ಯಪ್ರವೃತ್ತರಾಗುವುದು ನಿಮ್ಮ ಯಶಸ್ಸಿನ ಗುಟ್ಟಾಗಲಿದೆ. ಉದ್ಯೋಗಕ್ಕೆ ಸಂಬಂಧಿಸಿದಂತೆ ಅನ್ಯರಲ್ಲಿ ಚರ್ಚೆ.

ಕನ್ಯಾ: ಕುಲದೇವತಾ ದರ್ಶನ ಭಾಗ್ಯ ನಿಮ್ಮ ಪಾಲಿಗೆ. ಬೆನ್ನು ನೋವು ಜಾಸ್ತಿಯಾಗುವ ಸಾಧ್ಯತೆ ಕಂಡುಬರುತ್ತಿದೆ. ಅನಿವಾರ್ಯ ಕಾರಣಗಳಿಂದಾಗಿ ನಡೆಯಬೇಕಾದ ಕಾರ್ಯ ಮುಂದೂಡುವಿರಿ. ಸಂತೋಷ ಇಮ್ಮಡಿಗೊಳ್ಳಲಿದೆ.

ತುಲಾ: ಭೂ ವ್ಯವಹಾರಕ್ಕೆ ಸಂಬಂಧಿಸಿದಂತೆ ಶೀಘ್ರಪ್ರಗತಿಯಲ್ಲಿ ಲಾಭ ದೊರಕಲಿದೆ. ರತ್ನ ವ್ಯಾಪಾರಿಗಳಿಗೆ ಅನುಕೂಲವಾಗಲಿದೆ. ಹೆಣ್ಣುಮಕ್ಕಳ ಆರೋಗ್ಯದಲ್ಲಿ ಚೇತರಿಕೆ. ಆತ್ಮೀಯರಿಂದ ಸಿಹಿ ಸುದ್ದಿ.

ವೃಶ್ಚಿಕ: ಸಂಗಾತಿಯೊಂದಿಗೆ ದೂರ ಪ್ರಯಾಣ. ನಿಶ್ಚಿತ ಕಾರ್ಯದಲ್ಲಿ ಗೆಲುವು. ಯತಿಗಳ ಆಗಮನ ಸಾಧ್ಯತೆ. ಹಿಂದಿನ ಸಾಲ ವಸೂಲಾತಿ. ದಿನದ ಕೊನೆಯಲ್ಲಿ ನೆಮ್ಮದಿ.

ಧನು: ಆರ್ಥಿಕ ಸಂಕಷ್ಟ ದೂರವಾಗಿ ಮನಸ್ಸಿಗೆ ನೆಮ್ಮದಿ. ಅನೇಕ ಅವಕಾಶಗಳು ಅರಸಿ ಬರಲಿವೆ. ಶುಭ ಸಮಾರಂಭಗಳಲ್ಲಿ ಭಾಗಿಯಾಗುವ ಸಾಧ್ಯತೆ ಕಂಡುಬರುತ್ತಿದೆ. ಹಿರಿಯರನ್ನು ಗೌರವಿಸಿ.

ಮಕರ: ಈಶ್ವರಾರಾಧನೆಯನ್ನು ಮಾಡುವುದರಿಂದ ಆರ್ಥಿಕವಾಗಿ ಚೇತರಿಸಿಕೊಳ್ಳುವಿರಿ. ಮನಸ್ಸಿನ ನೋವು ನಿವಾರಣೆಯಾಗಲಿದೆ. ಪತ್ರಿಕಾ ವರದಿಗಾರರು ಎಚ್ಚರಿಕೆಯಿಂದಿರುವುದು ಸೂಕ್ತ.

ಕುಂಭ: ಧನಾಗಮನಕ್ಕಿಂತ ವ್ಯಯವೇ ಹೆಚ್ಚಾಗುವ ಸಾಧ್ಯತೆ ಕಂಡುಬರುತ್ತಿದೆ. ದೇವತಾ ಕಾರ್ಯಗಳಲ್ಲಿ ಆದ್ಯತೆ ನೀಡಲಿದ್ದೀರಿ. ಯಶಸ್ಸಿಗಾಗಿ ಗೋ ಸೇವೆ ಮಾಡಿ. ಹಣಕಾಸಿನ ವಿಷಯದಲ್ಲಿ ಎಚ್ಚರಿಕೆ ಅಗತ್ಯ.

ಮೀನ: ಉದ್ಯೋಗದಲ್ಲಿ ಪದೋನ್ನತಿಯನ್ನು ಹೊಂದಲಿದ್ದೀರಿ. ಸಹೋದರಿಯರ ಆಗಮನ ನಿರೀಕ್ಷೆ. ಬಂಗಾರಕ್ಕೆ ಸಂಬಂಧಿಸಿದಂತೆ ಕಲಹ ಸಾಧ್ಯತೆ. ತಾಳ್ಮೆಯಿಂದ ನೆಮ್ಮದಿ. ವಾಹನ ಖರೀದಿಗೆ ಸುಸಂದರ್ಭ.

ನಿಮ್ಮ ಜನ್ಮದಿನ 21-ಅಕ್ಟೋಬರ್: ಇಂದು ಅತ್ಯಂತ ಶುಭದಾಯಕ. ಮನಸ್ಸಿಗೆ ಸಂಬಂಧಪಟ್ಟ ಕಾರ್ಯದಿಂದ ಯಶಸ್ಸು. ಮನೋವೈದ್ಯರು ತಜ್ಞರುಗಳಿಗೆ ಬಿಡುವಿಲ್ಲದ ಕಾರ್ಯ. ಅಪ್ರತಿಮ ಸಾಧಕರೆನಿಸುವ ಸಾಧ್ಯತೆ. ತಾಯಿಯ ಆರೋಗ್ಯದ ಬಗ್ಗೆ ವಿಶೇಷ ಗಮನವಿರಲಿ. ಕ್ರೀಡಾಳುಗಳು, ಕುಸ್ತಿ ಪಟುಗಳಿಗೆ ಹೆಚ್ಚಿನ ಸಾಧನೆಗೆ ಅವಕಾಶ ದೊರತು ಕೀರ್ತಿ ಲಾಭವಾಗಲಿದೆ.

ಬೆರಗಿನ ಬೆಳಕು



ಗುರುರಾಜ ಕರಜಗಿ

ಮಾಸದ ಜೀವಗುಣಗಳು

ಕ್ಲೇಶ ನೂರಾಗಿರೆಯುಮಾಶೆಗಳ ಪುನರುದಯ |
ಬೇಸರದ ನುಡಿಯೊಳಂ ಲೇಸುಗಳ ನೆನಪು ||
ಆಶೆ ಸಾಯ್ತೆಂದೊಡಂ ಚೆಲುವೆನಲು ಕಣ್ಣಲೆತ |
ಮಾಸವಿ ಜೀವಗುಣ – ಮಂಕುತಿಮ್ಮ || 480 ||

ಪದ-ಅರ್ಥ: ಕ್ಲೇಶ = ಕಷ್ಟ, ನೂರಾಗಿರೆಯುಮಾಶೆಗಳ = ನೂರಾಗಿ + ಇರೆಯುಂ(ಇದ್ದರೂ) + ಆಶೆಗಳ, ಪುನರುದಯ = ಮರುಹುಟ್ಟು, ಸಾಯ್ತೆಂದೊಡಂ- = ಸಾಯಿತು (ಸತ್ತು ಹೋಯಿತು) + ಎಂದೊಡಂ(ಎಂದರೆ), ಕಣ್ಣಲೆತ = ಕಣ್ಣು + ಅಲೆತ, ಮಾಸವೀ = ಮಾಸವು(ಕಡಿಮೆಯಾಗವು, ಕಳೆದುಹೋಗವು) + ಈ.

ವಾಚ್ಯಾರ್ಥ: ನೂರು ಕಷ್ಟಗಳು ಬಂದರೂ ಆಶೆಗಳು ಮರುಹುಟ್ಟು ಪಡೆಯುತ್ತವೆ. ಬೇಸರದ ಮಾತಿನಲ್ಲಿಯೇ ಹಿಂದಾದ ಸಂತೋಷದ ನೆನಪುಗಳು. ಆಸೆಗಳು ಸತ್ತು ಹೋಗಿವೆ ಎಂದರೂ ಸುಂದರವಾದದ್ದರೆಡೆಗೆ ಕಣ್ಣು ಅಲೆಯುತ್ತದೆ. ಈ ಜೀವಗುಣಗಳು ಎಂದಿಗೂ ಮಾಸುವುದಿಲ್ಲ.

ವಿವರಣೆ: ಅವನಿಗೆ ವಯಸ್ಸಾಗಿದೆ. ಬಡತನ ತಪ್ಪಲಿಲ್ಲ. ಒಬ್ಬನೇ ಮಗ ಸತ್ತು ಹೋದ. ಅವನ ಹೆಂಡತಿ, ಮಕ್ಕಳನ್ನು ಈತನೇ ಸಾಕಬೇಕು. ಗಂಡ ತೀರಿ ಹೋದ ಮಗಳು, ಮಕ್ಕಳನ್ನು ಕರೆದುಕೊಂಡು ಬಂದಿದ್ದಾಳೆ. ಅವರೆಲ್ಲರ ಹೊಟ್ಟೆಗೆ ಆಧಾರವಾಗಬೇಕು. ಇವನಿಗೆ ತಿಳಿದದ್ದು ಒಂದೇ ಕೆಲಸ. ಕಾಡಿನಿಂದ ಕಟ್ಟಿಗೆ ತಂದು ಮಾರುವುದು. ಸಂಕಟದಿಂದಲೇ ಕಾಡಿಗೆ ಹೋದ. ಕಟ್ಟಿಗೆಯ ದೊಡ್ಡ ಹೊರೆ ಮಾಡಿದ. ಶಕ್ತಿ ಹಾಕಿ ಅದನ್ನು ಹೊರಲು ಹೋದಾಗ ಕಾಲು ಜಾರಿ ಮೋಟು ಬೇರಿಗೆ ಬಡಿದು ಕಾಲಿನ ರಕ್ತ ಚಿಮ್ಮಿತು. ಛೇ, ಸಾಕು ನನ್ನ ಜನ್ಮ, ಇಡೀ ಬದುಕಿನಲ್ಲಿ ಒದ್ದಾಟ ತಪ್ಪಲಿಲ್ಲ ಎಂದುಕೊಂಡು ಸಂಕಟದಿಂದ ಕೂಗಿದ. 'ಯಮದೇವ, ಎಲ್ಲಿದ್ದೀಯಪ್ಪ? ಬೇಗ ಬಂದು ನನ್ನನ್ನೂ ಕರೆದುಕೊಂಡು ಹೋಗು. ಸಾಕು ಈ ಜನ್ಮ'. ಆಕಾಶದಲ್ಲಿ ಹೋಗುತ್ತಿದ್ದ ಯಮ ಇವನ ಮೊರೆಯನ್ನು ಕೇಳಿ ಕೆಳಗೆ ಬಂದು, 'ಅಯ್ಯಾ, ನಾನೇ ಯಮರಾಜ. ಏನು ಬೇಕಿತ್ತು?' ಎಂದ. ಮುದುಕ ಗಾಬರಿಯಿಂದ ತಡಬಡಾಯಿಸಿ ಹೇಳಿದ, 'ಅಯ್ಯಾ, ನೀನೇಕೆ ಬಂದೆಯಪ್ಪ? ನನಗೆ ವಯಸ್ಸಾಯಿತು. ಅರಳುಮರಳು. ಯಾರನ್ನೋ ಕರೆಯುತ್ತೇನೆ. ನೀನು ಮಾತ್ರ ಬರಬೇಡಪ್ಪ. ನಾನು ಚೆನ್ನಾಗಿದ್ದೇನೆ. ಈ ಹೊರೆ ತುಂಬ ಭಾರ, ಎತ್ತುವುದಕ್ಕಾಗುವುದಿಲ್ಲ. ಸ್ವಲ್ಪ ಎತ್ತಿ ತಲೆಯ ಮೇಲೆ ಹೊರಿಸುತ್ತೀಯಾ?'. ಯುಮನಿಂದ ಹೊರೆ ತಲೆಗೇರಿಸಿಕೊಂಡು, 'ಅಯ್ಯಾ, ಮತ್ತೆ ನಾನು ಹೀಗೆ ಕರೆದರೆ ಬರಲೇಬೇಡ. ನಾನಿನ್ನೂ ಸಾಕಷ್ಟು ವರ್ಷವಿದ್ದು ಕೆಲಸ ಮಾಡಬೇಕಾಗಿದೆ' ಎಂದ! ಯಮ ಮುಗುಳ್ನಕ್ಕು ಹೋದ. ಸಾಕು ಈ ಬಾಳು, ಸಾವು ಬಂದರೆ ಸಾಕು ಎನ್ನುವವರು ಸಾವು ಮುಂದೆ ಬಂದು ನಿಂತಾಗ ಅದರಿಂದ ಪಾರಾಗಬಯಸುತ್ತಾರೆ.

ಕಗ್ಗ, ಮನುಷ್ಯನ ಸ್ವಭಾವವನ್ನು ತುಂಬ ಚೆನ್ನಾಗಿ ಚಿತ್ರಿಸುತ್ತದೆ. ನಮಗೆ ನೂರಾರು ಕಷ್ಟಗಳಿವೆ. ಆದರೆ ಅವುಗಳೊಂದಿಗೆ ಹೊಸ ಹೊಸ ಆಸೆಗಳು ಚಿಗುರುತ್ತವೆ. ದುಃಖಗಳ ಸರಮಾಲೆ ಕೊರಳೊಳಗಿದ್ದಾಗ, ಹಿಂದೆ ಪಟ್ಟ ಸಂತಸದ ನೆನಪುಗಳು ಆ ದುಃಖಗಳನ್ನು ಸಹ್ಯಗೊಳಿಸುತ್ತವೆ. ನಾನಿನ್ನು ಆಸೆಗಳನ್ನು ಗೆದ್ದುಬಿಟ್ಟೆ, ನನಗಾವ ಆಸೆಗಳೂ ಇಲ್ಲ ಎಂದು ಬುದ್ಧನಂತೆ ಮುಖಮಾಡಿ ಕುಳಿತವರು, ಚೆಲುವಾದದ್ದು ಕಣ್ಣ ಮುಂದೆ ಸುಳಿದರೆ ಅವರ ಕಣ್ಣುಗಳು ಆ ಕಡೆಗೆ ಎಳೆಯುತ್ತವೆ. ಕಗ್ಗ ಇವುಗಳನ್ನು ದೋಷಗಳೆಂದು ಹಳಿಯುವುದಿಲ್ಲ. ಇವು ಮನುಷ್ಯನ ಜೀವಗುಣಗಳು. ಅದೆಷ್ಟು ಶತಮಾನಗಳು ಕಳೆದರೂ, ಅದೆಷ್ಟು ಮನುಷ್ಯನಲ್ಲಿ ವಿಕಾಸವಾದರೂ, ಈ ಮೂಲವಾದ ಜೀವಗುಣಗಳು ಮರೆಯಾಗುವುದಿಲ್ಲ. ಮಾಸುವುದಿಲ್ಲ.


ಪದಬಂಧ 4754 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆ ಗ್ರಹಣ ಬಿಟ್ಟಾಗ ಮೂಸಿ ನೋಡುವಿಕೆ! (3)
2.ಸಮರಸದ ಭಾವ (4)
4.ಸಾರದೊಳಗೇ ಮೂರ್ತೀಭವಿಸುವುದು! (4)
6.ಸಂಗನ ಸಂಗಡವಿದ್ದಾಗ ನಡೆದ ಘಟನೆ! (3)
7.ನೆನಪಲ್ಲೇ ಇರುವ ಕಾರಣ! (2)
9.ಕನ್ನ ಹಾಕಿ ದೋಚಿರುವ ಚಿನ್ನ (3)
11.ಸೂರ್ಯ ಇಲ್ಲಿ ಮೂಡಿದ್ದಾನೆ (2)
13.ಕಾವಲಿದ್ದರೂ ಎರಡಾಗಿ ಸೀಳಿದುದು! (3)
14. ಮೋಸಗಾರಿಕೆಯನ್ನು ಹೀಗೂ ಹೇಳುವರು (4)
16.ಮನದಲ್ಲಿರುವ ವಂಶ (4)
17.ಗಲಬರಿಸುತ್ತಿರುವಾಗ ನಡೆದ ಗಲಾಟೆ (3)

ಮೇಲಿಂದ ಕೆಳಕ್ಕೆ

1.ಆತ್ಮ ಸಾಕ್ಷಾತ್ಕಾರಕ್ಕಾಗಿ ಮಾಡುವ ಪ್ರಯತ್ನ (5)
2. ಶಾರೀರಿಕ ವ್ಯಾಯಾಮ (2)
3.ನೆತ್ತರು ಪ್ರವಹಿಸುವಿಕೆ (5)
5.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
8.ಈ ಪರಿ ಆಗಿರುವ ಬದಲಾವಣೆ! (5)
10.ಕೈಯಲ್ಲಿ ಹಿಡಿದಿರುವ ಚಿಪ್ಪು (3)
12.ರಾಜ್ಯದ ಚುನಾಯಿತ ಶಾಸಕರ ಮಂಡಳಿ (5)
15.ಮಾತಿಲ್ಲದ ನೀರವತೆ (2)



4753ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅನುಪಮ 3.ವಿಕೋಪ 4.ಗರಗಸ 6.ರಂಪ 7.ನಾಮಧೇಯ 8.ಕಠಾರಿ 9.ಪ್ರತ್ಯುತ್ತರ 12.ಮಾವ 13.ಶಯ್ಯಾಗೃಹ 15.ಸಾತ್ವಿಕ 16.ಗೆಳೆತನ

ಮೇಲಿಂದ ಕೆಳಕ್ಕೆ: 1.ಅಪರಂಜಿ 2.ಮಗ 3.ವಿಚಿತ್ರ 5.ಸಮಯ 7.ನಾರಿ 8.ಕರ 9.ಪ್ರವೇಶ 10.ಅವಸಾನ 11.ಪಾತಕ 14.ಹಗೆ

ಸುಡೊಕು 5140

	6			9				8
1			8			5		
		2		6			9	7
		7			9	6		
4	2			3			5	9
6			7		8			
2		5	4		7	9		6
	4						7	
9		6	3		5		4	1


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5139 ಸುಡೊಕು

8	7	3	2	1	9	4	6	5
6	2	9	4	5	8	7	1	3
4	1	5	6	7	3	9	2	8
5	4	2	7	9	6	8	3	1
3	6	7	8	4	1	5	9	2
1	9	8	3	2	5	6	4	7
9	8	1	5	6	2	3	7	4
2	3	4	9	8	7	1	5	6
7	5	6	1	3	4	2	8	9

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,418
ಇಂದಿನ ಅಂತ್ಯ	18,266
▼	152
ದಿನದ ಗರಿಷ್ಠ	18,458

ವಿನಿಮಯ ದರ

$ ಡಾಲರ್	74.88
£ ಪೌಂಡ್	103.24
€ ಯುರೊ	87.11
¥ ಯೆನ್ (100ಕ್ಕೆ)	65.53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹450

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1430 (1430)
ಸೋಯಾ (ರಿಫೈನ್ಡ್)	₹1310 (1305)
ಸೂರ್ಯಕಾಂತಿ (ರಿಫೈನ್ಡ್)	₹1370 (1350)
ಪಾಮೋಲಿನ್	₹1210 (1205)

ಮುಂಬೈ ಧಾರಣೆ

ಶೇಂಗಾ

20-10-2021

ಜಾವಾ 70/80(ಹೊಸ)	10400-10450
ಜಾವಾ 80/90(ಹೊಸ)	10100-10150
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1440 (1440)
ಒಂದು ವಾರದ ಡೆಲಿವರಿ	1435 (1435)
ಸೋಯಾ ಕಚ್ಚಾ	1265 (1250)
ಪಾಮ್ ವಾರದ ಡೆಲಿವರಿ	1208 (1203)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1265)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,300 (47,400)
ಬೆಳ್ಳಿ ಕೆ.ಜಿ
64,450 (63,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರೇಷ್ಮೆಗೂಡು ಧಾರಣೆ

ರಾಮನಗರ ರೇಷ್ಮೆ

ಮಿಶ್ರತಳಿ (ಸಿ.ಬಿ)	241-488
ದ್ವಿತಳಿ (ಬಿ.ವಿ)	287-549


ಯುಎಇ ಉದ್ಯಮಿಗಳಿಂದ ರಾಜ್ಯದಲ್ಲಿ ಭಾರಿ ಬಂಡವಾಳ ಹೂಡಿಕೆ

ಬೆಂಗಳೂರಿನಲ್ಲಿ ಡಿಸೈನ್ ಡಿಸ್ಟ್ರಿಕ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಯುಕ್ತ ಅರಬ್ ಒಕ್ಕೂಟ (ಯುಎಇ) ಉದ್ಯಮಿಗಳು ರಾಜ್ಯದಲ್ಲಿ ಭಾರಿ ಬಂಡವಾಳ ಹೂಡಲಿದ್ದು, ಒಡಂಬಡಿಕೆ ಮಾಡಿಕೊಳ್ಳಲು ನವೆಂಬರಿನಲ್ಲಿ ಬೆಂಗಳೂರಿಗೆ ಬರಲಿದ್ದಾರೆ' ಎಂದು ಐಟಿ, ಬಿಟಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

'ದುಬೈ ಎಕ್ಸ್‌ಪೋ-2020'ಯಲ್ಲಿ ಭಾಗವಹಿಸಿ ಬಂದ ಅವರು ಸುದ್ದಿಗಾರರ ಜೊತೆ ಬುಧವಾರ ಮಾತನಾಡಿ, 'ಯುಎಇ ಉದ್ಯಮಿಗಳು ಭಾರತದಲ್ಲಿ ಶೀಘ್ರದಲ್ಲಿ ₹ 125 ಲಕ್ಷ ಕೋಟಿ ಬಂಡವಾಳ ಹೂಡಲಿದ್ದಾರೆ. ಅದರಲ್ಲಿ ರಾಜ್ಯಕ್ಕೆ ಸಿಂಹಪಾಲು ಹರಿದು ಬರಲಿದೆ. ಬೆಂಗಳೂರಿನಲ್ಲಿ ₹ 1 ಸಾವಿರ ಕೋಟಿಯ



ಡಾ.ಸಿ.ಎನ್. ಅಶ್ವತ್ಥನಾರಾಯಣ

ಹೂಡಿಕೆಯೊಂದಿಗೆ ವಿಶ್ವ ದರ್ಜೆಯ 'ಡಿಸೈನ್ ಡಿಸ್ಟ್ರಿಕ್ಟ್' ಮೈದಾಳಲಿದೆ' ಎಂದರು.

'100ರಿಂದ 150 ಎಕರೆ ಪ್ರದೇಶದಲ್ಲಿ ಉದ್ದೇಶಿತ 'ಡಿಸೈನ್ ಡಿಸ್ಟ್ರಿಕ್ಟ್' ಅಸ್ತಿತ್ವಕ್ಕೆ ಬರಲಿದೆ. ಉದ್ಯಮರಂಗಕ್ಕೆ ಬೇಕಾಗುವ ಎಲ್ಲವನ್ನೂ ಇಲ್ಲಿ ವಿನ್ಯಾಸಗೊಳಿಸಲಾಗುವುದು. ಇದು ಔದ್ಯಮಿಕ ವಿನ್ಯಾಸ, ಕಲೆ ಮತ್ತು ಫ್ಯಾಷನ್ ಸಂಸ್ಕೃತಿಗಳ ಸಂಗಮ ಆಗಲಿದ್ದು, ಇಲ್ಲಿ 'ಬೆಂಗಳೂರು ಡಿಸೈನ್ ಫೆಸ್ಟಿವಲ್' ಹಮ್ಮಿಕೊಳ್ಳಲಾಗುವುದು' ಎಂದರು.

'ಬೆಂಗಳೂರಿನಲ್ಲಿ ವಾಟರ್ ಥೀಮ್ ಪಾರ್ಕ್ ಸ್ಥಾಪಿಸುವ ಸಂಬಂಧ ದುಬೈನ ಭೂ ಅಭಿವೃದ್ಧಿ ಸಚಿವರ ಜೊತೆ ನಡೆಸಿರುವ ಮಾತುಕತೆ ಫಲಪ್ರದವಾಗಿದೆ. ಕೊಲ್ಲಿ ರಾಷ್ಟ್ರಗಳಲ್ಲಿ ಎವೊಲೆನ್ಸ್ ಸಮೂಹ, ಕ್ರೆಸೆಂಟ್, ಡೆಕರ್ ಅಂಡ್ ಹಲಾಬಿ, ಆಸ್ಟರ್ ಡಿಎಂ ಹೆಲ್ತ್ ಕೇರ್ ಮತ್ತು ಮೈತ್ರಾ ಹೈಟೆಕ್ ಆಸ್ಪತ್ರೆಗಳ ಸಮೂಹಗಳು ರಾಜ್ಯದಲ್ಲಿ ಸದ್ಯದಲ್ಲೇ ಹೂಡಿಕೆ ಮಾಡಲಿವೆ. ಇದರಿಂದ ಸರಕು ಸಾಗಣೆ, ಆರೋಗ್ಯ, ಶಿಕ್ಷಣ, ಬಂದರು ಕ್ಷೇತ್ರಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿ ಆಗಲಿದೆ' ಎಂದರು.

'ರಾಜ್ಯದಲ್ಲಿ ಇಸ್ಲಾಮಿಕ್ ಇನ್‌ವೆಸ್ಟ್‌ಮೆಂಟ್ ಸಮೂಹ ಮೂರು ವರ್ಷಗಳಲ್ಲಿ ಹಂತಹಂತವಾಗಿ ₹ 3,500 ಕೋಟಿ ಹೂಡಿಕೆ ಮಾಡಲಿದೆ. ಈ ಬಗ್ಗೆ ದುಬೈನಲ್ಲೇ ಒಡಂಬಡಿಕೆಗೆ ಸಹಿ ಹಾಕಲಾಗಿದೆ. ಮೈತ್ರಾ ಆಸ್ಪತ್ರೆಗಳ ಸಮೂಹ ರೋಬೋಟಿಕ್ ತಂತ್ರಜ್ಞಾನದ ಹೈಟೆಕ್ ಆಸ್ಪತ್ರೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಿದೆ. ಆಸ್ಟರ್ ಸಮೂಹ ಎರಡನೇ ಮತ್ತು ಮೂರನೇ ಸ್ತರದ ನಗರಗಳಲ್ಲಿ ಆಸ್ಪತ್ರೆಗಳನ್ನು ಸ್ಥಾಪಿಸಲು ಒಲವು ತೋರಿದೆ' ಎಂದರು.

ಫೇಸ್‌ಬುಕ್‌ಗೆ ₹519.76 ಕೋಟಿ ದಂಡ

ಲಂಡನ್ (ಎಎಫ್‌ಪಿ): ಆ್ಯನಿಮೇಟೆಡ್ ಗ್ರಾಫಿಕ್ಸ್ ನವೋದ್ಯಮ ಜಿಫಿ (Giphy) ಖರೀದಿ ವಿಚಾರವಾಗಿ ಮಾಹಿತಿ ನೀಡಲು ವಿಫಲವಾಗಿರುವ ಫೇಸ್‌ಬುಕ್‌ಗೆ ಬ್ರಿಟನ್‌ನ ಸ್ಪರ್ಧಾ ಆಯೋಗ ₹519.76 ಕೋಟಿ (5 ಕೋಟಿ ಪೌಂಡ್) ದಂಡ ವಿಧಿಸಿದೆ.

ಖರೀದಿ ವ್ಯವಹಾರಕ್ಕೆ ಸಂಬಂಧಿಸಿ ಅಗತ್ಯವಿರುವ ಎಲ್ಲ ಮಾಹಿತಿಯನ್ನು ಒದಗಿಸಲು ಪ್ರಜ್ಞಾಪೂರ್ವಕವಾಗಿ ನಿರಾಕರಿಸಿದ್ದಕ್ಕೆ ಫೇಸ್‌ಬುಕ್‌ಗೆ ಈ ದಂಡ ವಿಧಿಸಲಾಗಿದೆ ಎಂದು ಆಯೋಗ ತಿಳಿಸಿದೆ. ಜಿಫಿ ನವೋದ್ಯಮವನ್ನು ಕಳೆದ ವರ್ಷ ಫೇಸ್‌ಬುಕ್ ಖರೀದಿಸಿತ್ತು.

ಫಾಕ್ಸ್‌ಕಾನ್‌ನಿಂದ ಭಾರತದಲ್ಲಿ ಇ.ವಿ. ತಯಾರಿಕೆ

ತೈಪೆ (ರಾಯಿಟರ್ಸ್): ತೈವಾನ್‌ನ ತಂತ್ರಜ್ಞಾನ ಕ್ಷೇತ್ರದ ದೈತ್ಯ ಕಂಪನಿ ಫಾಕ್ಸ್‌ಕಾನ್, ಭಾರತದಲ್ಲಿ ವಿದ್ಯುತ್ ಚಾಲಿತ (ಇ.ವಿ.) ವಾಹನಗಳನ್ನು ತಯಾರಿಸುವ ಚಿಂತನೆ ನಡೆಸಿದೆ. ಭಾರತ ಮಾತ್ರವೇ ಅಲ್ಲದೆ ಯುರೋಪ್ ಮತ್ತು ಲ್ಯಾಟಿನ್ ಅಮೆರಿಕದಲ್ಲಿಯೂ ಇ.ವಿ. ತಯಾರಿಕೆ ಆರಂಭಿಸಲು ಕಂಪನಿ ಮುಂದಾಗಿದೆ.

ಕಂಪನಿಯ ಅಧ್ಯಕ್ಷ ಲಿಯು ಯಂಗ್–ವೆ ಅವರು ಬುಧವಾರ ಈ ವಿಷಯ ತಿಳಿಸಿದ್ದಾರೆ. ಜಾಗತಿಕ ಮಟ್ಟದಲ್ಲಿ ಇ.ವಿ. ತಯಾರಿಕೆಯಲ್ಲಿ ಪ್ರಮುಖ ಪಾಲು ಹೊಂದುವ ಉದ್ದೇಶ ಫಾಕ್ಸ್‌ಕಾನ್‌ಗೆ ಇದೆ. ಈ ದಿಸೆಯಲ್ಲಿ ಕಂಪನಿಯು ಅಮೆರಿಕದ ನವೋದ್ಯಮ ಫಿಸ್ಕರ್ ಮತ್ತು ಥೈಲ್ಯಾಂಡ್‌ನ ಪಿಟಿಟಿ ಕಂಪನಿ ಜೊತೆ ಒಪ್ಪಂದ ಮಾಡಿಕೊಂಡಿದೆ.

ಕೆಲವು ವಿಷಯಗಳನ್ನು ಬಹಿರಂಪಡಿಸಲು ನಿರ್ಬಂಧಗಳು ಇರುವ ಕಾರಣ ಭಾರತ, ಯುರೋಪ್ ಮತ್ತು ಲ್ಯಾಟಿನ್ ಅಮೆರಿಕದ ಯೋಜನೆಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡಲು ಆಗದು ಎಂದು ಲಿಯು ಅವರು ಹೇಳಿದ್ದಾರೆ. ಮೊದಲು ಯುರೋಪ್‌ನಲ್ಲಿ ಕೆಲಸ ಶುರುವಾಗಲಿದೆ, ನಂತರ ಭಾರತದಲ್ಲಿ, ಅದಾದ ನಂತರ ಲ್ಯಾಟಿನ್ ಅಮೆರಿಕದಲ್ಲಿ ಎಂದು ಅವರು ತಿಳಿಸಿದ್ದಾರೆ.

ಇ.ವಿ. ವಾಹನಗಳನ್ನು ಸ್ಥಳೀಯವಾಗಿ ತಯಾರಿಸಿ, ಸ್ಥಳೀಯ ಗ್ರಾಹಕರಿಗೆ ಮಾರಾಟ ಮಾಡುವ ಮಾದರಿಯನ್ನು ಕಂಪನಿ ಅನುಸರಿಸಲಿದೆ. ಫಾಕ್ಸ್‌ಕಾನ್ ಕಂಪನಿಯು ಅಮೆರಿಕದ ಆ್ಯಪಲ್ ಕಂಪನಿಗಾಗಿ ಐಫೋನ್‌ಗಳನ್ನು ಸಿದ್ಧಪಡಿಸಿ ಕೊಡುತ್ತದೆ.

ನವೋದ್ಯಮಗಳಿಗೆ ಮೈಕ್ರೊಸಾಫ್ಟ್ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ಬಳಕೆ ಮಾಡುತ್ತಿರುವ ನವೋದ್ಯಮಗಳಿಗೆ ಬೆಂಬಲ ನೀಡುವ ಉದ್ದೇಶದಿಂದ ಮೈಕ್ರೊಸಾಫ್ಟ್ ಕಂಪನಿಯು ಹೊಸ ಕಾರ್ಯಕ್ರಮವೊಂದನ್ನು ರೂಪಿಸಿದೆ. 'ಮೈಕ್ರೊಸಾಫ್ಟ್ ಎ.ಐ. ಇನ್ನೊವೇಟ್' ಹೆಸರಿನ 10 ವಾರಗಳ ಈ ಕಾರ್ಯಕ್ರಮವು, ನವೋದ್ಯಮಗಳಿಗೆ ತಮ್ಮ ಚಟುವಟಿಕೆ ವಿಸ್ತರಿಸಿಕೊಳ್ಳಲು ನೆರವು ನೀಡಲಿದೆ.

ಹಣಕಾಸು ಸೇವೆಗಳು, ಆರೋಗ್ಯ ಸೇವೆಗಳು, ಶಿಕ್ಷಣ, ಕೃಷಿ, ಬಾಹ್ಯಾಕಾಶ, ತಯಾರಿಕಾ ವಲಯ, ಸರಕು ಸಾಗಣೆ, ಇ-ವಾಣಿಜ್ಯ ವಲಯಗಳ ನವೋದ್ಯಮಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅವಕಾಶ ಇದೆ. ಟಿಐಇ ಮುಂಬೈ ಸಂಸ್ಥೆಯು ಮೈಕ್ರೊಸಾಫ್ಟ್ ಜೊತೆ ಕೈಜೋಡಿಸಿದೆ.

ನವೋದ್ಯಮಗಳು ತಮ್ಮ ಸೇವೆಗಳನ್ನು ಸುಧಾರಿಸಿಕೊಳ್ಳಲು, ಕೃತಕ ಬುದ್ಧಿಮತ್ತೆಯ ಸೇವೆಗಳು ಹೆಚ್ಚಿನ ಜನರಿಗೆ ಲಭ್ಯವಾಗುವಂತೆ ಮಾಡಲು, ಹೊಸ ಗ್ರಾಹಕರನ್ನು ಕಂಡುಕೊಳ್ಳಲು ಮೈಕ್ರೊಸಾಫ್ಟ್ ನೆರವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ವಿವರಗಳಿಗೆ aka.ms/MSAIInnovate ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಲಾಭ ಗಳಿಕೆ ವಹಿವಾಟಿಗೆ ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಬುಧವಾರದ ವಹಿವಾಟಿನಲ್ಲಿ 456 ಅಂಶ ಇಳಿಕೆ ಕಂಡಿತು. ವರ್ತಕರು ಲಾಭ ಗಳಿಕೆಯ ಉದ್ದೇಶದಿಂದ ಷೇರುಗಳ ಮಾರಾಟಕ್ಕೆ ಹೆಚ್ಚಿನ ಗಮನ ನೀಡಿದ ಕಾರಣದಿಂದಾಗಿ ಸೂಚ್ಯಂಕ ಕುಸಿತದ ಹಾದಿ ಹಿಡಿಯಿತು.

ದಿನದ ವಹಿವಾಟಿನ ಅಂತ್ಯಕ್ಕೆ ಸೆನ್ಸೆಕ್ಸ್ 61,259 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ, 152 ಅಂಶ ಇಳಿಕೆ ಕಂಡು 18,266 ಅಂಶಗಳಲ್ಲಿ ದಿನದ ವಹಿವಾಟು ಕೊನೆಗೊಳಿಸಿತು.

ಸೆನ್ಸೆಕ್ಸ್‌ನಲ್ಲಿನ ಬಹುತೇಕ ಕಂಪನಿಗಳ ಷೇರುಮೌಲ್ಯ ಇಳಿಕೆ ಕಂಡಿತು. ಹೀಗಿದ್ದರೂ, ಸರ್ಕಾರಿ ಸ್ವಾಮ್ಯದ ಕೆಲವು ಬ್ಯಾಂಕ್‌ಗಳ ಷೇರುಮೌಲ್ಯವು ಹೆಚ್ಚಾಯಿತು. ಹೂಡಿಕೆದಾರರು ಆಯ್ದ ಕೆಲವು ಬ್ಯಾಂಕ್‌ಗಳ ಷೇರು ಖರೀದಿಯಲ್ಲಿ ತೊಡಗಿದ್ದರು ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ಎಸ್. ರಂಗನಾಥನ್ ತಿಳಿಸಿದರು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ ಶೇಕಡ 0.82ರಷ್ಟು ಇಳಿಕೆಯಾಗಿದೆ. ಬೆಲೆಯು ಪ್ರತಿ ಬ್ಯಾರೆಲ್‌ಗೆ 84.38 ಅಮೆರಿಕನ್ ಡಾಲರ್‌ಗೆ ತಲುಪಿದೆ.

ಡೀಸೆಲ್ ಬೆಲೆ ತಿಂಗಳಲ್ಲಿ 20 ಬಾರಿ ಏರಿಕೆ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಲೀಟರ್‌ಗೆ ತಲಾ 35 ಪೈಸೆಯಂತೆ ಬುಧವಾರ ಹೆಚ್ಚಿಸಿವೆ.

ಸೆಪ್ಟೆಂಬರ್ ಕೊನೆಯ ವಾರದ ನಂತರದಲ್ಲಿ ಪೆಟ್ರೋಲ್ ಬೆಲೆಯು 17 ಬಾರಿ, ಡೀಸೆಲ್ ಬೆಲೆಯು 20 ಬಾರಿ ಹೆಚ್ಚಳ ಆಗಿದೆ.

ಈಗ ದೆಹಲಿಯಲ್ಲಿ ಪೆಟ್ರೋಲ್ ಬೆಲೆ ₹ 106.19, ಮುಂಬೈನಲ್ಲಿ ₹ 112.11 ಆಗಿದೆ. ಡೀಸೆಲ್ ಬೆಲೆಯು ಮುಂಬೈನಲ್ಲಿ ₹ 102.89, ದೆಹಲಿಯಲ್ಲಿ ₹ 94.92 ಆಗಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆಯು ₹ 109.89 ಹಾಗೂ ಡೀಸೆಲ್ ಬೆಲೆಯು ₹ 100.75 ಆಗಿದೆ.

ಹಾರ್ವರ್ಡ್‌ಗೆ ಮರಳಲಿರುವ ಗೀತಾ



ಗೀತಾ ಗೋಪಿನಾಥ್

ವಾಷಿಂಗ್ಟನ್ (ಪಿಟಿಐ): ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಮುಖ್ಯ ಅರ್ಥಶಾಸ್ತ್ರಜ್ಞೆ ಗೀತಾ ಗೋಪಿನಾಥ್ ಅವರು ತಮ್ಮ ಹುದ್ದೆಯನ್ನು ಜನವರಿಯಲ್ಲಿ ತೊರೆಯಲಿದ್ದಾರೆ, ಅವರು ಹಾರ್ವರ್ಡ್ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗಕ್ಕೆ ಮರಳಲಿದ್ದಾರೆ.

ಗೀತಾ ಅವರು 2019ರ ಜನವರಿಯಲ್ಲಿ ಐಎಂಎಫ್‌ನಲ್ಲಿ ಮುಖ್ಯ ಅರ್ಥಶಾಸ್ತ್ರಜ್ಞೆಯಾಗಿ ಕೆಲಸ ಆರಂಭಿಸಿದ್ದರು. ಅದಕ್ಕೂ ಮೊದಲು ಅವರು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಅಧ್ಯಾಪನ ವೃತ್ತಿಯಲ್ಲಿ ತೊಡಗಿದ್ದರು. 'ಐಎಂಎಫ್‌ಗೆ ಗೀತಾ ಅವರ ಕೊಡುಗೆ ಗಮನಾರ್ಹವಾದುದು' ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲೀನಾ ಜಾರ್ಜೀವಾ ಹೇಳಿದ್ದಾರೆ.

ಗೀತಾ ಅವರು ಜನಿಸಿದ್ದು ಮೈಸೂರಿನಲ್ಲಿ. ಐಎಂಎಫ್‌ನಲ್ಲಿ ಮುಖ್ಯ ಅರ್ಥಶಾಸ್ತ್ರಜ್ಞ ಸ್ಥಾನದಲ್ಲಿ ಕೆಲಸ ನಿಭಾಯಿಸಿದ ಮೊದಲ ಮಹಿಳೆ ಗೀತಾ.

ಸಿರಿಯಾದಲ್ಲಿ ಬಾಂಬ್ ಸ್ಫೋಟ: ಮಿಲಿಟರಿ ಬಸ್‌ನಲ್ಲಿದ್ದ 14 ಮಂದಿ ಸಾವು

ಡಮಾಸ್ಕಸ್, ಸಿರಿಯಾ (ಎಪಿ/ರಾಯಿಟರ್ಸ್): ಸಿರಿಯಾ ರಾಜಧಾನಿ ಡಮಾಸ್ಕಸ್‌ನಲ್ಲಿ ಬುಧವಾರ ಮುಂಜಾನೆ ಸಂಭವಿಸಿದ ರಸ್ತೆ ಪಕ್ಕದ ಬಾಂಬ್ ದಾಳಿಯಲ್ಲಿ ಕನಿಷ್ಠ 14 ಸಿರಿಯಾ ಸೇನಾ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಅಲ್ಲಿನ ಸರ್ಕಾರಿ ವಾಹಿನಿ ವರದಿ ಮಾಡಿದೆ.

ಮಿಲಿಟರಿ ಬಸ್‌ವೊಂದು ಸೆಂಟ್ರಲ್ ಡೆಮಾಸ್ಕಸ್‌ನಲ್ಲಿ ಸೇತುವೆಯನ್ನು ದಾಟುತ್ತಿತ್ತು. ಈ ವೇಳೆ ಸ್ಫೋಟ ಸಂಭವಿಸಿದೆ ಎಂದೂ ವಾಹಿನಿ ಹೇಳಿದೆ.

ಬಸ್ಸಿನ ಸುಟ್ಟುಹೋದ ತುಣುಕಿನ ಚಿತ್ರಗಳನ್ನು ಸಿರಿಯಾದ ವಾಹಿನಿ ತನ್ನ ಟೆಲಿಗ್ರಾಮ್ ಖಾತೆಯಲ್ಲಿ ಪೋಸ್ಟ್ ಮಾಡಿದೆ. ರಕ್ಷಣಾ ಸಿಬ್ಬಂದಿ ಮೃತರ ದೇಹಗಳನ್ನು ತೆರವುಗೊಳಿಸುತ್ತಿರುವುದನ್ನು ಚಿತ್ರಗಳು ತೋರಿಸಿವೆ. ಕನಿಷ್ಠ 14 ಮಂದಿ ಸಾವನ್ನಪ್ಪಿದ್ದು ಮೂವರು ಗಾಯಗೊಂಡಿದ್ದಾರೆ ಎಂದು ವಾಹಿನಿ ವರದಿ ಮಾಡಿದೆ.

ಮಿಲಿಟರಿ ಬಸ್ ಹಫೀಜ್ ಅಲ್–ಅಸ್ಸಾದ್ ಸೇತುವೆಯಲ್ಲಿದ್ದಾಗ ಎರಡು ಬಾಂಬ್‌ಗಳು ಸ್ಫೋಟಗೊಂಡಿವೆ. ಮೂರನೇ ಸ್ಫೋಟಕ ವಸ್ತುವನ್ನು ಸೇನಾ ಎಂಜಿನಿಯರಿಂಗ್ ಘಟಕವು ನಿಷ್ಕ್ರಿಯಗೊಳಿಸಿದೆ. ಇದೊಂದು ಭಯೋತ್ಪಾದಕ ದಾಳಿಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.



ಡಮಾಸ್ಕಸ್‌ನಲ್ಲಿ ರಸ್ತೆ ಬದಿಯ ಬಾಂಬ್‌ಗಳ ಸ್ಫೋಟದಿಂದ ಸುಟ್ಟುಹೋದ ಸಿರಿಯನ್ ಸೇನಾ ಬಸ್ ಅನ್ನು ಸೇನಾ ಸಿಬ್ಬಂದಿಗಳು ತಪಾಸಣೆ ನಡೆಸಿದರು. ಎಎಫ್‌ಪಿ ಚಿತ್ರ.

2011ರ ಮಾರ್ಚ್‌ನಲ್ಲಿ ಆರಂಭವಾದ ಸಿರಿಯಾ ಸಂಘರ್ಷದಲ್ಲಿ 3.50 ಲಕ್ಷಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ. ದೇಶದ ಅರ್ಧದಷ್ಟು ಜನಸಂಖ್ಯೆಯನ್ನು ಸ್ಥಳಾಂತರಿಸಲಾಗಿದೆ. ಇದರಲ್ಲಿ 50 ಲಕ್ಷ ಜನರು ನಿರಾಶ್ರಿತರಾಗಿದ್ದಾರೆ ಎಂದು ವಿಶ್ವಸಂಸ್ಥೆ ಹೇಳಿದೆ.

ಮಾಂಡವೀಯ ಜತೆಗೆ ಡಬ್ಲ್ಯುಎಚ್‌ಒ ಮುಖ್ಯಸ್ಥರ ಚರ್ಚೆ

ವಿಶ್ವಸಂಸ್ಥೆ/ಜಿನೀವಾ (ಪಿಟಿಐ): ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಮುಖ್ಯಸ್ಥ ಟೆಡ್ರೊಸ್ ಅಧಾನೋಮ್ ಘೆಬ್ರೆಯೆಸಸ್ ಅವರು ಕೇಂದ್ರ ಆರೋಗ್ಯ ಸಚಿವ ಮನಸುಖ್ ಮಾಂಡವೀಯ ಅವರೊಂದಿಗೆ ಕೋವ್ಯಾಕ್ಸಿನ್ ಲಸಿಕೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದಾರೆ.

'ಭಾರತದಲ್ಲಿ ನಡೆಯುತ್ತಿರುವ ಲಸಿಕಾ ಕಾರ್ಯಕ್ರಮ ಕುರಿತು ಚರ್ಚಿಸಲು ಭಾರತದ ಆರೋಗ್ಯ ಸಚಿವ ಮನಸುಖ್ ಮಾಂಡವೀಯ ಅವರಿಗೆ ಕರೆ ಮಾಡಿದ್ದೆ' ಎಂದು ಟೆಡ್ರೊಸ್ ಟ್ವೀಟ್ ಮಾಡಿದ್ದಾರೆ.

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ದಾಳಿ: ಶಿಕ್ಷಣ ತಜ್ಞರ ಖಂಡನೆ

ಢಾಕಾ (ಪಿಟಿಐ): ಹಿಂದೂ ಸಮುದಾಯದ ಮೇಲೆ ಗುಂಪು ಹಲ್ಲೆ ನಡೆಸಿರುವುದು ಮತ್ತು ದುರ್ಗಾ ಪೂಜೆ ಹಬ್ಬದ ಸಮಯದಲ್ಲಿ ದೇವಸ್ಥಾನಗಳು ಹಾಗೂ ವಿಗ್ರಹಗಳನ್ನು ಧ್ವಂಸಗೊಳಿಸುವುದನ್ನು ದೇಶದಾದ್ಯಂತ ಪ್ರತಿಭಟನಾಕಾರರು ಮತ್ತು ಶಿಕ್ಷಣ ತಜ್ಞರು ಖಂಡಿಸಿದ್ದಾರೆ.

ಬಾಂಗ್ಲಾದೇಶ ಸರ್ಕಾರವು ಪ್ರತಿಯೊಬ್ಬರಿಗೂ ಧಾರ್ಮಿಕ ಸ್ವಾತಂತ್ರ್ಯ ಖಾತ್ರಿಪಡಿಸಲು ಹೊಸ ಕಾನೂನು ಜಾರಿಗೊಳಿಸಬೇಕು ಎಂದು ಇದೇ ವೇಳೆ ಒತ್ತಾಯಿಸಿದ್ದಾರೆ.

ಹಿಂದೂ ಸಮುದಾಯದ ಮೇಲಿನ ದಾಳಿ ಖಂಡಿಸಿ, ದೇಶದಾದ್ಯಂತ ಮಂಗಳವಾರ ಆರನೇ ದಿನ ಪ್ರತಿಭಟನೆಗಳನ್ನು ನಡೆಸಲಾಗಿದೆ ಎಂದು ಢಾಕಾ ಟ್ರಿಬ್ಯೂನ್ ಪತ್ರಿಕೆ ಬುಧವಾರ ವರದಿ ಮಾಡಿದೆ.

ಢಾಕಾ ವಿಶ್ವವಿದ್ಯಾಲಯದ ಶಿಕ್ಷಕರ ಸಂಘವು (ಡಿಯುಟಿಎ) ದೇಶದಾದ್ಯಂತ ಹಿಂದೂ ದೇವಸ್ಥಾನಗಳು ಮತ್ತು ದುರ್ಗಾ ಪೂಜಾ ಸ್ಥಳಗಳ ಮೇಲೆ ದಾಳಿ ನಡೆಸಿದವರಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿದೆ.

ವಿವಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ದಾಳಿಗಳನ್ನು ಖಂಡಿಸಿ 'ದೇಖ್ತೆ ಕಿ ಪಾವ್ರೋ, ಪರ್ಚೆ ಬಾಂಗ್ಲಾ' (ಬಾಂಗ್ಲಾ ಉರಿಯುತ್ತಿರುವುದನ್ನು ನೀವು ನೋಡುತ್ತೀರಾ?) ಎಂಬ ಬೀದಿ ನಾಟಕ ಪ್ರದರ್ಶಿಸಿದರು.

ಅಫ್ಗಾನಿಸ್ತಾನದಲ್ಲಿ ಎಲ್ಲರನ್ನೂ ಒಳಗೊಂಡ ಸರ್ಕಾರ–ರಷ್ಯಾದಿಂದ ಮಾತುಕತೆ

ಮಾಸ್ಕೋ (ಎಪಿ): ರಷ್ಯಾ ಬುಧವಾರ ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಮತ್ತು ಇತರ ಬಣಗಳ ಹಿರಿಯ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸಿತು. ಇದು ಅಫ್ಗಾನ್ ಮೇಲೆ ಮಾಸ್ಕೋದ ಪ್ರಭಾವವನ್ನು ಒತ್ತಿಹೇಳುವ ಒಂದು ಸುತ್ತಿನ ರಾಜತಾಂತ್ರಿಕ ಮಾತುಕತೆಯಾಗಿತ್ತು.



ಸೆರ್ಗೆ ಲಾವ್ರೊವ್

ಮಾತುಕತೆಗೆ ಚಾಲನೆ ನೀಡಿದ ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್, ಅಫ್ಗಾನಿಸ್ತಾನದಲ್ಲಿ ಸ್ಥಿರ ಶಾಂತಿ ಸ್ಥಾಪಿಸಲು ಎಲ್ಲ ಜನಾಂಗೀಯ ಗುಂಪುಗಳ ಮಾತ್ರವಲ್ಲದೆ ದೇಶದ ಎಲ್ಲ ರಾಜಕೀಯ ಶಕ್ತಿಗಳ ಹಿತಾಸಕ್ತಿಗಳನ್ನು ಸಂಪೂರ್ಣವಾಗಿ ಪ್ರತಿಬಿಂಬಿಸುವಂತಹ, ಎಲ್ಲರನ್ನೂ ಒಳಗೊಂಡ ಸರ್ಕಾರವನ್ನು ರಚಿಸುವುದು ಅಗತ್ಯ ಎಂದರು.

2003ರಲ್ಲಿ ತಾಲಿಬಾನ್ ಅನ್ನು ಭಯೋತ್ಪಾದಕ ಸಂಘಟನೆಯೆಂದು ಘೋಷಿಸಿದರೂ ಅದನ್ನು ಉಗ್ರ ಪಟ್ಟಿಯಲ್ಲಿ ಸೇರಿಸಿರಲಿಲ್ಲ. ಅಂತಹ ಗುಂಪುಗಳೊಂದಿಗಿನ ಯಾವುದೇ ಸಂಪರ್ಕವು ರಷ್ಯಾದ ಕಾನೂನಿನ ಪ್ರಕಾರ ಶಿಕ್ಷಾರ್ಹವಾಗಿದೆ. ಆದರೆ ಅಫ್ಗಾನಿಸ್ತಾನದಲ್ಲಿ ಸ್ಥಿರತೆ ನೆಲೆಸುವಂತೆ ಮಾಡಲು ತಾಲಿಬಾನ್ ಜೊತೆಗಿನ ಮಾತುಕತೆ ಅತ್ಯಗತ್ಯ ಎಂದು ಹೇಳುವ ಮೂಲಕ ವಿದೇಶಾಂಗ ಸಚಿವಾಲಯವು, ವಿರೋಧಾಭಾಸದ ನಡೆಯ ಬಗೆಗಿನ ಪ್ರಶ್ನೆಗಳಿಗೆ ಸ್ಪಷ್ಟ ಪ್ರತಿಕ್ರಿಯೆ ನೀಡಿದೆ.

ವಾರ್ಮ್ ಅಪ್ ಪಂದ್ಯ: ಆಸ್ಟ್ರೇಲಿಯಾ ಎದುರು ಗೆದ್ದ ಭಾರತ; ರಾಹುಲ್, ಸೂರ್ಯಕುಮಾರ್ ಉತ್ತಮ ಬ್ಯಾಟಿಂಗ್

‘ನಾಯಕ’ ರೋಹಿತ್ ಅರ್ಧಶತಕದ ಅಭ್ಯಾಸ

ದುಬೈ (ಪಿಟಿಐ): ಟಿ20 ವಿಶ್ವಕಪ್ ಟೂರ್ನಿಯ ನಂತರ ಭಾರತ ತಂಡವನ್ನು ಚುಟುಕು ಕ್ರಿಕೆಟ್‌ನಲ್ಲಿ ಮುನ್ನಡೆಸುವ ಮತ್ತು ಬ್ಯಾಟಿಂಗ್ ಲಯಕ್ಕೆ ಮರಳುವ ಅಭ್ಯಾಸವನ್ನು ರೋಹಿತ್ ಶರ್ಮಾ ಬುಧವಾರ ಅಚ್ಚುಕಟ್ಟಾಗಿ ನಿಭಾಯಿಸಿದರು.

ಇಲ್ಲಿ ನಡೆದ ಎರಡನೇ ಅಭ್ಯಾಸ ಪಂದ್ಯದಲ್ಲಿ ರೋಹಿತ್, ತಂಡದ ನಾಯಕತ್ವ ವಹಿಸಿದ್ದರು. ಅರ್ಧಶತಕವನ್ನೂ ಗಳಿಸಿದರು. ಭಾರತ ತಂಡವು ಆಸ್ಟ್ರೇಲಿಯಾ ವಿರುದ್ಧ ಎಂಟು ವಿಕೆಟ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಆಸ್ಟ್ರೇಲಿಯಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 152 ರನ್ ಗಳಿಸಿತು.ಭಾರತ ತಂಡವು 17.5 ಓವರ್‌ಗಳಲ್ಲಿ 1 ವಿಕೆಟ್‌ಗೆ 153 ರನ್ ಗಳಿಸಿ ಜಯ ದಾಖಲಿಸಿತು.

ಭಾರತದ ಸ್ಪಿನ್ ಜೋಡಿ ಆರ್. ಅಶ್ವಿನ್ (8ಕ್ಕೆ2) ಮತ್ತು ರವೀಂದ್ರ ಜಡೇಜ (35ಕ್ಕೆ1) ಅವರ ಮೋಡಿಯಿಂದಾಗಿ ಆರಂಭದಲ್ಲಿಯೇ ಆಘಾತ ಅನುಭವಿಸಿತು.

11 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡ ಆಸ್ಟ್ರೇಲಿಯಾ ಅಲ್ಪಮೊತ್ತಕ್ಕೆ ಕುಸಿಯುವ ಭೀತಿ ಎದುರಿಸಿತು. ಡೇವಿಡ್ ವಾರ್ನರ್ ಮತ್ತೊಮ್ಮೆ ವೈಫಲ್ಯ ಅನುಭವಿಸಿದರು.



ರೋಹಿತ್ ಶರ್ಮಾ ಬ್ಯಾಟಿಂಗ್ ವೈಖರಿ

ಆದರೆ, ಮಧ್ಯಮಕ್ರಮಾಂಕದಲ್ಲಿ ಸ್ಟೀವನ್ ಸ್ಮಿತ್ (57 ರನ್) ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ (37 ರನ್) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 61 ರನ್ ಗಳಿಸಿದರು. ಇದರಿಂದಾಗಿ ತಂಡವು ತುಸು ಚೇತರಿಕೆ ಕಂಡಿತು.

12ನೇ ಓವರ್‌ನಲ್ಲಿ ಸ್ಪಿನ್ನರ್ ರಾಹುಲ್ ಚಾಹರ್ ಈ ಜೊತೆಯಾಟವನ್ನು ಮುರಿದರು. ಗ್ಲೆನ್ ಮ್ಯಾಕ್ಸ್‌ವೆಲ್ ಅವರನ್ನು ಕ್ಲೀನ್ ಬೌಲ್ಡ್ ಮಾಡಿದ ರಾಹುಲ್ ಸಂಭ್ರಮಿಸಿದರು. ಕ್ರೀಸ್‌ಗೆ ಬಂದ ಮಾರ್ಕಸ್ ಸ್ಟೋಯಿನಿಸ್ (41; 25ಎಸೆತ) ಬಿರುಸಿನ ಬ್ಯಾಟಿಂಗ್ ಮಾಡಿದರು. ಸ್ಮಿತ್ ಜೊತೆಗೂಡಿದ ಅವರು ಐದನೇ ವಿಕೆಟ್ ಜತೆಯಾಟದಲ್ಲಿ 76 ರನ್‌ಗಳಿಸಿ ಗೌರವಾರ್ಹ ಮೊತ್ತ ಪೇರಿಸಲು ನೆರವಾದರು. ಆದರೆ, ಆಸ್ಟ್ರೇಲಿಯಾ ತಂಡವು ಬೌಲಿಂಗ್‌ನಲ್ಲಿ ಯಶಸ್ವಿಯಾಗಲು ರೋಹಿತ್ ಬಿಡಲಿಲ್ಲ. ರೋಹಿತ್ ಮತ್ತು ಕೆ.ಎಲ್. ರಾಹುಲ್ (39 ರನ್) ಮೊದಲ ವಿಕೆಟ್ ಜೊತೆಯಾಟದಲ್ಲಿ 68 ರನ್ ಗಳಿಸಿ ಭದ್ರ ಬುನಾದಿ ಹಾಕಿದರು. 10ನೇ ಓವರ್‌ನಲ್ಲಿ ರಾಹುಲ್ ಔಟಾದರು. ವಿರಾಟ್ ಬದಲು ಮೂರನೇ ಕ್ರಮಾಂಕದಲ್ಲಿ ಆಡಿದ ಸೂರ್ಯಕುಮಾರ್ ಯಾದವ್ (ಔಟಾಗದೆ 38) ಭರವಸೆ ಮೂಡಿಸಿದರು. ರೋಹಿತ್ ನಿವೃತ್ತರಾದಾಗ ಕ್ರೀಸ್‌ಗೆ ಬಂದ ಹಾರ್ದಿಕ್ ಪಾಂಡ್ಯ (ಔಟಾಗದೆ 14; 8ಎ, 1ಸಿ) ಸೂರ್ಯ ಜೊತೆಗೂಡಿ ಗೆಲುವಿನ ದಡ ಸೇರಿಸಿದರು.

ಈ ಪಂದ್ಯದಲ್ಲಿಯೂ ಹಾರ್ದಿಕ್ ಬೌಲಿಂಗ್ ಮಾಡಲಿಲ್ಲ.


ಸ್ಕೋರ್ ಕಾರ್ಡ್

ಆಸ್ಟ್ರೇಲಿಯಾ 5ಕ್ಕೆ 152 (20 ಓವರ್)
ವಾರ್ನರ್ ಎಲ್‌ಬಿಡಬ್ಲ್ಯು ಅಶ್ವಿನ್ 1 (7ಎ), ಫಿಂಚ್ ಎಲ್‌ಬಿಡಬ್ಲ್ಯು ಜಡೇಜ 8 (10ಎ, 4X1), ಮಿಚೆಲ್ ಮಾರ್ಷ್ ಸಿ ರೋಹಿತ್ ಬಿ ಅಶ್ವಿನ್ 0 (1ಎ), ಸ್ಮಿತ್ ಸಿ ರೋಹಿತ್ ಬಿ ಭುವನೇಶ್ವರ್ 57 (48ಎ, 4X7), ಮ್ಯಾಕ್ಸ್‌ವೆಲ್ ಬಿ ಚಾಹರ್ 37 (28ಎ, 4X5), ಸ್ಟೋಯಿನಿಸ್ ಔಟಾಗದೆ 41 (25ಎ, 4X4, 6X1), ವೇಡ್ ಔಟಾಗದೆ 4 (1ಎ, 4X1).
ಇತರೆ (ವೈಡ್ 4) 4
ವಿಕೆಟ್ ಪತನ: 1–6 (ಡೇವಿಡ್ ವಾರ್ನರ್, 1.5), 2–6 (ಮಿಚೆಲ್ ಮಾರ್ಷ್, 1.6), 3–11 (ಆ್ಯರನ್ ಫಿಂಚ್, 3.1), 4–72 (ಗ್ಲೆನ್ ಮ್ಯಾಕ್ಸ್‌ವೆಲ್, 11.5), 5–148 (ಸ್ಟೀವನ್ ಸ್ಮಿತ್, 19.5).
ಬೌಲಿಂಗ್: ಭುವನೇಶ್ವರ್ ಕುಮಾರ್ 4–0–27–1, ರವಿಚಂದ್ರನ್ ಅಶ್ವಿನ್ 2–0–8–2, ರವೀಂದ್ರ ಜಡೇಜ 4–0–35–1, ಶಾರ್ದೂಲ್ ಠಾಕೂರ್ 3–0–30–0, ವಿರಾಟ್ ಕೊಹ್ಲಿ 2–0–12–0, ರಾಹುಲ್ ಚಾಹರ್ 3–0–17–1, ವರುಣ್ ಚಕ್ರವರ್ತಿ 2–0–23–0.

ಭಾರತ 1ಕ್ಕೆ 153 (17.5 ಓವರ್)
ರಾಹುಲ್ ಸಿ ವಾರ್ನರ್ ಬಿ ಅಗರ್ 39 (31ಎ, 4X2, 6X3), ರೋಹಿತ್ (ನಿವೃತ್ತಿ–ಔಟ್) 60 (41ಎ, 4X5, 6X3), ಸೂರ್ಯಕುಮಾರ್ ಔಟಾಗದೆ 38 (27ಎ, 4X5, 6X1), ಹಾರ್ದಿಕ್ ಔಟಾಗದೆ 14 (8ಎ, 6X1)
ಇತರೆ (ವೈಡ್ 2) 2
ವಿಕೆಟ್ ಪತನ: 1–68 (ಕೆ.ಎಲ್. ರಾಹುಲ್, 9.2)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 2–0–14–0, ಪ್ಯಾಟ್ ಕಮಿನ್ಸ್ 4–0–33–0, ಆ್ಯಷ್ಟನ್ ಅಗರ್ 2–0–14–1, ಆ್ಯಡಂ ಜಂಪಾ 3–0–29–0, ಕೇನ್ ರಿಚರ್ಡ್ಸನ್ 1.5–0–20–0, ಮಾರ್ಕಸ್ ಸ್ಟೊಯಿನಿಸ್ 2–0–16–0, ಮಿಚೆಲ್ ಮಾರ್ಷ್ 2–0–17–0, ಗ್ಲೆನ್ ಮ್ಯಾಕ್ಸ್‌ವೆಲ್ 1–0–10–0

ಫಲಿತಾಂಶ: ಭಾರತಕ್ಕೆ 8 ವಿಕೆಟ್‌ಗಳ ಗೆಲುವು

ವಿರಾಟ್ ಬೌಲಿಂಗ್



ದುಬೈ(ಪಿಟಿಐ): ಹಾರ್ದಿಕ್ ಪಾಂಡ್ಯ ಫಿಟ್‌ನೆಸ್ ಮತ್ತು ಫಾರ್ಮ್ ಸಮಸ್ಯೆಯಿಂದಾಗಿ ಆರನೇ ಬೌಲರ್ ಹುಡುಕಾಟದಲ್ಲಿದ್ದ ಭಾರತ ತಂಡಕ್ಕೆ ವಿರಾಟ್ ಕೊಹ್ಲಿ ಪರಿಹಾರ ಕೊಟ್ಟಿದ್ದಾರೆ!

ಬುಧವಾರ ನಡೆದ ಆಸ್ಟ್ರೇಲಿಯಾ ಎದುರಿನ ಅಭ್ಯಾಸ ಪಂದ್ಯದಲ್ಲಿ ವಿರಾಟ್ ಬೌಲಿಂಗ್ ಮಾಡಿದರು. ವಿರಾಟ್ ಪಂದ್ಯಗಳಲ್ಲಿ ಬೌಲಿಂಗ್ ಮಾಡುವುದು ಅಪರೂಪ. ಇಲ್ಲಿ 2 ಓವರ್ ಬೌಲಿಂಗ್ ಮಾಡಿ, 12 ರನ್ ಕೊಟ್ಟರು. ವಿಕೆಟ್ ಗಳಿಸಲಿಲ್ಲ. ಪಂದ್ಯದ ಆರಂಭಕ್ಕೂ ಮುನ್ನ ವಿರಾಟ್ ವಿಶ್ರಾಂತಿ ಪಡೆಯುತ್ತಾರೆನ್ನಲಾಗಿತ್ತು. ಆದ್ದರಿಂದ ರೋಹಿತ್ ಶರ್ಮಾ ನಾಯಕತ್ವ ವಹಿಸಿದ್ದರು. ತಂಡ ಫೀಲ್ಡಿಂಗ್ ಮಾಡುವಾಗ ಕಣಕ್ಕಿಳಿದ ವಿರಾಟ್, ಬೌಲಿಂಗ್ ಮಾಡಿದರು.

ಕರ್ನಾಟಕ ತಂಡಕ್ಕೆ ಮನೀಷ್ ನಾಯಕ

ಬೆಂಗಳೂರು: ಮನೀಷ್ ಪಾಂಡೆ ಅವರು ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸುವರು ಎಂದು ರಾಜ್ಯ ಕ್ರಿಕೆಟ್ ಸಂಸ್ಥೆ ಕಾರ್ಯದರ್ಶಿ ಸಂತೋಷ್ ಮೆನನ್ ತಿಳಿಸಿದ್ದಾರೆ.

ತಂಡ: ಮನೀಷ್ ಪಾಂಡೆ (ನಾಯಕ), ಮಯಂಕ್ ಅಗರವಾಲ್, ದೇವದತ್ತ ಪಡಿಕ್ಕಲ್, ಕೆ.ವಿ. ಸಿದ್ಧಾರ್ಥ್, ರೋಹನ್ ಕದಂ, ಅನಿರುದ್ಧ ಜೋಶಿ, ಅಭಿನವ್ ಮನೋಹರ್, ಕರುಣ್ ನಾಯರ್, ಬಿ.ಆರ್. ಶರತ್ (ವಿಕೆಟ್‌ಕೀಪರ್), ನಿಹಾಲ್ ಉಲ್ಲಾಳ (ವಿಕೆಟ್‌ಕೀಪರ್), ಶ್ರೇಯಸ್ ಗೋಪಾಲ್, ಕೆ. ಗೌತಮ್ , ಜೆ.ಸುಚಿತ್, ಪ್ರವೀಣ ದುಬೆ, ಕೆ.ಸಿ. ಕಾರ್ಯಪ್ಪ, ಪ್ರಸಿದ್ಧ ಕೃಷ್ಣ, ಪ್ರತೀಕ್ ಜೈನ್, ವಿ. ವೈಶಾಖ, ಎಂ.ಬಿ. ದರ್ಶನ್, ವಿದ್ಯಾಧರ್ ಪಾಟೀಲ, ಯರೇಗೌಡ (ಮುಖ್ಯ ಕೋಚ್), ಎಸ್ ಅರವಿಂದ್ (ಬೌಲಿಂಗ್ ಕೋಚ್), ದೀಪಕ್ ಚೌಗುಲೆ (ಫೀಲ್ಡಿಂಗ್ ಕೋಚ್), ಜಾಬ ಪ್ರಭು (ಫಿಸಿಯೊ), ಪಿ. ವೃಷಭ್ (ಸಹಾಯಕ ಫಿಸಿಯೊ), ಎ.ಟಿ. ರಾಜಮಣಿ ಪ್ರಭು (ಸ್ಟ್ರೆಂಥ್–ಕಂಡಿಷನಿಂಗ್), ಅನುತೋಷ್ ಪೋಳ (ಮ್ಯಾನೇಜರ್).

ರಾಷ್ಟ್ರೀಯ ಜೂನಿಯರ್, ಸಬ್‌ಜೂನಿಯರ್ ಈಜು ಚಾಂಪಿಯನ್‌ಷಿಪ್

ರಿಧಿಮಾ ದಾಖಲೆ; ಕರ್ನಾಟಕ ಮೇಲುಗೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಸಬ್ ಜೂನಿಯರ್ ಮತ್ತು ಜೂನಿಯರ್ ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಬುಧವಾರ ಕರ್ನಾಟಕ ಮೇಲುಗೈ ಸಾಧಿಸಿತು. ಸದ್ಯ 34 ಚಿನ್ನ ಸೇರಿ ಒಟ್ಟು 72 ಪದಕಗಳನ್ನು ಗೆದ್ದ ರಾಜ್ಯ ತಂಡದವರು ಪದಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ.

ಬಸವನಗುಡಿ ಈಜು ಕೇಂದ್ರದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ರಿಧಿಮಾ ವೀರೇಂದ್ರ ಕುಮಾರ್ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್ (ಒಂದನೇ ಗುಂಪು) ವಿಭಾಗದಲ್ಲಿ ನೂತನ ದಾಖಲೆಯೊಂದಿಗೆ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. 1 ನಿಮಿಷ 4.87 ಸೆಕೆಂಡುಗಳಲ್ಲಿ ಗುರಿ ತಲುಪಿದ ಅವರು, ಒಲಿಂಪಿಯನ್, ಗುಜರಾತ್‌ನ ಮಾನಾ ಪಟೇಲ್ (1:05.30) 2014ರಲ್ಲಿ ನಿರ್ಮಿಸಿದ್ದ ದಾಖಲೆ ಮೀರಿದರು.

ಬಾಲಕರ 100 ಮೀ. ಬಟರ್‌ಫ್ಲೈ ವಿಭಾಗದಲ್ಲಿ ಕರ್ನಾಟಕದ ಸಂಭವ್ ಆರ್. ಚಿನ್ನ ಗಳಿಸಿದರು.

ರಾಜ್ಯದ ಜಾಸ್ ಸಿಂಗ್ ಬಾಲಕರ ಐದನೇ ಗುಂಪಿನ 100 ಮೀ. ಫ್ರೀಸ್ಟೈಲ್‌ನಲ್ಲಿ ಅಗ್ರಸ್ಥಾನ ಪಡೆಯುವುದರೊಂದಿಗೆ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕನೇ ವೈಯಕ್ತಿಕ ಚಿನ್ನ ತಮ್ಮದಾಗಿಸಿಕೊಂಡರು.

ಎರಡನೇ ದಿನದ ಫಲಿತಾಂಶಗಳು: ಬಾಲಕರು: 400 ಮೀ. ಫ್ರೀಸ್ಟೈಲ್: ಒಂದನೇ ಗುಂಪು: ಅನೀಶ್ ಎಸ್. ಗೌಡ–1, ಕಾಲ: 4:00.11 (ನೂತನ ದಾಖಲೆ), ಶೋನ್ ಗಂಗೂಲಿ–2 (ಇಬ್ಬರೂ ಕರ್ನಾಟಕ), ವೇದಾಂತ್ ಮಾಧವನ್ (ಮಹಾರಾಷ್ಟ್ರ)–3 *ಹಿಂದಿನ ದಾಖಲೆ: ಗುಜರಾತ್‌ನ ಆರ್ಯನ್ ನೆಹ್ರಾ (4:00.91, 2019) ಹೆಸರಿನಲ್ಲಿತ್ತು. ಮೂರನೇ ಗುಂಪು: ಯಜ್ಞ ಸಾಯಿ ಎಂ (ಆಂಧ್ರಪ್ರದೇಶ)–1 ಕಾಲ: 4:59.32, ಯಶಸ್ವಿ ನ್ಯೂನ್ (ತೆಲಂಗಾಣ)–2, ರಕ್ಷಣ್ ಪಿ. (ಕರ್ನಾಟಕ)–3. 200 ಮೀ. ಬಟರ್‌ಫ್ಲೈ: ಎರಡನೇ ಗುಂಪು: ದೇವ ಗಣೇಶ್ ಎನ್ (ಆಂಧ್ರಪ್ರದೇಶ)–1 ಕಾಲ: 2:17.90, ನಿರಂಜನ್ ಕಾರ್ತಿಕ್ ಬಿ. (ಕರ್ನಾಟಕ)–2, ಆರುಷ್ ಜಲಾ (ಗುಜರಾತ್)–3. 200 ಮೀ. ವೈಯಕ್ತಿಕ ಮೆಡ್ಲೆ: ನಾಲ್ಕನೇ ಗುಂಪು: ಕಬಿಲನ್ ಟಿ. (ತಮಿಳುನಾಡು)–1, ಕಾಲ: 2:46.94, ಅಥರ್ವ್ ಪಾಲ್ ಸಿಂಗ್ ರಾಥೋಡ್ (ಕರ್ನಾಟಕ)–2, ವಿಹಾನ್ ಚತುರ್ವೇದಿ (ಮಹಾರಾಷ್ಟ್ರ)–3. 200 ಮೀ. ಬ್ಯಾಕ್‌ಸ್ಟ್ರೋಕ್: ಒಂದನೇ ಗುಂಪು: ಉತ್ಕರ್ಷ ಪಾಟೀಲ್ (ಕರ್ನಾಟಕ)–1, ಕಾಲ:2:06.75, ದೇವಾಂಶ್ ಪರಮಾರ್ (ಗುಜ4. ರಾತ್)–2, ಸಾಯಿ ನಿಹಾರ್ ಬಿಕ್ಕಿನಾ (ತೆಲಂಗಾಣ)–3. 100 ಮೀ. ಬ್ಯಾಕ್‌ಸ್ಟ್ರೋಕ್: ಎರಡನೇ ಗುಂಪು: ಉತ್ಕರ್ಷ ಗೋರ್ (ಮಹಾರಾಷ್ಟ್ರ)–1, ಕಾಲ: 1:02.95, ರಿಷಭ್ ದಾಸ್ (ಮಹಾರಾಷ್ಟ್ರ)–2, ಸುಹಾಸ್ ಪ್ರೀತಂ (ತೆಲಂಗಾಣ)–3. 100 ಮೀ. ಬಟರ್‌ಫ್ಲೈ: ಮೂರನೇ ಗುಂಪು: ಅಕ್ಷಜ್ ಠಾಕೂರಿಯಾ (ಕರ್ನಾಟಕ)–1, ಕಾಲ:1:06.55, ನಿತೀಶ್ ಎಂ.ಎಸ್. (ತಮಿಳುನಾಡು)–2, ದೇವಜೀತ್ ದೆಂಕಿ (ಬಂಗಾಳ)–3. 100 ಮೀ. ಫ್ರೀಸ್ಟೈಲ್: ನಾಲ್ಕನೇ ಗುಂಪು: ಶರಣ್ ಶ್ರೀಧರ್ (ಕರ್ನಾಟಕ)–1, ಕಾಲ:1:06.85, ಕಬಿಲನ್ (ತಮಿಳುನಾಡು)–2, ಇಶಾನ್ ಘೋಷ್ (ಬಂಗಾಳ)–3. 100 ಮೀ. ಫ್ರೀಸ್ಟೈಲ್:ಐದನೇ ಗುಂಪು: ಜಾಸ್ ಸಿಂಗ್ (ಕರ್ನಾಟಕ)–1, ಕಾಲ: 1:09.47, ಮೋನಿಶ್ ನಾಯ್ಡು ಪಿ. (ತಮಿಳುನಾಡು)–2, ಎಸ್. ಸೋಮಶೇಖರ್ (ಕರ್ನಾಟಕ)–3. 100 ಮೀ. ಬಟರ್‌ಫ್ಲೈ: ಒಂದನೇ ಗುಂಪು: ಸಂಭವ್ ಆರ್. (ಕರ್ನಾಟಕ)–1, ಕಾಲ: 55.87, ವಿಕ್ರಂ ಚಾಂಗ್ಮಯಿ (ಅಸ್ಸಾಂ)–2, ಹರ್ಷ ಸರೋಹಾ (ಹರಿಯಾಣ)–3. 50 ಮೀ. ಬ್ರೆಸ್ಟ್‌ಸ್ಟ್ರೋಕ್: ಎರಡನೇ ಗುಂಪು: ಅಭಿಷೇಕ್ ಕನೌಜಿಯಾ (ಎಸ್‌ಎಸ್‌ಬಿಸಿ)–1, ಕಾಲ: 32.98, ಸೂರ್ಯ ಜೋಯಪ್ಪ. ಓ. ಆರ್ (ಕರ್ನಾಟಕ)–2, ಭಾಗ್ಯ ಗೆಹ್ಲಾವುತ್ (ದೆಹಲಿ)–3. 4X100 ಮೀ. ಮೆಡ್ಲೆ: ಒಂದನೇ ಗುಂಪು: ಕರ್ನಾಟಕ–1, ಕಾಲ: 3:56.35 (ನೂತನ ದಾಖಲೆ), ಬಂಗಾಳ–2, ತಮಿಳುನಾಡು–3 (4:00.76: ಹಿಂದಿನ ದಾಖಲೆ ಕರ್ನಾಟಕದ ಹೆಸರಿನಲ್ಲೇ ಇತ್ತು).

ಬಾಲಕಿಯರು: 400 ಮೀ. ಫ್ರೀಸ್ಟೈಲ್: ಒಂದನೇ ಗುಂಪು: ಅನ್ನಾ ವಾಲಾ (ಮಹಾರಾಷ್ಟ್ರ)–1, ಕಾಲ: 4:34.54, ವೃತ್ತಿ ಅಗರವಾಲ್ (ತೆಲಂಗಾಣ)–2, ಶಕ್ತಿ ಬಾಲಕೃಷ್ಣನ್ (ತಮಿಳುನಾಡು)–3. 200 ಮೀ. ಬಟರ್‌ಫ್ಲೈ: ಎರಡನೇ ಗುಂಪು: ಹರ್ಷಿಕಾ ರಾಮಚಂದ್ರನ್ (ಕರ್ನಾಟಕ)–1, ಕಾಲ: 2:26.56, ರಿತಿಕಾ ಬಿ.ಎಂ (ಕರ್ನಾಟಕ)–2, ಧೃತಿ ಅಗರವಾಲ್ (ಮಹಾರಾಷ್ಟ್ರ)–3. 200 ಮೀ. ವೈಯಕ್ತಿಕ ಮೆಡ್ಲೆ: ನಾಲ್ಕನೇ ಗುಂಪು: ಅನ್ವೇಷಾ ಖಾನಿಕರ್ (ಅಸ್ಸಾಂ)–1, ಕಾಲ: 3:00.85, ಸಾನ್ವಿ ದೇಶ್ವಾಲ್ (ಮಹಾರಾಷ್ಟ್ರ)–2, ಅನ್ನಿಕಾ ದೆಬೊರಾ (ತೆಲಂಗಾಣ)–3. 100 ಮೀ. ಬ್ಯಾಕ್‌ಸ್ಟ್ರೋಕ್: ಎರಡನೇ ಗುಂಪು: ರಿಧಿಮಾ ವೀರೇಂದ್ರ ಕುಮಾರ್ (ಕರ್ನಾಟಕ)–2, ಕಾಲ: 1:04.87 (ನೂತನ ದಾಖಲೆ), ಶಾಲಿನಿ ದೀಕ್ಷಿತ್ (ಕರ್ನಾಟಕ)–2, ನಿತ್ಯಾ ಸಾಗಿ (ತೆಲಂಗಾಣ)–3, (1:05.30, ಈ ಹಿಂದಿನ ದಾಖಲೆ ಗುಜರಾತ್‌ನ ಮಾನಾ ಪಟೇಲ್ ಹೆಸರಿನಲ್ಲಿತ್ತು). 100 ಮೀ. ಬಟರ್‌ಫ್ಲೈ: ಮೂರನೇ ಗುಂಪು: ತನಿಶಾ ಗುಪ್ತಾ (ಕರ್ನಾಟಕ)–1, ಕಾಲ: 1:10.12, ಸಾರಾಕ್ಷಿ ದಂಗತ್ (ಮಹಾರಾಷ್ಟ್ರ)–2, ಅನನ್ಯಾ ಎ.ಜೆ. (ಕರ್ನಾಟಕ)–3. 200 ಮೀ. ಬ್ಯಾಕ್‌ಸ್ಟ್ರೋಕ್: ಒಂದನೇ ಗುಂಪು: ಸಂಜನಾ ಪ್ರಭುಗಾಂವಕರ್ (ಗೋವಾ)–1, ಕಾಲ: 2:28.71, ಪಲಕ್ ಧಾಮಿ (ಮಹಾರಾಷ್ಟ್ರ)–2, ಪಲಕ್ ಜೋಶಿ (ಮಹಾರಾಷ್ಟ್ರ)–3. 100 ಮೀ. ಫ್ರೀಸ್ಟೈಲ್: ನಾಲ್ಕನೇ ಗುಂಪು: ಅಲಿಸ್ಸಾ ಸ್ವೀಡಲ್ ರೆಗೊ (ಕರ್ನಾಟಕ)–1, ಕಾಲ: 1:08.72, ತ್ರಿಶಾ ಸಿಂಧು (ಕರ್ನಾಟಕ)–2, ಜೋಯಾ ಜನ್ನತ್ (ಬಂಗಾಳ)–3. 100 ಮೀ. ಫ್ರೀಸ್ಟೈಲ್: ಐದನೇ ಗುಂಪು: ಲಾಸ್ಯ ಶ್ರೀ ಕೆ. (ಆಂಧ್ರಪ್ರದೇಶ)–1, ಕಾಲ: 1:12.46, ಧೃತಿ ಕರಿಬಸವೇಶ್ವರ (ಕರ್ನಾಟಕ)–2, ಅನುಷ್ಕಾ ವಿಜಾಪುರ (ಮಹಾರಾಷ್ಟ್ರ)–3. 100 ಮೀ. ಬಟರ್‌ಫ್ಲೈ: ಒಂದನೇ ಗುಂಪು: ಆಸ್ಥಾ ಚೌಧರಿ (ಅಸ್ಸಾಂ)–1 ಕಾಲ: 1:02.71 (ನೂತನ ದಾಖಲೆ), ಅಪೇಕ್ಷಾ ಫರ್ನಾಂಡಿಸ್ (ಮಹಾರಾಷ್ಟ್ರ)–2, ನೀನಾ ವೆಂಕಟೇಶ್ (ಕರ್ನಾಟಕ)–3. 50 ಮೀ. ಬ್ರೆಸ್ಟ್‌ಸ್ಟ್ರೋಕ್: ಎರಡನೇ ಗುಂಪು: ವಿಹಿತಾ ನಯಮಾ (ಕರ್ನಾಟಕ)–1, ಕಾಲ: 36.10, ಮಾನವಿ ವರ್ಮಾ (ಕರ್ನಾಟಕ)–2, ವೇನಿಕಾ ಪಾರಿಖ್ (ಗುಜರಾತ್)–3. 4X100 ಮೀ. ಮೆಡ್ಲೆ: ಕರ್ನಾಟಕ–1, ಕಾಲ:4:32.69 (ನೂತನ ದಾಖಲೆ), ಮಹಾರಾಷ್ಟ್ರ–2, ಅಸ್ಸಾಂ–3.



ದಾಖಲೆ ಬರೆದ ರಿಧಿಮಾ ವೀರೇಂದ್ರಕುಮಾರ್– ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್



ಅನೀಶ್ ಗೌಡ ಗುರಿಯತ್ತ ಮುನ್ನುಗ್ಗಿದರು– ಪ್ರಜಾವಾಣಿ ಚಿತ್ರ

ಟ್ವೀಟ್ ಮೂಲಕ ಧನ್ಯವಾದ ಸಲ್ಲಿಸಿದ ಆಡಳಿತ

ಅಂದವಾದ ಲೋಗೊ ಇರುವ ಪೋಷಾಕು ಮತ್ತು ವಿನ್ಯಾಸಗೊಳಿಸಿದ ಬಾಲಕಿಯ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ.

ಸ್ಕಾಟ್ಲೆಂಡ್ ಪೋಷಾಕಿಗೆ 12ರ ಪೋರಿಯ ವಿನ್ಯಾಸ

ದುಬೈ (ಪಿಟಿಐ): ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪ್ರಾಥಮಿಕ ಸುತ್ತಿನಲ್ಲಿ ಎರಡು ಪಂದ್ಯಗಳನ್ನು ಗೆದ್ದಿರುವ ಸ್ಕಾಟ್ಲೆಂಡ್ ತಂಡದ ಆಟಗಾರರ ಪೋಷಾಕನ್ನು ವಿನ್ಯಾಸಗೊಳಿಸಿದ್ದು 12 ವರ್ಷದ ಬಾಲಕಿ ರೆಬೆಕಾ ಡೌನಿ.



ರೆಬೆಕಾ ಡೌನಿ –ಟ್ವಿಟರ್ ಚಿತ್ರ

ಸ್ಕಾಟ್ಲೆಂಡ್ ತಂಡದ ಆಟಗಾರರು ನೇರಳೆ ಬಣ್ಣದ ಪೋಷಾಕು ಧರಿಸುತ್ತಿದ್ದಾರೆ. ರಾಷ್ಟ್ರೀಯ ಲಾಂಛನದಲ್ಲಿರುವ ವರ್ಣವನ್ನು ಪೋಷಾಕಿಗೆ ಬಳಸಲಾಗಿದೆ. ಅಂದವಾಗಿ ಲೋಗೊ ಕೂಡ ಇರುವ ಪೋಷಾಕು ಮತ್ತು ವಿನ್ಯಾಸ ಮಾಡಿದ ಬಾಲಕಿಯ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ.

‘ರೆಬೆಕಾ ಡೌನಿ ಹೆಡಿಂಗ್‌ಟನ್‌ನವರು. ತಾವು ವಿನ್ಯಾಸಗೊಳಿಸಿದ ಪೋಷಾಕು ಧರಿಸಿ ಬಾಂಗ್ಲಾ ವಿರುದ್ಧ ಆಡಿದ ತಂಡವನ್ನು ಟಿವಿಯಲ್ಲಿ ವೀಕ್ಷಿಸಿದ್ದಾರೆ. ಅವರಿಗೆ ನಮ್ಮ ಧನ್ಯವಾದಗಳು’ ಎಂದು ಕ್ರಿಕೆಟ್ ಸ್ಕಾಟ್ಲೆಂಡ್ ಟ್ವೀಟ್ ಮಾಡಿದೆ.


ಸ್ಕಾಟ್ಲೆಂಡ್ ತಂಡವು ಮೊದಲ ಪಂದ್ಯದಲ್ಲಿ ಬಾಂಗ್ಲಾ ವಿರುದ್ಧ ಜಯಿಸಿತ್ತು.

ಒಮನ್‌ಗೆ ಸ್ಕಾಟ್ಲೆಂಡ್ ಎದುರಾಳಿ

ಗುರುವಾರದ ಪಂದ್ಯಗಳಲ್ಲಿ ಬಾಂಗ್ಲಾದೇಶ ಮತ್ತು ಪಪುವ ನ್ಯೂಗಿನಿ, ಒಮನ್ ಮತ್ತು ಸ್ಕಾಟ್ಲೆಂಡ್ ತಂಡಗಳು ಸೆಣಸಲಿವೆ. ಬಾಂಗ್ಲಾ–ಪಿಎನ್‌ಜಿ ಪಂದ್ಯ ಮಧ್ಯಾಹ್ನ 3.30ಕ್ಕೆ ನಡೆಯಲಿದೆ. ಮತ್ತೊಂದು ಪಂದ್ಯ ರಾತ್ರಿ 7.30ಕ್ಕೆ ಆರಂಭವಾಗಲಿದೆ.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ನಿಸಾಂಕಾ, ಹಸರಂಗಾ ಅರ್ಧಶತಕ

ಅಬುಧಾಬಿ (ಪಿಟಿಐ): ಪಥುಮ್ ನಿಸಾಂಕ (61; 47ಎ, 6ಬೌಂ, 1ಸಿ) ಮತ್ತು ವಾನಿಂದು ಹಸರಂಗಾ (71, 47ಎ, 10ಬೌಂ, 1ಸಿ) ಅರ್ಧಶತಕ ಗಳಿಸಿ ಮಿಂಚಿದರು. ಅವರ ಅಮೋಘ ಆಟದ ಬಲದಿಂದ ಶ್ರೀಲಂಕಾ ತಂಡ ಟಿ20 ವಿಶ್ವಕಪ್ ಟೂರ್ನಿಯ ಪ್ರಾಥಮಿಕ ಸುತ್ತಿನ ಪಂದ್ಯದಲ್ಲಿ ಐರ್ಲೆಂಡ್ ವಿರುದ್ಧ 70 ರನ್‌ಗಳ ಜಯ ದಾಖಲಿಸಿತು.



ವಾಣಿಂದು ಹಸರಂಗಾ

ಬುಧವಾರ ರಾತ್ರಿ 172 ರನ್‌ಗಳ ಗುರಿ ಬೆನ್ನತ್ತಿದ ಐರ್ಲೆಂಡ್ 18.3 ಓವರ್‌ಗಳಲ್ಲಿ 101 ರನ್‌ಗಳಿಗೆ ಪತನ ಕಂಡಿತು. ಆ್ಯಂಡಿ ಬಲ್‌ಬಿರ್ನಿ (41; 39 ಎ, 2 ಬೌಂ, 2 ಸಿ) ಮತ್ತು ಕರ್ಟಿಸ್ ಕ್ಯಾಂಫರ್ (24) ಮಾತ್ರ ಸ್ವಲ್ಪ ಪ್ರತಿರೋಧ ಒಡ್ಡಿದರು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರ್‌ಗಳಲ್ಲಿ 7ಕ್ಕೆ 171 (ಪಥುಮ್ ನಿಸಾಂಕ 61, ವಾನಿಂದು ಹಸರಂಗಾ 71, ದಸುನ್ ಶನಕ ಔಟಾಗದೆ 21; ಪಾಲ್ ಸ್ಟರ್ಲಿಂಗ್ 4ಕ್ಕೆ1, ಜೊಶುವಾ ಲಿಟಲ್ 23ಕ್ಕೆ4, ಮಾರ್ಕ್ ಅದೇರ್ 35ಕ್ಕೆ2); **ಐರ್ಲೆಂಡ್:** 18.3 ಓವರ್‌ಗಳಲ್ಲಿ 101ಕ್ಕೆ ಆಲೌಟ್ (ಆ್ಯಂಡಿ ಬಲ್‌ಬಿರ್ನಿ 41, ಕರ್ಟಿಸ್ ಕ್ಯಾಂಫರ್ 24; ಚಮಿಕ ಕರುಣರತ್ನೆ 27ಕ್ಕೆ2, ದುಷ್ಮಂತ ಚಮೀರ 16ಕ್ಕೆ1, ಮಹೀಶ್ ತೀಕ್ಷಣ 17ಕ್ಕೆ3, ಲಾಹಿರು ಕುಮಾರ 22ಕ್ಕೆ2, ಹಸರಂಗ 12ಕ್ಕೆ1). ಫಲಿತಾಂಶ: ಶ್ರೀಲಂಕಾಕ್ಕೆ 70 ರನ್‌ಗಳ ಗೆಲುವು; ಪಂದ್ಯಶ್ರೇಷ್ಠ: ಹಸರಂಗ.

ವೀಸ್ ಭರ್ಜರಿ ಬ್ಯಾಟಿಂಗ್

ಅಬುಧಾಬಿ (ಪಿಟಿಐ): ಸಂಕಷ್ಟದಲ್ಲಿದ್ದ ತಂಡವನ್ನು ಅಮೋಘ ಜೊತೆಯಾಟದ ಮೂಲಕ ರಕ್ಷಿಸಿದ ಡೇವಿಡ್ ವೀಸ್, ವಿಶ್ವಕಪ್ ಪ್ರಾಥಮಿಕ ಹಂತದ ಪಂದ್ಯ ದಲ್ಲಿ ನಿಮೀಬಿಯಾಗೆ ಜಯ ಗಳಿಸಿಕೊಟ್ಟರು.

ಬುಧವಾರ ನಡೆದ ‘ಎ’ ಗುಂಪಿನ ಪಂದ್ಯದಲ್ಲಿ ನೆದರ್ಲೆಂಡ್ಸ್ ವಿರುದ್ಧ ನಮೀಬಿಯ 6 ವಿಕೆಟ್‌ಗಳಿಂದ ಗೆದ್ದಿತು.

165 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ನಮೀಬಿಯ 8.2 ಓವರ್ ಆಗುವಷ್ಟರಲ್ಲಿ 52 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಈ ಸಂದರ್ಭದಲ್ಲಿ ನಾಯಕ ಜೆರಾರ್ಡ್ ಎರಾಸ್ಮಸ್ ಜೊತೆಗೂಡಿದ ಡೇವಿಡ್ ವೀಸ್ (ಔಟಾಗದೆ 66; 40 ಎಸೆತ, 4 ಬೌಂಡರಿ, 5 ಸಿಕ್ಸರ್) ನಾಲ್ಕನೇ ವಿಕೆಟ್‌ಗೆ 93 ರನ್ ಸೇರಿಸಿದರು. ಐದನೇ ವಿಕೆಟ್‌ಗೆ ಜೆ.ಜೆ.ಸ್ಮಿತ್ ಜೊತೆಗೆ 21 ರನ್ ಸೇರಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಟಿ20 ಕ್ರಿಕೆಟ್‌ನಲ್ಲಿ ಚೊಚ್ಚಲ ಅರ್ಧಶತಕ ಗಳಿಸಿದ ವೀಸ್ ಪಂದ್ಯದ ಗತಿಯನ್ನೇ ಬದಲಿಸಿದರು. ನಮೀ ಬಿಯ ವಿಶ್ವಕಪ್‌ನಲ್ಲಿ ಮೊದಲ ಬಾರಿ ಆಡುತ್ತಿದೆ.

ಸ್ಪಿನ್ ಮತ್ತು ವೇಗದ ಬೌಲರ್‌ಗಳನ್ನು ಸತತವಾಗಿ ಕಾಡಿದ 36 ವರ್ಷದ ವೀಸ್ ಎದುರಾಳಿ ತಂಡದ ನಾಯಕ ಪೀಟರ್ ಸೀಲರ್ ಎಸೆತವನ್ನು ಸಿಕ್ಸರ್‌ಗೆ ಎತ್ತಿ 50 ರನ್ ಪೂರೈಸಿದರು. ಇದಕ್ಕೆ ಅವರು ತೆಗೆದುಕೊಂಡದ್ದು 29 ಎಸೆತ ಮಾತ್ರ. 22 ಎಸೆತಗಳಲ್ಲಿ 32 ರನ್ ಸಿಡಿಸಿದ ಎರಾಸ್ಮಸ್ ನಾಲ್ಕು ಬೌಂಡರಿ ಮತ್ತು ಒಂದು ಸಿಕ್ಸರ್ ಗಳಿಸಿದರು. ಈ ಗೆಲುವಿನ ಮೂಲಕ ನಮೀಬಿಯದ ಸೂಪರ್ 12 ಕನಸು ಜೀವಂತವಾಗಿ ಉಳಿದಿದೆ.

ಮಿಂಚಿದ ಒಡೌಡ್: ಟಾಸ್ ಗೆದ್ದ ನಮೀಬಿಯ ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. ಮ್ಯಾಕ್ಸ್ ಒಡೌಡ್ (70; 56 ಎ, 6 ಬೌಂ, 1 ಸಿ) ಸತತ ಎರಡನೇ ಅರ್ಧಶತಕ ಗಳಿಸಿ ಮಿಂಚಿದರು. ಕಾಲನ್ ಆಕ್‌ಮನ್ (35; 32ಎ 1 ಬೌಂ, 1 ಸಿ) ಮತ್ತು ಸ್ಕಾಟ್ ಎಡ್ವರ್ಡ್ಸ್ (21; 11ಎ, 2 ಬೌಂ, 1 ಸಿ) ಅವರಿಂದ ಒಡೌಡ್ ಅವರಿಗೆ ಉತ್ತಮ ಸಹಕಾರ ಲಭಿಸಿತು. ಈ ಮೂವರ ಬ್ಯಾಟಿಂಗ್‌ನಿಂದಾಗಿ ತಂಡ 4 ವಿಕೆಟ್‌ಗಳಿಗೆ 164 ರನ್ ಗಳಿಸಿತು.



ಡೇವಿಡ್ ವೀಸ್ –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ನೆದರ್ಲೆಂಡ್ಸ್: 20 ಓವರ್‌ಗಳಲ್ಲಿ 4ಕ್ಕೆ 164 (ಮ್ಯಾಕ್ಸ್ ಓಡೌನ್ 70, ಕಾಲಿನ್ ಅಕರ್‌ಮನ್ 37, ಸ್ಕಾಟ್ ಎಡ್ವರ್ಡ್ಸ್ 21; ಡೇವಿಡ್ ವೀಸ್ 32ಕ್ಕೆ1, ಜಾನ್ ಫ್ರೈಲಿಂಕ್ 36ಕ್ಕೆ2); **ನಮಿಬಿಯಾ:** 19 ಓವರ್‌ಗಳಲ್ಲಿ 4ಕ್ಕೆ 166 (ಸ್ಟೀಫನ್ ಬಾರ್ಡ್ 19, ಜೇನ್ ಗ್ರೀನ್ 15, ಜೆರಾರ್ಡ್ ಎರಾಸ್ಮಸ್ 32, ಡೇವಿಡ್ ವೀಸ್ ಔಟಾಗದೆ 66, ಜೆ.ಜೆ. ಸ್ಮಿತ್ ಔಟಾಗದೆ 14; ಫ್ರೆಡ್ರಿಕ್ಸ್ ಕ್ಲಾಸೆನ್ 14ಕ್ಕೆ1, ಕಾಲಿನ್ ಅಕರ್‌ಮನ್ 32ಕ್ಕೆ1, ಟಿಮ್ ವ್ಯಾನ್ 32ಕ್ಕೆ1, ಪೀಟರ್ ಸೀಲರ್ 8ಕ್ಕೆ1). ಫಲಿತಾಂಶ: ನಮಿಬಿಯಾಗೆ 6 ವಿಕೆಟ್ ಜಯ. ಪಂದ್ಯಶ್ರೇಷ್ಠ: ಡೇವಿಡ್ ವೀಸ್.

ರಾಜ್ಯ ರೋಡ್ ಸೈಕ್ಲಿಂಗ್: ವಿಜಯಪುರ, ಬಾಗಲಕೋಟೆ ಸೈಕ್ಲಿಸ್ಟ್‌ಗಳ ಮಿಂಚು

ಗಮನ ಸೆಳೆದ ಸಹನಾ, ಸೌಮ್ಯ

ಪ್ರಜಾವಾಣಿ ವಾರ್ತೆ

ವಿಜಯಪುರ: ಸ್ಥಳೀಯ ಪ್ರತಿಭೆಗಳಾದ ಸಹನಾ ಕುಡಿನೂರ ಹಾಗೂ ಸೌಮ್ಯ ಅಂತಾಪುರ ನಗರದಲ್ಲಿ ಬುಧವಾರ ಆರಂಭವಾದ ರಾಜ್ಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಗಮನ ಸೆಳೆದರು.

ಮಹಿಳೆಯರ 30 ಕಿ.ಮೀ ಮಾಸ್ ಸ್ಟಾರ್ಟ್ ಸ್ಪರ್ಧೆಯಲ್ಲಿ ವಿಜಯಪುರ ಜಿಲ್ಲೆಯ ಸಹನಾ ಕುಡಿಗನೂರ 56 ನಿಮಿಷ 48.00 ಸೆಕೆಂಡ್‌ನಲ್ಲಿ ಮೊದಲಿಗರಾಗಿ ಗುರಿ ತಲುಪಿದರು. ಬಾಗಲಕೋಟೆ ಜಿಲ್ಲೆಯ ದಾನಮ್ಮ ಚಿಚಖಂಡಿ (56:51.00ಸೆ.) ಮತ್ತು ವಿಜಯಪುರ ಕ್ರೀಡಾನಿಲಯದ ದಾನವ್ವ ಗುರವ (56:55.00ಸೆ.) ನಂತರದ ಎರಡು ಸ್ಥಾನಗಳನ್ನು ಪಡೆದರು.

ಮಹಿಳೆಯರ 15 ಕಿ.ಮೀ ವೈಯಕ್ತಿಕ ಟೈಂ ಟ್ರಯಲ್‌ನಲ್ಲಿ ವಿಜಯಪುರ ಕ್ರೀಡಾ ನಿಲಯದ ಸೌಮ್ಯ ಅಂತಾಪುರ (23:04.49ಸೆ.) ಪ್ರಥಮ ಸ್ಥಾನ ಪಡೆದರು. ಬಾಗಲಕೋಟೆ ಜಿಲ್ಲೆಯ ಸಾವಿತ್ರಿ ಹೆಬ್ಬಾಳಟ್ಟಿ (23:17.02ಸೆ) ದ್ವಿತೀಯ ಮತ್ತು ಕಾವೇರಿ ಮುರನಾಳ (23:18.07ಸೆ.) ಮೂರನೇ ಸ್ಥಾನ ಗಳಿಸಿದರು.



15 ಕಿ.ಮೀ ವೈಯಕ್ತಿಕ ಟೈಂ ಟ್ರಯಲ್ ಸ್ಪರ್ಧೆಯಲ್ಲಿ ಮೊದಲ ಮೂರು ಸ್ಥಾನ ಗಳಿಸಿದ ಚೈತ್ರಾ ಬೋರಗಿ, ಭಾವನಾ ಪಿ ಹಾಗೂ ಅಂಕಿತಾ ರಾಠೋಡ

ಮೊದಲ ದಿನದ ಫಲಿತಾಂಶ: ಬಾಲಕರ ಹಾಗೂ ಪುರುಷರ ವಿಭಾಗ: 30 ಕಿ.ಮೀ ವೈಯಕ್ತಿಕ ಟೈಂ ಟ್ರಯಲ್: ನವೀನ ಎಸ್. (ಬೆಂಗಳೂರು ಜಿಲ್ಲೆ; ಕಾಲ: 40:25.50 ಸೆ.)–1, ಸೋಮೇಶ (ಮೈಸೂರು ಜಿಲ್ಲೆ; 40:30.70ಸೆ.)–2, ಕಿರಣಕುಮಾರ ರಾಜು (ಬೆಂಗಳೂರು ಜಿಲ್ಲೆ; 40:48.97ಸೆ.)–3.

14 ವರ್ಷದೊಳಗಿನ 10 ಕಿ.ಮೀ ವೈಯಕ್ತಿಕ ಟೈಂ ಟ್ರಯಲ್: ಬೀರಪ್ಪ ನವಲಿ (17:24.69ಸೆ.)–1, ಅರವಿಂದ ರಾಠೋಡ (18:03.75ಸೆ.)–2, ತರುಣ ನಾಯಕ (ಮೂವರೂ ವಿಜಯಪುರ ಕ್ರೀಡಾನಿಲಯ; 18:15.14ಸೆ.)–3.

16 ವರ್ಷದೊಳಗಿನ 15 ಕಿ.ಮೀ ವೈಯಕ್ತಿಕ ಟೈಂ ಟ್ರಯಲ್: ಸುಜಲ್ ಜಾಧವ (ವಿಜಯಪುರ ಕ್ರೀಡಾ ನಿಲಯ; 19:49.95ಸೆ.)–1, ರಾಘವೇಂದ್ರ ವಂದಾಲ (ವಿಜಯಪುರ; 19:51.83ಸೆ)–2, ರಾಹುಲ್ ರಾಠೋಡ (ವಿಜಯಪುರ ಕ್ರೀಡಾ ನಿಲಯ; 20.08.55ಸೆ.)–3.

18 ವರ್ಷದೊಳಗಿನ ಬಾಲಕರ 15 ಕಿ.ಮೀ ವೈಯಕ್ತಿಕ ಟೈಂ ಟ್ರಯಲ್: ಉದಯ ಗುಳೇದ (ವಿಜಯಪುರ ಕ್ರೀಡಾನಿಲಯ; 19:45.49ಸೆ.)–1, ಪ್ರತಾಪ ಪಡಚಿ (19:59.18ಸೆ.)–2, ಮಲ್ಲಿಕಾರ್ಜುನ ಯಾದವಾಡ (ಬಾಗಲಕೋಟೆ ಜಿಲ್ಲೆ; 20:02.84ಸೆ.)–3.

23 ವರ್ಷದೊಳಗಿನ 30 ಕಿ.ಮೀ ವೈಯಕ್ತಿಕ ಟೈಂ ಟ್ರಯಲ್: ಜಿ.ಟಿ. ಗಗನರಡ್ಡಿ (ಬೆಂಗಳೂರು ಜಿಲ್ಲೆ; 39:34.50ಸೆ.)–1, ಅನಿಲ ಕಾಳಪ್ಪ ಗೋಳ (ವಿಜಯಪುರ ಕ್ರೀಡಾನಿಲಯ; 39:52.14ಸೆ.)–2, ಶ್ರೀಶೈಲ ವೀರಾಪುರ (40:03.24ಸೆ.)–3.

ಬಾಲಕಿಯರ ಹಾಗೂ ಮಹಿಳೆಯರ ವಿಭಾಗ: 14 ವರ್ಷದೊಳಗಿನ 10 ಕಿ.ಮೀ ವೈಯಕ್ತಿಕ ಟೈಂ ಟ್ರಯಲ್: ಆಯೀಶಾ ಮೋಮಿನ (ಬಾಗಲಕೋಟೆ ಜಿಲ್ಲೆ; 19:32.41ಸೆ.)–1, ಛಾಯಾ ನಾಗಶೆಟ್ಟಿ (ವಿಜಯಪುರ ಕ್ರೀಡಾ ನಿಲಯ; 20:08.04ಸೆ.)–2, ವಿದ್ಯಾ ಯಾದವಾಡ (ಬಾಗಲಕೋಟೆ ಜಿಲ್ಲೆ; 20:30.27ಸೆ.)–3.

16 ವರ್ಷದೊಳಗಿನ 10 ಕಿ.ಮೀ ವೈಯಕ್ತಿಕ ಟೈಂ ಟ್ರಯಲ್: ಪಾಯಲ್ ಚವ್ಹಾಣ (ವಿಜಯಪುರ ಕ್ರೀಡಾನಿಲಯ; 17:47.05)–1, ಅನುಪಮಾ ಗುಳೇದ (ಬಾಗಲಕೋಟೆ ಜಿಲ್ಲೆ; 17:56.16ಸೆ.)–2, ಅಕ್ಷತಾ ಬೂತನಾಳ (ವಿಜಯಪುರ ಜಿಲ್ಲೆ;18:26.77ಸೆ.)–3.

18 ವರ್ಷದೊಳಗಿನವರ 15 ಕಿ.ಮೀ ವೈಯಕ್ತಿಕ ಟೈಂ ಟ್ರಯಲ್: ಚೈತ್ರಾ ಬೋರ್ಜಿ (ಬಾಗಲಕೋಟೆ ಜಿಲ್ಲೆ; 22.39.12ಸೆ.)–1, ಭಾವನಾ ಪಾಟೀಲ (ಬಾಗಲಕೋಟೆ ಜಿಲ್ಲೆ; 24:04.62ಸೆ.)–2, ಅಂಕಿತಾ ರಾಠೋಡ (ವಿಜಯಪುರ ಜಿಲ್ಲೆ; 24.24.07ಸೆ)–3.

ಕ್ರಿಕೆಟ್: ಜೇಮ್ಸ್ ಪ್ಯಾಟಿನ್ಸನ್ ನಿವೃತ್ತಿ

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ವೇಗದ ಬೌಲರ್ ಜೇಮ್ಸ್ ಪ್ಯಾಟಿನ್ಸನ್ ಬುಧವಾರ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ.



ಜೇಮ್ಸ್ ಪ್ಯಾಟಿನ್ಸನ್

ಮುಂಬರುವ ಆ್ಯಷಸ್ ಸರಣಿಯಲ್ಲಿ ಅವರು ಫಿಟ್‌ನೆಸ್ ಇಲ್ಲದ ಕಾರಣ ತಂಡದಲ್ಲಿ ಸ್ಥಾನ ಪಡೆಯುವ ಕಡಿಮೆ ಇತ್ತೆನ್ನಲಾಗಿದೆ. 31 ವರ್ಷದ ಪ್ಯಾಟಿನ್ಸನ್ ಈಚೆಗಷ್ಟೇ ಮಂಡಿಗಾಯದಿಂದ ಬಳಲಿದ್ದರು.

ಅವರು 21 ಟೆಸ್ಟ್‌ಗಳಲ್ಲಿ 81 ವಿಕೆಟ್ ಮತ್ತು 15 ಅಂತರರಾಷ್ಟ್ರೀಯ ಏಕದಿನ ಪಂದ್ಯಗಳಲ್ಲಿ ಆಡಿ 16 ವಿಕೆಟ್ ಗಳಿಸಿದ್ದಾರೆ. ಅವರು 2011ರಲ್ಲಿ ಬ್ರಿಸ್ಬೇನ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಮೂಲಕ ಪದಾರ್ಪಣೆಮಾಡಿದ್ದರು.

‘ಆ್ಯಷಸ್ ಸರಣಿಯಲ್ಲಿ ಆಡುವ ಆಸೆಯಿತ್ತು. ಆದರೆ, ಶೇ 100ರಷ್ಟು ಫಿಟ್ ಇಲ್ಲದ ಕಾರಣ ನಾನು ಆ ಯೋಚನೆ ಬಿಟ್ಟೆ. ತಂಡಕ್ಕಾಗಿ ಆಡುವಾಗ ಫಿಟ್‌ನೆಸ್ ಬಗ್ಗೆ ರಾಜಿ ಮಾಡಿಕೊಳ್ಳಬಾರದು. ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿ ಮುಂದುವರೆಯುತ್ತೇನೆ. ವಿಕ್ಟೋರಿಯಾ ತಂಡದತ್ತ ಹೆಚ್ಚು ಗಮನ ನೀಡುತ್ತೇನೆ. ಕುಟುಂಬದೊಂದಿಗೆ ಹೆಚ್ಚು ಕಾಲ ಕಳೆಯುವ ಆಸೆ ಇದೆ’ ಎಂದು ಅವರು ಹೇಳಿದ್ದಾರೆ.

ಸೆಮಿಫೈನಲ್‌ಗೆ ಕೆವಿನ್, ದಿಶಾ

ಪ್ರಜಾವಾಣಿ ವಾರ್ತೆ



ದಿಶಾ ಸಂತೋಷ್

ಬೆಂಗಳೂರು: ದಿಶಾ ಸಂತೋಷ್ ಮತ್ತು ಕೆವಿನ್ ಟೈಟಸ್ ಇಲ್ಲಿ ನಡೆಯುತ್ತಿರುವ ಎಐಸ್‌ಟಿಎ-ಎಐಟಿಎ ಸಿಎಸ್3 18 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕಿಯರ ಮತ್ತು ಬಾಲಕರ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು.

ಎಫ್‌ಎಸ್‌ಎ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ದಿಶಾ ಏಳನೇ ಶ್ರೇಯಾಂಕದ ನಿಧಿ ಬುವಿಲ ವಿರುದ್ಧ 9–8 (10–8) ಜಯ ಗಳಿಸಿದರು.

ಬಾಲಕರ ವಿಭಾಗದಲ್ಲಿ ಕೆವಿನ್ ಟೈಟಸ್ ಪಾರಮ್ಯ ಮೆರೆದರು. ಎಂಟರ ಘಟ್ಟದ ಹಣಾಹಣಿಯಲ್ಲಿ ಅವರು ಎಂಟನೇ ಶ್ರೇಯಾಂಕದ ತನಿಷ್ ಫಿಲ್ಡಿಯಾಳ್ ಎದುರು 9-8 (10-8) ಅಂತರದಲ್ಲಿ ಜಯ ಸಾಧಿಸಿದರು. ಅಕ್ಷಯ್ ಪ್ರಸಾದ್ 9–7ರಲ್ಲಿ ಮೈಕೆಲ್ ಡೇವಿಡ್ ವಿರುದ್ಧ ಗೆಲುವು ದಾಖಲಿಸಿದರು. ಪ್ರಿಯಾಂಶ್ ಸೋಲಂಕಿ 9–4ರಲ್ಲಿ ಆದಿತ್ಯ ಮೋಹಪಾತ್ರ ವಿರುದ್ಧ ಮತ್ತು ಸೆಹಜ್ ಸಿಂಗ್ ಪವಾರ್ 8–3ರಲ್ಲಿ ಸುಶಾಂಕ ಬಿ.ಎಸ್ ವಿರುದ್ಧ ಗೆದ್ದರು.

ಬಾಲಕಿಯರ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಆತ್ಮಿಕ ಶ್ರೀನಿವಾಸ 9–1ರಲ್ಲಿ ಕಾಜಲ್ ರಮಿಸೆಟ್ಟಿ ವಿರುದ್ಧ, ಕಾಶಿಶ್ ಕಾಂತ್ 9–1ರಲ್ಲಿ ಸುರಭಿ ಶ್ರೀನಿವಾಸ ವಿರುದ್ಧ, ಪ್ರೇಶಾ ಶಾಂತಮೂರ್ತಿ 9–1ರಲ್ಲಿ ಸುಬ್ರತಾ ಶುಭ್ರಾಂಜಲಿ ವಿರುದ್ಧ ಜಯ ಗಳಿಸಿದರು.

ಕ್ರಿಕೆಟಿಗ ಮೈಕೆಲ್ ಸ್ಲೇಟರ್ ಬಂಧನ



ಮೈಕೆಲ್ ಸ್ಲೇಟರ್

ಸಿಡ್ನಿ (ಎಎಫ್‌ಪಿ): ಆಸ್ಟ್ರೇಲಿಯಾದ ಕ್ರಿಕೆಟಿಗ ಮೈಕೆಲ್ ಸ್ಲೇಟರ್ ಅವರನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಕೌಟುಂಬಿಕ ದೌರ್ಜನ್ಯ ಎಸಗಿದ ಆರೋಪದಲ್ಲಿ ಅವರನ್ನು ಬಂಧಿಸಲಾಗಿದ್ದು ನಂತರ ಶರತ್ತುಬದ್ಧ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಲಾಗಿದೆ. ಮುಂದಿನ ತಿಂಗಳು ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ಸೂಚಿಸಲಾಗಿದೆ ಎಂದು ಪೊಲೀಸರು ವಿವರಿಸಿದ್ದಾರೆ.

51 ವರ್ಷದ ಮೈಕೆಲ್ ಅವರು ಟೆಲಿವಿಷನ್‌ನಲ್ಲಿ ಕ್ರಿಕೆಟ್ ವಿಶ್ಲೇಷಕರಾಗಿ ಹೆಸರು ಗಳಿಸಿದ್ದಾರೆ. 2004ರಲ್ಲಿ ಅವರು ಕ್ರಿಕೆಟ್‌ನಿಂದ ನಿವೃತ್ತರಾಗಿದ್ದರು.

ಡೆನ್ಮಾರ್ಕ್ ಓಪನ್ ಬ್ಯಾಡ್ಮಿಂಟನ್: ಡಬಲ್ಸ್‌ನಲ್ಲಿ ನಿರಾಸೆ

ಲಕ್ಷ್ಯ ಮುನ್ನಡೆ; ಸೈನಾ ಪರಾಭವ



ಲಕ್ಷ್ಯ ಸೇನ್– ಪ್ರಜಾವಾಣಿ ಸಂಗ್ರಹ ಚಿತ್ರ

ಆಡೆನ್ಸ್, ಡೆನ್ಮಾರ್ಕ್ (ಪಿಟಿಐ): ಯುವ ಆಟಗಾರ, ಭಾರತದ ಲಕ್ಷ್ಯ ಸೇನ್ ಡೆನ್ಮಾರ್ಕ್ ಓಪನ್ ಟೂರ್ನಿಯಲ್ಲಿ ಎರಡನೇ ಸುತ್ತಿಗೆ ಮುನ್ನಡೆದರು. ಆದರೆ ಅನುಭವಿ ಸೈನಾ ನೆಹ್ವಾಲ್ ಸವಾಲು ಅಂತ್ಯವಾಯಿತು.

ಬುಧವಾರ ನಡೆದ ಪುರುಷರ ಸಿಂಗಲ್ಸ್ ಮೊದಲ ಸುತ್ತಿನ ಹಣಾಹಣಿಯಲ್ಲಿ ಲಕ್ಷ್ಯ 21-9, 21-7ರಿಂದ ಭಾರತದವರೇ ಆದ ಸೌರಭ್ ವರ್ಮಾ ಸವಾಲು ಮೀರಿದರು. ಮುಂದಿನ ಪಂದ್ಯದಲ್ಲಿ ಅವರಿಗೆ ಒಲಿಂಪಿಕ್ ಚಾಂಪಿಯನ್, ಡೆನ್ಮಾರ್ಕ್‌ನ ವಿಕ್ಟರ್ ಅಕ್ಸೆಲ್ಸೆನ್ ಸವಾಲು ಎದುರಾಗುವ ಸಾಧ್ಯತೆಯಿದೆ.

ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ, ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು. ಭಾರತದ ಆಟಗಾರ್ತಿಯ ಎದುರು ಜಪಾನ್‌ನ ಆಯಾ ಒಹೊರಿ 21-16, 21-14ರಿಂದ ಜಯಿಸಿದರು.

ಡಬಲ್ಸ್ ವಿಭಾಗಗಳಲ್ಲೂ ಭಾರತಕ್ಕೆ ನಿರಾಸೆ ಕಾದಿತ್ತು. ಮಿಶ್ರ ಡಬಲ್ಸ್‌ನಲ್ಲಿ ಕಣಕ್ಕಿಳಿದಿದ್ದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಅಶ್ವಿನಿ ಪೊನ್ನಪ್ಪ ವೀರೋಚಿತ ಹೋರಾಟದಲ್ಲಿ 17-21, 21-14, 11-21ರಿಂದ ಚೀನಾದ ಫೆಂಗ್ ಯಾನ್ ಜೆ- ಡು ಯೆ ಎದುರು ಸೋತರು. ಮಹಿಳಾ ಡಬಲ್ಸ್‌ನಲ್ಲಿ ಮೇಘನಾ ಜಕ್ಕಂಪುಡಿ–ಪೂರ್ವಿಶಾ ಎಸ್. ರಾಮ್ 8-21, 7-21ರಿಂದ ಇಂಡೊನೇಷ್ಯಾದ ನೀತಾ ವಿಯೋಲಿನಾ ಮಾರ್ವಾ ಮತ್ತು ಪೂತ್ರಿ ಸಿಯಾಕಾ ಎದುರು ಮಣಿದರು.

ಅಶ್ವಿನಿ–ಎನ್. ಸಿಕ್ಕಿ ರೆಡ್ಡಿ ಜೋಡಿಯೂ 17-21, 13-21ರಿಂದ ಕೊರಿಯಾದ ಲೀ ಸೋಹಿ– ಸಿನ್ ಸೆಂಗ್ ಚಾನ್ ಎದುರು ಸೋಲು ಕಂಡರು.

ಪರ್ಪಲ್ ಕಪ್ ಟೂರ್ನಿ ಇಂದು

ಬೆಂಗಳೂರು: ಎನೇಬಲ್ ಇಂಡಿಯಾ ಸಹಯೋದಲ್ಲಿ ಬ್ರೂಕ್‌ಫೀಲ್ಡ್ ಪ್ರಾಪರ್ಟೀಸ್ ಆಯೋಜಿಸಿರುವ ‘ದಿ ಪರ್ಪಲ್ ಕಪ್’ ಗಾಲ್ಫ್ ಟೂರ್ನಿಯು ರಾಜ್ಯ ಗಾಲ್ಫ್ ಸಂಸ್ಥೆಯ ಆವರಣದಲ್ಲಿ ಗುರುವಾರ ನಡೆಯಲಿದೆ. ಟೂರ್ನಿಯ ಅಂಗವಾಗಿ ಸಂಜೆ ಶುಭಂಕರ್ ಶರ್ಮಾ ಜೊತೆ ಮಾತುಕತೆಯೂ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬೆಳಿಗ್ಗೆ 6 ಗಂಟೆಗೆ ಸ್ಪರ್ಧೆಗಳು ನಡೆಯಲಿವೆ. ಇಲ್ಲಿ ಸಂಗ್ರಹವಾಗುವ ಮೊತ್ತವನ್ನು ಭಾರತದ ಪ್ರಪ್ರಥಮ ಅಂಧರ ಗಾಲ್ಫ್ ತಂಡಕ್ಕಾಗಿ ನೀಡಲಾಗುವುದು. ಅಂಗವೈಕಲ್ಯ ಇರುವವರಿಗಾಗಿ ಎನೇಬಲ್ ಇಂಡಿಯಾ ಫೌಂಡೇಷನ್ ನಡೆಸುವ ಸಾಮಾಜಿಕ ಕಾರ್ಯಗಳಿಗೂ ಇದರ ಪಾಲು ಸಲ್ಲಲಿದೆ ಎಂದು ತಿಳಿಸಲಾಗಿದೆ.

ಕ್ವಾರ್ಟರ್‌ಫೈನಲ್‌ಗೆ ನಿಕ್ಷೇಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಬಿ.ಆರ್. ನಿಕ್ಷೇಪ್ ಹಾಗೂ ಶಹಬಾಜ್ ಖಾನ್ ಜೋಡಿಯು ಕತಾರ್‌ನ ದೋಹಾದಲ್ಲಿ ನಡೆಯುತ್ತಿರುವ ಐಟಿಎಫ್ ವಿಶ್ವ ಟೂರ್ ಎಂ.15 ಟೆನಿಸ್ ಟೂರ್ನಿಯಲ್ಲಿ ಬುಧವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ಖಲೀಫಾ ಅಂತರರಾಷ್ಟ್ರೀಯ ಕ್ರೀಡಾ ಸಂಕೀರ್ಣದಲ್ಲಿ ನಡೆಯುತ್ತಿರುವ ಟೂರ್ನಿಯ ಪ್ರೀ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕರ್ನಾಟಕದ ನಿಕ್ಷೇಪ್ ಮತ್ತು ಶಹಬಾಜ್ 6-0,6-1ರಿಂದ ಯೆಮನ್‌ನ ಅಲ್ ಹಸನ್ ಅಲ್ ಫಕಿಹ್ ಹಾಗೂ ಇಟಲಿಯ ಕೆವಿನ್ ಪೋರ್ಟ್‌ಮನ್ ಅವರನ್ನು ಮಣಿಸಿದರು.

ಎಂಟರಘಟ್ಟದ ಪಂದ್ಯದಲ್ಲಿ ಭಾರತದ ಜೋಡಿಯು ಚೀನಾದ ಮು ತಾವೊ ಮತ್ತು ಹ್ಯಾನ್‌ವೆನ್ ಲೀ ಅವರನ್ನು ಎದುರಿಸಲಿದ್ದಾರೆ. ನಿಕ್ಷೇಪ್, ಬೆಂಗಳೂರಿನ ಸುರಾನ ಕಾಲೇಜು ವಿದ್ಯಾರ್ಥಿ.

ಹಾಕಿ: ಭಾರತಕ್ಕೆ ಫ್ರಾನ್ಸ್ ಮೊದಲ ಎದುರಾಳಿ

ಲಾಸನ್ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು ಎಫ್‌ಐಎಚ್ ಜೂನಿಯರ್ ಪುರುಷರ ವಿಶ್ವಕಪ್ ಹಾಕಿ ಟೂರ್ನಿಯ ಮೊದಲ ಪಂದ್ಯದಲ್ಲಿ ಫ್ರಾನ್ಸ್ ತಂಡಕ್ಕೆ ಮುಖಾಮುಖಿಯಾಗಲಿದೆ. ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ನವೆಂಬರ್ 24ರಂದು ಈ ಪಂದ್ಯ ನಿಗದಿಯಾಗಿದೆ.

ಭಾರತ ತಂಡವು ಕೆನಡಾ, ಫ್ರಾನ್ಸ್ ಹಾಗೂ ಪೋಲೆಂಡ್ ಇರುವ ‘ಬಿ’ ಗುಂಪಿನಲ್ಲಿ ಸ್ಥಾನ ಗಳಿಸಿದೆ. ‘ಎ’ ಗುಂಪಿನಲ್ಲಿ ಬೆಲ್ಜಿಯಂ, ಚಿಲಿ, ಮಲೇಷ್ಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳಿವೆ.

ಕೊರಿಯಾ, ನೆದರ್ಲೆಂಡ್ಸ್, ಸ್ಪೇನ್ ಮತ್ತು ಅಮೆರಿಕ ತಂಡಗಳು ‘ಸಿ’ ಗುಂಪಿನಲ್ಲಿದ್ದರೆ, ಅರ್ಜೆಂಟೀನಾ, ಈಜಿಪ್ಟ್, ಜರ್ಮನಿ ಮತ್ತು ಪಾಕಿಸ್ತಾನ ತಂಡಗಳು ‘ಡಿ’ ಗುಂಪಿನಲ್ಲಿವೆ.

ಭಾರತ–ಫ್ರಾನ್ಸ್ ಹಣಾಹಣಿ ಹೊರತುಪಡಿಸಿ, ಟೂರ್ನಿಯ ಮೊದಲ ದಿನ ಬೆಲ್ಜಿಯಂ –ದಕ್ಷಿಣ ಆಫ್ರಿಕಾ, ಮಲೇಷ್ಯಾ–ಚಿಲಿ, ಜರ್ಮನಿ–ಪಾಕಿಸ್ತಾನ ಮತ್ತು ಕೆನಡಾ–ಪೋಲೆಂಡ್ ತಂಡಗಳ ನಡುವೆ ಪಂದ್ಯಗಳು ನಡೆಯಲಿವೆ.

ಫ್ರಾನ್ಸ್ ಎದುರಿನ ಪಂದ್ಯದ ನಂತರ ಭಾರತವು ನವೆಂಬರ್ 25ರಂದು ಕೆನಡಾಕ್ಕೆ, ಬಳಿಕ 27ರಂದು ಪೋಲೆಂಡ್ ತಂಡಕ್ಕೆ ಎದುರಾಗಲಿದೆ.

ಸೆಮಿಫೈನಲ್ಸ್ ಮತ್ತು ಫೈನಲ್ ಕ್ರಮವಾಗಿ ಡಿಸೆಂಬರ್ 3 ಹಾಗೂ 5ರಂದು ನಿಗದಿಯಾಗಿವೆ.

ಡಿಸೆಂಬರ್ 5ರಿಂದ 16ರವರೆಗೆ ದಕ್ಷಿಣ ಆಫ್ರಿಕಾದ ಪೊಚೆಫ್‌ಸ್ಟ್ರೂಮ್‌ನಲ್ಲಿ ನಡೆಯಲಿರುವ ಮಹಿಳಾ ಜೂನಿಯರ್ ವಿಶ್ವಕಪ್ ಹಾಕಿ ವೇಳಾಪಟ್ಟಿಯನ್ನೂ ಪ್ರಕಟಿಸಲಾಗಿದೆ.

‘ಸಿ’ ಗುಂಪಿನಲ್ಲಿರುವ ಭಾರತ ತಂಡವು ಮೊದಲ ಪಂದ್ಯದಲ್ಲಿ ಡಿಸೆಂಬರ್ 6ರಂದು ರಷ್ಯಾವನ್ನು ಎದುರಿಸಲಿದೆ.